ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ
ದ್ವಿತೀಯ ರತ್ನವು—ಹತ್ತನೆಯ ಸಂಚಿಕೆಯು

ಶ್ರೀಮನ್ನಿಗಮಾಂತ ಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಸ್ಥಾನವಿಶೇಷಾಧಿಕಾರ ಏಕೋನವಿಂಶಃ.

ನಿರ್ಯಾಣಾಧಿಕಾರೋ ವಿಂಶಃ.

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡು ಸರ್ಕಲ್ ಇನ್ಸ್‌ಪೆಕ್ಟರು
ಸಿ. ಯಮ್. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ

೧೯೩೫

ಕ್ರಯ ೧೦ ಆಣೆಗಳು

A. NARASIMHAN
780, 5th Main Road,
Vijayanagar,
BANGALORE-560 040.

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಅಥ ಸ್ಥಾನವಿಶೇಷಾಧಿಕಾರಃ ೧೯

ಯತ್ರೈಕಾಗ್ರ್ಯಂ ಭವತಿ ಭಗವತ್ಪಾದಸೇವಾರ್ಚನಾದೇ ।
ರ್ಯತ್ರೈಕಾಂತ್ಯ ವ್ಯವಸಿತಧಿಯೋ ಯಸ್ಯ ಕಸ್ಯಾಪಿ ಲಾಭಃ ॥

ಅವತಾರಿಕೆ. ಹಿಂದಿನಧಿಕಾರದಲ್ಲಿ ಪ್ರತಿಬುದ್ಧನಾದ ಪ್ರಪನ್ನನಿಗೆ ಬುದ್ಧಿ ಪೂರ್ವೋತ್ತರಾಘವು ಉಂಟಾಗುವದಿಲ್ಲವೆಂದೂ, ಒಂದು ವೇಳೆ ಪ್ರಾಪ್ತವಾದರೆ ಪ್ರಾಯಶ್ಚಿತ್ತದಿಂದ ಆತನು ಶಮನಮಾಡಿಕೊಳ್ಳುವನೆಂದೂ ಹೇಳಲ್ಪಟ್ಟಿತು. ಬುದ್ಧಿ ಪೂರ್ವೋತ್ತರಾಘವು ಉಂಟಾಗುವದು ರಜಸ್ತಮೋಗುಣಗಳ ಪ್ರಭಾವವು, ಈ ಗುಣಗಳಿಗೆ ಅವಕಾಶ ಕೊಡದೆ ಸತ್ವವಿವೃದ್ಧಿಯುಂಟಾಗುವ ಹಾಗೆ ಮಾಡಿಕೊಳ್ಳ ತಕ್ಕದ್ದು ಪ್ರಾಜ್ಞನ ಕರ್ತವ್ಯವು. ಆದುದರಿಂದ ಪ್ರಾಜ್ಞನಾದ ಪ್ರಪನ್ನನು ಸತ್ವ ಗುಣ ವಿವೃದ್ಧಿಗಾಗಿ ಎಂತಹ ಸ್ಥಾನವಿಶೇಷದಲ್ಲಿರಬೇಕೆಂಬುವದನ್ನು ಈ ಅಧಿಕಾರ ದಿಂದುಪದೇಶಿಸುತ್ತಾರೆ.

ಅರ್ಥ :—ಯತ್ರ - ಯಾವ ದಿವ್ಯಸ್ಥಳದಲ್ಲಿ, **ಭಗವತ್ಪಾದ ಸೇವಾರ್ಚನಾದೇಃ** - ಭಗವಂತನ ಪಾದಗಳ ಸೇವೆ, ಅರ್ಚನೆ ಮೊದಲಾದವುಗಳಿಗೆ, ಇಲ್ಲಿ ಆದಿ ಶಬ್ದದಿಂದ

"ಶ್ರವಣಂ ಕೀರ್ತನಂ ವಿಷ್ಣೋಸ್ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ" ॥

ಎಂಬಲ್ಲಿ ಪಾದಸೇವನಂ ಅರ್ಚನಂ ಎಂಬುವದರೊಂದಿಗೆ ಹೇಳಿರುವ ಸರ್ವವಿಧ ಕೈಙ್ಕರ್ಯಗಳೂ ಸಂಗ್ರಹಿಸಲ್ಪಟ್ಟವು; ಇಂತಹ ಕೈಙ್ಕರ್ಯಗಳಿಗೆಲ್ಲಾ ಐಕಾಗ್ರ್ಯಮ್-ಚಿತ್ತಸಮಾಧಾನವು ಭವತಿ - ಉಂಟಾಗುತ್ತದೆಯೋ, ಒಂದು ವೇಳೆ ಇದು ಎಲ್ಲಾ ಪ್ರಪನ್ನರಿಗೂ ಲಭ್ಯವಿಲ್ಲದಿದ್ದರೂ, **ಯತ್ರ** - ಯಾವ ದಿವ್ಯಸ್ಥಳದಲ್ಲಿ, ಐಕಾಂತ್ಯ

ವಾಸಸ್ಥಾನಂ ತದಿಹ ಕೃತಿನಾಂ ಭಾತಿ ವೈಕುಂಠ ಕಲ್ಪಂ
ಪ್ರಾಯೋ ದೇಶಾ ಮುನಿಭಿರುದಿತಾಃ ಪ್ರಾಯಿಕೌಚಿತ್ಯವಂತಃ ॥೪೨॥

ವ್ಯವಸಿತಧಿಯಃ–ಪರಮೈಕಾನ್ತಿಯ ಧರ್ಮದಲ್ಲಿ ಯಾವುದು ತ್ಯಾಜ್ಯವು, ಯಾವುದು ಉಪಾದೇಯವೆಂಬ ವಿಷಯದಲ್ಲಿ ನಿಶ್ಚಯವಾದ ಬುದ್ಧಿಯುಳ್ಳ, ಯಸ್ಯಕಸ್ಯಾಪಿ-ವರ್ಣಾಶ್ರಮ ವಿಶೇಷವುಳ್ಳವನೇ ಬೇಕೆಂಬ ನಿಯಮವಿಲ್ಲದೆ ಯಾವನಾದರೂ ಒಬ್ಬ ಭಾಗವತೋತ್ತಮನ, **ಲಾಭಃ** - ಪ್ರಾಪ್ತಿಯು, **ಭವತಿ** - ಉಂಟಾಗುತ್ತದೆಯೋ, **ತತ್** - ಅಂತಹ ಮಹಿಮೆಯುಳ್ಳ ಸ್ಥಳವೇ. **ಕೃತಿನಾಂ** - ಸಾಙ್ಗಭರನ್ಯಾಸವನ್ನು ಮಾಡಿ ಕೃತಕೃತ್ಯರಾದ ಪ್ರಪನ್ನರಿಗೆ, **ವಾಸಸ್ಥಾನಂ** - ವಾಸಮಾಡಲು ಯೋಗ್ಯವಾದ ಸ್ಥಾನವು **ಇಹ** - ಈ ಭೂಲೋಕದಲ್ಲೇ, ಅದು, **ವೈಕುಂಠಕಲ್ಪಂ** - ದಿವ್ಯ ವೈಕುಂಠಕ್ಕೆ ಸಮಾನವಾದುದಾಗಿ, **ಭಾತಿ** - ಪ್ರಕಾಶಿಸುತ್ತದೆ. **ಮುನಿಭಿರುದಿತಾಃ** - ಋಷಿಗಳಿಂದ ಕೊಂಡಾಡಲ್ಪಟ್ಟ, **ಪ್ರಾಯಃ ದೇಶಾಃ** - ಬಹು ಪುಣ್ಯ ಸ್ಥಳಗಳು, **ಪ್ರಾಯಿಕೌಚಿತ್ಯವಂತಃ** - ಬಹುಶಃ ಹೀಗೆ ಭಾಗವತರುಗಳು ಅಲ್ಲಿ ನೆಲಸಿರುವದರಿಂದಲೋ ಅಥವಾ ಭಗವತ್ಪಾದ ಸೇವಾರ್ಚನಾದಿಗಳಿಗೆ ಐಕಾಗ್ರ್ಯ ದೊರೆತುದರಿಂದಲೋ ಮಹಿಮೆಯುಳ್ಳವುಗಳಾಗಿರುತ್ತವೆ.

ತಾತ್ಪರ್ಯ—ಸಾಙ್ಗಪ್ರಪದನಾನುಷ್ಠಾನವನ್ನು ಮಾಡಿ ಕೃತಕೃತ್ಯನಾದ ಪ್ರಪನ್ನನಿಗೆ ದೇಹಾವಸಾನದವರೆಗೂ ಇರಲು ಯೋಗ್ಯವಾದ ವಾಸಸ್ಥಳವು ಯಾವುದೆಂದರೆ ತಿಳಿಸುತ್ತಾರೆ ಅದು ಶ್ರೀರಂಗಾದಿ ದಿವ್ಯಕ್ಷೇತ್ರವಾಗಿರಬೇಕು. ಏಕೆಂದರೆ ಅಲ್ಲಿ ಭಗವತ್ಪಾದಸೇವೆ ಅರ್ಚನೆ ಮೊದಲಾದವುಗಳಿಗೆ ಬೇಕಾದ ಚಿತ್ತೈಕಾಗ್ರತೆಯು ದೊರೆಯುತ್ತದೆ. ಈತನು ತನಗೆ ಮಹೋಪಕಾರಿಯಾದ ಸರ್ವೇಶ್ವರನನ್ನು ಚಿತ್ತೈಕಾಗ್ರತೆಯಿಂದ ಧ್ಯಾನಿಸತಕ್ಕದ್ದು. ಆಗ ಈತನಿಗೆ ಸತ್ವೋದ್ರೇಕ ಉಂಟಾಗಿ ಬುದ್ಧಿಪೂರ್ವೋತ್ತರಾಘಗಳಲ್ಲಿ ಅಭಿಸಂಧಿಯಿಲ್ಲದೆ, "ಪರಮಾತ್ಮನಿ ಯೋ ರಕ್ತೋ ವಿರಕ್ತೋಽಪರಮಾತ್ಮನಿ" ಎಂದು ಹೇಳಿರುವ ಹಾಗೆ, ಐಹಿಕದಲ್ಲಿ ಜಿಹಾಸೆಯುಂಟಾಗಿ, ತನ್ನ ಸ್ವರೂಪಾನುಗುಣವಾದ ಭಗವದ್ಭಾಗವತ ಕೈಂಕರ್ಯದಲ್ಲಿ ನೆಲಸುವನು. ಹೀಗೆಯೇ ಅನೇಕ ಪ್ರಪನ್ನರಾಗಿ ಜ್ಞಾನಿಗಳಾದ ಭಾಗವತರುಗಳು ಅಲ್ಲಿ ಸೇರಿರುವದರಿಂದ, ಉತ್ತರಕೃತ್ಯಾಧಿಕಾರದಲ್ಲಿ ಹೇಳಿರುವದನ್ನೆಲ್ಲಾ ನಡೆಸಲು ಅನುಕೂಲ ಉಳ್ಳವನಾಗುತ್ತಾನೆ. ನಾಲ್ಕು ಪುಣ್ಯ ಕ್ಷೇತ್ರಗಳು ಬಹಳ ಮುಖ್ಯವಾದುವೆಂದು

ಶ್ರೀರಂಗ ಮಂಗಳಮಣಿಂ ಕರುಣಾನಿವಾಸಂ ।
ಶ್ರೀ ವೇಙ್ಕಟಾದ್ರಿ ಶಿಖರಾಲಯ ಕಾಳಮೇಘಂ ।

ಶ್ರೀ ಹಸ್ತಿಶೈಲಶಿಖರೋಜ್ವಲ ಪಾರಿಜಾತಂ ।
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ ॥

ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿವೆ. ಅವು ಯಾವುವೆಂದರೆ ಶ್ರೀರಂಗ, ತಿರುಮಲೆ, ಕಾಂಚೀಪುರ ಮತ್ತು ಮೇಲುಕೋಟೆ. ಇಂತಹ ದಿವ್ಯ ಕ್ಷೇತ್ರಗಳು ದಕ್ಷಿಣದೇಶದಲ್ಲಿ ಬಹಳವಾಗಿ ಉಂಟು. ವಾನಮಾಮಲೆ, ಆಳ್ವಾರ್ ತಿರುನಗರಿ, ಶ್ರೀ ವಿಲ್ಲಿಪತ್ತೂರು, ಕುಂಭಘೋಣೆ ಮೊದಲಾದ ಅನೇಕ ಪುಣ್ಯಸ್ಥಳಗಳಲ್ಲಿ ವಾಸಮಾಡಬಹುದು. ಶ್ರೀ ಭಾಷ್ಯಕಾರರಿಗೆ ಶ್ರೀರಂಗಕ್ಷೇತ್ರದಲ್ಲಿ ತುಂಬಾ ಮಮತೆಯಾದುದರಿಂದ, "**ಯಾವಚ್ಛರೀರಪಾತಮತ್ರೈವ ಶ್ರೀರಂಗೇ ಸುಖಮಾಸ್ಸ**" ಎಂದು ಶರಣಾಗತಿಗದ್ಯದಲ್ಲಿ ತಮಗೆ ಶ್ರೀರಂಗನಾಥನು ನಿಯಮಿಸಿದರ್ಥವನ್ನೇ ತಮ್ಮ ಶಿಷ್ಯರಿಗೂ ಪರಮ ಹಿತದಿಂದ ಬೋಧಿಸಿರುತ್ತಾರೆ. ಹಾಗೆಯೇ ಶ್ರೀ ಭಾಷ್ಯಕಾರರು ತಿರುನಾರಾಯಣಪುರದಲ್ಲಿ ತಮ್ಮ ಶಿಷ್ಯರಿಗೆ ಒಂದು ಕುಟೀರವನ್ನು ಕಲ್ಪಿಸಿಕೊಂಡು ವಾಸಮಾಡತಕ್ಕದ್ದೆಂದುಪದೇಶಿಸಿದರು.

ಅಂತಹ ದಿವ್ಯಕ್ಷೇತ್ರಗಳಲ್ಲಿ ಪರಮಸೌಲಭ್ಯದಿಂದ ಕಂಗೊಳಿಸುತ್ತಿರುವ ಅರ್ಚಾವತಾರಿಯಾದ ಸರ್ವೇಶ್ವರನ ದೃಷ್ಟಿಗೆ ಬೀಳುವನಾಗಿ, (೧) "**ದೃಷ್ಟ ಏವ ಹಿನ ಶೋಕಮುಪನೇಷ್ಯತಿ ರಾಘವಃ**" ಎಂದು ಹೇಳಿರುವ ಹಾಗೆ, ಶೋಕಕ್ಕೆ ಕಾರಣಭೂತವಾದ ರಜಸ್ತಮೋಗುಣಗಳಿಂದ ಬಿಡಲ್ಪಟ್ಟವನಾಗಿ ಸತ್ವವೃದ್ಧಿಯನ್ನು ಹೊಂದುವನು. ಹಾಗೆಯೇ ಅಲ್ಲಿ ಐಕಾಂತ್ಯದಿಂದ ತನ್ನನ್ನು ಭಜಿಸುವ ಮಹಾಭಾಗವತೋತ್ತಮರ ದೃಷ್ಟಿಪಥಕ್ಕೂ ಬಿದ್ದವನಾಗಿ ಈ ರಜಸ್ತಮೋಗುಣಗಳ ನಾಶಪೂರ್ವಕವಾದ ಸತ್ವವೃದ್ಧಿಯನ್ನು ಇನ್ನೂ ವಿಶೇಷ ತ್ವರೆಯಿಂದ ಹೊಂದಿದವನಾಗಿ (೨) "**ದರ್ಶನಾದೇವ ಸಾಧವಃ**" ಎಂದೂ, (೨) "**ವಿಪಶ್ಚಿತೋ ಘ್ನಂತಿ ಮುಹೂರ್ತಸೇವಯಾ**" ಎಂದೂ, ಹೇಳಿರುವ ಹಾಗೆ ಪಾಪನಾಶವನ್ನು ಹೊಂದಿ ಪವಿತ್ರತೆಯನ್ನು ಪಡೆಯುವನು. ಹೀಗೆ ಈ ಎರಡು ವಿಧವಾಗಿಯೂ ಪ್ರಪನ್ನನಿಗೆ ಪ್ರಯೋಜನವು ಲಭಿಸುತ್ತದೆ.

ಆದರೆ ಎಲ್ಲಾ ಪ್ರಪನ್ನರೂ ಪುಣ್ಯಕ್ಷೇತ್ರಗಳಲ್ಲಿ ವಾಸಮಾಡಲು ಅನುಕೂಲತೆಯು ಇರಲಾರದು. ಅಲ್ಲಿ ದೇಹಯಾತ್ರೆಗೆ ಕಷ್ಟವಿರಬಹುದು. ಅಂತಹ ಸಂದರ್ಭದಲ್ಲಿ "**ಯತ್ರೈಕಾಂತ್ಯವ್ಯವಸಿತಧಿಯೋ ಯಸ್ಯಕಸ್ಯಾಪಿ ಲಾಭಃ ಭವತಿ**" ಪರಮೈಕಾಂತಿಯಾದವರಲ್ಲೊಬ್ಬನಾದರೂ ವಸಿಸುವ ಸ್ಥಳದಲ್ಲಾಗಲಿ ಈ ಕೃತಕೃತ್ಯನು ಇರತಕ್ಕದ್ದು. ಆ ಪರಮೈಕಾಂತಿಯು ಉತ್ತಮ ವರ್ಣದವನಾಗಿ ಉಪ

(೧) ರಾಮಾ. (೨) ಭಾಗ.

ದೇಶವನ್ನೀಯಲು ಅರ್ಹನಾಗಿದ್ದರೆ ಉತ್ತಮ ಪಕ್ಷವು. ಒಂದುವೇಳೆ ಅಂತಹ ಉತ್ತಮ ವರ್ಣದವನಿಲ್ಲದಿದ್ದರೂ, ಕ್ಷತ್ರಿಯ ವೈಶ್ಯ ಶೂದ್ರರಾದರೂ ಚಿಂತೆಯಿಲ್ಲವು. ಅಂತಹ ಭಾಗವತನ ಸಾನ್ನಿಧ್ಯದಲ್ಲಿ ವಸಿಸತಕ್ಕದ್ದೆಂಬ ಭಾವವು. ಅಂತಹ ಭಾಗವತನು ಜ್ಞಾನನಿಷ್ಠೆಯನ್ನು ಹೊಂದಿ ಸದ್ವೃತ್ತಿಯಲ್ಲಿದ್ದುಕೊಂಡು ಸ್ವಾಮಿಯನ್ನು ಚಿತ್ತೈಕಾಗ್ರತೆಯಿಂದ ಧ್ಯಾನಿಸುತ್ತಾ ಭಗವದ್ಭಾಗವತ ಕೈಙ್ಕರ್ಯಗಳನ್ನು ಮಾಡುತ್ತಿರುವದರಿಂದ, ಅಂತವನ ಸಮೀಪದಲ್ಲಿ ವಸಿಸುವದು "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ" (ಗೀ. ೩-೨೧) ಎಂದು ಹೇಳಿರುವ ಹಾಗೆ ಪ್ರಪನ್ನನೂ ಹಾಗೆಯೇ ಪ್ರವೃತ್ತಿಹೊಂದುವದಕ್ಕೆ ಉತ್ತೇಜಕವಾಗಿರುತ್ತದೆ. ಆದುದರಿಂದ ಪರಮ ಭಾಗವತ ಶಿಖಾಮಣಿಯಾದ ವಿದುರನೂ, ಪರಮ ಭಕ್ತರಾದ ತಿರುಪ್ಪಾಣಾಳ್ವಾರ್ರವರೂ ಮೊದಲಾದವರೆಲ್ಲಾ ವಿಶೇಷ ಮಾನ್ಯರು. ಯುಧಿಷ್ಠಿರನು ವಿದುರನನ್ನು ಹಾಗೆಯೇ ಕೊಂಡಾಡಿರುತ್ತಾನೆ

ಭವದ್ವಿಧಾ ಭಾಗವತಾಸ್ತೀರ್ಥಭೂತಾಸ್ಸ್ವಯಂ ಪ್ರಭೋ ।
ತೀರ್ಥೀ ಕುರ್ವಂತಿ ತೀರ್ಥಾನಿ ಸ್ವಾಂತಸ್ಥೇನ ಗದಾಭೃತಾ ।

ಮಹಾಪರಿಶುದ್ಧಾತ್ಮರಾದ ತಮ್ಮಂಥಾ ಭಾಗವತರುಗಳು, ಶ್ರೀಮನ್ನಾರಾಯಣನನ್ನು ಸದಾ ಮನಸ್ಸಿನಲ್ಲಿಟ್ಟರುವದರಿಂದ ಪುಣ್ಯತೀರ್ಥಗಳಿಗೂ ಕೂಡ ಪವಿತ್ರತೆಯನ್ನುಂಟುಮಾಡುತ್ತೀರಿ ಎಂದು ಶ್ಲಾಘಿಸಿರುತ್ತಾನೆ.

ನಿಗೃಹಿತೇಂದ್ರಿಯಗ್ರಾಮೋ ಯತ್ರ ಯತ್ರ ವಸೇನ್ನರಃ
ತತ್ರ ತತ್ರ ಕುರುಕ್ಷೇತ್ರಂ ನೈಮಿಶಂ ಪುಷ್ಕರಂ ತಥಾ ॥

ಎಲ್ಲೆಲ್ಲಿ ಇಂದ್ರಿಯ ಸಮೂಹವನ್ನು ನಿಗ್ರಹಿಸಿರುವ ಮನುಷ್ಯನು ವಸಿಸುತ್ತಾನೋ ಆ ಸ್ಥಳವೆಲ್ಲಾ ಕುರುಕ್ಷೇತ್ರ, ನೈಮಿಶಾರಣ್ಯ, ಪುಷ್ಕರ ಮೊದಲಾದ ದಿವ್ಯಕ್ಷೇತ್ರಗಳನ್ನಾಗಿ ಭಾವಿಸತಕ್ಕದೆಂದೂ ಹೇಳಲ್ಪಟ್ಟಿರುತ್ತದೆ. ಇದನ್ನನುಸರಿಸಿಯೇ ಸ್ವಾಮಿದೇಶಿಕರವರೂ, (೨) **ವಾಸಸ್ಥಾನಂ ತದಿಹ ಕೃತಿನಾಂ ಭಾತಿ ವೈಕುಂಠಕಲ್ಪಂ** ಎಂದು ಹೇಳಿರುತ್ತಾರೆ. ಅಂತಹ ದಿವ್ಯಸ್ಥಳವು ಈ ಲೀಲಾವಿಭೂತಿಯಲ್ಲೇ ಸಂಸಾರದೆಶೆಯಲ್ಲಿರುವಾಗಲೇ ದಿವ್ಯ ವೈಕುಂಠಕ್ಕೆ ಸಮಾನವಾದ ಸ್ಥಳವು. ದಿವ್ಯ ವೈಕುಂಠದಲ್ಲಿನ ಹಾಗೆ ಸರ್ವೇಶ್ವರನ ಧ್ಯಾನಕ್ಕೆ ಬೇಕಾದ ಏಕಾಗ್ರಚಿತ್ತತೆಯುಂಟಾಗುವದರಿಂದ ಸರ್ವೇಶ್ವರನ ಅನುಭವವೂ, ಅದರಿಂದುಂಟಾಗುವ ಆನಂದವೂ, ಭಗವತ್ಕೈಙ್ಕರ್ಯವೂ, ಮತ್ತು ಇನ್ನೊಂದು ವಿಶೇಷ ವಿಷಯವಾದ ಭಾಗವತ ಕೈಙ್ಕರ್ಯವೂ ಎಲ್ಲವೂ ಅಂತಹ ಸ್ಥಳಗಳಲ್ಲಿ ಪ್ರಾಪ್ತವಾಗುವದರಿಂದ "ಭಾತಿ

(೧) ಭಾಗ. (೨) ಅಭೀತಿ.

ವೈಕುಂಠಕಲ್ಪಂ" ಪರಮಪದಕ್ಕೆ ಸಮಾನವಾದುದಾಗಿ ಶೋಭಿಸುತ್ತದೆಂದು ಹೇಳಿರುತ್ತಾರೆ. ಅಭೀತಸ್ತವದಲ್ಲಿ ಶ್ರೀ ನಿಗಮಾಂತ ದೇಶಿಕರವರೇ ಇಂತಹ ಸ್ಥಳಗಳನ್ನು "**ತದಕ್ಷತ ತಪೋವನಂ ತವಚರಾಜಧಾನೀಸ್ಥಿರಾ**" ಬದರಿಕಾಶ್ರಮವೇ ಮೊದಲಾದ ತಪೋವನಗಳಿಗೂ, ಸರ್ವೇಶ್ವರನಿಗೆ ನಿತ್ಯವಾದ ರಾಜಧಾನಿಯಾದ ಪರಮಪದಕ್ಕೂ ಸಮವೆಂದು ಹೇಳಿರುತ್ತಾರೆ.

ಆದರೆ " ಅಯೋಧ್ಯಾ ಮಧುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ | ಪುರೀದ್ವಾರವತೀಚೈವ ಸಪ್ತೈತೇ ಮೋಕ್ಷದಾಯಕಾಃ" ಎಂದುಹೇಳಿರುವ ಈಸ್ಥಳಗಳಿಗೆ ಮುನಿಗಳು ಪ್ರಾಶಸ್ತ್ಯವನ್ನು ಕೊಟ್ಟಿದ್ದಾರಲ್ಲಾ ಅದು ಹೇಗೆ ಎಂದು ಕೇಳಬಹುದು. ಅದಕ್ಕೆ ಉತ್ತರವನ್ನು ದಯಪಾಲಿಸುತ್ತಾರೆ. " **ಪ್ರಾಯೋದೇಶಾ ಮುನಿಭಿರುದಿತಾಃ ಪ್ರಾಯಶೌಚಿತ್ಯವನ್ತಃ** " ಹೀಗೆ ಅನೇಕ ಪುಣ್ಯಸ್ಥಳಗಳಿಗೆ ಔಚಿತ್ಯವನ್ನು ಮುನಿಗಳು ಕೊಟ್ಟಿರುವುದು ಮೇಲೆ ಹೇಳಿದ ಕಾರಣದಿಂದಲೇ ಎಂದು **ತಿಳಸುತ್ತಾರೆ.** ಅವು ಪರಮ ಭಾಗವತರುಗಳಿಗೆ ತುಂಬಾ ಪ್ರಿಯವಾದ ಸ್ಥಳಗಳಾಗಿ ಅಂತಹ ಭಾಗವತರ ಕಟಾಕ್ಷ ವೀಕ್ಷಣೆ, ಅವರ ಪ್ರಸನ್ನತೆ, ಉಪದೇಶಾದಿಗಳು ದೊರೆತು, ಚಿತ್ತೈಕಾಂತ್ಯಕ್ಕೆ ಅನುಕೂಲವಾದ ಸ್ಥಳಗಳಾದುದರಿಂದ ಅವುಗಳಿಗೆ ಮಾಹಾತ್ಮ್ಯೆಯುಂಟಾಗಿರುತ್ತದೆಂದು ಬೋಧಿಸುತ್ತಾರೆ. ಹಾಗೆಯೇ ಭಾಗವತಾಗ್ರೇಸರರಾದ ಭರತಾಳ್ವಾರ್ರವರು ಚಿತ್ರಕೂಟವನ್ನು "**ಸುಭಗಶ್ಚಿತ್ರಕೂಟೋಸೌ**" (ರಾಮಾ. ಅಯೋ.) ಎಂದುಹೇಳಿ ಶ್ಲಾಘಿಸಿದುದಕ್ಕೆ ಕಾರಣವನ್ನು "**ರಾಜೀವಾಕ್ಷನಾಗಿ ಮಹಾದ್ಯುತಿ**"ಯಾದಶ್ರೀರಾಮನು ಆಪರ್ವತವನ್ನಲಂಕರಿಸಿದುದರಿಂದ ಎಂದು ಹೇಳಿದರು. ಶ್ರೀರಾಮನಾದರೋ "**ಆ ಗಿರಿರಾಜೋಪಮೋ ಗಿರಿಃ**" ಗಿರಿಶ್ರೇಷ್ಠವಾದ ಶ್ರೀವೇಙ್ಕಟಾದ್ರಿಗೆ ಸಮಾನವಾದ ಚಿತ್ರಕೂಟವನ್ನು ಆಶ್ರಯಿಸಿ, ಅಲ್ಲಿ ಆಶ್ರಮನಿರ್ಮಾಣಮಾಡಿ ವಾಸಮಾಡಲು ಕಾರಣವನ್ನು ತಾವೇ ಹೇಳಿಕೊಂಡಿರುತ್ತಾರೆ.

"ಮುನಯಶ್ಚ ಮಹಾತ್ಮಾನೋ ವಸಂತ್ಯಸ್ಮಿನ್ ಶಿಲೋಚ್ಚಯೇ |
ಅಯಂ ವಾಸೋಭವೇತ್ತಾವದತ್ರ ಸೌಮ್ಯವಸೇಮಹಿ "

(ರಾ. ಅಯೋಧ್ಯಾ. ೫೬. ೧೫) ಮಹಾನುಭಾವರಾದ ಮುನಿಗಳು ಈ ಚಿತ್ರಕೂಟ ಪರ್ವತದಲ್ಲಿರುವುದರಿಂದ ತನಗೆ ಈಮನೋಹರವಾದ ಪರ್ವತದಲ್ಲಿ ವಾಸವು ಯೋಗ್ಯವೆಂದು ಶ್ರೀರಾಮಚಂದ್ರ ಪ್ರಭುವು ತನ್ನ ತಮ್ಮನನ್ನು ಕುರಿತು ತಿಳಿಸಿದರು. ಇದೂ ಅಲ್ಲದೆ ಇಂತಹ ಜ್ಞಾನದೀಪ್ತಿಯಿಂದ ವಿರಾಜಿಸುವ ಮುನಿಗಳಿರುವುದರಿಂದಲೇ '**ಯಾವತಾ ಚಿತ್ರಕೂಟಸ್ಯ ನರ ಶೃಂಗಾಣ್ಯವೇಕ್ಷತೇ | ಕಲ್ಯಾಣಾನಿ ಸಮಾಧತ್ತೇ ನಪಾಪೇ ಕುರುತೇ ಮನಃ**" ಎಂದು ಹೇಳಿರುವಹಾಗೆ ಯಾವ ಮನುಷ್ಯನು ಚಿತ್ರಕೂಟ ಪರ್ವತದ ಶೃಂಗಗಳನ್ನು ನೋಡುತ್ತಿರುವನೋ, ಆದುವರೆಗೂ ಆತನಮನಸ್ಸು ಮಂಗಳಕರವಾದ ಕೃತ್ಯಗಳಲ್ಲಿ ಪ್ರವರ್ತಿಸುವುದೇ ವಿನಾ ಪಾಪ

ಕರ್ಮಗಳಲ್ಲಿ ಪ್ರವರ್ತಿಸುವುದಿಲ್ಲವೆಂದು ಹೇಳಲ್ಪಟ್ಟಿದೆ. ಇನ್ನೊಂದು ಸಂದರ್ಭದಲ್ಲೂ ತನಗೆ ಪ್ರಿಯಮಿತ್ರನಾದ ಸುಗ್ರೀವನಿಗೆ ರಾಜ್ಯದಾರ ಪ್ರಾಪ್ತಿಯನ್ನುಂಟುಮಾಡಿ ಆತನು ಸಕಲ ದಿವ್ಯರಾಜ್ಯಭೋಗಗಳನ್ನೂ ಅನುಭವಿಸುತ್ತಾ **'ಸಂಪ್ರಾಪ್ಯ ಸುಹ ತೀಂಶ್ರಿಯಂ'** ಎಂದು ಹೇಳಿರುವಹಾಗೆ, ಸಂತೋಷಗೊಂಡವನಾಗಿ, ತನ್ನ ತಮ್ಮನಾದ ಲಕ್ಷ್ಮಣನನ್ನು ಕುರಿತು ಓ ಸೌಮ್ಯನೇ ಈಗ ವರ್ಷಾಕಾಲವಾದುದರಿಂದ ಸೀತಾನ್ವೇಷಣ ಮುಂತಾದ ಕೆಲಸಗಳು ಸಾಧ್ಯವಲ್ಲದುದರಿಂದ ಹತ್ತಿರವಿರುವ ಪ್ರಸ್ರವಣ ಗಿರಿಯ ಗುಹೆಯು ವಿಶಾಲವಾಗಿರುವದರಿಂದ ಇಲ್ಲಿಯೇ **'ದೃಢಂ ರಂಸ್ಯಾವ ಸೌಮಿತ್ರೇ ಸಾಧ್ವತ್ರ ನಿವಸಾವಹೇ'** ವಿಹರಿಸುತ್ತ ಇದ್ದುಬಿಡೋಣ, ಏಕೆಂದರೆ ಈ ದೇಶವು ಬಹು ರಮಣೀಯವಾಗಿಯೂ, ಹತ್ತಿರದಲ್ಲೇ **'ರಮಣೀಯಾ ನದೀ ಸೌಮ್ಯ ಮುನಿಸಂಘೈರ್ನಿಷೇವಿತಾ'** ಮುನಿಗಳ ಸಮೂಹದಿಂದ ಅವಗಾಹನ ಮೊದಲಾದವುಗಳಿಂದ ಪವಿತ್ರೀಕರಿಸಲ್ಪಟ್ಟ ರಮಣೀಯವಾದ ನದಿಯು ಪ್ರವಹಿಸುವುದರಿಂದಲೂ ನಮಗೆ ಈ ಪರ್ವತಗುಹೆಯು ವಾಸಯೋಗ್ಯಸ್ಥಳವು" ಎಂದು ಹೇಳಿರುತ್ತಾರೆ. ಹೀಗೆ ಶ್ರೀರಾಮನಿಗೆ ಸುಭಗತ್ವ ರಮಣೀಯತ್ವಗಳೆಲ್ಲಾ ಯಾವಕಾರಣದಿಂದೆಂದರೆ. ಮುನಿ ಸಂಘಗಗಳಿಂದ ನಿಷೇವಿತವಾಗಿರುವುದರಿಂದಲೇ, ಆದುದರಿಂದ ಅನೇಕ ಋಷ್ಯಾಶ್ರಮಗಳಲ್ಲೇ ಶ್ರೀರಾಮಚಂದ್ರನು ಅಷ್ಟು ಆದರವನ್ನು ತೋರಿ ಅವುಗಳನ್ನು ಕುರಿತು ತೆರಳಿ ಭರದ್ವಾಜಾದಿ ಋಷಿಗಳಿಗೆ ತನ್ನ ಸಂದರ್ಶನವನ್ನು ದಯಪಾಲಿಸಿರುತ್ತಾನೆ. ಆದುದರಿಂದ ಭಾಗವತರುಗಳ ಸಾನ್ನಿಧ್ಯದಲ್ಲಿ ವಸಿಸತಕ್ಕದ್ದು ಪ್ರಪನ್ನನಿಗೆ ಅತ್ಯಾವಶ್ಯಕವು. ಸ್ವರೂಪಕ್ಕೆಯೋಗ್ಯವಾದುದು ಮಾತ್ರವೇ ಅಲ್ಲದೆ, ಅವರುಗಳ ಸಾನ್ನಿಧ್ಯದಿಂದ ಈತನಿಗೆ ರಜಸ್ತಮೋಗುಣಗಳ ನಾಶಪೂರ್ವಕವಾಗಿ ಸತ್ವವೃದ್ಧಿಯುಂಟಾಗುವದರಿಂದ ಬುದ್ಧಿ ಪೂರ್ವೋತ್ತರಾಘದಲ್ಲಿ ಮನಸ್ಸು ಪ್ರವರ್ತಿಸುವುದಿಲ್ಲವು. ಹಾಗೆಯೇ ಗೀತೆಯಲ್ಲಿ ಹೇಳಲ್ಪಟ್ಟಿರುತ್ತದೆ. (ಭ. ಗೀ. ೧೪-೧೭.) **ಸತ್ವಾತ್ಸಂಜಾಯತೇ ಜ್ಞಾನಂ ರಜಸೋಲೋಭಏವಚ। ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವಚ ||** ಅಪರಾಧ ಹೇತುಗಳಾದ ಲೋಭ ಪ್ರಮಾದ ಮೋಹ ಅಜ್ಞಾನಾದಿಗಳು ತೊಲಗಿ ಸುಜ್ಞಾನಾಭಿವೃದ್ಧಿಗಾಗಿ ಭಾಗವತರ ಮಧ್ಯದಲ್ಲಿರತಕ್ಕದ್ದು. ಹೀಗೆ ತೊಂಡರಡಿಪ್ಪೊಡಿಯಾಳ್ವಾರ್ ತಿರುಪ್ಪಾಣಾಳ್ವಾರ್ ತಿರುಮಂಗೈಯಾಳ್ವಾರ್ ಮೊದಲಾದ ಆಳ್ವಾರುಗಳಿಗೂ, ಯಾಮುನೇಯರು ದರ್ಶನ ಸ್ಥಾಪಕರಾದ ಶ್ರೀ ಭಾಷ್ಯಕಾರರು, ಪರಾಶರ ಭಟ್ಟರು, ಮೊದಲಾದ ಆಚಾರ್ಯರುಗಳಿಗೂ, ಬಹಳ ಪ್ರಿಯವಾದ ಸ್ಥಳವಾದುದರಿಂದ ಶ್ರೀರಂಗಕ್ಕೆ ದಿವ್ಯದೇಶವೆಂಬ ಪ್ರಾಶಸ್ತ್ಯವು ಹೆಚ್ಚು.

ಇದರಿಂದ ಪರಮೈಕಾನ್ತಿಗೆ ದೊಡ್ಡೂರು ತನ್ನ ನೆಂಟರಿಷ್ಟರು ತನ್ನ ಕುಲದವರೂ ಇರುವ ದೇಶ ಬೇಕಿಲ್ಲವು. ದಿವ್ಯ ವಿಷ್ಣು ಕ್ಷೇತ್ರವೂ ವೈಷ್ಣವ ಭಾಗವತರೂ

ಚಾತುರ್ವರ್ಣ್ಯಧರ್ಮಪ್ರತಿಷ್ಠಿತದೇಶಸ್ಯೋಪಾದೇಯತ್ವಕಥನಂ

ಇಙ್ಗಿರುನ್ದ ನಾಳಿಪ್ಪಡಿ ಸ್ವಯಮ್ ಪ್ರಯೋಜನಮಾಗ ನಿರಪರಾಧಾನುಕೂಲ ವೃತ್ತಿಯಿಲೇ ರುಚಿಯುಮ್ ತ್ವರೈಯುಂ ಮುಡೈಯವನಾಯ್ ೧ "ಏಕಾಂತೀವ್ಯಪದೇಷ್ಟವ್ಯೋ ನೈವಗ್ರಾಮಕುಲಾದಿಭಿಃ। ವಿಷ್ಣುನಾವ್ಯಪದೇಷ್ಟವ್ಯ ಸ್ತಸ್ಯಸರ್ವಂ ಸ ಏವಹೀ" ಎನ್ರುಮ್ ಪಡಿಯಾ

ಇರುವ ದೇಶವೇ ತನಗೆ ಯೋಗ್ಯವೆಂದು ಭಾವಿಸುವನೆಂಬ ತಾತ್ಪರ್ಯವು.

ಆದುದರಿಂದ ಮಹಾ ಭಾಗವತೋತ್ತಮರುಗಳಿಂದ ಅಧಿಷ್ಠಿತವಾದ ದಿವ್ಯದೇಶವೀಗ ಪ್ರಪನ್ನನಿಗೆ ಯೋಗ್ಯವಾದ ವಾಸಸ್ಥಳವು. ದೇಹಯಾತ್ರಾದಿ ತೊಂದರೆಗಳಿಂದ ಅಂತಹ ಸ್ಥಳದಲ್ಲಿರಲು ಅನುಕೂಲವಿಲ್ಲದಿದ್ದರೂ, ಮಹಾಭಾಗವತನೊಬ್ಬನಾದರೂ ಇರುವ ಸ್ಥಳದಲ್ಲಿ ಅಂಥಾವರ ಸಾನ್ನಿಧ್ಯದಲ್ಲಿ ಪ್ರಪನ್ನನು ವಾಸಮಾಡತಕ್ಕದ್ದೆಂಬುವದು ಈ ಶ್ಲೋಕದ ಮುಖ್ಯಾಭಿಪ್ರಾಯವು.

ಇಙ್ಗಿರುನ್ದನಾಳ್—ಈ ಲೋಕದಲ್ಲಿದ್ದಷ್ಟು ದಿನ, ಹೇಗೆ ಇದ್ದಷ್ಟು ಕಾಲವೆಂದರೆ, ಕೃತಕೃತ್ಯಾಧಿಕಾರದಲ್ಲೂ ಸ್ವನಿಷ್ಠಾಭಿಜ್ಞಾನಾಧಿಕಾರದಲ್ಲೂ ಹೇಳಿರುವ ಹಾಗೆ ಕೃತಕೃತ್ಯನಾಗಿ ಸ್ವನಿಷ್ಠಾಭಿಜ್ಞಾನವುಳ್ಳವನಾಗಿ ಇದ್ದಷ್ಟುಕಾಲವು, **ಇಪ್ಪಡಿ**-ಈಪ್ರಕಾರವಾಗಿ ಎಂದರೆ ಶಾಸ್ತ್ರೀಯನಿಯಮನಾಧಿ ಕಾರದಲ್ಲಿ ಹೇಳಿರುವಹಾಗೆ ಆಜ್ಞಾನುಜ್ಞಾ ಕೈಙ್ಕರ್ಯ ನಿರತನಾಗಿ ಅವುಗಳನ್ನು ಶಾಸ್ತ್ರಾನುಗುಣವಾಗಿ ನಡೆಸುತ್ತಾ, **ಸ್ವಯಂ ಪ್ರಯೋಜನಮಾಗ** - ಉತ್ತರ ಕೃತ್ಯಾಧಿಕಾರದಲ್ಲಿ ಹೇಳಿರುವ ಹಾಗೆ ಕೈಙ್ಕರ್ಯ ಮಾಡುವದೇ ಪ್ರಯೋಜನವೆಂದು ಭಾವಿಸಿ, ಅದರಿಂದುಂಟಾಗುವ ಫಲದಲ್ಲಿ ಆಸೆಯನ್ನಿಡದೆ, **ನಿರಪರಾಧಾನುಕೂಲ ವೃತ್ತಿಯಿಲೇ ರುಚಿಯುಮ್**—ಅಪರಾಧ ಸಂಬಂಧವಿಲ್ಲದೆ ಅನುಕೂಲ ವೃತ್ತಿಯಾದ ಭಗವದ್ಭಾಗವತ ಕೈಙ್ಕರ್ಯದಲ್ಲಿ ಅಭಿರುಚಿಯನ್ನು, ನಿರಪರಾಧವೆಂದು ಹೇಳಿದುದರಿಂದ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಿರುವ ಹಾಗೆ, ಬುದ್ಧಿಪೂರ್ವೋತ್ತರಾಘದ ಸಂಬಂಧವಿಲ್ಲದವನಾಗಿ ಎಂಬ ಭಾವವೂ, **ಅನುಕೂಲವೃತ್ತಿಯಿಲೇ** ಎಂದು ಹೇಳಿದುದರಿಂದ ಪುರುಷಾರ್ಥಕಾಷ್ಠಾಧಿಕಾರದಲ್ಲಿ ಹೇಳಿರುವ ಹಾಗೆ, ಭಾಗವತ ಕೈಙ್ಕರ್ಯವನ್ನೆಸಗಿ ಭಾಗವತ ಪ್ರಸನ್ನತೆಯನ್ನು ಹೊಂದಬೇಕೆಂಬುವುದರಲ್ಲಿ ರುಚಿಯನ್ನೂ, **ತ್ವರೈಯುಮುಡೈಯವನಾಯ್**—ಒಂದುವೇಳೆ ಅಲ್ಲಿ ಅಂತಹ ಕೈಙ್ಕರ್ಯಕ್ಕೆ ವಿರೋಧಉಂಟಾದರೆ ಅದನ್ನು ಹೊಂದಲು ತ್ವರಾರೂಪ ಶ್ರದ್ಧೆಯಿಂದಲೂ, " **ಏಕಾನ್ತೀ**—ಇಲ್ಲಿ ಏಕಾನ್ತಿಶಬ್ದಕ್ಕೆ ಪರಮೈಕಾನ್ತಿ ಎಂದೇ ವ್ಯಾಖ್ಯಾನಮಾಡಿರುತ್ತಾರೆ. ಏಕಾನ್ತಿ ಎಂದರೆ " **ಯೋ**

(೧) ವಿಷ್ವಕ್ಸೇನ ಸಂಹಿತೆ.

ಯಿರುಕ್ಕಿರಪರಮೈಕಾಂತಿ(ಕ್ಕು) ವೃತ್ತಿಕ್ಕನುಗುಣಮಾಗ ವಾಸಸ್ಥಾನ

ಮೋಕ್ಷಫಲೇನ ಸಾಕಂ ಫಲಾಂತರಾಣ್ಯಪಿ ಭಗವತ ಏವೇಚ್ಛತಿ " ಎಂದು ಹೇಳಿರುವ ಹಾಗೆ ದೇವತಾಂತರದಿಂದಲ್ಲದೆ ಸರ್ವೇಶ್ವರನಿಂದಲೇ ಮೋಕ್ಷಫಲದೊಂದಿಗೆ ಇತರ ಫಲಗಳನ್ನೂ ಅಪೇಕ್ಷಿಸುವವನು; ಪರಮೈಕಾನ್ತಿಯು, ‘‘**ಭಕ್ತಿಜ್ಞಾನಾಭ್ಯಾಮನ್ಯತ್ಫಲಂ ಭಗವತೋಽಪಿ ನೇಚ್ಛತಿ ಯಃ ಸಪರಮೈಕಾನ್ತೀ**’’, ಭಕ್ತಿಜ್ಞಾನಗಳಲ್ಲದೆ ಬೇರೆಯಾವುದನ್ನೂ ಭಗವಂತನಿಂದ ಪ್ರಾರ್ಥಿಸದೇ ಇರುವವನು, ಐಹಿಕ ಜಿಹಾಸೆಯುಳ್ಳವನು, **ಗ್ರಾಮ ಕುಲಾದಿಭಿಃ**— ಇಂತಹ ದೊಡ್ಡ ಗ್ರಾಮಕ್ಕೆ ಸೇರಿದವನು. ಇಂತಹ ಶ್ರೇಷ್ಠ ಕುಲಕ್ಕೆ ಸೇರಿದವನು ಎಂದು, **ನವ್ಯಪದೇಷ್ಟವ್ಯಃ**— ಹೇಳಿಸಿಕೊಳ್ಳಲು ಯೋಗ್ಯನಲ್ಲವು. ಇನ್ನು ಹೇಗೆ ಹೇಳಿಸಿಕೊಳ್ಳಲು ಯೋಗ್ಯನೆಂದರೆ:— **ವಿಷ್ಣುನಾವ್ಯಪದೇಷ್ಟವ್ಯಃ**— ವಿಷ್ಣು ಸಂಬಂಧಿ ಎಂದು ಹೇಳಿಸಿಕೊಳ್ಳಲು ಯೋಗ್ಯನು, ಕಾಂಚೀಪೂರ್ಣರು ಶ್ರೀಶೈಲಪೂರ್ಣರು ಎಂದು ಪ್ರಸಿದ್ಧರಾಗಿ ಹೇಳಿಸಿಕೊಂಡ ಹಾಗೆ ಹೇಳಿಸಿಕೊಳ್ಳುವವರು ; ಅದೇಕೆಂದರೆ ಹೇಳಲ್ಪಡುತ್ತದೆ, **ತಸ್ಯ ಸರ್ವಂ ಸ ಏವಹಿ**— ಆತನಿಗೆ, ಉಪಾಯೋ ಉಪೇಯವಾಗಿ ಸರ್ವವೂ, ಮಹೋಪಕಾರಕನಾಗಿ ಸಮಸ್ತವೂ, **ಸಏವಹಿ**— ಆಶ್ರಿಯಃಪತಿಯೇ, ಆತನಿಗೆ ಶ್ರಿಯಃ ಪತಿಯಲ್ಲದೇ ಇನ್ನಾವದೂ ಬೇಕಿಲ್ಲವು. ಆದುದರಿಂದ ಇಲ್ಲಿ ಏಕಾನ್ತೀ ಎಂದು ಹೇಳಿದರೂ ಪರಮೈಕಾನ್ತಿಯೇ ಹೇಳಲ್ಪಟ್ಟನು; ಆಕಾರಣದಿಂದಲೇ ಶ್ರೀ ದೇಶಕರೂ ಪರಮೇಕಾನ್ತಿ ಎಂದೇ ಮುಂದೆ ವ್ಯಾಖ್ಯಾನಮಾಡಿರುತ್ತಾರೆ. " **ಎನ್ರುಮ್ಬಡಿಯಾ ಯಿರುಕ್ಕಿರ**— ಹೀಗೆ ಸಮಸ್ತವೂ ತನಗೆ ಮಹಾವಿಷ್ಣುವೇ ಎಂಬ ಹಾಗೆ ಇರುವ, ಪರಮೈಕಾಂತಿಯು **ವೃತ್ತಿಕ್ಕು**— ಆಚರಣೆಗೆ, ಅನುಗುಣವಾಗ-ಯೋಗ್ಯವಾದ, ವಾಸಸ್ಥಾನ ವಿಶೇಷವು ಯಾವುದೆಂದರೆ, **ಆರ್ಯಾವರ್ತಾದಿ ಪುಣ್ಯದೇಶಂಗಳ್**-‘‘**ಆರ್ಯಾವರ್ತಃ ಪುಣ್ಯಭೂಮಿರ್ಮಧ್ಯಂ ವಿಂಧ್ಯಹಿಮಾಗಯೋಃ**" ಎಂದು ಅಮರದಲ್ಲಿ ಹೇಳಿರುವ ಹಾಗೆ, ಪೂರ್ವ ಪಶ್ಚಿಮ ಸಮುದ್ರಗಳಿಗೂ ವಿಂಧ್ಯ ಹಿಮವತ್ಪರ್ವತಕ್ಕೂ ಮಧ್ಯೆ ಇರುವ ಪ್ರದೇಶಕ್ಕೆ ಆರ್ಯಾವರ್ತವೆಂದು ಹೆಸರು. ಇಲ್ಲಿ ಧಾರ್ಮಿಕರಾದ ಭಾಗವತರು ಒಂದಾನೊಂದು ಕಾಲದಲ್ಲಿ ವಾಸಮಾಡುತ್ತಿದ್ದರಾದುದರಿಂದ ಆ ಹೆಸರು. ಆ ಕಾರಣದಿಂದಲೇ ಅದಕ್ಕೆ ಪುಣ್ಯಭೂಮಿ ಎಂದು ಹೆಸರು. ಮನುವು ಕೂಡ ಹಾಗೆಯೇ ಕೊಂಡಾಡಿರುತ್ತಾರೆ. ‘‘**ಆ ಸಮುದ್ರಾತ್ತು ವೈ ಪೂರ್ವಾದಾಸಮುದ್ರಾಚ್ಚ ಪಶ್ಚಿಮಾತ್। ಹಿಮವದ್ವಿಂಧ್ಯಯೋರ್ಮಧ್ಯಮಾರ್ಯಾವರ್ತಂ ವಿದುರ್ಬುಧಾಃ**,’’ ಈ ಆರ್ಯಾವರ್ತವೇ ಮೊದಲಾದ ಪುಣ್ಯದೇಶಗಳು, **ಯುಗಸ್ವಭಾವತ್ತಾಲೇ**— ಈ ಕಲಿಯುಗದ ಸ್ವಭಾವದಿಂದ, ಆ ಸ್ವಭಾವವೆಂಥಾದ್ದೆಂದರೆ:— ‘‘**ಅಧರ್ಮೋಽಗ್ರಸತೇ ಧರ್ಮಂ**" ಅಧರ್ಮವು ಧರ್ಮವನ್ನು ಎಂದರೆ

ವಿಶೇಷ ಮೋದೆನ್ನಿಲ್ —ಆರ್ಯಾವರ್ತಾದಿ ಪುಣ್ಯದೇಶಙ್ಗಳ್, ಯುಗ ಸಭಾವತ್ತಾಲೆ ಇಪ್ಪೋದು ವ್ಯಾಕುಲಿತಙ್ಗಳಾನ ಪಡಿಯಾಲೇ ಚಾತುರ್ವರ್ಣ್ಯ ಧರ್ಮಮ್ ಪ್ರತಿಷ್ಠಿತಮಾನ ವಿಡತ್ತಿಲೇವಸಿಪ್ಪಾ ನೆಙ್ಗಿರದೇ ಇಪ್ಪೋದೈಕ್ಕು ಉಪಾದೇಯಮ್.

ಶ್ರುತಿಯಲ್ಲಿ ಹೇಳಿರುವ ಆಜ್ಞಾನುಜ್ಞಾ ಕೈಂಕರ್ಯಗಳನ್ನು **ನುಂಗಿಬಿಡುತ್ತದೆ. ಇನ್ನೂ, ಕಲೌ ಕಾರ್ತ್ತಯುಗಂಧರ್ಮಂ ಕರ್ತ್ತು ಮಿಚ್ಛತಿ ಯೋನರಃ । ಸ್ವಾಮಿದ್ರೋಹೀತಿತಂ ಮತ್ವಾತಸ್ಮೈ ಪ್ರದ್ವಿಷತೇ ಕಲಿಃ,** ಎಂದರೆ ಕಲಿಯುಗದಲ್ಲಿ ಯಾವನಾದರೂ ಕೃತಯುಗದ ಧರ್ಮವನ್ನು ಮಾಡಲು ಯತ್ನಿಸಿದರೆ, ಆತನನ್ನು ಸ್ವಾಮಿದ್ರೋಹಿಎಂದೆಣಿಸಿ, ತನಗೆಬೇಕಾದ ಅಧರ್ಮವನ್ನು ಬಿಟ್ಟು ತನಗೆ ವಿರೋಧವಾದ ಧರ್ಮಾಚರಣೆಮಾಡಿದುದರಿಂದ ಆತನನ್ನು ಕಲಿಯು ದ್ವೇಷಿಸುವನು, ಎಂದುಹೇಳಲ್ಪಟ್ಟಿರುತ್ತದೆ; **ಇಪ್ಪೋದು ವ್ಯಾಕುಲಂಗಳಾನ ಪಡಿಯಾಲೇ** - ಹಿಂದಿನ ಕಾಲದಲ್ಲಿ ಪುಣ್ಯಕ್ಷೇತ್ರಗಳೆಂದೆಣಿಸಿ ಪ್ರಸಿದ್ಧವಾದವುಗಳಾಗಿದ್ದರೂ ಈಗಿನ ಕಾಲದಲ್ಲಿ ಅಲ್ಲಿ ವರ್ಣಾಶ್ರಮ ಧರ್ಮಗಳು ನಷ್ಟವಾದಕಾರಣದಿಂದ, **ಚಾತುರ್ವರ್ಣ್ಯ ಧರ್ಮಮ್ ಪ್ರತಿಷ್ಠಿತಮಾನ ವಿಡತ್ತಿಲೆ**-ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರಾದ ನಾಲ್ಕು ವರ್ಣದವರ ಧರ್ಮಗಳು ಚೆನ್ನಾಗಿ ನೆಲಗೊಂಡಿರುವ ಸ್ಥಳದಲ್ಲಿ, **ವಸಿಪ್ಪಾರ್ ಎಙ್ಗಿರದೇ ಇಪ್ಪೋದಕ್ಕು ಉಪಾದೇಯಮ್** ವಾಸಮಾಡುವನೆಂಬುವದೇ ಈ ಕಾಲಕ್ಕೆ ನಮಗೆ ಗ್ರಾಹ್ಯವಾದುದು.

ಒಂದಾನೊಂದುಕಾಲದಲ್ಲಿ ಪ್ರಸಿದ್ಧ ಪುಣ್ಯಕ್ಷೇತ್ರಗಳಾಗಿದ್ದಮಾತ್ರದಿಂದ ವರ್ಣಾಶ್ರಮ ಧರ್ಮಗಳಿಗೆಲ್ಲಾ ಈಗ ಲೋಪವುಂಟಾಗಿದ್ದರೂ ಅವುಗಳನ್ನು ಪ್ರಪನ್ನನಿಗೆ ವಾಸಯೋಗ್ಯಸ್ಥಳಗಳೆಂದು ಭಾವಿಸತಕ್ಕದ್ದಲ್ಲವು. ಅವುಗಳಿಗಿಂತ ವರ್ಣಾಶ್ರಮಧರ್ಮಗಳೆಲ್ಲಾ ಸಮರ್ಪಕವಾಗಿ ನಡೆಯುವ ಸ್ಥಳಗಳೇ ಪರಮ ಗ್ರಾಹ್ಯಗಳೆಂದು ಹೇಳುತ್ತಾರೆ. ಹಾಗೆಯೇ ಮಹರ್ಷಿಯೂ "**ಕ್ಷತ್ರಂ ಬ್ರಹ್ಮಮುಖಂಚಾಸೀ ದ್ವೈಶ್ಯಾಃ ಕ್ಷತ್ರಮನುವ್ರತಾಃ । ಶೂದ್ರಾಸ್ಸ್ವಧರ್ಮನಿರತಾ ಸ್ತ್ರೀನ್ವರ್ಣಾನುಪಚಾರಿಣಃ** ಎಂದು ಹೇಳಿ ವರ್ಣಾಶ್ರಮಧರ್ಮಗಳು ಶಾಸ್ತ್ರೋಕ್ತರೀತಿಯಲ್ಲಿ ನಡೆಯುತ್ತಾದುದರಿಂದ ಅಯೋಧ್ಯೆಗೆ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರೆ. ಹೀಗೆ ಆರ್ಯಾವರ್ತವೆಂದು ಶ್ಲಾಘಿಸಲ್ಪಟ್ಟ ದೇಶಗಳು ಒಂದಾನೊಂದು ಕಾಲದಲ್ಲಿ ಧರ್ಮಪ್ರಚುರ ಪ್ರದೇಶಗಳಾಗಿದ್ದರೂ ಈಗ ವ್ಯತ್ಯಸ್ತವಾದುದರಿಂದ ಅವು ಅಷ್ಟುಗ್ರಾಹ್ಯವಲ್ಲವೆಂಬ ಭಾವವು. ಇನ್ನುಯಾವ ಪ್ರದೇಶಗಳುತ್ತಮವೆಂದರೆ ದಕ್ಷಿಣದಲ್ಲಿ ವರ್ಣಾಶ್ರಮಧರ್ಮಗಳಿಗೆ ಪ್ರೋತ್ಸಾಹವಿರುವದರಿಂದ ಅವು ಗ್ರಾಹ್ಯವೆಂದುಹೇಳಿ, ಅವುಗಳಲ್ಲೂ ಎಂತಹ ಪ್ರದೇಶಗಳು ಅಧಿಕ ಗ್ರಾಹ್ಯವಾದುದಾಗಿ ಭಾವಿಸತಕ್ಕದ್ದೆಂಬುವದನ್ನು ಮುಂದೆ ಉಪದೇಶಿಸುತ್ತಾರೆ.

ಭಾಗವತೋತ್ತರ ದೇಶಸ್ಯ ಅಧಿಕ ಪರಿಗ್ರಾಹ್ಯತ್ವ ಕಥನಮ್

ಅಪ್ಪಿಡಙ್ಗಳ್ ತನ್ನಿಲುಮ್, "ಕರುನ್ದಡಿ ಮುಗಿಲ್ ವಣ್ಣನೈ ಕ್ಕಡೈಕ್ಕೊಂಡು ಕೈತೊಳುಮ್ ಪತ್ತರ್‌ಗೇರುನ್ದ ವೂರಿಲಿರುಕ್ಕು ಮಾನಿಡರೆತ್ತವಂಗಳ್ ಶೆಯ್‌ದಾರ್ ಕೋಲೋ" ಎಙ್ಗರ ಪಡಿಯೇ ಭಾಗವತೋತ್ತರಮಾನ ದೇಶಮ್ ಮುಮುಕ್ಷುವುಕ್ಕು ಪರಿಗ್ರಾ

ಮಹಾಭಾಗವತರುಗಳಿರುವ ಸ್ಥಳಗಳೇ ಪರಮಗ್ರಾಹ್ಯಗಳೆಂದು ಆಳ್ವಾರ್‌ಸೂಕ್ತಿ ಮೂಲಕವಾಗಿ ತಿಳಿಸುತ್ತಾರೆ.

ಅಪ್ಪಿಡಙ್ಗಳ್ ತನ್ನಿಲುಮ್- ವರ್ಣಾಶ್ರಮಧರ್ಮಗಳನುಷ್ಠಾನವಿರುವ ಅಂತಹ ಪ್ರದೇಶಗಳಲ್ಲೂ, (1) **ಕರುಮ್**-ಕಪ್ಪಾಗಿ, **ತಿಡಮ್**-ದೃಢವಾದ, **ಮುಗಿಲ್**-ಮೇಘದ, ಎಂದರೆ ಮೇಘಸದೃಶವಾದ, **ವಣ್ಣನೈ**-ಬಣ್ಣವುಳ್ಳವನನ್ನು, ನೀಲಮೇಘ ಶ್ಯಾಮನನ್ನು, ಇದರಿಂದ ಸಂಸಾರಾದಿ ತಾಪತ್ರಯ ನಿವಾರಕತ್ವವು ಹೇಳಲ್ಪಟ್ಟಿತು, **ಕಡೈಕೊಂಡು**-ತನಗೆ ರಕ್ಷಕನಾಗಿ ಶರಣಹೊಂದಿ, ಅಥವಾ **ಕಡೈ**-ಎಂದರೆ, ನೈಚ್ಯವು, ತಮ್ಮ ನೈಚ್ಯವನ್ನು ಮುಂದಿಟ್ಟುಕೊಂಡು, **ಕೈತೊಳುಮ್**— ನಾನಾವಿಧ ಕೈಙ್ಕರ್ಯಗಳನ್ನೆಸಗುವ, **ಪತ್ತರ್‌ಗಳ್**—ಭಕ್ತರುಗಳು, ಎಂದರೆ ಪ್ರಪನ್ನರಾದ ಭಾಗವತರುಗಳು, **ಇರುನ್ದವೂರಿಲ್** — ಇರುವ ಊರಿನಲ್ಲಿ, **ಇರುಕ್ಕುಮ್** ಇರುವ, **ಮಾನಿಡರ್** ಮನುಷ್ಯರು, **ಎತ್ತವಂಗಳ್ ಶೆಯ್‌ದಾರ್ ಕೋಲೋ** — ಯಾವ ಸುಕೃತಗಳನ್ನು ಮಾಡಿದವರೋ" **ಎಂಗಿರಪಡಿಯೇ**— ಎಂದು ಹೇಳಿರುವ ಹಾಗೆ, **ಭಾಗವತೋತ್ತರಮಾನ**— ಭಾಗವತ ಪ್ರಾಚುರ್ಯವುಳ್ಳ, ಎಂದರೆ ಅನೇಕ ಭಾಗವತರುಗಳಿರುವ, ಪ್ರದೇಶವು, **ಮುಮುಕ್ಷುವುಕ್ಕು ಪರಿಗ್ರಾಹ್ಯಮ್**—ಮೋಕ್ಷಾರ್ಥಿಗೆ ವಿಶೇಷಗ್ರಾಹ್ಯವು. ಎಲ್ಲಿ ಭಾಗವತ ಪ್ರಾಚುರ್ಯ ಉಂಟೋ ಅಂತಹ ಸ್ಥಳದಲ್ಲೇ ಈ ಪ್ರಪನ್ನನು ದೇಹಾವಸಾನದವರಿವಿಗೂ ವಸಿಸತಕ್ಕದ್ದು. ಈ ಸಂದರ್ಭದಲ್ಲಿ ಮಾರ್ಕಂಡೇಯ ಪುರಾಣ ಶ್ಲೋಕವಾದ " **ಸದ್ಭಿರೇವ ಸಹಾಸೀತಸದ್ಭಿಃ ಕುರ್ವೀತ ಸಂಗಮಮ್ । ಸದ್ಭಿರ್ವಿವಾದಂ ಮೈತ್ರಂಚ ನಾಸದ್ಭಿಃ ಕಿಂಚಿದಾಚರೇತ್** । ಎಂಬುದು ಅನುಸಂಧೇಯವು. ಹಾಗೆಯೇ **ಸಂಭಾಷಾದರ್ಶನಸ್ಪರ್ಶಃ ಕೀರ್ತನಂ ಸ್ಮರಣಂ ನತಿಃ । ಪಾವನಾನಿ ಕಿಲೈತಾನಿ ಸಾಧೂನಾಮಿತಿ ಶುಶ್ರುಮ** ॥ ಮಹಾಭಾಗವತರುಗಳೊಂದಿಗೆ ಸಂಭಾಷಣೆಯೂ, ಅವರ ದರ್ಶನವೂ, ಸ್ಪರ್ಶವೂ, ಅವರಕೀರ್ತನ ಸ್ಮರಣ ನಮಸ್ಕಾರಗಳೂ, ನಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿ ಪರಿಶುದ್ಧರನ್ನಾಗಿ ಮಾಡುವುವು ಎಂದುಕೇಳ್ಪಟ್ಟಿರುವೆವು.ಹಾಗೆಯೆ ಶ್ರೀಯಾಮುನೇಯರು "ತವದಾಸ

(೧) ಪೆರಿಯ ತಿರುಮೊಳಿ ೪. ೪. ೭.

ಸುಖೈಕಸಜ್ಗಿನಾಂ ಭವನೇಷ್ವಸ್ತು ಪಿಕೀಟಜನ್ಮಮೇ" ನಿನ್ನ ಕೈಂಕರ್ಯದಲ್ಲೇ ಮುಖ್ಯವಾಗಿ ಮಗ್ನರಾಗಿರುವವರ ಮನೆಗಳಲ್ಲಿ ಒಂದು ಹುಳುವಿನ ಜನ್ಮವಾದರೂ ನನಗೆ ಉಂಟಾಗುವದು ಉತ್ತಮವು ಎಂದು ಹೇಳಿರುವುದರಿಂದ, ಭಾಗವತಾಭಿಮಾನಕ್ಕೆ ಒಳಪಟ್ಟ ಪ್ರದೇಶದಲ್ಲಿ ವಾಸವೇ ಪರಮಯೋಗ್ಯವೆಂದು ಹೇಳಿರುತ್ತಾರೆ. ಅದೇಕೆ ಹಾಗೆಹೇಳಿದರೆಂದರೆ "**ಪಶುರ್ಮನುಷ್ಯಃ ಪಕ್ಷೀವಾಯೇಚ ವೈಷ್ಣವಸಂಶ್ರಯಾಃ। ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ**" ಇವುಗಳಿಗೆಲ್ಲಾ ವೈಷ್ಣವ ಭಾಗವತನನ್ನಾಶ್ರಯಿಸುವದರಿಂದ ಮೋಕ್ಷಪ್ರಾಪ್ತಿಯು ಉಂಟಾಗುತ್ತದೆಂದು ಹೇಳಿರುತ್ತದೆ. ಈ ಶ್ಲೋಕವ್ಯಾಖ್ಯಾನದಲ್ಲಿ ಶ್ರೀದೇಶಿಕರವರು

" ತಸ್ಮಾದ್ವಿಷ್ಣು ಪ್ರಸಾದಾಯ ವೈಷ್ಣವಾನ್ ಪರಿತೋಷಯೇತ್ " ವಿಷ್ಣು ಪ್ರಸನ್ನತೆಗಾಗಿ ವೈಷ್ಣವ ಭಾಗವತರನ್ನು ಪ್ರಸನ್ನರಾಗಿ ಮಾಡಿಕೊಳ್ಳಬೇಕು ಎಂಬ, " ಕೇವಲಂ ಭಗವತ್ಪಾದ ಸೇವಯಾ ವಿಮಲಂ ಮನಃ | ನಜಾಯತೇ ಯಥಾ ನಿತ್ಯಂ ತದ್ಭಕ್ತ ಚರಣಾರ್ಚನಾತ್ " ನಿತ್ಯ ಆತನ ಭಕ್ತರ ಪಾದಸೇವೆಯಿಂದ ಮನಸ್ಸಿನ ಮಲಗಳು ತೊಲಗಿ ಪರಿಶುದ್ಧತೆ ಯುಂಟಾಗುವ ಹಾಗೆ ಬರೀಭಗವತ್ಸೇವೆಯಿಂದ ಯುಂಟಾಗುವದಿಲ್ಲವು. " ಎಂಬ, ಇವೇ ಮೊದಲಾದ ಪ್ರಮಾಣಗಳನ್ನು ಉದಾಹರಿಸಿರುತ್ತಾರೆ.

ಹಿಂದೆ ಪುರುಷಾರ್ಥಕಾಷ್ಠಾಧಿಕಾರದಲ್ಲಿ ಭಾಗವತ ಪ್ರಸನ್ನತೆಯೇ ಕೃತಕೃತ್ಯನಾದ ಪ್ರಪನ್ನನಿಗೆ ಮುಖ್ಯವಾದುದೆಂದು ಯಾವಾಗ ಸ್ಥಾಪಿಸಲ್ಪಟ್ಟಿತೋ ಅದರಿಂದ ಅಂತಹ ಭಾಗವತರುಗಳ ಮಧ್ಯೆಯೇ ಈತನು ವಸಿಸತಕ್ಕದ್ದೆಂಬುವದು ಏರ್ಪಟ್ಟಿತು. **ಅನ್ವಿಡಂಗಳ್ ತನ್ನಿಲುಂ** ಎಂದು ಹೇಳಿರುವದರಿಂದ ವರ್ಣಾಶ್ರಮ ಧರ್ಮಗಳೂ ನಡೆದು ಭಾಗವತರುಗಳೂ ಇರುವ ಪ್ರದೇಶನೇ ಸರ್ವೋತ್ತಮವೆಂದು ಹೇಳಿದಂತಾಯಿತು.

ಮೇಲಿನ ವಾಕ್ಯದಲ್ಲಿ ಆರ್ಯಾವರ್ತವು ಈಗ ಅಷ್ಟು ಉಪಾದೇಯವಲ್ಲವು; ಭಾಗವತೋತ್ತಮರು ಹೆಚ್ಚಾಗಿರುವ ದೇಶವು ಗ್ರಾಹ್ಯವೆಂದು ಹೇಳಿದುದಕ್ಕೆ ಶ್ರೀ ಪರಾಶರರ ದಿವ್ಯಸೂಕ್ತಿಯ ಪ್ರಮಾಣವನ್ನು ತೋರಿಸಿ ದಕ್ಷಿಣದಲ್ಲಿರುವ ದ್ರವಿಡದೇಶವೇ ಪ್ರಪನ್ನನಿಗೆ ವಾಸಯೋಗ್ಯವೆಂದು ವಾಮನಪುರಾಣ ದಿವ್ಯ ಸೂಕ್ತಿಯಿಂದ ತಿಳಿಸುತ್ತಾರೆ. **ಕಲೌ**-ಕಲಿಯುಗದಲ್ಲಿ, ಓ ಮೈತ್ರೇಯರೇ - **ಪಾಷಂಡೋಪಹತಾಜನಾಃ**-ಪಾಷಂಡಿಗಳಿಂದ ಕೆಡಿಸಲ್ಪಟ್ಟ ಜನಗಳು, ಪಾಷಂಡಿಗಳು ಯಾರೆಂದರೆ—ಪಾಶಾನ್ ಅಣಂತಿ ಎಂಬ ವ್ಯುತ್ಪತ್ತಿಯಿಂದ ಸಂಸಾರಬಂಧಕ್ಕೆ ಹೇತುಭೂತವಾದ ಅಸಚ್ಛಾಸ್ತ್ರಗಳನ್ನು ಬೋಧಿಸುವವರು, ಬೌದ್ಧಕಾಪಾಲಿಕ ಕ್ಷಪಣಕಾದಿವೇದ ಬಾಹ್ಯರು. **ಸರ್ವಸ್ರಷ್ಟಾರಂ** - ಸರ್ವಕ್ಕೂ ಸೃಷ್ಟಿಕರ್ತನಾಗಿ, **ಈಶ್ವರಂ**-ಸರ್ವಕ್ಕೂ ಧಾರಕನಾಗಿ ಸ್ವಾಮಿಯಾಗಿ ನಿಯಾಮಕನಾಗಿರುವ

ಹ್ಯರ್ಮ. (೧) ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರ ಮೀಶ್ವರಂ |
ನಾರ್ಚ್ಚ ಯಿಷ್ಯಂತಿ ಮೈತ್ರೇಯ ಪಾಷಂಡೋ ಪಹತಾ ಜನಾಃ "
ಎನ್ರುಚ್ಚೊಲ್ಲ್ಯರ್ಮ್ದೆ ೨ " ಕಲೌ ಖಲುಭವಿಷ್ಯಂತಿ ನಾರಾಯಣ ಪರಾಯಣಾಃ | ಕ್ವಚಿತ್ಕ್ವಚಿನ್ಮಹಾ ಭಾಗಾ (ದ್ರಾ) ದ್ರಮಿಡೇಷುಚ ಭೂರಿಶಃ | ತಾಮ್ರಪರ್ಣೀ ನದೀಯತ್ರ ಕೃತಮಾಲಾ ಪಯಸ್ವಿನೀ |

ಜಗತ್ಪಾಲಕನಾದ, ವಿಷ್ಣುವನ್ನು ನಾರ್ಚ್ಚಯಿಷ್ಯಂತಿ ಪೂಜಿಸುವುದಿಲ್ಲವು. " **ಎನ್ರು ಚ್ಚೊಲ್ಲ್ಯರ್ಮ್ದೇ**-ಎಂದು ಹೇಳಲ್ಪಟ್ಟಿದ್ದರೂ ಕೂಡ, **ಕಲೌ**-ಕಲಿಯುಗದಲ್ಲೂ ಕೂಡ, **ನಾರಾಯಣ ಪರಾಯಣಾಃ**-ನಾರಾಯಣನಲ್ಲಿ ಆಸಕ್ತವಾದ ಮನಸ್ಸುಳ್ಳವರು, ಸುಕೃತ ವಿಶೇಷದಿಂದಲೂ, ಕಲಿಯುಗದಲ್ಲಿ ಸರ್ವೇಶ್ವರನನ್ನು ಹೊಂದುವ ಉಪಾಯಾನುಷ್ಠಾನವು ತುಂಬಾ ಸುಕರವಾದುದರಿಂದಲೂ, **ಭವಿಷ್ಯಂತಿ**-ಜನಿಸುವರು ಅಥವಾ ಆಗುವರು. ಮಹಾಭಾಗಾಃ-ನಾರಾಯಣ ಪರಾಯಣರಾದ ಅಂತಹ ಸುಕೃತ ಶಾಲಿಗಳಾದ ಮಹಾ ಭಾಗವತರುಗಳು ಮಿಕ್ಕ ದೇಶಗಳಲ್ಲಿ **ಕ್ವಚಿತ್ಕ್ವಚಿತ್**-ಎಲ್ಲೋ ಒಂದೊಂದು ಕಡೆಯಲ್ಲಿ ಜನಿಸುವರು. **ದ್ರಮಿಡೇಷು**-ದ್ರಮಿಡ ದೇಶಗಳಲ್ಲಿ ಯಾದರೋ, **ಭೂರಿಶಃ**-ಬಹಳವಾಗಿ ಜನಿಸುವರು ಆ ದ್ರಮಿಡ ದೇಶಗಳಲ್ಲೂ ಎಲ್ಲಿ ಜನಿಸುವರು ಎಂದರೆ ಹೇಳುತ್ತಾರೆ. **ಯತ್ರ** - ಯಾವಸ್ಥಳದಲ್ಲಿ, ತಾಮ್ರಪರ್ಣೀನದಿಯು ಪ್ರವಹಿಸುತ್ತದೋ, ಅಲ್ಲಿ ಜನಿಸುವರು; ಹೀಗೆ ಹೇಳಿದುದರಿಂದ, ಆಳ್ವಾರರುಗಳಲ್ಲಿ ಶ್ರೇಷ್ಠರಾದ ನಮ್ಮಾಳ್ವಾರವರ ಅವತಾರಸ್ಥಳವು ಬೋಧಿಸಲ್ಪಟ್ಟಿತು. **ಯತ್ರಕೃತಮಾಲಾ**-ಎಲ್ಲಿ ವೈಗೆ ಎಂಬ ನದಿಯು ಪ್ರವಹಿಸುತ್ತದೋ ಅಲ್ಲಿಯೂ ಅವತರಿಸುವರು; ಈ ನದಿಯ ದಡದಲ್ಲಿರುವ **ಶ್ರೀವಿಲ್ಲಿಪುತ್ತೂರೆಂಬ** ಸ್ಥಳದಲ್ಲಿ ಪೆರಿಯಾಳ್ವಾರವರು ಅವತರಿಸಿದರು; **ಯತ್ರಪಯಸ್ವಿನೀ** ಎಲ್ಲಿ ಪಾಲಾರು ನದಿಯು ಪ್ರವಹಿಸುತ್ತದೋ ಅಲ್ಲಿಯೂ ಅವತರಿಸುವರು; ಇದರ ದಡದಲ್ಲಿ ತಿರುಮಳಿಶೈಯ್ಯಾಳ್ವಾರವರೇ ಮೊದಲಾದವರು ಜನಿಸಿದರು; **ಯತ್ರ ಮಹಾಭಾಗಾ ಕಾವೇರೀ**-ಎಲ್ಲಿ ಮಹಾ ಪುಣ್ಯ ನದಿಯಾದ ಕಾವೇರಿಯು ಪ್ರವಹಿಸುತ್ತದೋ ಅಲ್ಲಿಯೂ ಮಹಾ ಭಾಗವತರು ಉಂಟು; ಇದರ ದಡದಲ್ಲಿ, ತೊಂಡರಡಿಪ್ಪೊಡಿಯಾಳ್ವಾರ್ ತಿರುಪ್ಪಾಣಾಳ್ವಾರ್ ಮೊದಲಾದವರು ಶ್ರೀರಂಗದಲ್ಲಿ ಅವತರಿಸಿದರು; **ಯತ್ರಪ್ರತೀಚೀಚ ಮಹಾನದೀ**-ಎಲ್ಲಿ ಪ್ರಸಿದ್ಧವಾದ ಪ್ರತ್ಯಙ್ಮುಖೀ ನದಿಯು ಪ್ರವಹಿಸುತ್ತದೆಯೋ ಅಲ್ಲಿಯೂ ಮಹಾಭಾಗವತೋತ್ತಮರಿರುವರು; ಇದರ ದಡದಲ್ಲಿ ಶ್ರೀ ಕುಲಾಶೇಖರಾಳ್ವಾರವರು ಅವತರಿಸಿದರು; **ಹೇ ಮನುಜೇಶ್ವರ**-ಓ ರಾಜನೇ, **ಯೇ ಮನುಜಾಃ** - ಯಾವ ಮನುಷ್ಯರು, **ತಾಸಾಂ**-ಮೇಲೆ

(೧) ವಿ. ಪ್ರ. ೬. ೧. ೫೦ (೨) ಶ್ರೀಭಾಗ. ೧೧. ೫. ೩೮-೯

ಕಾವೇರೀ ಚ ಮಹಾಭಾಗಾ ಪ್ರತೀಚೀ ಚ ಮಹಾನದೀ । ಯೇ ಪಿಬನ್ತಿ ಜಲಂ ತಾಸಾಂ ಮನುಜಾ ಮನುಜೇಶ್ವರ । ಪ್ರಾಯೋ ಭಕ್ತಾ ಭಗವತಿ ವಾಸುದೇವೇಽಮಲಾಶಯಾಃ ॥" ಇತ್ಯಾದಿಗಳಿಲೇ ಕಲಿಯುಗತ್ತಿಲ್ ಭಾಗವತರ್ಗಳ್ ವಸಿಕ್ಕುಮ್ ದೇಶವಿಶೇಷಮ್ ಶೊಲ್ಲುಗೈಯಾಲೆ, ಇನ್ದ ಯುಗತ್ತಿಲ್ ಇಪ್ಪ್ರದೇಶಙ್ಗಳಿಲ್ ಭಾಗವತ ಪರಿಗೃಹೀತಮಾನ ಸ್ಥಲಙ್ಗಳೇ ಪರಿಗ್ರಾಹ್ಯಙ್ಗಳ್. ತಿರುನಾರಾಯಣೀಯತ್ತಿಲ್ (೧) ಏಕಪಾದ

ಹೇಳಿದ ಆ ನದಿಗಳ, ಜಲಂ – ನೀರನ್ನು, ಪಿಬಂತಿ – ಕುಡಿಯುತ್ತಾರೋ, ಅವರುಗಳು, ವಾಸುದೇವೇ ಭಗವತಿ – ವಾಸುದೇವನಾದ ಭಗವಂತನಲ್ಲಿ, ಪ್ರಾಯಃ- ಸಾಮಾನ್ಯವಾಗಿ, ಭಕ್ತಾಃ – ಭಕ್ತರಾಗುತ್ತಾರೆ, ಅಮಲಾಶಯಾಃ – ನಿರ್ಮಲ ಚಿತ್ತರಾದವರಾಗಿ ಆಗುವರು. ಪಾಪದಲ್ಲಿ ಪ್ರವರ್ತಿಸದ ಮನಸ್ಸುಳ್ಳವರಾಗುವರೆಂಬ ಭಾವವು.'' ಇತ್ಯಾದಿಗಳಿಲೇ - ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ, ಕಲಿಯುಗದಲ್ಲಿ ಭಾಗವತರುಗಳು, ವಸಿಕ್ಕುಮ್ - ವಾಸ ಮಾಡುವ, ದೇಶವಿಶೇಷವನ್ನು, ಶೊಲ್ಲುಗೈಯಾಲೇ – ಹೇಳುವದರಿಂದ, ಇನ್ದ ಯುಗತ್ತಿಲ್ - ಈ ಕಲಿಯುಗದಲ್ಲಿ, ಇಪ್ಪ್ರದೇಶಙ್ಗಳಿಲ್ - ಚಾತುರ್ವರ್ಣ್ಯ ಧರ್ಮ ಪ್ರತಿಷ್ಠಿತವಾದ ಈ ದ್ರಮಿಡ ಪ್ರದೇಶಗಳಲ್ಲಿ, ಭಾಗವತ ಪರಿಗೃಹೀತಮಾನ - ಭಾಗವತರುಗಳಿಂದ ಸ್ವೀಕರಿಸಲ್ಪಟ್ಟ ಎಂದರೆ ಅವರುಗಳಿಗೆ ಅಭಿಮತವಾದ, ಸ್ಥಳಗಳೇ, ಪರಿಗ್ರಾಹ್ಯಙ್ಗಳ್ - ಪ್ರಪನ್ನನಿಗೆ ಉಪಾದೇಯವಾದವುಗಳು, ಆತನು ಅಭಿಮಾನಿಸತಕ್ಕವು ಎಂಬ ಭಾವವು. ಹೀಗೆ ಹೇಳಿದುದರಿಂದ ಭಗವದಭಿಮತ ಸ್ಥಳಕ್ಕಿಂತ ಭಾಗವತಾಭಿಮತಸ್ಥಳವು ಉತ್ಕೃಷ್ಟವೆಂಬ ಭಾವವು. ಭಗವದ್ಭಾಗವತಾಭಿಮತಸ್ಥಳವಾದರೆ ಪರಮೋತ್ಕೃಷ್ಟವೆಂಬುವದೂ ತೋರಿಬರುತ್ತದೆ "ಯತ್ರಯತ್ರಹಿನೀತಿಸ್ಸ್ಯಾದ್ವೈಷ್ಣವೀ ಶಿಷ್ಟಸಂಮತಾ । ತತ್ರತತ್ರ ವಸೇನ್ನಿತ್ಯಂ ನಾನ್ಯತ್ರೇತಿ ಮತಿರ್ಮಮ" "ಪರಮಭಾಗವತರುಗಳಿಗಿಷ್ಟವಾದ ವೈಷ್ಣವನಿಷ್ಠೆಯು ಎಲ್ಲೆಲ್ಲಿರುತ್ತದೋ, ಅಲ್ಲಲ್ಲೆಲ್ಲಾ ಸದಾ ವಾಸಮಾಡತಕ್ಕದ್ದು. ಇನ್ನೆಲ್ಲೂ ಕೂಡದು, ಎಂಬುವದು ನನ್ನ ಅಭಿಪ್ರಾಯವು'' ಎಂಬೀ ಪ್ರಮಾಣದ ತಾತ್ಪರ್ಯವು ಶ್ರೀ ಪರಾಶರ ವಾಕ್ಯದಲ್ಲಿ ಮಹಾಭಾಗವತರುಗಳಿರುವ ಸ್ಥಳವೇ ಇಲ್ಲವೆಂಬಭಿಪ್ರಾಯ ಉಂಟಾಗಬಹುದು. ಅವರಭಿಪ್ರಾಯವೇನೆಂದರೆ ಪಾಷಂಡೋಪಹತಜನವೇ ಹೆಚ್ಚೆಂದೂ, ಅವರುಗಳು ವಿಷ್ಣುವನ್ನಾರಾಧಿಸುವದಿಲ್ಲವೆಂದೂ ಹೇಳಿದರು. ಈ ಅಭಿಪ್ರಾಯವನ್ನೇ ಅವರ ಪೌತ್ರರಾದ ಶುಕಮಹರ್ಷಿಯು "ಕ್ವಚಿತ್ಕ್ವಚಿನ್ಮಹಾಭಾಗಾಃ" ಎಂದು ವ್ಯಾಖ್ಯಾನ

---

(೧) ಭಾರ. ಶಾಂತಿ. ೩೪೯. ೮೫.

ಸ್ಥಿತೇ ಧರ್ಮೇ ಯತ್ರ ಕ್ವಚನ ಗಾಮಿನಿ । ಕಥಂ ವಸ್ತವ್ಯ ಮಸ್ಮಾಭಿರ್ಭಗ
ವಂ ಸ್ತದ್ವದಸ್ವ ನಃ ॥" ಎನ್ರು ದೇವರ್‍ಗಳುವ್ ಋಷಿಗಳುವ್ ವಿಣ್ಣ

ಮಾಡಿ ಅಂಥವರು ಎಲ್ಲೋ ಒಂದೊಂದು ಪ್ರದೇಶದಲ್ಲಿ ಅತಿ ವಿರಳರಾಗಿ ದೊರೆಯು ವರೆಂದು ಹೇಳಿ, ಆದರೆ ದ್ರವಿಡ ದೇಶದಲ್ಲಿ ಈ ನದಿಗಳ ದಡದಲ್ಲಿ ಮಾತ್ರ, **ಭೂರಿಶಃ** - ಹೇರಳವಾಗಿ ದೊರೆಯುವರೆಂದು ಹೇಳಿದರು. ಆದುದರಿಂದ ಇವರಿ ಬ್ಬರ ಹೇಳಿಕೆಗೂ ಏನೂ ವ್ಯತ್ಯಾಸವಿಲ್ಲವು. ಇಲ್ಲಿ ಮಹಾಭಾಗವತರಾಗಿ ಜ್ಞಾನ ನಿಷ್ಠೆ ಕರ್ಮನಿಷ್ಠೆಗಳಿಂದ ಶೋಭಿಸುವ, ತಮ್ಮ ದಿವ್ಯಸೂಕ್ತಿಗಳಿಂದ ಪಾಮರ ಜನಗಳ ಅಂಧಕಾರಗಳನ್ನು ತೊಲಗಿಸುವ ದ್ರಾವಿಡ ಪ್ರಬಂಧಗಳನ್ನು ರಚಿಸುವ, ದಿವ್ಯ ಸೂರಿಗಳವತಾರವಾದ ಆಳ್ವಾರಾಚಾರ್ಯರುಗಳು ಈ ನದಿಗಳ ಸಮೀಪದಲ್ಲಿ ಜನಿಸು ವರೆಂದು ಶ್ರೀ ವ್ಯಾಸಮಹರ್ಷಿಯೂ ಅವರ ಪುತ್ರರೂ ಸಹ ತಮ್ಮ ದಿವ್ಯಚಕ್ಷುಸ್ಸಿ ನಿಂದ ಮೊದಲೇ ನೋಡಿ, ಅಪ್ಪಣೆ ಕೊಟ್ಟಿರುವದು ಪರಮಾಶ್ಚರ್ಯಕರವಾದ ವಿಷಯು ವಾಗಿರುತ್ತದೆ. ಆದುದರಿಂದ ಇಂಥಾವರನುಗ್ರಹಿಸಿದ ಗ್ರಂಥವು ಪರಮಾಪ್ತವಾಕ್ಯ ವೆಂದು ತಿಳಿದು ಪರಿಗ್ರಹಿಸತಕ್ಕದ್ದು ಅತ್ಯಾವಶ್ಯಕವು.

ಆದರೆ ಋಷಿಗಳಿಂದ ಪ್ರಶಂಸಿತಗಳಾಗಿ ಶ್ರೀ ಮಹಾವಿಷ್ಣುವಿಗೆ ಆ ಕಾಲದಲ್ಲಿ ಪ್ರಿಯವಾಗಿದ್ದ ದೇಶಗಳನ್ನು ಬಿಟ್ಟು ಈಗ ಭಾಗವತ ಪ್ರಿಯವಾದ ಸ್ಥಳಗಳನ್ನು ಪರಿಗ್ರಹಿಸತಕ್ಕದ್ದೆಂಬ ಉಪದೇಶವು ಸರಿಯೋ ಎಂದಾಕ್ಷೇಪಿಸಬಹುದೆಂದು ಭಾವಿಸಿ ತಮ್ಮ ಅಭಿಪ್ರಾಯವೇ ಸರಿ ಎಂಬುವದಕ್ಕೆ ಭಾರತ ಶಾಂತಿಪರ್ವದಲ್ಲಿ ತಿರುನಾರ ಣೀಯ ಪ್ರಕರಣದಲ್ಲಿ ಹೇಳಿರುವ ಪ್ರಮಾಣವನ್ನು ಮುಂದೆ ಉದಾಹರಿಸುತ್ತಾರೆ. ಈ ಪ್ರಕರಣವು ಯಾವುದೆಂದರೆ, ಬದರಿಕಾಶ್ರಮದಲ್ಲಿ ನರನಾರಾಯಣರಲ್ಲಿ ಭಗ ವಂತನಾದ ಶ್ರೀ ನಾರಾಯಣ ಋಷಿಯು ಇತರ ಋಷಿಗಳಿಗೆ ಉಪದೇಶಿಸುವ ಪ್ರಕ ರಣವು. **ತಿರುನಾರಾಯಣೀಯತ್ತಿಲ್** ಇತಿ. **ಏಕಪಾದಸ್ಥಿತೇ ಧರ್ಮೇ** - ಧರ್ಮವು ಕಲಿಯುಗದಲ್ಲಿ ಒಂದು ಕಾಲಿನಲ್ಲಿ ನಿಂತಿರಲಾಗಿ, ಎಂದರೆ ಒಂದು ಕಾಲು ಪಾಲು ಧರ್ಮವು ಈ ಯುಗದಲ್ಲಿ ನಡೆಯುತ್ತದೆಂದು ಮುಕ್ಕಾಲು ಪಾಲು ಅಧರ್ಮವು ಎಂಬ ಭಾವವು. ಕೃತಯುಗದಲ್ಲಿ ಧರ್ಮವು ನಾಲ್ಕು ಕಾಲಲ್ಲೂ ನಿಂತಹಾಗೂ, ತ್ರೇತಾಯುಗದಲ್ಲಿ ಮೂರುಕಾಲಲ್ಲೂ, ದ್ವಾಪರದಲ್ಲಿ ಎರಡು ಕಾಲಲ್ಲೂ, ಕಲಿಯುಗ ದಲ್ಲಿ ಒಂದು ಕಾಲಲ್ಲೂ ನಿಂತಿರುವ ಹಾಗೆ ಭಾವನೆಯು ; ಮತ್ತು **ಯತ್ರಕ್ವಚನ ಗಾಮಿನಿ** - ಒಂದೇ ಕಾಲಿನಲ್ಲಿ ನಿಂತಿರುವದರಿಂದ ಎಲ್ಲೋ ಒಂದು ಕಡೆಗೆ ಹೋಗು ತ್ತಿರಲಾಗಿ, **ಅಸ್ಮಾಭಿಃ** - ಅಧರ್ಮಭಯದಿಂದಿರುವ ನಮ್ಮಗಳಿಂದ, **ಕಥಂ ವಸ್ತ ವ್ಯಂ** - ಹೇಗೆ ಎಲ್ಲಿ ವಸಿಸತಕ್ಕದ್ದು. **ಭಗರ್ವ** - ಷಾಡ್ಗುಣ್ಯ ಪರಿಪೂರ್ಣನಾದ

ಪ್ಸಂ ಶೆಯ್ಯ ; (೧) "ಗುರುವೋ ಯತ್ರ ಪೂಜ್ಯಂತೇ ಸಾಧುವೃತ್ತಾಶ್ಶಮಾನ್ವಿತಾಃ । ವಸ್ತವ್ಯಂ ಕ್ಷೇತ್ರಯುಷ್ಮಾಭಿಃ ಯತ್ರ ಧರ್ಮೋ ನ ಹೀಯತೇ । ಯತ್ರ ವೇದಾಶ್ಚ ಯಜ್ಞಾಶ್ಚ ತಪಸ್ಸತ್ಯಂ ದಮಸ್ತಥಾ । ಹಿಂಸಾ ಚ ಧರ್ಮ ಸಂಯುಕ್ತಾ ಪ್ರಚರೇಯುಸ್ಸುರೋತ್ತಮಾಃ । ಸವೈದೇಶೋಹಿ ವಸ್ಸೇವ್ಯೋ ಮಾಭೋSಧರ್ಮಃ ಪದಾಸ್ಪೃಶೇತ್" ಎನ್ರು ಭಗವಾನರುಳಿಚ್ಚೆಯ್‌ದಾನ್.

ಸ್ವಾಮಿಯೇ, ತತ್ - ಅದನ್ನು, **ನಃ** - ನಿನ್ನ ಕರುಣೆಗೆ ಪಾತ್ರರಾದ ನಮಗೆ, **ವದಸ್ವ** - ದಯಮಾಡಿ ಹೇಳು," ಎಂದು ದೇವತೆಗಳೂ, ಋಷಿಗಳೂ, **ವಿಣ್ಣಪ್ಪಂ ಶೆಯ್ಯ** - ವಿಜ್ಞಾಪಿಸಿಕೊಳ್ಳಲು, ಆದಕ್ಕೆ ಶ್ರೀ ಭಗವಾನ್ ಹೇಳುತ್ತಾರೆ:— **ಸಾಧು ವೃತ್ತಾಃ** - ಶಾಸ್ತ್ರಚೋದಿತವಾದ ವಿಧಿನಿಷೇಧ ವಾಕ್ಯಗಳಿಗನುಸಾರವಾದ ಪ್ರವೃತ್ತಿನಿವೃತ್ತಿಗಳುಳ್ಳ ಎಂದರೆ ಧರ್ಮಾನುಷ್ಠಾನಪರರಾದ, **ಶಮಾನ್ವಿತಾಃ** - ಅಂತರಿಂದ್ರಿಯಗಳನ್ನು ನಿಗ್ರಹಿಸಿ ಶಾಂತತೆಯುಳ್ಳವರಾದ, **ಗುರುವಃ** - ಮನಸ್ಸಿನ ಅಂಧಕಾರವನ್ನು ಹೋಗಲಾಡಿಸಿ, ಯಥಾರ್ಥ ಜ್ಞಾನವನ್ನು ಬೋಧಿಸುವ ಆಚಾರ್ಯರುಗಳು, **ಯತ್ರಪೂಜ್ಯಂತೇ** - ಯಾವ ಸ್ಥಳದಲ್ಲಿ ಪೂಜಿಸಲ್ಪಡುವವರೋ ಆ ಕಾರಣದಿಂದ, **ಯತ್ರಧರ್ಮೋ ನಹೀಯತೆ** - ಎಲ್ಲಿ ವೈದಿಕ ಧರ್ಮಕ್ಕೆ ಲೋಪವಿಲ್ಲವೋ ಎಂದರೆ ಎಲ್ಲಿ ವರ್ಣಾಶ್ರಮಧರ್ಮಗಳಿಗೆ ನ್ಯೂನತೆಯಿಲ್ಲವೋ, **ತತ್ರ** - ಅಲ್ಲಿ, **ಯುಷ್ಮಾಭಿಃ** - ನಿಮ್ಮಗಳಿಂದ, **ವಸ್ತವ್ಯಂ** - ವಸಿಸತಕ್ಕದ್ದು; ಎಂದರೆ ಅಂತಹ ಸ್ಥಳಗಳಲ್ಲಿ ನೀವು ಇರತಕ್ಕದ್ದು. **ಯತ್ರ** - ಎಲ್ಲಿ, **ವೇದಾಶ್ಚ** - ವೇದಗಳು ಎಂದರೆ ವೇದಾಧ್ಯಯನಾದಿಗಳೂ, **ಯಜ್ಞಾಶ್ಚ** – ಪಂಚಮಹಾಯಜ್ಞಗಳೂ, ಮತ್ತು ವೇದದಲ್ಲಿ ಹೇಳಿರುವ ಇತರ ಯಜ್ಞಗಳೂ, **ತಪಃ** - ಕೃಛ್ರ ಚಾಂದ್ರಾಯಣ ಮತ್ತು ಏಕಾದಶೀ ಉಪವಾಸ ಮೊದಲಾದವುಗಳೂ, **ಸತ್ಯಂ** - ಪ್ರಿಯವಾದ, ಹಿತವಾದ, ಯಥಾರ್ಥವಾದ ವಾಕ್ಕು, ಇದರಿಂದ ಅಂತಹ ಉಪದೇಶವು ಹೇಳಲ್ಪಟ್ಟಿತು, **ತಥಾದಮಃ** - ಹಾಗೆಯೇ ಬಾಹ್ಯೇಂದ್ರಿಯ ನಿಗ್ರಹವೂ, **ಧರ್ಮ ಸಂಯುಕ್ತಾ ಹಿಂಸಾ**–ಧರ್ಮದಿಂದ ಕೂಡಿದ ಹಿಂಸೆಯು, **ನ ಹಿಂಸ್ಯಾತ್** ಎಂಬ ಸಾಮಾನ್ಯ ವಿಧಿಯು ಹಿಂಸೆಯನ್ನು ನಿಷೇಧಿಸಿದರೂ, **ಪಶುಮಾಲಭೇತ** ಇತ್ಯಾದಿ ವಿಶೇಷ ವಿಧಿಗಳು ಪಶುಹಿಂಸೆಯನ್ನು ಧರ್ಮವೆಂದು ವೇದದಲ್ಲಿ ಬೋಧಿಸುವದರಿಂದ, ಧರ್ಮದಿಂದ ಸೇರಿದ ಹಿಂಸೆ ಎನ್ನುವದರಿಂದ, ಜ್ಯೋತಿಷ್ಟೋಮ, ರಾಜಸೂಯವೇ ಮೊದಲಾದ ಯಾಗಗಳೂ, ಇವೆಲ್ಲವೂ, **ಹೇ ಸುರೋತ್ತಮಾಃ** – ಓ ದೇವತೆಗಳಿರಾ, **ಪ್ರಚರೇಯುಃ** - ನಡೆಯುತ್ತವೆಯೋ, **ಸವೈ ದೇಶೋಹಿ** – ಅಂತಹ ದೇಶವು ತಾನೇ, **ವಃ** – ನಿಮಗೆ, **ಸೇವ್ಯಃ** - ವಸಿಸಲು ಯೋಗ್ಯವು ಎಂದರೆ ಇರಲು

ಅನ್ವಿಡಙ್ಗಳ್ ತನ್ನಿಲ್ ಉಗನ್ದರುಳಿನ ದಿವ್ಯದೇಶಙ್ಗಳಿಲೆ ತನುಕ್ಕು ಕೈಙ್ಕರ್ಯತ್ತುಕ್ಕು ಸೌಕರ್ಯಮುಳ್ಳ ವಿಡತ್ತಿಲೆ ನಿರಂತರ ವಾಸಮ್ಪಣ್ಣ ಉಚಿತಮ್.

ಯೋಗ್ಯವು, ಹೀಗೆ ಇಂತಹ ಸ್ಥಳದಲ್ಲಿದ್ದುದಾದರೆ, **ಅಧರ್ಮಃ** - ಅಧರ್ಮವು, **ವಃ** - ನಿಮ್ಮನ್ನು, **ಪದಾ** - ಕಾಲಿನಿಂದಲೂ ಕೂಡ, **ಮಾಸ್ಪೃಶೇತ್** - ಮುಟ್ಟದೇ ಇರಲಿ ಎಂದರೆ ಅಧರ್ಮವು ನಿಮ್ಮನ್ನು ಎಂದಿಗೂ ಕಾಲಿನಿಂದಲೂ ಮುಟ್ಟಲಾರದು ಎಂಬ ಭಾವವು, **ಎನ್ರು** - ಎಂಬದಾಗಿ, **ಭಗವಾನ್** - ನಾರಾಯಣ ಋಷಿಯು, **ಅರುಳಿಚೆಯ್ದಾನ್** - ಕೃಪಯಾ ಉಪದೇಶಿಸಿದರು. ಇಂತಹ ಉತ್ತಮರಾಗಿ ಉಪದೇಶಿಸಲು ಯೋಗ್ಯರಾಗಿ, ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಂದ ವಿರಾಜಿಸುವ ಭಾಗವತೋತ್ತಮರು ಯಾವ ಪುಣ್ಯಸ್ಥಳದಲ್ಲಿರುತ್ತಾರೆಯೋ, ಎಲ್ಲಿ ವೇದಾಧ್ಯಯನ ವರ್ಣಾಶ್ರಮಧರ್ಮ ಯಜ್ಞಯಾಗಾದಿಗಳೇ ಮೊದಲಾದವು ಶಾಸ್ತ್ರನಿಯಮಾನುಸಾರವಾಗಿ ನಡೆಯುತ್ತವೋ, ಅಂತಹ ಸ್ಥಳಗಳೇ ನಿಮಗೆ ಯೋಗ್ಯವಾದ ಸ್ಥಳಗಳು, ಏಕೆಂದರೆ ಅಂತಹ ಸ್ಥಳಗಳಲ್ಲಿ ಅಧರ್ಮವೆಂಬುವದು ನಿಮ್ಮಲ್ಲಿ ಪಾದವಿನ್ಯಾಸವನ್ನು ಮಾಡಲಾರದು. ಈ ನಡೆಯುತ್ತಿರುವ ಧರ್ಮವು ಅಧರ್ಮವನ್ನು ನುಂಗಿಬಿಡುತ್ತದೆ ಎಂಬ ತಾತ್ಪರ್ಯವು ಈ ಮೇಲಿನ ಪ್ರಕರಣದಲ್ಲಿ "**ಹಿಂಸಾ ಚ ಧರ್ಮಸಂಯುಕ್ತಾ**" ಎಂಬ ಪ್ರಾಚೀನ ಪಾಠಕ್ಕೆ ಬದಲಾಗಿ ಈಚಿನ ಮುದ್ರಣದಲ್ಲಿ "**ಅಹಿಂಸಾ ಧರ್ಮಸಂಯುಕ್ತಾ**" ಎಂಬ ಪಾಠವು ಕಂಡುಬರುತ್ತದೆ. ಕೆಲವರು ಪ್ರತ್ಯಕ್ಷ ಪಶುವಧೆಯನ್ನು ನಿಷೇಧಿಸುವರು; ತಮ್ಮ ಸಿದ್ಧಾಂತಕ್ಕನುಗುಣವಾಗಿ ಹೀಗೆ ಮಹರ್ಷಿವಾಕ್ಯವನ್ನು ಬದಲಾಯಿಸುವದು ಯುಕ್ತವಾದುದಲ್ಲವು. ಸ್ವಾಮಿದೇಶಿಕರವರ ಕಾಲದ ಭಾರತದಲ್ಲಿ **ಹಿಂಸಾ ಚ ಧರ್ಮಸಂಯುಕ್ತಾ** ಎಂಬದಾಗಿ ಇತ್ತೆಂಬುವದು ಇದರಿಂದ ವ್ಯಕ್ತವು.

ಈಗ ಇಷ್ಟು ದೂರ ಉಪಪಾದಿಸಿದರ್ಥವನ್ನು ಸಂಗ್ರಹಿಸಿ, ತಮ್ಮ ಅಭಿಮತವು ಪ್ರಮಾಣಪುರಸ್ಸರವಾದುದರಿಂದ ಅದನ್ನು ಸಿದ್ಧಾಂತಿಸಿ ಹೇಳುತ್ತಾರೆ. **ಅನ್ವಿಡಙ್ಗಳ್ ತನ್ನಿಲ್** - ಈಗ ಪ್ರಪನ್ನನಿಗೆ ವಾಸಕ್ಕೆ ಯೋಗ್ಯವೆಂದು ಹೇಳಿದ ಸ್ಥಳಗಳಲ್ಲಿ, **ಉಗನ್ದರುಳಿನ** - ಮಹಾಭಾಗವತರುಗಳು ವಿಶ್ವಾಸದಿಂದ ಉಚಿತವೆಂದು ಹೇಳಿದ, **ದಿವ್ಯದೇಶಙ್ಗಳಿಲೆ** - ಶ್ರೀರಂಗ, ಕಾಂಚೀಪುರ, ತಿರುಮಲೆ, ತಿರುನಾರಾಯಣಪುರ, ಆಳ್ವಾರ್ ತಿರುನಗರಿ, ಶ್ರೀವಿಲ್ಲಿಪುತ್ತೂರ್, ವಾನಮಾಮಲೆ, ಮೊದಲಾದ ದಿವ್ಯದೇಶಗಳಲ್ಲಿ, **ತನುಕ್ಕು** - ಪ್ರಪನ್ನನಾದ ತನಗೆ, **ಕೈಙ್ಕರ್ಯತ್ತುಕ್ಕು** - ಭಗವದ್ಭಾಗವತ ಕೈಂಕರ್ಯಕ್ಕೆ, **ಸೌಕರ್ಯಮುಳ್ಳ** - ಅನುಕೂಲವಿರುವ,

ಅತ್ರ ಶ್ರೀ ಭಾಷ್ಯಕಾರ ದಿವ್ಯಸೂಕ್ತಿಃ.

ಇತ್ತೈ (೧) "ಯಾವಚ್ಛರೀರ ಪಾತ ಮತ್ರೈವ ಶ್ರೀರಙ್ಗೇ ಸುಖ ಮಾಸ್ವ" ಎನ್ರು ಸತ್ತ್ವೋತ್ತರಙ್ಗಳಾನ ಭಗವತ್ ಕ್ಷೇತ್ರಙ್ಗಳುಕ್ಕು ಪ್ರದರ್ಶನಾರ್ಥಮಾಗ ಅರುಳಿಚ್ಚೆಯ್‌ದಾರ್.

ಇಡತ್ತಿಲೇ - ಪ್ರದೇಶದಲ್ಲಿ, ವಾಸಂ ಪಣ್ಣ ಉಚಿತಮ್ - ವಾಸ ಮಾಡುವದು ಉಚಿತವಾದುದು. ಇದರಿಂದ ಭಾಗವತ ಪ್ರಚುರವಾದ ದಿವ್ಯದೇಶದಲ್ಲಿ ಪ್ರಪನ್ನನು ದೇಹಾವಸಾನದವರೆಗೂ ವಾಸಮಾಡತಕ್ಕದ್ದೆಂದು ಏರ್ಪಟ್ಟಿತು. ಹೀಗೆ ಮಹಾಭಾಗವತಾಭಿಮಾನವುಳ್ಳ ದಿವ್ಯದೇಶವೇ ಪ್ರಪನ್ನನಿಗೆ ಯೋಗ್ಯವಾದ ವಾಸಸ್ಥಳವೆಂಬುವದಕ್ಕೆ ದರ್ಶನಸ್ಥಾಪಕರಾದ ಶ್ರೀ ಭಾಷ್ಯಕಾರರಭಿಪ್ರಾಯವನ್ನು ಉದಾಹರಿಸಿ ಇನ್ನೂ ಇತರ ಪ್ರಮಾಣಗಳಿಂದಲೂ ಅದನ್ನೇ ಸ್ಥಿರೀಕರಿಸುತ್ತಾರೆ:—

ಈ ಸಂದರ್ಭದಲ್ಲಿ ಶ್ರೀ ಭಾಷ್ಯಕಾರರ ದಿವ್ಯಸೂಕ್ತಿಯು.

ಇತ್ತೈ - ಈ ಅಭಿಪ್ರಾಯವನ್ನು, ಎಂದರೆ ಮಹಾಭಾಗವತಾಭಿಮಾನವುಳ್ಳ ದಿವ್ಯಕ್ಷೇತ್ರವು ಪ್ರಪನ್ನನಿಗೆ ಯೋಗ್ಯವಾದ ಸ್ಥಳವೆಂಬುವದನ್ನು, "ಯಾವಚ್ಛರೀರಪಾತಂ – ದೇಹಾವಸಾನದವರೆಗೂ, ಅತ್ರೈವ ಶ್ರೀರಙ್ಗೇ - ಈ ಶ್ರೀರಂಗದಲ್ಲೇ, ಸುಖಮಾಸ್ವ - ಸುಖವಾಗಿ ಇದ್ದುಬಿಡು" ಎಂದು, ಸತ್ತ್ವೋತ್ತರಙ್ಗಳಾನ - ಸತ್ತ್ವವೃದ್ಧಿಯಿರುವ ಎಂದರೆ ಮಹಾಭಾಗವತ ಬಾಹುಳ್ಯವಿರುವ, ಅವರಲ್ಲಿ ತಾನೇ ಸತ್ವಗುಣಪ್ರಾಚುರ್ಯವು, ಭಗವತ್ ಕ್ಷೇತ್ರಙ್ಗಳುಕ್ಕು - ಪ್ರಖ್ಯಾತಿ ಹೊಂದಿದ ವಿಷ್ಣ್ವಾಲಯಗಳುಳ್ಳ ಇತರ ದಿವ್ಯದೇಶಗಳನ್ನೂ, ಪ್ರದರ್ಶನಾರ್ಥಮಾಗ - ಬೋಧಿಸುವದಕ್ಕಾಗಿ, ಉಪಲಕ್ಷಣವಾಗಿ, ಅರುಳಿಚೆಯ್‌ದಾರ್–ಅನುಗ್ರಹಿಸಿದರು, ಅಪ್ಪಣೇ ಕೊಡಿಸಿದರು. ಶ್ರೀರಂಗದಲ್ಲೇ ವಸಿಸತಕ್ಕದ್ದೆಂದು ಹೇಳಿದುದು ಶ್ರೀರಂಗದ ಹಾಗೆ ಭಾಗವತಪ್ರಾಚುರ್ಯವಿರುವ ಇತರ ದಿವ್ಯದೇಶದಲ್ಲೂ ವಸಿಸಬಹುದೆಂಬಭಿಪ್ರಾಯವೆಂದು ಭಾವಿಸತಕ್ಕದ್ದು. ಇದು ಶ್ರೀಯತಿವರ್ಯರನುಗ್ರಹಿಸಿದ ಪೃಥುಗದ್ಯ ಅಥವಾ ಶರಣಾಗತಿ ಗದ್ಯವೆಂಬ ಗ್ರಂಥದಲ್ಲಿದೆ. ಇದು ಶ್ರೀಯತೀಶ್ವರ ರಂಗೇಶ್ವರ ಸಲ್ಲಾಪರೂಪವಾದುದು. ಈ ಶ್ರೀರಙ್ಗೇ ಸುಖಮಾಸ್ವ ಎಂಬ ವಾಕ್ಯವು ಶ್ರೀ ರಂಗನಾಥನು ಯತೀಶ್ವರರಿಗೆ ಉಪದೇಶಿಸಿದ ವಾಕ್ಯವಾದುದರಿಂದನವ.ಗೂ ಪರಮ ಪರಿಗ್ರಾಹ್ಯವಾದುದು.

---

(೧) ಶರಣಾಗತಿ ಗದ್ಯ.

ಅತ್ರ ಇತರ ಪ್ರಮಾಣಾನಿ.

ಭಗವತ್ ಕ್ಷೇತ್ರಙ್ಗಳೇ ವಿವೇಕಿಕ್ಕು ವಾಸಸ್ಥಾನ ಮೆನ್ರು ಮಿಡತ್ತೈ (೨) "ಯತ್ರನಾರಾಯಣೋದೇವಃ ಪರಮಾತ್ಮಾ ಸನಾತನಃ । ತತ್ಪುಣ್ಯಂ ತತ್ಪರಂ ಬ್ರಹ್ಮ ತತ್ತೀರ್ಥಂ ತತ್ತಪೋವನಂ । ತತ್ರ ದೇವರ್ಷಯಸ್ಸಿದ್ಧಾಸ್ಸರ್ವೇಚೈವ ತಪೋಧನಾಃ ॥" ಎನ್ರು ಆರಣ್ಯಪರ್ವತ್ತಿಲ್ ತೀರ್ಥಯಾತ್ರೈಯಿಲುಮ್ (೩) "ಗೋಮಂತಃ ಪರ್ವತೋ ರಾಜನ್ ಸುಮಹಾನ್ಸರ್ವಧಾ

ಈ ಸಂದರ್ಭದಲ್ಲಿ ಇನ್ನೂ ಇತರ ಪ್ರಮಾಣಗಳು.

ಭಗವತ್ ಕ್ಷೇತ್ರಙ್ಗಳೇ - ಶ್ರೀ ಮಹಾವಿಷ್ಣು ದೇವಾಲಯಗಳಿರುವ ದಿವ್ಯದೇಶಗಳೇ ಎಂದರೆ ಸತ್ತ್ವೋತ್ತರಗಳಾದ ದಿವ್ಯಕ್ಷೇತ್ರಗಳೇ, **ವಿವೇಕಿಕ್ಕು** - ಸಾರಾಸಾರವಿವೇಚನವುಳ್ಳ ಜ್ಞಾನಿಗೆ, **ವಾಸಸ್ಥಾನಮೆನ್ರುಮಿಡತ್ತೈ** - ಯೋಗ್ಯವಾದ ವಾಸಸ್ಥಾನವೆಂಬ ಸ್ಥಳದಲ್ಲಿ, ಎಂಬ ಸಂದರ್ಭದಲ್ಲಿ ಪ್ರಮಾಣಗಳನ್ನುದಾಹರಿಸುತ್ತಾರೆ:—ಇಂತಹ ಪುಣ್ಯಕ್ಷೇತ್ರಗಳು ವಿವೇಕಿಯಾದ ಜ್ಞಾನಿಗೂ ಆವಶ್ಯಕವೆಂದು ಇಲ್ಲಿ ಹೇಳಿದುದರಿಂದ, ಜ್ಞಾನಿಯು ಎಲ್ಲಿ ವಾಸಮಾಡಿದರೂ ಆಗಬಹುದು; ಜ್ಞಾನಶೂನ್ಯನೀಗ ಇಂತಹ ಪುಣ್ಯಕ್ಷೇತ್ರಗಳಲ್ಲಿ ವಾಸಮಾಡತಕ್ಕದ್ದೆಂದು ಭಾವಿಸಬಹುದೆಂದಾಲೋಚಿಸಿ ವಿವೇಕಿಯಾದ ಪ್ರಪನ್ನನಿಗೂ ಕೂಡ ಭಾಗವತಾಭಿಮಾನವುಳ್ಳ ಪುಣ್ಯಕ್ಷೇತ್ರಗಳೇ ವಾಸಸ್ಥಳವೆಂದುಪದೇಶಿಸುತ್ತಾರೆ:— **ಯತ್ರೆ** - ಯಾವ ಮಹಾಕ್ಷೇತ್ರದಲ್ಲಿ, ಬದರಿಕಾಶ್ರಮವನ್ನೂ ಅಲ್ಲಿನ ಉಷ್ಣೋದಕ ಗಂಗೆ ಶೀತೋದಕಗಂಗೆಯನ್ನು ಕುರಿತು ಪ್ರಶಂಸಿಸುವ ಸಂದರ್ಭವು; **ಸನಾತನಃ** - ಅನಾದಿಯಾದ, **ಪರಮಾತ್ಮಾ**-ಪುರುಷೋತ್ತಮನಾದ, **ನಾರಾಯಣೋ ದೇವಃ** - ಸರ್ವೇಶ್ವರನಾದ ನಾರಾಯಣನಿರುತ್ತಾನೋ, **ತತ್** - ಆ ದಿವ್ಯಸ್ಥಳವು, **ಪುಣ್ಯಂ** - ಮಹಾಪಾವನಕರವಾದುದು, **ತತ್** - ಅದೇ, **ಪರಂಬ್ರಹ್ಮ** - ಪರಬ್ರಹ್ಮಸ್ವರೂಪವಾದುದು, **ತತ್ತೀರ್ಥಂ** - ಅದೇ ಪುಣ್ಯತೀರ್ಥವು, ಬೇರೆ ಪುಣ್ಯತೀರ್ಥ ಬೇಕಿಲ್ಲವೆಂಬ ಭಾವವು, **ತತ್** - ಅದೇ, **ತಪೋವನಂ** - ತಪಸ್ಸಿಗೆ ಯೋಗ್ಯವಾದ ಸ್ಥಳವು, **ತತ್ರ** - ಅಲ್ಲೇ, ದೇವರ್ಷಿಗಳೂ, ಸಿದ್ಧರೂ, ಸಮಸ್ತ ತಪೋಧನರಾದ ಮುನಿಗಳೂ ಇರುವರು,'' ಎನ್ರು-ಎಂಬದಾಗಿ, **ತೀರ್ಥಯಾತ್ರೈಯಿಲುಮ್** - ವನವಾಸದಲ್ಲಿರುವಾಗ ಯುಧಿಷ್ಠಿರನಿಗೆ ಧೌಮ್ಯಋಷಿಯು ಹೇಳುವ ಉತ್ತರದೇಶದ ತೀರ್ಥಯಾತ್ರಾ ಸ್ಥಳಗಳ ಪ್ರಶಂಸೆಯಲ್ಲೂ, ಇಲ್ಲಿ ತಪೋಧನರು ಇದ್ದಾರೆ ಎಂಬುವದರಿಂದ ಭಾಗವತಾಭಿಮಾನವೂ ಇರುವದರಿಂದ ವಾಸಯೋಗ್ಯ

---

(೨) ಭಾರ. ಆರ. ೮೮-೨೭, ೨೮. (೩) ಭಾರ. ಭೀಷ್ಮ. ೧೨-೮. ೯.

ತುವರ್ಾ । ವಸತೇ ಭಗವಾನ್ ಯತ್ರ ಶ್ರೀಮಾನ್ ಕಮಲಲೋಚನಃ । ಮೋಕ್ಷಿಭಿ ಸ್ಸಂಸ್ತುತೋ ನಿತ್ಯಂ ಪ್ರಭುರ್ನಾರಾಯಣೋ ಹರಿಃ ॥" ಎನ್ರು ಪ್ರದೇಶಾಂತರತ್ತಿಲುಮ್ ಮುಹರ್ಷಿಯರುಳಿಚ್ಚೈಯ್‌ದಾನ್. ಶ್ರೀ ವಾ

ವೆಂಬ ಭಾವವೂ, ಮತ್ತು ತಪೋಧನರಿಗೇ ವಾಸಯೋಗ್ಯವಾದರೆ ಕೃತಕೃತ್ಯನಾದ ಪ್ರಪನ್ನನಿಗೂ ವಾಸಯೋಗ್ಯವೆಂಬ ಭಾವವೂ, ತೋರಿಬರುತ್ತವೆ. ಮತ್ತು, **ಹೇ ರಾಜನ್** – ಓ ರಾಜನಾದ ಧೃತರಾಷ್ಟ್ರನೇ, ಇದು ಸಂಜಯನು ಕ್ರೌಂಚದ್ವೀಪವನ್ನು ವರ್ಣಿಸುವ ಪ್ರಕರಣವು, **ಸುಮಹಾನ್** - ಅತ್ಯಂತ ದೊಡ್ಡದಾದ, **ಸರ್ವಧಾತುಮಾನ್** – ಗೈರಿಕಾದಿ ಸಮಸ್ತ ಧಾತುಗಳನ್ನೂ ಹೊಂದಿರುವ, **ಗೋಮಂತ**ವೆಂಬ ಪರ್ವತವು ಆ ಕ್ರೌಂಚದ್ವೀಪದಲ್ಲಿದೆ, **ಯತ್ರ** - ಯಾವ ಪ್ರಸಿದ್ಧವಾದ ಆ ಗೋಮಂತ ಪರ್ವತದಲ್ಲಿ, **ಶ್ರೀಮಾನ್** – ಲಕ್ಷ್ಮೀಯುಕ್ತನಾದ, **ಕಮಲಲೋಚನಃ** - ಭಕ್ತಮಂಡಲಿಯಲ್ಲಿ ಕೃಪಾಸೂಚಕವಾದ ಕಣ್ಣುಗಳುಳ್ಳ ಪುಂಡರೀಕಾಕ್ಷನಾದ, **ಭಗವಾನ್** - ಷಾಡ್ಗುಣ್ಯಪರಿಪೂರ್ಣನಾದ **ಪ್ರಭುಃ** - ಸ್ವಾಮಿಯಾದ, **ಹರಿಃ** – ಪಾಪನಾಶಕನಾದ, ನಾರಾಯಣನು, **ನಿತ್ಯಂ** - ಪ್ರತಿನಿತ್ಯವೂ, ಯಾವಾಗಲೂ, **ಮೋಕ್ಷಿಭಿಃ** - ಮೋಕ್ಷಾಕಾಂಕ್ಷೆಯುಳ್ಳವರಿಂದ, **ಸಂಸ್ತುತಃ** - ಸ್ತೋತ್ರಮಾಡಲ್ಪಟ್ಟವನಾಗಿ **ನಿತ್ಯಂ ವಸತೇ** – ಯಾವಾಗಲೂ ವಾಸಮಾಡುತ್ತಾನೆಯೋ, **ಎನ್ರು** - ಎಂಬದಾಗಿ, **ಪ್ರದೇಶಾಂತರತ್ತಿಲುಮ್** - ಬೇರೆ ದ್ವೀಪವಾದ ಕ್ರೌಂಚದ್ವೀಪದಲ್ಲೂ, **ಮುಹರ್ಷಿಯರುಳಿಚ್ಚೈಯ್‌ದಾನ್** - ಶ್ರೀಮನ್ಮಹಾಭಾರತಕರ್ತೃವಾದ ವ್ಯಾಸಮಹರ್ಷಿಯು, ಅನುಗ್ರಹಿಸಿ ಹೇಳಿದರು. ಇಲ್ಲಿಯೂ **ಮೋಕ್ಷಿಭಿಃ ಸಂಸ್ತುತಃ** ಎಂದು ಹೇಳಿರುವದರಿಂದಲೂ, ಕಮಲಲೋಚನನು ಆ ಪರ್ವತದಲ್ಲಿ ವಸಿಸಿರುವದರಿಂದಲೂ ಆ ಪರ್ವತಕ್ಕೆ ವಾಸಯೋಗ್ಯವೆಂಬ ಮಾಹಾತ್ಮ್ಯೆಯು ಎಂಬ ಭಾವವು. **ಮೋಕ್ಷಿಭಿಃ** ಎಂಬ ಪ್ರಯೋಗವಿರುವದರಿಂದ, ಇನ್ನೊಂದಭಿಪ್ರಾಯವೂ ವ್ಯಕ್ತವು. ಮೋಕ್ಷಪ್ರಾಪ್ತಿಯನ್ನು ದೇಹಾವಸಾನದಲ್ಲಿ ಹೊಂದುವವನಿಗೂ ಅಂತಹ ದೇಶವಾಸವು ಉಚಿತವೆಂಬಂಶವೂ ತೋರಿಬರುತ್ತದೆ. ಈಗ ಮುದ್ರಿಸಿರುವ ಪ್ರತಿಗಳಲ್ಲಿ **"ವಸತೇ ಭಗವಾನ್ ಯತ್ರ"** ಎಂಬುವದಕ್ಕೆ ಬದಲಾಗಿ **"ಯತ್ರ ನಿತ್ಯಂ ನಿವಸತಿ"** ಎಂದಿರುತ್ತದೆ. ಇಂತಹ ವ್ಯತ್ಯಾಸಗಳು ಅನೇಕವಿರುತ್ತವೆ. ಅರ್ಥವೇನೋ ಒಂದೇಯಾದರೂ ಮಹರ್ಷಿವಾಕ್ಯಗಳ ಬದಲಾವಣೆಗಳು ಸರಿಯಾದುದಲ್ಲವು. ಇವುಗಳಲ್ಲಿ ಮಹರ್ಷಿಯು ಅನುಗ್ರಹಿಸಿದ ವಾಕ್ಯವ್ಯಾವುದೆಂದು ಹೇಳಲು ಸಾಧ್ಯವಿಲ್ಲವು. ಮುಂದೆ ಈ ಅಭಿಪ್ರಾಯವು ಶ್ರೀಮದ್ರಾಮಾಯಣದಲ್ಲೂ ಉಪಪಾದಿತವೆಂದು ತೋರ್ಪಡಿಸುತ್ತಾರೆ. ಶ್ರೀವಾಲ್ಮೀಕಿ ಮಹರ್ಷಿಯಿಂದಲೂ, "ಅಸೌ – ಈ ಪರಿದೃಶ್ಯವಾದ ಚಿತ್ರಕೂಟ ಪರ್ವ

ಲ್ಮೀಕಿ ಭಗವಾನಾಲುಮ್ (೪) ಸುಭಗ ಶ್ಚಿತ್ರಕೂಟೋಽಸೌ ಗಿರಿರಾಜೋಪಮೋಗಿರಿಃ । ಯಸ್ಮಿನ್ವಸತಿ ಕಾಕುತ್ಸ್ಥಃ ಕುಬೇರ ಇವ ನಂದನೇ ॥” ಎಙ್ಗಿರ ವಿಡತ್ತಿಲ್ ಭಗವದಧಿಷ್ಠಿತ ಕ್ಷೇತ್ರತ್ತಿನುಡೈಯ ಅಭಿಗಂತವ್ಯತ್ತೈ ಸುಭಗ ಶಬ್ದತ್ತಾಲೆ ಸೂಚಿಕ್ಕಪ್ಪಟ್ಟದು. ಶ್ರೀ ಸಾತ್ವತಾದಿಗಳಿಲುಮ್

ತವು, **ಗಿರಿರಾಜೋಪಮೋಗಿರಿಃ** - ಗಿರಿಶ್ರೇಷ್ಠವಾದ ಹಿಮವತ್ಪರ್ವತಕ್ಕೆ ಸಮಾನವಾದ ಪರ್ವತವು, ಅಥವಾ ಶ್ರೀನಿವಾಸನಿಗೆ ಆವಾಸಸ್ಥಾನವಾಗಿ ಗಿರಿಶ್ರೇಷ್ಠವೆನಿಸಿದ ಶ್ರೀ ವೇಂಕಟಾದ್ರಿಗೆ ಸಮಾನವಾದ ಪರ್ವತವು, ಏಕೆಂದರೆ ಇದೂ ಆ ವೇಂಕಟಾದ್ರಿಯ ಹಾಗೆ ಸರ್ವೇಶ್ವರನಿಗೆ ಆವಾಸಭೂತವಾದುದೆಂದು ಹೇಳುತ್ತಾರೆ:— **ಯಸ್ಮಿನ್** - ಯಾವ ಈ ಪ್ರಸಿದ್ಧವಾದ ಚಿತ್ರಕೂಟದಲ್ಲಿ, ಕಕುತ್ಸ್ಥ ವಂಶೋತ್ಪನ್ನನಾದ ಶ್ರೀರಾಮನು, **ಕುಬೇರ ಇವ ನಂದನೇ** - ನಂದನ ವನದಲ್ಲಿ, ಕುಬೇರನು ಹೇಗೆ ವಸಿಸುತ್ತಾನೋ, ಹಾಗೆ, **ವಸತಿ** - ವಸಿಸುತ್ತಾನೆ.” **ಎಙ್ಗಿರವಿಡತ್ತಿಲ್** - ಎಂದು ಮಹರ್ಷಿಯು ಹೇಳಿರುವ ಸ್ಥಳದಲ್ಲಿ, **ಭಗವದನುಷ್ಠಿತ ಕ್ಷೇತ್ರತ್ತಿನುಡೈಯ** - ಸರ್ವೇಶ್ವರನಿರುವ ದಿವ್ಯಕ್ಷೇತ್ರದ, **ಅಭಿಗಂತವ್ಯತ್ತೈ** - ಸರ್ವರೂ ಅಭಿಮಾನಿಸಿ ಹೊಂದತಕ್ಕ ಸ್ಥಿತಿಯು, **“ಸುಭಗ”** ವೆಂಬ, **ಶಬ್ದತ್ತಾಲೆ** - ಪ್ರಯೋಗದಿಂದ, **ಸೂಚಿಕ್ಕಪಟ್ಟದು** - ಸೂಚಿಸಲ್ಪಟ್ಟಿತು. **“ಮುನಯಶ್ಚ ಮಹಾತ್ಮಾನೋ ವಸತ್ಯಸ್ಮಿನ್ ಶಿಲೋಚ್ಚಯೇ”** ಎಂದರೆ ಈ ಪರ್ವತಾಗ್ರದಲ್ಲಿ ಮಹಾತ್ಮರಾದ ಮುನಿಗಳಿರುವದರಿಂದ ವಾಸಯೋಗ್ಯವೆಂದು ಭಾವಿಸಿ ಶ್ರೀರಾಮನು ಲಕ್ಷ್ಮಣನ ಮೂಲಕ ಆಶ್ರಮನಿರ್ಮಾಣ ಮಾಡಿಸಿ ವಾಸಮಾಡಿದ ಈ ಚಿತ್ರಕೂಟವು ಮಹಾಪುಣ್ಯಕರವಾದುದಾಗಿಯೂ, ಪ್ರಪನ್ನಜನಕ್ಕೆ ಅತಿ ಪ್ರಿಯವಾಗಿಯೂ ಮನೋಹರವಾಗಿಯೂ ವಾಸಯೋಗ್ಯವಾಗಿಯೂ ಇದೆ ಎಂಬ ಭಾವವು. ಇಲ್ಲಿ ಭಾಗವತಾಭಿಮಾನವುಳ್ಳ ಭಗವದಧಿಷ್ಠಿತ ಪ್ರದೇಶವೇ ವಾಸಯೋಗ್ಯವೆಂಬುವದು ಸ್ಥಾಪಿತವು. (೧೬೧೫ ನೆಯ ಪುಟ ನೋಡಿ).

ಈಗ ಸ್ವಾಮಿದೇಶಿಕರವರು ಉದಾಹರಿಸಿರುವ ನಾಲ್ಕು ಪ್ರಮಾಣಗಳಲ್ಲಿ ಮೊದಲನೆಯ ಪ್ರಮಾಣವೇನೋ ಶ್ರೀಭಾಷ್ಯಕಾರೋಕ್ತಿಯಾಗಿಯೂ, ಅರ್ಚಾವತಾರಾಧಿಷ್ಠಿತ ಕ್ಷೇತ್ರವಿಷಯವಾಗಿಯೂ, ಇರುವದರಿಂದೇನೋ ಪರಮಗ್ರಾಹ್ಯವು, ಇನ್ನು ಮೂರು ಪ್ರಮಾಣಗಳಲ್ಲಿ ಗೋಮಂತ ಪರ್ವತ ವಿಷಯವು ಪ್ರದೇಶಾಂತರ ವಿಷಯವಾದುದರಿಂದ ನಮಗೆ ಸಂಬಂಧಿಸಿದುದೇ ಅಲ್ಲವು. ಮಿಕ್ಕೆರಡೂ ವಿಭವಾವತಾರಿಗಳೇ ಆ ಕಾಲದಲ್ಲಿ ವಾಸಮಾಡುತ್ತಿದ್ದುದರಿಂದ ಮಾಹಾತ್ಮ್ಯೆಯು ಆ ಸ್ಥಳ

---

(೪) ರಾಮಾ. ಅಯೋಧ್ಯಾ, ೭೮-೧೨.

ಸ್ವಯಂ ವ್ಯಕ್ತ ಸೈದ್ಧ ವೈಷ್ಣವಂಗಳೆಙ್ಗಿರ ಕ್ಷೇತ್ರ ವಿಶೇಷಙ್ಗಳೈಯುಮ್ ಅವತ್ತಿನೆಲ್ಲೈಗಳಿಲ್ ಏತ್ತ ಚ್ಚುರುಕ್ಕಙ್ಗಳೈಯುಮ್ ಪಿರಿಯಚ್ಚೊಲ್ಲಿ (೫) "ದುಷ್ಟೇಂದ್ರಿಯ ವಶಾಚ್ಚಿತ್ತಂ ನೃಣಾಂ ಯತ್ (ಕಿಲ್ಬಿಷೈ) ಕಲ್ಮಷೈ

ಗಳಿಗೆ ಏರ್ಪಟ್ಟವು. ಹೀಗಿರುವಲ್ಲಿ ಅರ್ಚ್ಯಾವತಾರಾಧಿಷ್ಠಿತ ಪ್ರದೇಶಗಳಿಗೆ ಮಾಹಾತ್ಮ್ಯೆಯನ್ನು ಬೋಧಿಸುವ ಪ್ರಮಾಣಗಳುಂಟೋ ಎಂದರೆ, ಅಂತಹ ಪ್ರಮಾಣಗಳನ್ನೂ ಉದಾಹರಿಸುತ್ತಾರೆ:—ಭಗವಚ್ಛಾಸ್ತ್ರದಲ್ಲೂ ಭಗವತ್ ಕ್ಷೇತ್ರವಾಸದ ಫಲವಿಶೇಷವನ್ನು ತೋರಿಸುವ ವ್ಯಾಜದಿಂದ ಅಂತಹ ಕ್ಷೇತ್ರವಾಸವೇ ಉಚಿತವೆಂಬದಾಗಿ ಹೇಳಲ್ಪಟ್ಟಿತೆಂದು ತಿಳಿಸುತ್ತಾರೆ. **ಶ್ರೀ ಸಾತ್ವತಾದಿಗಳಿಲುಮ್** - ಶ್ರೀ ಸಾತ್ವತಸಂಹಿತೆ ಮೊದಲಾದವುಗಳಲ್ಲಿ, **ಸ್ವಯಂ ವ್ಯಕ್ತ**- ಸರ್ವೇಶ್ವರ ಸಂಕಲ್ಪದಿಂದಲೇ ಸ್ವತಃ ಅರ್ಚ್ಯಾವತಾರಿಯಾಗಿ ಆವಿರ್ಭವಿಸಿರುವ ಸ್ಥಳಗಳು, ಇವುಗಳು ಯಾವುವೆಂದರೆ :—**ಆದ್ಯಂ ಸ್ವಯಮಿದಂ ವ್ಯಕ್ತಂ ವಿಮಾನಂ ರಂಗಸಂಜ್ಞಿಕಂ । ಶ್ರೀಮುಷ್ಣಂ ವೇಙ್ಕಟಾದ್ರಿಂ ಚ ಸಾಲಗ್ರಾಮಂ ಚ ನೈಮಿಶಂ । ತೋತಾದ್ರಿಂ ಪುಷ್ಕರಂಚೈವ ನರನಾರಾಯಣಾಹ್ವಯಂ । ಅಷ್ಟೌ ಮೇ ಮೂರ್ತಯ ಸ್ಸಂತಿ ಸ್ವಯಂ ವ್ಯಕ್ತಾ ಮಹೀತಲೇ ॥** ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ, ಶ್ರೀರಂಗವೂ, ಶ್ರೀಮುಷ್ಣವೂ, ತಿರುಪತಿ ಬೆಟ್ಟವೂ, ಸಾಲಗ್ರಾಮವೂ, ನೈಮಿಶಾರಣ್ಯವೂ, ವಾನಮಾಮಲೆಯೂ, ಪುಷ್ಕರವೂ, ಬದರಿಕಾಶ್ರಮವೂ, ಎಂಬದಾಗಿ ಎಂಟು ದಿವ್ಯಕ್ಷೇತ್ರಗಳು. ಇವುಗಳಲ್ಲಿ ತನ್ನ ದಿವ್ಯಮಂಗಳ ವಿಗ್ರಹರೂಪಗಳಿವೆ ಎಂದು ಸರ್ವೇಶ್ವರನೇ ಹೇಳಿರುತ್ತಾನೆ; **ಸೈದ್ಧ** – ಸಿದ್ಧರಿಂದ ಪ್ರತಿಷ್ಠಿತವಾದ ಸ್ಥಳಗಳು, **ವೈಷ್ಣವಙ್ಗಳ್** - ವೈಷ್ಣವ ಮಹಾಭಾಗವತರುಗಳಿಂದ ಆಗಮರೀತ್ಯಾ ಪ್ರತಿಷ್ಠಿತವಾದ ದೇವಾಲಯಗಳುಳ್ಳ, (ಕೆಲವು ದೇವತೆಗಳಿಂದ ಪ್ರತಿಷ್ಠಿತವಾದ ದೇವಾಲಯಗಳುಳ್ಳವು ದಿವ್ಯಕ್ಷೇತ್ರವೆನಿಸುತ್ತವೆ) **ಕ್ಷೇತ್ರವಿಶೇಷಙ್ಗಳೈಯುಮ್** – ಮಹಾಕ್ಷೇತ್ರಗಳನ್ನೂ, **ಅವತ್ತಿಲ್** - ಆ ಕ್ಷೇತ್ರಗಳ, ಎಲ್ಲೆಗಳಲ್ಲಿರುವದರಿಂದುಂಟಾಗುವ ಫಲಗಳ, **ಏತ್ತಚ್ಚುರುಕ್ಕಙ್ಗಳೈಯುಮ್**-ಉತ್ಕರ್ಷಾಪಕರ್ಷಗಳನ್ನೂ, **ಪಿರಿಯಚ್ಚೊಲ್ಲಿ** - ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿ, **"ನೃಣಾಂ** - ಮನುಷ್ಯರ, **ಯತ್** - ಯಾವ, **ಚಿತ್ತಂ** - ಮನಸ್ಸು. **ಇಂದ್ರಿಯ ವಶಾತ್**-ಹತ್ತು ಇಂದ್ರಿಯಗಳಿಗೂ ವಶವಾಗಿರುವದರಿಂದ, **ಕಿಲ್ಬಿಷೈಃ ಅಥವಾ ಕಲ್ಮಷೈಃ** - ಪಾಪಗಳಿಂದ ಅಥವಾ ದೋಷಗಳಿಂದ, **ವೃತಂ** - ಆವರಿಸಲ್ಪಟ್ಟಿರುವದೋ, **ತತ್** - ಅಂತಹ ಮನಸ್ಸೂ, **ಅಂತಕಾಲೇ** - ದೇಹಾವಸಾನಸಮ

---

(೫) ಶ್ರೀ ಸಾತ್ವ. ಸಂ. ೭. ೧೨೦.

ವೃತನ್ । ತದಂತಕಾಲೇ ಸಂಶುದ್ಧಿಂ ಯಾತಿ ನಾರಾಯಣಾಲಯೇ ॥" ಎನ್ರುವ್ವೋ ಕ್ಷೇತ್ರಜ್ಞಳಿಲೆಲ್ಲೈಕ್ಕುಳ್ಳೇ ವಸಿತ್ತವನುಕ್ಕು ದೇಹನ್ಯಾಸಕಾಲತ್ತಿಲೆ ವರುಮ್ ವಿಶೇಷಮ್ ಶೊಲ್ಲಪ್ಪಟ್ಟದು.

ಯದಲ್ಲಿ, **ನಾರಾಯಣಾಲಯೇ** - ಶ್ರೀಮನ್ನಾರಾಯಣನಿಗೆ ಪ್ರಿಯವಾದ ದಿವ್ಯದೇಶದಲ್ಲಿ, ಎಂದರೆ ಅಲ್ಲಿ ವಸಿಸುವದರಿಂದ, **ಸಂಶುದ್ಧಿಂ** - ಪವಿತ್ರತೆಯನ್ನು ಎಂದರೆ ಪಾಪಗಳಿಂದ ನಿವೃತ್ತಿಯನ್ನು, **ಯಾತಿ** - ಹೊಂದುತ್ತದೆ" **ಎನ್ರು** - ಎಂಬದಾಗಿ, **ಅವ್ವೋ ಕ್ಷೇತ್ರಜ್ಞಳಿಲ್ ಎಲ್ಲೈಕುಳ್ಳೇ** - ಆಯಾ ದಿವ್ಯಕ್ಷೇತ್ರಗಳ ಎಲ್ಲೆಯಲ್ಲಿ, **ವಸಿತ್ತವನುಕ್ಕು** - ವಾಸಮಾಡಿದವನಿಗೆ, **ದೇಹನ್ಯಾಸ ಕಾಲತ್ತಿಲೆ**- ದೇಹಪರಿತ್ಯಾಗ ಮಾಡುವ ಕಾಲದಲ್ಲಿ, **ವರುಮ್**-ಉಂಟಾಗುವ, **ವಿಶೇಷಮ್** - ಮಹತ್ವವು, ಉತ್ಕರ್ಷವು, **ಶೊಲ್ಲಪ್ಪಟ್ಟದು** - ಹೇಳಲ್ಪಟ್ಟಿತು. ಭಗವತ್ ಕ್ಷೇತ್ರದಲ್ಲಿ ಮರಣವಾಗುವವನಿಗೆ ಪಾಪನಿವೃತ್ತಿಯುಂಟಾಗುತ್ತದೆ. ಈತನು ಹಿಂದಿನ ಪಾಪಕ್ಕೆ ಪರಿತಾಪಪಟ್ಟು ಮುಂದೆ ಅಂತಹ ಪಾಪಗಳಲ್ಲಿ ಪ್ರವರ್ತಿಸುವದಿಲ್ಲವೆಂಬ ದೃಢಮನಸ್ಕನಾಗಿ ಏನಾದರೂ ಸ್ವಲ್ಪ ಸುಕೃತ ಮಾಡಿದರೆ, **"ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ"** (ರಾ. ಅಯೋಧ್ಯಾ.) ಎಂದು ಹೇಳಿರುವ ಹಾಗೆ, ಅದರಿಂದ ಸಂತುಷ್ಟನಾದ ಸ್ವಾಮಿಯು **"ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ"** ಎಂದು ಹೇಳಿರುವ ಹಾಗೆ ಆತನ ಶತಾಪರಾಧಗಳನ್ನೂ ಮನ್ನಿಸಿಬಿಟ್ಟು ತನ್ನ ಸಾಕ್ಷಾತ್ಕಾರವನ್ನು ಕೊಡುವನೆಂಬ ತಾತ್ಪರ್ಯವು. ಆದರೆ ಮಹಾ ಪಾಪಿಗಳಾಗಿ ಅನೇಕರು ದಿವ್ಯದೇಶಗಳಲ್ಲೇ ವಸಿಸಿ ಸ್ವಾಮಿಯಲ್ಲಿ ಸಕ್ತವಾಗದ ಮನಸ್ಸುಳ್ಳವರಾಗಿ ಮರಣ ಹೊಂದುವರು. ಇವರುಗಳೂ ಕೂಡ ಪಾಪಗಳಿಂದ ನಿವೃತ್ತರಾಗಿ ಉತ್ತಮ ಲೋಕಗಳನ್ನು ಹೊಂದುವರೆಂಬರ್ಥವಲ್ಲವು. **"ಯಾದವಾದ್ರಿಗಿರಿಂ ದೃಷ್ಟ್ವಾ ದೂರಂ ಗಚ್ಛತಿ ದುಷ್ಕೃತಂ"** ಎಂದು ಹೇಳಿದರೆ, ಅಲ್ಲಿಗೆ ಯಾತ್ರೆಗಾಗಿ ಬರುವವರ ಸ್ವತ್ತನ್ನೇ ಸದಾ ಅಪಹರಿಸುವದಕ್ಕಾಗಿಯೇ ಅಲ್ಲಿ ವಾಸಮಾಡುವವನಿಗೂ, ದ್ರವ್ಯಕ್ಕಾಗಿ ಅಲ್ಲೇ ಕೊಲೆ ಮುಂತಾದ ಮಹಾ ಪಾತಕಗಳನ್ನು ಮಾಡುವವನಿಗೂ ಮರಣಕಾಲದಲ್ಲಿ ಪಾಪಪರಿಹಾರವಾಗುತ್ತದೆಂಬರ್ಥವಲ್ಲವು. ಅಂತಹ ಭಗವತ್ಕ್ಷೇತ್ರವಾಸವು, ಪರಮಾತ್ಮನಲ್ಲೇ ಮನಸ್ಸನ್ನು ಇಡಲು ಸಹಕಾರಿಯಾಗುವದರಿಂದಲೂ ಮೊದಲು ಅದು ದುಷ್ಟೇಂದ್ರಿಯಗಳಿಗೆ ವಶವಾಗಿ ಅನೇಕ ಪಾಪಗಳನ್ನು ಮಾಡಿದ್ದರೂ, ಇನ್ನು ತನಗೆ ದೇಹತ್ಯಾಗ ಕಾಲವು ಸಮೀಪಿಸಿತೆಂದು ಭಾವಿಸಿ, ಆಗ ಪಾಪ ನಿವಾರಣೆಗೆ ಏನು ಮಾಡಬೇಕೋ ಅದನ್ನು ಮಾಡಲು ಈ ನಾರಾಯಣಾಲಯವಾಸವು ಸಹಕಾರಿಯಾಗುವದರಿಂದಲೂ, ಈತನ ಮನಸ್ಸು, **ಸಂಶುದ್ಧಿಂ ಯಾತಿ** - ಪವಿತ್ರತೆಯನ್ನು

ಆಗ್ನೈಯಾಲ್ "ಯತ್ಕಿಂಚಿದಪಿ ಕುರ್ವಾಣೋ ವಿಷ್ಣೋರಾಯತನೇ

ಹೊಂದುತ್ತದೆಂದು ಹೇಳಲ್ಪಟ್ಟಿತು. ಆದುದರಿಂದ ಯಾದವಾದ್ರಿಗಿರಿಂದೃಷ್ಟ್ವಾ ಎಂದರೆ ಯಾದವಾದ್ರಿಗಿರಿಯು ಲಕ್ಷ್ಮೀನಾರಾಯಣರಿಗೆ ಆವಾಸವೆಂದು ಪರಮ ಭಕ್ತಿ ವಿಶ್ವಾಸಗಳಿಂದ ಕಂಡವನಾದರೆ, ಆಗ ದುಷ್ಕೃತವೆಲ್ಲಾ ದೂರವಾಗುತ್ತ ವೆಂಬ ಭಾವವು. ಮೇಲೆ ಹೇಳಿದ ಪಾತಕಿಗಳು ಭಗವತ್‌ಕ್ಷೇತ್ರಗಳಲ್ಲಿ ಪಾತಕ ಗಳನ್ನು ಮಾಡುವದರಿಂದ ಇನ್ನೂ ಹೆಚ್ಚಾದ ಭಗವನ್ನಿಗ್ರಹಕ್ಕೆ ಪಾತ್ರರಾಗುತ್ತಾ ರೆಂದು ತಿಳಿಯತಕ್ಕದ್ದು; ಅಥವಾ ಇವರಲ್ಲೇ ಕೆಲವರು ಪ್ರಾರಬ್ಧದ ಫಲವಾಗಿ ಪಾಪಕರ್ಮವನ್ನು ಮಾಡಿ, ಕಡೆಗೆ ಪ್ರಾರಬ್ಧನಾಶದಿಂದ ಕೊನೆಗೆ ಯಾದವಾದ್ರೀಶನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಸದ್ಗತಿಯನ್ನು ಕೂಡ ಹೊಂದಬಹುದು; ಆದರೆ ಇಂತಹ ಸಂದರ್ಭವೇನೋ ಅತಿ ವಿರಳವು. ಈ ಮೇಲಿನ ಶ್ಲೋಕದಲ್ಲಿ ಚಿತ್ತವು ದುಷ್ಟೇಂದ್ರಿಯ ವಶವೆಂದು ಹೇಳಲ್ಪಟ್ಟಿರುತ್ತದೆ. ಇಂದ್ರಿಯಗಳು ದುಷ್ಟ ವೆಂದು ಏಕೆ ಹೇಳಲ್ಪಟ್ಟಿತೆಂದರೆ, "ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ" (ಗೀ. ೨. ೬೦) ಅಹಂಕಾರದಿಂದ ಮದಿಸಿ ಬಲವತ್ತರವಾದ ಇಂದ್ರಿಯಗಳು ಮನಸ್ಸನ್ನು ಬಲಾತ್ಕರಿಸಿ ವಶಮಾಡಿಕೊಳ್ಳುತ್ತವೆ. ಶ್ರುತಿಯಲ್ಲಿ ಇಂದ್ರಿಯಗಳೇ ಮದಿಸಿದ ಕುದುರೆಗಳೆಂದೂ, ಮನಸ್ಸೇ ಲಗಾಮೆಂದೂ, ಬುದ್ಧಿಯೇ ಸಾರಥಿಯೆಂದೂ ಹೇಳಲ್ಪಟ್ಟಿರುತ್ತದೆ. ಬುದ್ಧಿಯು ವಿವೇಕವಿಲ್ಲದೆ ಅಶಕ್ತ ಸಾರಥಿ ಯಾದರೆ ಮನಸ್ಸೆಂಬ ಲಗಾಮನ್ನು ಸಡಲುವಾಗಿ ಬಿಟ್ಟು, ಈ ಆತ್ಮವನ್ನು ಹಳ್ಳಕ್ಕೆ ಕೆಡವಿಬಿಡುವುದು. ಬುದ್ಧಿಯು ವಿವೇಕವುಳ್ಳದ್ದಾದರೆ ಸುಸಾರಥಿಯಾಗಿ ಮನ ಸ್ಸನ್ನು ಬಿಗಿಹಿಡಿದು, ಆ ದುಷ್ಟಾಶ್ವಗಳನ್ನು ನಿರೋಧಿಸಿ, ಆತ್ಮಾವನ್ನು ಕಾಪಾಡು ವದು ಎಂಬ ಭಾವವು.

ಆಗಲಿ, ಭಗವದ್ಭಾಗವತಾಭಿಮಾನವುಳ್ಳ ಪುಣ್ಯಕ್ಷೇತ್ರಗಳಲ್ಲೇನೋ ಭಗವ ದ್ಭಾಗವತ ಕೈಙ್ಕರ್ಯಾದಿಗಳನ್ನು ನಡೆಸುತ್ತಾ ಇರಬೇಕೆಂದು ಹೇಳಲ್ಪಟ್ಟಿರುವ ಉಪ ದೇಶವು ಪರಮಗ್ರಾಹ್ಯವಾದುದೇನೋ ಸರಿಯೇ. ವಾಚನಿಕ ಕಾಯಿಕ ಕೈಙ್ಕರ್ಯ ಮಾಡಲು ಶಕ್ತಿಯುಳ್ಳವರೇನೋ ಅಲ್ಲಿ ವಸಿಸತಕ್ಕದ್ದು ಯುಕ್ತವು. ಅದಕ್ಕೂ ಸಾಮರ್ಥ್ಯವಿಲ್ಲದಿರುವವರು ಅಲ್ಲಿರಬೇಕೆಂಬ ಆವಶ್ಯಕತೆಯೇನು ಎಂದಾಕ್ಷೇಪ ಬಂದೀತೆಂದು ಭಾವಿಸಿ ಅಂತಹ ಪ್ರಪನ್ನರೂ ಕೂಡ ಅಂತಹ ಭಗವದ್ಭಾಗವತಾ ಭಿಮಾನವುಳ್ಳ ದಿವ್ಯ ಸ್ಥಳದಲ್ಲಿ ವಸಿಸುವದರಲ್ಲಿ ಪ್ರಯೋಜನ ಉಂಟೆಂದು ತಿಳಿ ಸುತ್ತಾರೆ.

ಆಗ್ನೈಯಾಲ್ - ಭಗವದ್ಭಾಗವತ ಪ್ರಿಯವಾದ ದಿವ್ಯಕ್ಷೇತ್ರದಲ್ಲಿ ವಾಸವೇ ಈ ಪ್ರಪನ್ನನಿಗೆ ಸ್ವರೂಪೋಚಿತವಾದುದರಿಂದ, ಯತ್ಕಿಂಚಿದಪಿ ಕುರ್ವಾಣಃ -

ವಸೇತ್ । ನ ಕಿಂಚಿದಪಿ ಕುರ್ವಾಣೋ ವಿಷ್ಣೋ ರಾಯತನೇ ವಸೇತ್ ॥" ಎಜ್ಞ್ಗರಪಡಿಯೇ ಪ್ರವೃತ್ತಿ ನಿವೃತ್ತಿಗಳಾಲೆ ವಲ್ಲ ಕೈಙ್ಕರ್ಯತ್ತೈಪ್ಪಣ್ಣಿಕ್ಕೊಂಡು ಭಗವದ್ಭಾಗವತಾಭಿಮಾನ ವಿಷಯಮಾನ ಸತ್ತ್ವೋತ್ತರಕ್ಷೇತ್ರತ್ತಿಲೇ ವಸಿಕ್ಕೈ ಉಚಿತಮ್.

ಏನಾದರೂ ತನಗೆ ಶಕ್ಯವಾದ ಸ್ವಲ್ಪ ಮಾನಸಿಕ ವಾಚಸಿಕ ಕಾಯಿಕ ಕೈಙ್ಕರ್ಯಗಳನ್ನು ಮಾಡುತ್ತಾ, ವಿಷ್ಣೋರಾಯತನೇ - ವಿಷ್ಣು ದೇವಾಲಯವಿರುವ ದಿವ್ಯದೇಶದಲ್ಲಿ, ವಸೇತ್ - ವಸಿಸತಕ್ಕದ್ದು; "**ಕಥಂ ಚಿದುಪಕಾರೇಣ ಕೃತೇನೈಕೇ ನ ತುಷ್ಯತಿ**" ಎಂದು ಹೇಳಿರುವ ಹಾಗೆ ಯತ್ಕಿಂಚಿತ್ ಯಾವ ವಿಧ ಭಗವತ್‌ಕೈಂಕರ್ಯ ಮಾಡಿದರೂ ಶ್ರಿಯಃಪತಿಯು ಪ್ರೀತನಾಗುವನು; ಯತ್ಕಿಂಚಿತ್ ಭಾಗವತ ಕೈಂಕರ್ಯ ಮಾಡಿದರೆ, ಈತನಿಗೆ ಮುಖ್ಯವಾದ ಭಾಗವತ ಪ್ರಸನ್ನತೆಯೂ, ತನ್ಮೂಲಕ ಭಗವತ್ಪ್ರೀತಿಯೂ ಉಂಟಾಗುತ್ತದೆಂಬ ಭಾವವು. **ನಕಿಂಚಿದಪಿ ಕುರ್ವಾಣಃ** - ಹಾಗೆ ಯಾವ ವಿಧವಾದ ಅನುಜ್ಞಾ ಕೈಂಕರ್ಯಗಳನ್ನು ಮಾಡಲು ಶಕ್ತನಲ್ಲದವನಾದರೂ, **ವಿಷ್ಣೋರಾಯತನೇ ವಸೇತ್** - ಅಂತಹ ವಿಷ್ಣ್ವಾಲಯವಿರುವ ಪುಣ್ಯಸ್ಥಳದಲ್ಲೇ ವಸಿಸತಕ್ಕದ್ದು. ಯಾವ ವಿಧಿವಿಹಿತ ಪ್ರವೃತ್ತಿರೂಪ ಕೈಂಕರ್ಯಗಳನ್ನು ಮಾಡಲು ಶಕ್ತಿಯಿಲ್ಲದಿದ್ದರೂ, ಶಾಸ್ತ್ರನಿಷಿದ್ಧವಾದ ನಿವೃತ್ತಿರೂಪ ಕೈಂಕರ್ಯಗಳನ್ನಾದರೂ ಮತ್ತು ಆಜ್ಞಾಕೈಂಕರ್ಯಗಳನ್ನು ನಡಿಸಿಕೊಂಡಾದರೂ ವಸಿಸತಕ್ಕದ್ದು. ಅದರಿಂದಲೇ ಸರ್ವೇಶ್ವರನು ಸುಪ್ರೀತನಾಗುವನು. ಹಾಗೆ ಕೆಲವು ಕಾಲ ವಸಿಸಿದರೆ ಸ್ವಾಮಿಕೃಪೆಯುಂಟಾಗಿ ವಿಹಿತ ಅನುಜ್ಞಾ ಕೈಂಕರ್ಯಗಳನ್ನು ಮಾಡಲು ಶಕ್ತಿಯೂ ಲಭಿಸಬಹುದು ಎಂಬ ತಾತ್ಪರ್ಯವು'' **ಎಜ್ಞ್ಗರಪಡಿಯೇ**-ಎಂದು ಹೇಳಿರುವ ಹಾಗೆ, **ಪ್ರವೃತ್ತಿ ನಿವೃತ್ತಿಗಳಾಲೆ** - ಶಾಸ್ತ್ರವಿಹಿತ ಪ್ರವೃತ್ತಿರೂಪ ಕೈಂಕರ್ಯಗಳಿಂದಲೂ, ಶಾಸ್ತ್ರನಿಷಿದ್ಧವಾದವುಗಳ ಪರಿತ್ಯಾಗ ರೂಪ ಕೈಂಕರ್ಯಗಳಿಂದಲೂ, **ವಲ್ಲ** - ತನಗೆ ಶಕ್ಯವಾದ, **ಕೈಙ್ಕರ್ಯತ್ತೈಪ್ಪಣ್ಣಿಕೊಂಡು** - ಕೈಂಕರ್ಯವನ್ನು ಮಾಡಿಕೊಂಡು, ಭಗವದ್ಭಾಗವತಾಭಿಮಾನಕ್ಕೆ, **ವಿಷಯಮಾನ** - ಒಳಪಟ್ಟ, **ಸತ್ತ್ವೋತ್ತರ ಕ್ಷೇತ್ರತ್ತಿಲೆ** - ಸತ್ತ್ವಗುಣ ಪ್ರಾಚುರ್ಯವುಳ್ಳ ದಿವ್ಯಕ್ಷೇತ್ರದಲ್ಲಿ, **ವಸಿಕ್ಕೈ ಉಚಿತಮ್** - ಈ ಕೃತಕೃತ್ಯ ಪ್ರಪನ್ನನಿಗೆ ಸ್ವರೂಪಯೋಗ್ಯವಾದುದು. ಈ ಮೇಲಿನ ವಾಕ್ಯದಿಂದ ಈ ಅಧಿಕಾರದ ಮುಖ್ಯಾಭಿಪ್ರಾಯವಾದ ಭಗವದ್ಭಾಗವತಾಭಿಮಾನವುಳ್ಳ ದಿವ್ಯಕ್ಷೇತ್ರವಾಸವೇ ಪ್ರಪನ್ನನಿಗೆ ಯೋಗ್ಯವಾದುದೆಂದುಪದೇಶಿಸಲ್ಪಟ್ಟಿತು.

ಆದರೆ ಮಹಾಭಾಗವತನೊಬ್ಬನಿದ್ದರೂ ಸಾಕು; ಆತನ ಸಾನ್ನಿಧ್ಯದ ಪ್ರಭಾವದಿಂದ ಅಂತಹ ಪ್ರದೇಶವೂ ಯೋಗ್ಯವಾದುದೆಂದು ಹೇಳಲ್ಪಟ್ಟಿತಲ್ಲಾ

ಗತ್ಯಭಾವೇ ಮಹಾಭಾಗವತ ಮಾತ್ರಾಧಿಷ್ಠಿತ ದೇಶಸ್ಯ ಪ್ರಾಶಸ್ತ್ಯಂ.

(೧) "ನಿಗೃಹೀತೇಂದ್ರಿಯ ಗ್ರಾಮೋ ಯತ್ರ ಯತ್ರ ವಸೇನ್ನರಃ। ತತ್ರತತ್ರ ಕುರುಕ್ಷೇತ್ರಂ ನೈಮಿಶಂ ಪುಷ್ಕರಂ ತಥಾ ॥" ಎನ್ರು ಶೊಲ್ಲುಗಿರ ವಿದು ಗತ್ಯಂತರ ಮಿಲ್ಲಾದ ಪೋದು ಏದೇನು ಮೊರು ದೇಶತ್ತಿಲೆ ವಸಿತ್ತಾಲುಮ್, ಇವರ್ ವಾಸತ್ತಾಲೆ ಅದ್ದೇಶಮುಮ್ ಪ್ರಶಸ್ತಮಾಮೆನ್ಗೈಕ್ಕಾಗ.

ಅದರಭಿಪ್ರಾಯ ಹೇಗೆ ಎಂದು ಪ್ರಶ್ನಿಸಿದರೆ, ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ. ಬೇರೆ ಗತಿಯಿಲ್ಲದೆ, ಅಂತಹ ಪುಣ್ಯಸ್ಥಳದಲ್ಲಿ ಹೋಗಿ ವಸಿಸಲಾರದವನಿಗೆ ಹೇಳಿದ ಮಾತೇ ವಿನಾ, ಭಗವದ್ಭಾಗವತರುಗಳಿಗೆ ಪ್ರಿಯವಾದ ಪುಣ್ಯಸ್ಥಳಗಳೇ ವಾಸಯೋಗ್ಯವೆಂಬುವದೇ ಸಿದ್ಧಾಂತವೆಂದು ತಿಳಿಸುತ್ತಾರೆ.

ಗತಿಯಿಲ್ಲದ ಪಕ್ಷ ಮಹಾಭಾಗವತರು ಮಾತ್ರವಿರುವ ಸ್ಥಳಕ್ಕೆ ಪ್ರಾಶಸ್ತ್ಯವು.

"ನಿಗೃಹೀತೇಂದ್ರಿಯ ಗ್ರಾಮಃ – ನಿಗ್ರಹಿಸಲ್ಪಟ್ಟ ಇಂದ್ರಿಯಸಮೂಹಗಳುಳ್ಳ, ಇಂದ್ರಿಯಗಳು, ಕರ್ಮೇಂದ್ರಿಯಗಳು ೫, ಜ್ಞಾನೇಂದ್ರಿಯಗಳು ೫, ಮನಸ್ಸು ೧, ಹೀಗೆ ಹನ್ನೊಂದೇಯಾದರೂ, ಅವುಗಳ ಹಾವಳಿ ಹೆಚ್ಚಾದುದರಿಂದ, ಇಂದ್ರಿಯಗ್ರಾಮವೆಂಬ ಪ್ರಯೋಗವು, ಹೀಗೆ ಇಂದ್ರಿಯಗಳನ್ನು ಯಾವನು ವಶಟಲ್ಲಿಟ್ಟಿರುತ್ತಾನೋ, ಅಂತಹ, **ನರಃ** - ಮನುಷ್ಯನು, **ಯತ್ರ ಯತ್ರ ವಸೇತ್** - ಎಲ್ಲೆಲ್ಲಿ ವಸಿಸುತ್ತಾನೋ, **ತತ್ರ ತತ್ರ** - ಅಲ್ಲೆಲ್ಲಾ, ಕುರುಕ್ಷೇತ್ರವು, ನೈಮಿಶಾರಣ್ಯವು, **ತಥಾ** - ಹಾಗೆಯೇ, ಪುಷ್ಕರವೆಂಬ ಸ್ವಯಂವ್ಯಕ್ತ ಕ್ಷೇತ್ರಗಳು, ಎಂದರೆ ಹಾಗೆ ಭಾವಿಸತಕ್ಕದ್ದೆಂಬ ಭಾವವು" **ಎನ್ರು** - ಎಂಬದಾಗಿ, **ಶೊಲ್ಲುಗಿರವಿದು** - ಹೇಳಿರುವ ಈ ಸೂಕ್ತಿಯು, **ಗತ್ಯಂತರಮಿಲ್ಲಾದಪೋದು** - ಬೇರೆ ಗತಿಯಿಲ್ಲದಾಗ, ಎಂದರೆ ಪುಣ್ಯಸ್ಥಳವಾಸಕ್ಕೆ ಅನುಕೂಲವಿಲ್ಲದಿರುವಾಗ, **ಏದೇನು ಮೊರು ದೇಶತ್ತಿಲೆ** - ಯಾವುದಾದರೂ ಒಂದು ಬೇರೆ ಸ್ಥಳದಲ್ಲಿ ವಾಸಮಾಡಿದರೂ, **ಇವರ್ ವಾಸತ್ತಾಲೆ** – ಈ ಇಂದ್ರಿಯನಿಗ್ರಹ ಮಾಡಿ, **"ವಶೇಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ"** ಎಂದು ಗೀತೆಯಲ್ಲಿ ಹೇಳಿರುವ ಹಾಗೆ ಪ್ರತಿಷ್ಠಿತವಾದ ಪ್ರಜ್ಞೆಯುಳ್ಳ ಪರಮ ಭಾಗವತನು ಅಲ್ಲಿ ವಸಿಸುವದರಿಂದ, **ಅದ್ದೇಶಮುಮ್** – ಅಂತಹ ಸ್ಥಳವೂ ಕೂಡ, **ಪ್ರಶಸ್ತಮಾಮೆನ್ಗೈಕ್ಕಾಗ** - ಯೋಗ್ಯವಾಗುವದು ಎಂದು ತಿಳಿಸುವದಕ್ಕಾಗಿ ಹೇಳಿದುದು ಎಂಬ ಭಾವವು.

(೧) ಇತಿಹಾಸ ಸಮುಚ್ಚಯಂ ೨೭. ೧೮.

ಇದುಕ್ಕು ಶಾಂಡಿಲೀ ವೃತ್ತಾಂತ ಮುದಾಹರಣಮಾಗ ಕ್ಕಂಡುಕೊಳ್ವದು. ಆಗೈಯಾಲ್ (೧) "ಜ್ಞಾನಸಮಕಾಲಮುಕ್ತ್ವಾ ಕೈವಲ್ಯಂ ಯಾತಿ ಗತಶೋಕಃ । ತೀರ್ಥೇ ಶ್ವಪಚಗೃಹೇವಾ ನಷ್ಟಸ್ಮೃತಿ ರಪಿ ಪರಿತ್ಯಜ್ಯ

ಮುಂದೆ ಅಂತಹ ಮಹಾಭಾಗವತನೊಬ್ಬನಾದರೂ ಇದ್ದರೂ ಅದಕ್ಕೂ ಪ್ರಾಶಸ್ತ್ಯವುಂಟೆಂಬುವದಕ್ಕೆ ಒಂದು ಉದಾಹರಣೆಯನ್ನೀಯುತ್ತಾರೆ. **ಇದುಕ್ಕು** - ಅಂತಹ ಸ್ಥಳಕ್ಕೂ ಪ್ರಾಶಸ್ತ್ಯ ಉಂಟೆಂಬುವದಕ್ಕೆ, **ಶಾಂಡಲೀ ವೃತ್ತಾಂತ್ರಂ** - ಶಾಂಡಲೀ ಎಂಬ ಮಹಾಭಾಗವತಳ ವೃತ್ತಾಂತವನ್ನು ಉದಾಹರಣವಾಗಿ, **ಕಂಡುಕೊಳ್ವದು** - ತಿಳಿದುಕೊಳ್ಳತಕ್ಕದ್ದು. ಈ ಶಾಂಡಲೀ ವೃತ್ತಾಂತವು ಅಪರಾಧ ಪರಿಹಾರಾಧಿಕಾರದಲ್ಲೂ ಶ್ರೀ ದೇಶಿಕರು ಉದಾಹರಿಸಿರುತ್ತಾರೆ. ೧೫೫೭ನೆಯ ಪುಟ ನೋಡಿ. ಶಾಂಡಿಲೀ ಎಂಬ ಮಹಾಭಾಗವತೆಯು ಸಮುದ್ರದ್ವೀಪದ ಒಂದು ಪರ್ವತದಲ್ಲಿದ್ದುದನ್ನು ಶ್ರೀ ವೈನತೇಯರು ಕಂಡು, ಇಂತಹ ಹೀನದೇಶದಲ್ಲಿರಬಹುದೇ ಎಂದು ಮನಸ್ಸಿನಲ್ಲಿ ಎಣಿಸಿದ ಅಪರಾಧದಿಂದ ಅವರ ಪಕ್ಷಗಳು ಸುಟ್ಟು ಹೋಗಿ, ಕಡೆಗೆ ಈಕೆಯ ಪ್ರಸನ್ನತೆಯಿಂದ ಪುನಃ ಪಕ್ಷಗಳು ಮೊದಲಿನಂತೆ ಉಂಟಾದವೆಂಬುವದು ಇತಿಹಾಸವು.

ಮುಂದಿನ ವಾಕ್ಯದಿಂದ ಇನ್ನೊಂದಾಕ್ಷೇಪಕ್ಕೂ ಸಮಾಧಾನ ಹೇಳುತ್ತಾರೆ. ಪ್ರಪನ್ನನಾದವನಿಗೆ ದೇಹಪರಿತ್ಯಾಗವು ಎಂತಹ ಸ್ಥಳದಲ್ಲಿಯಾದರೂ ಚಿಂತೆಯಿಲ್ಲವೆಂದು ಹೇಳಿರುವಾಗ, ಭಗವದ್ಭಾಗವತಾಭಿಮಾನವುಳ್ಳ ಪುಣ್ಯಕ್ಷೇತ್ರವೇ ಉಚಿತವಾದ ವಾಸಸ್ಥಳವೆಂದು ಹೇಗೆ ಹೇಳಬಹುದು ಎಂದರೆ ಆ ಪ್ರಮಾಣವನ್ನುದಾಹರಿಸಿ ಅದಕ್ಕೆ ಸರಿಯಾದಭಿಪ್ರಾಯವನ್ನು ತಿಳಿಸುತ್ತಾರೆ

ಆಗೈಯಾಲೇ - ಗತ್ಯಂತರವಿಲ್ಲದಿರುವ ಸಂದರ್ಭದಲ್ಲಿ ಹೀನದೇಶ ವಾಸವೇ ಮಹಾಭಾಗವತನೊಬ್ಬನಿರುವದರಿಂದ ಪ್ರಶಸ್ತವೆಂದಾಗುವದರಿಂದ, ಹಾಗೆಯೇ, **"ಜ್ಞಾನಸಮಕಾಲಂ** - ಚನ್ನಾಗಿ ಜ್ಞಾನವಿರುವ ಸುಸಮಯದಲ್ಲೇ, **ಉಕ್ತ್ವಾ** - ದ್ವಯಮಂತ್ರವನ್ನುಚ್ಚರಿಸಿ, ಎಂದರೆ ಶರಣಾಗತಿಯನ್ನು ಮಾಡಿ, **ಗತಶೋಕಃ** - ಏನೊಂದೂ ದುಃಖವಿಲ್ಲದವನಾಗಿ, **ತೀರ್ಥೇ** - ಗಂಗಾ ಪ್ರಯಾಗಾದಿ ಮಹಾತೀರ್ಥಗಳಿರುವ ಸ್ಥಳದಲ್ಲಾಗಲಿ, **ಶ್ವಪಚಗೃಹೇವಾ** - ಚಂಡಾಲಗೃಹದಲ್ಲೇಯಾಗಲಿ, **ನಷ್ಟಸ್ಮೃತಿರಪಿ** – ಸಾಯುವಾಗ ಪ್ರಜ್ಞೆಯೇ ಇಲ್ಲದಿದ್ದರೂ ಕೂಡ, **ದೇಹಂ ಪರಿತ್ಯಜ್ಯ** - ದೇಹತ್ಯಾಗವನ್ನು ಮಾಡಿದರೂ, **ಕೈವಲ್ಯಂ** - ಇಲ್ಲಿ ಕೈವಲ್ಯವು ಮೋಕ್ಷವೆಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ, ಮೋಕ್ಷವನ್ನು,

(೧) ವರಾಹ ಪುರಾಣ.

ದೇಹಮ್ ॥" ಎನ್ರು ಶರೀರ ಪಾತತ್ತುಕ್ಕು ಒರುದೇಶ ವಿಶೇಷನಿಯಮಮು ಮಿಲ್ಲೈ ಎನ್ರದುವುಮ್ ಎಪ್ಪಡಿಕ್ಕುಮ್ ಫಲತ್ತಿಲ್ ಇಳವಿಲ್ಲೈ ಯೆನ್ಗೈ ಕ್ಕಾಗ.

ಯಾತಿ - ಹೊಂದುತ್ತಾನೆ" ಎನ್ರು-ಎಂಬದಾಗಿ, **ಶರೀರಪಾತತ್ತುಕ್ಕು** - ದೇಹ ತ್ಯಾಗಕ್ಕೆ, **ಒರುದೇಶ ವಿಶೇಷ ನಿಯಮಮುಮ್** - ಒಂದು ದಿವ್ಯದೇಶ ಸ್ಥಳವಾಗಿರ ಬೇಕೆಂಬ ಆವಶ್ಯಕತೆಯು, **ಇಲ್ಲೈ** - ಇಲ್ಲವು, **ಎನ್ರುದುವುಮ್** - ಎಂಬುವದೂ ಕೂಡ, **ಎಪ್ಪಡಿಕ್ಕುಮ್** - ಹೇಗೇಯಾಗಲಿ, **ಫಲತ್ತಿಲ್** - ಫಲದಲ್ಲಿ, **ಇಳ ವಿಲ್ಲೈ** - ಸಂಶಯವಿಲ್ಲವು, **ಯೆನ್ಗೈಕ್ಕಾಗ** - ಎಂದು ಹೇಳುವದಕ್ಕಾಗಿ, ಹೇಳಿದ ಮಾತಾಗಿದೆ ಎಂಬ ಭಾವವು. ಮೇಲಿನ ವರಾಹಪುರಾಣ ಶ್ಲೋಕವು, ಪ್ರಪನ್ನನು ಎಲ್ಲಿಯೇ ಮರಣ ಹೊಂದಲಿ, ಪುಣ್ಯಸ್ಥಳಗಳಲ್ಲೇಯಾಗಲಿ, ಚಂಡಾಲಗೃಹದಲ್ಲೇ ಯಾಗಲಿ, ಪ್ರಜ್ಞೆಯಿದ್ದು ಹರಿಸ್ಮರಣೆ ಮಾಡುತ್ತಲೇಯಾಗಲಿ, ಅಥವಾ ಪ್ರಜ್ಞೆ ಇಲ್ಲದೇನೇಯಾಗಲಿ ದೇಹತ್ಯಾಗ ಮಾಡಿದರೂ ಮೋಕ್ಷಪ್ರಾಪ್ತಿಯಲ್ಲಿ ಏನೂ ಸಂಶಯವಿಲ್ಲವೆಂದು ಹೇಳಿತೇ ವಿನಾ, ಪ್ರಪನ್ನನಿಗೆ ವಾಸಯೋಗ್ಯ ಸ್ಥಳವೆಂಬ ಪ್ರಶಂಸೆಯಲ್ಲಿ ಹೇಳಿದ ವಾಕ್ಯವಲ್ಲವು. ಎಂತಹ ಅವಸ್ಥೆಯಲ್ಲೇಯಾಗಲಿ ಎಂತಹ ಪ್ರದೇಶದಲ್ಲೇಯಾಗಲಿ ಮರಣವಾದರೂ, ಪ್ರಪನ್ನನಿಗೆ ಅನಂತರ ಮೋಕ್ಷಪ್ರಾಪ್ತಿ ಎಂಬುವದು ಸಿದ್ಧವೆಂಬ ಭಾವವು ಪ್ರಪನ್ನನ ದೇಹತ್ಯಾಗಕ್ಕೆ ದೇಶಕಾಲನಿಯಮ ಗಳೇನೂ ಇಲ್ಲವೆಂದು ಛಾಂದೋಗ್ಯದಲ್ಲಿ ಹೇಳಲ್ಪಟ್ಟಿರುತ್ತದೆ. **"ಸ್ವಯಂವ್ಯಕ್ತ ಕ್ಷೇತ್ರೇ ವಿಪಿನ ವಿಷಯೇವಾ ವಿಧಿವಶಾತ್ಪ್ರಶಸ್ತೇ ದುಷ್ಟೇವಾ ಕ್ವಚನ ಸಮ ಯೇ ತ್ಯಕ್ತ ವಪುಷಃ। ಮುಕುಂದ ಸ್ತ್ರಯ್ಯಂತ ಪ್ರಥಿತಮಹಿಮಾಸೋಯ ಮನಘಾ ಪ್ರಪನ್ನಾನುದ್ಧೃತ್ಯ ಸ್ವಪದ ಮನಪಾಯಂ ಗಮಯತಿ ॥"** ಎಂಬ ಶ್ಲೋಕವೂ ಈ ಮೇಲಿನ ಅಭಿಪ್ರಾಯವನ್ನೇ ಸಮರ್ಥನೆ ಮಾಡುತ್ತದೆ. "ದೋಷರಹಿತರಾದ ಪ್ರಪನ್ನರು ಸ್ವಯಂವ್ಯಕ್ತ ಕ್ಷೇತ್ರದಲ್ಲೇ ಆಗಲಿ ಅಥವಾ ಒಂದು ಆರಣ್ಯಪ್ರದೇಶದಲ್ಲೇಯಾಗಲಿ, ಪ್ರಶಸ್ತವಾದ ಸ್ಥಳದಲ್ಲೇ ಆಗಲಿ, ದುಷ್ಟ ವಾದ ಸ್ಥಳದಲ್ಲೇಯಾಗಲಿ, ಎಲ್ಲಿಯಾದರೂ ಒಂದು ಕಡೆ ಮರಣಕಾಲದಲ್ಲಿ ದೇಹ ಬಿಟ್ಟವರಾಗಲು, ಅವರನ್ನು ವೇದಗಳಲ್ಲಿ ಶ್ಲಾಘಿಸಲ್ಪಟ್ಟ ಮಹಿಮೆಯುಳ್ಳ ಅಂತಹ ಈ ಮುಕ್ತಿದಾಯಕನು ತನ್ನ ಸ್ಥಾನವಾದ ದಿವ್ಯ ವೈಕುಂಠವನ್ನು ಏನೊಂದೂ ವಿಘ್ನ ವಿಲ್ಲದೆ ಸೇರಿಸುವನು" ಎಂಬುವದು ಈ ಶ್ಲೋಕಾಭಿಪ್ರಾಯವು. ಈ ವಾಕ್ಯದಲ್ಲಿ **"ಶರೀರಪಾತತ್ತುಕ್ಕು"** ಎಂಬ ಪ್ರಯೋಗದಿಂದ ಮುಂದಿನ ಅಧಿಕಾರವಾದ ನಿರ್ಯಾಣಾಧಿಕಾರವು ಸೂಚಿತವಾಯಿತು.

ವಾಸಯೋಗ್ಯ ಪ್ರಧಾನ ದಿವ್ಯಕ್ಷೇತ್ರಾಣ್ಯಾಹುಃ.

ಆರಾದ ವರುಳ ಮುದನ್ ಪೊದಿನ್ದ ಕೋಯಿಲಮ್ಬುಯತ್ತೋ ನಯೋದ್ಧಿಮನ್ನರ್ಕ್ಕಳಿತ್ತ ಕೋಯಿಲ್ । ತೋರಾದ ತನಿವೀರ್ರ ತೊಳುದ ಕೋಯಿಱ್ತುಣೈಯಾನ ವೀಡಣರ್ಕ್ಕು ತ್ತುಣೈಯಾನ್ ಕೋಯಿಲ್॥ ಶೇರಾದ ಪಯನೆಲ್ಲಾಮ್ ಶೇರ್ಕ್ಕುಮ್ ಕೋಯಿಲ್ ಶೆಳುಮರೈಯಿಱ್ ಮುದಲೆಳತ್ತು ಚೇರ್ನ್ದ ಕೋಯಿಲ್ । ತೀರಾದ ವಿನೈಯನೈತ್ತುಮ್

ವಾಸಯೋಗ್ಯವಾದ ಮುಖ್ಯ ದಿವ್ಯಕ್ಷೇತ್ರಗಳು ಯಾವುವೆಂದು ತಿಳಿಸುತ್ತಾರೆ.

ಮುಂದೆ ಮೂರು ಪಾಶುರಗಳಿಂದ ಪ್ರಪನ್ನನಿಗೆ ತುಂಬಾ ಪ್ರಿಯತಮಗಳಾದ ಮೂರು ಮಹಾಕ್ಷೇತ್ರಗಳನ್ನು ವರ್ಣಿಸುತ್ತಾರೆ. ಅವುಗಳಲ್ಲಿ ಸ್ವಯಂವ್ಯಕ್ತವಾದ ಶ್ರೀರಂಗ ವಿಮಾನ ಕ್ಷೇತ್ರವು ತುಂಬಾ ಮುಖ್ಯವಾದುದಾಗಿ, ಆ ಕಾರಣದಿಂದಲೇ ಶ್ರೀ ಯತಿವರ್ಯರು ಗದ್ಯದಲ್ಲಿ **"ಅತ್ರೈವ ಶ್ರೀರಙ್ಗೇ ಸುಖಮಾಸ್ವ"** ಎಂದು ಹೇಳಿರುವದರಿಂದ, ಹೀಗೆ ಅನೇಕ ಆಳ್ವಾರ್ ಆಚಾರ್ಯರುಗಳಿಗೆ ತುಂಬಾ ಪ್ರಿಯವಾದುದರಿಂದ, ಅದರ ಮಹಿಮೆಯನ್ನು ಕೊಂಡಾಡುತ್ತಾರೆ :—

ಅರ್ಥ :— ಆರಾದ - ಎಷ್ಟಾದರೂ ಸಾಕೆಂದೆನಿಸದ, **ಅರುಳ್** - ಕೃಪೆಯೆಂಬ, **ಅಮುದಮ್** - ಅಮೃತವು, **ಪೊದಿನ್ದ** - ತುಂಬಿ ಪ್ರವಹಿಸುವ, **ಕೋಯಿಲ್** - ವಿಮಾನವು, **ಕೋಱ್** ಎಂದರೆ ಸ್ವಾಮಿಯು, **ಇಲ್** - ಎಂದರೆ ಇರುವ ಸ್ಥಾನವು, ಆದುದರಿಂದ **ಕೋಯಿಲ್** ಎಂದರೆ ದೇವಾಲಯವು ; **ಅಮ್ಬುಯತ್ತೋಱ್** - ಅಂಬುಜಾಸನನಾದ ಚತುರ್ಮುಖನು, **ಅಯೋದ್ಧಿಮನ್ನರ್ಕು** - ಅಯೋಧ್ಯೆಯ ರಾಜರುಗಳಿಗೆ, **ಅಳಿತ್ತ** - ದಯಪಾಲಿಸಿದ, **ಕೋಯಿಲ್** - ದೇವಾಲಯವು, **ತೋರಾದ** - ಜಯಿಸಲಸಾಧ್ಯನಾದ, **ತನಿವೀರ್ರ** - ಅದ್ವಿತೀಯ ವೀರನಾದ ಶ್ರೀರಾಮನಿಂದ, **ತೊಳುದ ಕೋಯಿಲ್** - ಆರಾಧಿಸಲ್ಪಟ್ಟ ದೇವಾಲಯವು ; **ತೊಣೆಯಾನ** - ಸಹಾಯಕನಾದ, **ವೀಡಣರ್ಕ್ಕು** - ವಿಭೀಷಣನಿಗೆ, **ತುಣೈಯಾಂ** - ಸಂಸಾರ ಭಯನಿವೃತ್ತಿಗೆ ಸಹಾಯಭೂತವಾದ, **ಕೋಯಿಲ್**- ದೇವಾಲಯವು ; **ಶೇರಾದ**-ಪಡೆಯಲು ಕಷ್ಟವಾದ, **ಪಯನೆಲ್ಲಾಮ್**-ಚತುರ್ವಿಧ ಪುರುಷಾರ್ಥಗಳನ್ನೆಲ್ಲಾ, **ಶೇರ್ಕ್ಕುಂ ಕೋಯಿಲ್** - ಸೇರಿಸುವ ಎಂದರೆ ಉಂಟುಮಾಡುವ ದೇವಸ್ಥಾನವು; **ಶೆಳು** – ಶ್ಲಾಘ್ಯವಾದ ಅಥವಾ ಸಮೃದ್ಧಿಯಾದ ಎಂದರೆ ಅನಂತಗಳಾದ, **ಮರೈಯಿಱ್** - ವೇದಗಳ, **ಮುದಲೆಳತ್ತು** -

ತೀರ್‌ಕ್ಕುಮ್ ಕೋಯಿಲ್, ತಿರುವರಙ್ಗಮೆನ ತ್ತಿಕಳುಮ್ ಕೋಯಿಲ್ ತಾನೇ ॥

ಪ್ರಥಮಾಕ್ಷರವಾದ ಪ್ರಣವವು, ಚೇರ್‌ನ್ದ ಕೋಯಿಲ್ - ಸೇರಿರುವ ದೇವಾಲಯವು; ತೀರಾದ - ಪ್ರಾಯಶ್ಚಿತ್ತ ಮೂಲಕವಾಗಲಿ ಅಥವಾ ಅನುಭವಿಸಿಯಾಗಲಿ ಹೋಗಲಾಡಿಸಲು ಸಾಧ್ಯವಲ್ಲದ, ವಿನೈ - ಪಾಪಗಳ, **ಅನೈತ್ತುಮ್** - ಸಮಸ್ತವನ್ನು, ತೀರ್‌ಕುಮ್ ಕೋಯಿಲ್-ಹೋಗಲಾಡಿಸುವ ದೇವಾಲಯವು; ತಿರುವರಙ್ಗಮೆನ - ಶ್ರೀರಂಗವೆನ್ನುವ, ತಿಗಳುಮ್ - ಪ್ರಕಾಶಿಸುತ್ತಿರುವ, **ಕೋಯಿಲ್ ತಾನೇ** - ದೇವಾಲಯವಷ್ಟೇ.

ತಾತ್ಪರ್ಯ:—ಶ್ರೀರಂಗಕ್ಷೇತ್ರ ಮಾಹಾತ್ಮ್ಯೆಯನ್ನು ಪ್ರಥಮತಃ ಶ್ಲಾಘಿಸಲು ಕಾರಣವೇನೆಂದ ಪ್ರಶ್ನಿಸಬಹುದು. (೧) **"ಆದ್ಯಂ ಸ್ವಯಮಿದಂ ವ್ಯಕ್ತಂ ವಿಮಾನಂ ರಙ್ಗಸಂಜ್ಞಕಂ"** ಎಂದ ಸ್ವಯಂವ್ಯಕ್ತ ಸ್ಥಳಗಳಲ್ಲಿ ಆದಿ ಎಂದು ಹೇಳಿರುವದರಿಂದಲೂ, (೨) ಅನು ಅನೇಕ ಆಳ್ವಾರ್ ಆಚಾರ್ಯರುಗಳು ಅಭಿಮಾನಿಸಿದ ದಿವ್ಯಸ್ಥಳವಾದುದರಿಂದಲೂ, (೩) ನಮ್ಮ ಸಿದ್ಧಾಂತಸ್ಥಾಪಕರಾದ ಯತಿಪತ್ಯರಿಗೆ ಬಹು ಪ್ರಿಯವಾದ ಸ್ಥಳವಾಗಿ, ಗದ್ಯದಲ್ಲಿ **"ಯಾವಚ್ಛರೀರಪಾತಮತ್ರೈವ ಶ್ರೀರಙ್ಗೇ ಸುಖಮಾಸ್ವ"** ಎಂದು ಹೇಳಿರುವದರಿಂದಲೂ, ದಿವ್ಯಕ್ಷೇತ್ರಗಳಲ್ಲಿ ಶ್ರೀರಂಗವಿಮಾನವು ತುಂಬಾ ಪ್ರಧಾನವೆಂದು ಭಾವಿಸಿ ಮೊದಲು ವರ್ಣಿಸುತ್ತಾರೆ.

ಆರಾದ ವರುಳ ಮುದಮ್ ಪೊದಿನ್ದ ಕೋಯಿಲ್ - ಇಲ್ಲಿ ಆರಾದ ಎಂಬುವದು ಅರುಳ್ ಎಂಬುವದಕ್ಕೆ ವಿಶೇಷಣವಾಗಿಯಾದರೂ, ಅಥವಾ **ಅಮುದಮ್** ಎಂಬುವದಕ್ಕೆ ವಿಶೇಷಣವಾಗಿಯಾದರೂ, ಭಾವಿಸಬಹುದು ಮೊದಲನೆಯ ಯೋಜನೆಯಾದರೆ, ಶ್ರೀರಂಗನಾಥನ ಕೃಪಾಪೀಯೂಷಪ್ರವಾಹವು, ಆರಾದ ಎಂದರೆ ಎಂದಿಗೂ ಬತ್ತಿಹೋಗದೇ ಇರುವಂಥಾದ್ದು ಎಂದೂ ಅರ್ಥ ಮಾಡಬಹುದು. ಆ ಕೃಪೆಯು ಅನೇಕ ಚೇತನರಿಗಾಗಿ ಉಪಯೋಗಿಸಲ್ಪಟ್ಟರೂ ಸ್ವಲ್ಪವಾಗಲಿ ಕಮ್ಮಿಯಾಗತಕ್ಕದ್ದಲ್ಲವು; ಅಥವಾ ಎರಡನೆಯ ಯೋಜನೆಯಲ್ಲಿ **ಅರುಳ ಮುದಮ್** ಎಂದು ಕೃಪಾಮೃತರೂಪನಾದ ಶ್ರೀರಂಗನಾಥನೆಂದು **ಹೇಳಿ** ಆತನಿಂದ ತುಂಬಿರುವ ಕೋಯಿಲೆಂಬ ಅರ್ಥ ಹೇಳಿದರೆ, ಆತನನ್ನು ಎಷ್ಟು ಸೇವಿಸಿದರಾಗಲಿ, ಅನುಭವಿಸಿದರಾಗಲಿ, ನೋಡಿದರಾಗಲಿ ತೃಪ್ತಿಯೇ ಆಗುವದಿಲ್ಲವೆಂದೂ, ದೃಷ್ಟಿಗೆ ಆಸೇಚನಕವೆಂದೂ ಹೇಳಬಹುದು. ಆಸೇಚನಕವೆಂದರೆ **"ತದಾಸೇಚ**

ನಕಂ ತೃಪ್ತೇರ್ನಾಸ್ತ್ಯನ್ತೋ ಯಸ್ಯದರ್ಶನಾತ್" ಯಾವ ಪ್ರಿಯವಸ್ತುವನ್ನು ಎಷ್ಟು ನೋಡಿದರೂ ತೃಪ್ತಿಯಾಗದೆ ನೋಡುತ್ತಲೇ ಇರಬೇಕೆಂಬ ಆಶೆಯುಂಟಾ ಗುತ್ತದೋ ಅದು. ಇಲ್ಲಿ **ಅಮುದನ್** ಎಂದು ಹೇಳಿದುದರ ಅಭಿಪ್ರಾಯವು, ಸಂಸಾರತಾಪತಪ್ತರಾದವರಿಗೆ ಪರಮಶಾಂತಿಯನ್ನೂ ನಿರ್ಭಯವನ್ನೂ ಕೊಡುವಂ ಥಾದ್ದು ಈ ರಂಗವಿಮಾನವು ಎಂಬದಾಗಿ ತೋರುತ್ತದೆ.

ಅಯೋಧ್ಧಿಮನ್ನರ್‌ಕ್ಕಳಿತ್ತ ಕೋಯಿಲ್ - ಈ ರಂಗವಿಮಾನವು ಇಕ್ಷ್ವಾಕು ವಂಶೀಯರಿಂದ ಆರಾಧಿಸಲ್ಪಟ್ಟದ್ದು. ಪಾದ್ಮಪುರಾಣದಲ್ಲಿ **"ಯಾವ ಚ್ಚಂದ್ರಶ್ಚ ಸೂರ್ಯಶ್ಚ ಯಾವತ್ತಿಷ್ಠತಿ ಮೇದಿನೀ। ತಾವದ್ರಮ ಸ್ವರಾಜ್ಯ ಸ್ಥಃ ಕಾಲೇ ಮಮಪದಂ ವ್ರಜ। ಇತ್ಯುಕ್ತ್ವಾ ಪ್ರದದೌ ತಸ್ಮೈ ಸ್ವವಿ ಶ್ಲೇಷಾ ಸಹಿಷ್ಣವೇ । ಶ್ರೀರಜ್ಗ ಶಾಯಿನಂ ಸ್ವಾರ್ಚ್ಯ ಮಿಕ್ಷ್ವಾಕು ಕುಲ ದೈವತಂ। ರಜ್ಗಂ ವಿಮಾನಮಾದಾಯ ಲಂಕಾಂ ಪ್ರಾಯಾದ್ವಿಭೀಷಣಃ"** ಎಂಬ ಶ್ರೀರಾಮಚಂದ್ರೋಕ್ತಿಯು ಇರುವದರಿಂದ, ಇದು ಅಯೋಧ್ಯೆಯ ರಾಜ ರಾದ ಇಕ್ಷ್ವಾಕು ಕುಲದವರಾರಾಧಿಸಿದ ಪರದೇವತೆಯು. ಈ ಶ್ಲೋಕಗಳಭಿ ಪ್ರಾಯವೇನೆಂದರೆ:—"ಓ ವಿಭೀಷಣನೇ, ಎಲ್ಲಿಯವರೆಗೂ ಸೂರ್ಯಚಂದ್ರರೂ ಭೂಮಿಯೂ ಇರುತ್ತವೆಯೋ, ಅದುವರೆಗೂ ನೀನು ರಾಜ್ಯದಲ್ಲಿರುವವನಾಗಿ ವಿಹರಿಸು, ಎಂದು ಹೇಳಿ ಶ್ರೀರಾಮನು ತನ್ನಿಂದ ಪೂಜಿಸಲ್ಪಟ್ಟ ಇಕ್ಷ್ವಾಕು ಕುಲ ದೇವತೆಯಾದ ಶ್ರೀರಂಗಶಾಯಿಯು ಇರುವ ರಂಗವಿಮಾನವನ್ನು ಆತನಿಗೆ ಕೊಟ್ಟನು. ಆ ವಿಮಾನವನ್ನು ತೆಗದುಕೊಂಡು ವಿಭೀಷಣನು ಲಂಕೆಯನ್ನು ಸೇರಿ ದನು" ಎಂದು ಹೇಳಲ್ಪಟ್ಟಿರುತ್ತದೆ. ಆದರೆ ಶ್ರೀಮದ್ರಾಮಾಯಣದಲ್ಲಿ ಶ್ರೀರಾಮ ಪಟ್ಟಾಭಿಷೇಕ ಸರ್ಗದಲ್ಲಿ **"ಲಬ್ಧ್ವಾ ಕುಲಧನಂ ರಾಜಾ ಲಂಕಾಂ ಪ್ರಾಯಾ ದ್ವಿಭೀಷಣಃ"** ಎಂದು ಇರುವದರಿಂದ, ಇಲ್ಲಿ ಯಾರ ಕುಲಧನವೆಂದು ಸರಿಯಾಗಿ ಹೇಳದಿರುವದರಿಂದ ಗೋವಿಂದ ರಾಜರೇ ಮೊದಲಾದವರು, ಇಕ್ಷ್ವಾಕು ಕುಲ ಧನವೆಂದೇ ಅರ್ಥಮಾಡಿ ಇಕ್ಷ್ವಾಕು ವಂಶೀಯರಿಂದ ಆರಾಧಿತನಾದ ಶ್ರೀರಂಗ ನಾಥನೆಂದು ಅರ್ಥ ಮಾಡಿರುತ್ತಾರೆ. ಶ್ರೀಮಹೇಶ ತೀರ್ಥಾದಿಗಳು **"ಕಿಂಚಾನ್ಯ ದ್ವಕ್ತುಮಿಚ್ಛಾಮಿ ರಾಕ್ಷಸೇಂದ್ರ ಮಹಾಬಲ। ಆರಾಧಯ ಜಗನ್ನಾಥ ಮಿಕ್ಷ್ವಾಕು ಕುಲದೈವತಂ॥"** ಎಂದು ಉತ್ತರಕಾಂಡದಲ್ಲಿರುವದರಿಂದ ಅವ ತಾರ ಸಮಾಪ್ತಿ ಕಾಲದಲ್ಲಿ ಈ **ಇಕ್ಷ್ವಾಕು ಕುಲದೈವತರನ್ನು** ಕೊಟ್ಟನೇ ವಿನಾ ಪಟ್ಟಾಭಿಷೇಕ ಸಮಯದಲ್ಲಿ ಇದನ್ನು ಕೊಡಲಿಲ್ಲವು; ಆದುದರಿಂದ, **ಲಬ್ಧ್ವಾ ಕುಲಧನಂ,** ಎಂದರೆ ವಿಭೀಷಣನ ಕುಲಧನವೆಂದಿಟ್ಟುಕೊಂಡು ಲಂಕಾರಾಜ್ಯ ವನ್ನು ಕೊಟ್ಟರು ಎಂದು ಹೇಳಬೇಕೆಂದು ತಿಳಿಸುತ್ತಾರೆ. ಈ ಅಭಿಪ್ರಾಯವು ಸರಿಯಾಗಿ ತೋರುವದಿಲ್ಲವು. ಏಕೆಂದರೆ, ಲಂಕಾ ರಾಜ್ಯವಿಷಯದಲ್ಲ ಸಮುದ್ರ

ತರಣಕ್ಕೆ ಮುಂಚೆಯೇ ಲಂಕಾ ರಾಜ್ಯಾಭಿಷೇಕಮಾಡಿ, ಅದು ಹೇಗಾದರೂ ನೆರವೇರಬೇಕೇ ಎಂದು ಕಾದಿದ್ದು, ರಾವಣವಧಾ ನಂತರ ಲಂಕಾ ರಾಜ್ಯದಲ್ಲಿ ಆತನನ್ನು ಸುಪ್ರತಿಷ್ಠಿತನಾಗಿರುವದಕ್ಕಾಗಿ ಪುನಃ ರಾಜ್ಯಾಭಿಷೇಕ ಮಾಡಿಬಿಟ್ಟ ನಂತರ, ಪುನಃ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲೂ ಅದನ್ನೇ ಕೊಟ್ಟನೆಂದರೆ, ಎಷ್ಟು ಸಲ ಒಂದೇ ಪದಾರ್ಥವನ್ನು ದಾನಮಾಡುವದು ಎಂಬಾಕ್ಷೇಪಕ್ಕೆ ಉತ್ತರವಿಲ್ಲದಾಗುತ್ತದೆ ಅದೂ ಅಲ್ಲದೆ ಪಟ್ಟಾಭಿಷೇಕ ಕಾಲದಲ್ಲಿ ವಿಭೀಷಣನಿಗೆ ಏನನ್ನೂ ಕೊಟ್ಟು ಸನ್ಮಾನಿಸಲಿಲ್ಲವೆಂದೂ ಆಗುತ್ತದೆ. ಉತ್ತರ ರಾಮಾಯಣದಲ್ಲಿ ಹೇಳಿರುವುದೇನೆಂದರೆ :—"**ಶಾಸಿತಸ್ತ್ವಂ ಸಖಿತ್ವೇನ ಕಾರ್ಯಂತೇ ಮಮ ಶಾಸನಂ। ಪ್ರಜಾಸ್ಸಂರಕ್ಷ ಧರ್ಮೇಣ ನೋತ್ತರಂ ವಕ್ತುಮರ್ಹಸಿ॥**" ಎಂದರೆ ನೀನು ನನ್ನಲ್ಲಿ ಹಿಂದೆ ಶರಣಾಗತಿ ಮಾಡಿ ಪರಮಪ್ರಪನ್ನನಾದುದರಿಂದ ನಿನ್ನನ್ನು ಪರಮಸಖನಾಗಿ ಭಾವಿಸುವೆನು, ಧರ್ಮಸಂಸ್ಥಾಪನೆಗಾಗಿ ನಾನು ಅವತರಿಸಿದವನಾದುದರಿಂದಲೂ ರಾಕ್ಷಸರಲ್ಲಿ ಧರ್ಮವು ಕಮ್ಮಿಯಾಗಿರುವದರಿಂದಲೂ, ನೀನು ಮಹಾಪ್ರಾಜ್ಞನಾಗಿ ಧರ್ಮಿಷ್ಟನಾದುದರಿಂದಲೂ, **ಪ್ರಜಾಸ್ಸಂರಕ್ಷ ಧರ್ಮೇಣ**, ಅಲ್ಲಿ ಪ್ರಜೆಗಳಾದ ರಾಕ್ಷಸರನ್ನು ಧರ್ಮದಿಂದ ಪರಿಪಾಲಿಸು, ನೀನು ನನ್ನನ್ನು ಬಿಟ್ಟಿರಲಾರೆ ಎಂಬುವದು ನನಗೆ ತಿಳಿಯುವದು. ಆದರೂ ನಾನು ಹೇಳಿರುವದನ್ನು ನನ್ನ ಆಜ್ಞೆಯೆಂದು ಭಾವಿಸು. ಇದಕ್ಕೆ ಬದಲು ಹೇಳಬೇಡವೆಂದು ಹೇಳಿ, ಅನಂತರ "**ಆರಾಧಯ ಜಗನ್ನಾಥ ಮಿಕ್ಷ್ವಾಕು ಕುಲದೈವತಂ। ಆರಾಧನೀಯ ಮನಿಶಂ ಸರ್ವೈರ್ದೇವೈ ಸ್ಸವಾಸವೈಃ॥**" ತಾವು ಕೊಟ್ಟ ಇಕ್ಷ್ವಾಕು ಕುಲಕ್ಕೆ ದೈವವಾದ, ಜಗತ್ತಿಗೆಲ್ಲಾ ನಾಥನಾದ, ಶ್ರೀರಂಗನಾಥನನ್ನು ಆರಾಧಿಸು, ಹಾಗೆ ಆರಾಧಿಸುವದರಿಂದ ನನ್ನೊಂದಿಗೆ ಇದ್ದು ನನ್ನನ್ನಾರಾಧಿಸಿದಂತೆ ಭಾವಿಸುವೆನೆಂಬಭಿಪ್ರಾಯವು. ಆ ಶ್ರೀರಂಗನಾಥನಾದರೋ **ಅನಿಶಂ** - ಯಾವಾಗಲೂ, ಸಮಸ್ತರಿಂದಲೂ ಇಂದ್ರನಿಂದೊಡಗೂಡಿದ ಸಮಸ್ತ ದೇವತೆಗಳಿಂದಲೂ ಆರಾಧಿಸಲು ಯೋಗ್ಯನಾದವನೆಂದು ಇಷ್ಟು ಮಾತ್ರ ಹೇಳಿರುವದರಿಂದ, ಇಲ್ಲಿಯೇ ಇದ್ದುಕೊಂಡು ಇಕ್ಷ್ವಾಕು ಕುಲದವರಿಗೆ ಸ್ವಾಮಿಯಾದ ಶ್ರೀರಂಗನಾಥನನ್ನು ಆರಾಧಿಸು ಎಂದು ಹೇಳಿದರೆ, ಆಗ ಕೊಟ್ಟರೆಂಬ ಮಹೇಶತೀರ್ಥರಭಿಪ್ರಾಯಕ್ಕೆ ಆಧಾರವಿಲ್ಲವು. ಪಾದ್ಮ ಪುರಾಣದಲ್ಲಿ ಹಾಗೆ ಹೇಳಿದೆಯಲ್ಲಾ ಎಂದರೆ ರಾಮಾಯಣಕ್ಕೆ ವಾಲ್ಮೀಕಿ ರಾಮಾಯಣವೇ ಮುಖ್ಯಾಧಾರವಾದುದರಿಂದ ಇತರ ರಾಮಾಯಣಗಳ ಪ್ರಶಂಸೆ ಬೇಕಿಲ್ಲವು. ಆದರೆ ಪಾದ್ಮಪುರಾಣದಿಂದ ಗ್ರಹಿಸತಕ್ಕ ಅಂಶವೇನೆಂದರೆ, ಇಕ್ಷ್ವಾಕು ಕುಲನಾಥನು ಶ್ರೀರಂಗನಾಥನೆಂಬುವದು ತೋರಿಬರುತ್ತದೆ.

ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿ ಈ ಇಕ್ಷ್ವಾಕು ಕುಲನಾಥನು ಶ್ರೀರಂಗನಾಥನೆಂದು ಸಾಕ್ಷಾತ್ತಾಗಿ ಹೇಳಿಲ್ಲವು. ಅಲ್ಲಿ ಉಪಯೋಗಿಸಿರುವದು

ನಾರಾಯಣ, ಜಗನ್ನಾಥ ಶಬ್ದಗಳು. ಆರಾಧಯ ಜಗನ್ನಾಥಂ ಎಂದು ಶ್ರೀರಾಮನೇ ಹೇಳಿರುವದರಿಂದ, ಇಕ್ಷ್ವಾಕು ಕುಲನಾಥನು ಜಗನ್ನಾಥನೆಂದು ಹೇಳಲ್ಪಟ್ಟಿರುತ್ತದೆ. ಅಯೋಧ್ಯಾಕಾಂಡದಲ್ಲಿ ಶ್ರೀರಾಮನಿಗೆ ಯೌವರಾಜ್ಯಾಭಿಷೇಕವು ನಾಳೆ ನಡಿಯುತ್ತದೆಂದು ಕೇಳಿ **"ಪ್ರಾಣಾಯಾಮೇನ ಪುರುಷಂ ಧ್ಯಾಯಮಾನಾ ಜನಾರ್ದನಂ"** ಎಂದು ಕೌಸಲ್ಯೆಯು ಜನಾರ್ದನನನ್ನು ಆರಾಧಿಸಿದಳೆಂದು ಹೇಳಿರುತ್ತದೆ (ಅಯೋಧ್ಯಾ. ೪. ೩೩). ಹಾಗೆಯೇ ಇನ್ನೊಂದುಕಡೆಯಲ್ಲಿ ಕೌಸಲ್ಯೆಯು **"ಪ್ರಭಾತೇತ್ವಕರೋತ್ಪೂಜಾಂ ವಿಷ್ಣೋಃ ಪುತ್ರ ಹಿತೈಷಿಣೀ"** (ಅಯೋಧ್ಯಾ ೨೦. ೧೪) ಪುತ್ರನಿಗೆ ಸರ್ವಶ್ರೇಯಸ್ಸುಂಟಾಗಲೆಂದು ಕೌಸಲ್ಯೆಯು ವಿಷ್ಣುಪೂಜೆಯನ್ನು ಮಾಡಿದಳೆಂದು ಹೇಳಲ್ಪಟ್ಟಿರುತ್ತದೆ. ಸೀತಾರಾಮರಿಬ್ಬರೂ **"ಸಹಾಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್"** (ಅಯೋಧ್ಯಾ ೬. ೧) ಶ್ರೀಮನ್ನಾರಾಯಣನನ್ನು ಆರಾಧಿಸಿದರೆಂದು ಹೇಳಲ್ಪಟ್ಟಿರುತ್ತದೆ. ಈ ಜಗನ್ನಾಥ, ಜನಾರ್ದನ, ವಿಷ್ಣು, ನಾರಾಯಣ ಶಬ್ದಗಳೆಲ್ಲಾ ಶ್ರೀ ರಂಗನಾಥನನ್ನೇ ಬೋಧಿಸುತ್ತವೆಂದು ಅಂಗೀಕರಿಸುತ್ತಾರೆ. ಸ್ಥಳಪುರಾಣದಲ್ಲೂ ಶ್ರೀ ರಂಗನಾಥನು ವಿಭೀಷಣಾರಾಧ್ಯ ದೈವವೆಂದಿರುವದರಿಂದ ಇಕ್ಷ್ವಾಕು ಕುಲನಾಥನು ಶ್ರೀ ರಂಗನಾಥನೆಂದು ಹೇಳುವದರಲ್ಲಿ ಏನೊಂದೂ ವಿರೋಧವಿಲ್ಲವು. ಆದುದರಿಂದಲೇ **ಕೋರಾದ ತನಿವೀರರ್ ತೊಳುದ ಕೋಯಿಲ್** ಎಂದು ಹೇಳಲ್ಪಟ್ಟಿರುತ್ತದೆ. **"ಅಹೋ ವೀರ್ಯಂ ಅಹೋದಾಕ್ಷ್ಯಂ ವಿಷ್ಣೋರಿವ ಹಿದೃಶ್ಯತೇ"** (ರಾಮಾ. ಅರ. ೩೦. ೩೬) ಎಂಬ ಮಹರ್ಷಿಗಳ ಉಕ್ತಿಪ್ರಕಾರವೂ, **"ಸ್ಥಾತುಂ ನ ಶಕ್ತಾಸ್ಸಮರೇಷು ಸರ್ವೇ"** (ಸುಂ. ೫೧) ಎಂಬ ಮಹಾಪ್ರಾಜ್ಞನಾದ ಆಂಜನೇಯೋಕ್ತಿ ಪ್ರಕಾರವೂ, **ಅಂಗುಲ್ಯಗ್ರೇಣ ತಾನ್ ಹನ್ಯಾಂ ಇಚ್ಛನ್ ಹರಿಗಣೇಶ್ವರ** ಎಂಬ ಸೂಕ್ತಿ ಪ್ರಕಾರವೂ, ಶ್ರೀರಾಮನು ಕೋರಾದ ತನಿವೀರನು ; ಅಸದೃಶವಾದ ವೀರ್ಯಪರಾಕ್ರಮಗಳುಳ್ಳವನು. ಅಂತವನಾರಾಧಿಸಿದ ಕೋಯಿಲ್ ಎಂದು ಹೇಳಿರುತ್ತಾರೆ.

ತುಣೈಯಾನ ವೀಡಣರ್‌ಕ್ಕು ತುಣೈಯಾಂ ಕೋಯಿಲ್ – **"ವಿಭೀಷಣ ಮಿಮಂ ಸೌಮ್ಯ ಲಂಕಾಯಾ ಮಭಿಷೇಚಯ । ಅನುರಕ್ತಂ ಚ ಭಕ್ತಂ ಚ ಮಮ ಚೈವೋಪಕಾರಿಣಂ ॥"** (ರಾಮಾ. ಯುದ್ಧ ೧೧೫. ೧೦) ಮತ್ತು **"ತವಾ ಪಿ ಮೇ ಪ್ರಿಯಂ ಕಾರ್ಯಂ ತ್ವತ್ಪ್ರಭಾವಾಚ್ಚ ಮೇಜಿತಂ"** ಎಂದು ಶ್ರೀರಾಮನು ವಿಭೀಷಣನನ್ನು ಮಹೋಪಕಾರಿಯಾಗಿ ಭಾವಿಸಿ, ಓ ವಿಭೀಷಣನೇ, ನಿನ್ನ ಪ್ರಭಾವದಿಂದ ನನಗೆ ಜಯವು ಪ್ರಾಪ್ತವಾದುದರಿಂದ ನಾನೂ ಕೂಡ ನಿನಗೆ ಹಿತವಾದ ಕಾರ್ಯವನ್ನು ಮಾಡಬೇಕಾದ್ದು ನನಗೆ ಕರ್ತವ್ಯವಾದುದೆಂದು ಹೇಳಿರುವದರಿಂದ, **ತುಣೈಯಾನ ವೀಡಣರ್ಕ್ಕು** - ಪರಮ ಸ್ನೇಹಿತನಾದ

ವಿಭೀಷಣನೆಂಬ ಪ್ರಯೋಗವು. ಹೀಗೆ ಈ ಮಹೋಪಕಾರಕ್ಕೆ ಶ್ರೀರಾಮನು ಸರಿಯಾದ ಮಹೋಪಕಾರವನ್ನೇ ಎಣಿಸಿ ಸೀತಾದರ್ಶನಕ್ಕೆ ಮುಂದೆಯೇ ಲಂಕಾಭಿಷಿಕ್ತನನ್ನಾಗಿ ಮಾಡಿ, ಕೊನೆಗೆ ಆತನು ಮಾಡಿದ, **ನಿವೇದಯತ** ಎಂಬ ಶಬ್ದದಲ್ಲಿ ತೋರುವ ಆತ್ಮನಿವೇದನಕ್ಕನುಗುಣವಾಗಿ ಪರಮಪದವನ್ನು ಕೂಡ ಕೊಟ್ಟಿರುತ್ತಾನೆ. ಇದು ಶ್ರೀ ದೇಶಿಕರವರೇ ಅನುಗ್ರಹಿಸಿದ ಅಭಯ ಪ್ರದಾನ ಸಾರದಿಂದ ವ್ಯಕ್ತವು. ಆದುದರಿಂದಲೇ **ತುಣೈಯೂಂ ಕೋಯಿಲ್** ಎಂದು ಪ್ರಯೋಗಿಸಲ್ಪಟ್ಟಿತು. **ಆರಾಧಯ ಜಗನ್ನಾಥಂ** ಎಂಬ ವಾಕ್ಯದಿಂದಲೇ ಮುಂದೆ ಸರ್ವ ಶ್ರೇಯಸ್ಸಿನ ಪ್ರಾಪ್ತಿಯುಂಟೆಂಬುವದು ವ್ಯಕ್ತವು. ಈ ಪಾಶುರದಲ್ಲಿ ಶ್ರೀ ರಂಗನಾಥನು ನಿತ್ಯವಿಭೂತಿಯಿಂದ ಹೊರಟು ಬ್ರಹ್ಮದೇವನ ಲೋಕದಲ್ಲಿ ಸ್ವಯಂವ್ಯಕ್ತವಾಗಿ ಆವಿರ್ಭವಿಸಿ, ಅಲ್ಲಿಂದ ಅಯೋಧ್ಯೆಗೆ ತೆರಳಿ, ಇಕ್ಷ್ವಾಕು ರಾಜರಿಗೆ ಕುಲದೈವವಾಗಿ, ಅನಂತರ ಶ್ರೀ ರಘುಕುಲನಾಯಕನಾದ ಶ್ರೀರಾಮನಿಂದಾರಾಧಿಸಲ್ಪಟ್ಟು, ಬಳಿಕ ಶ್ರೀ ವಿಭೀಷಣಾಳ್ವಾನಲ್ಲಿ ಸೇರಿ, ಆತನಿಂದ ಶ್ರೀರಂಗದಲ್ಲಿ ನೆಲಗೊಂಡನೆಂಬ ಪುರಾಣೋಕ್ತಿಯು ಸೂಚಿಸಲ್ಪಟ್ಟಿರುತ್ತದೆ.

ಈ ಶ್ರೀರಂಗನಾಥನು ಶ್ರೀ ವಿಭೀಷಣಾಳ್ವಾರಿಗೆ ಶ್ರೀರಾಮನಿಂದ ಕೊಡಲ್ಪಟ್ಟನೆಂಬುವದೇನೋ ಈ ಪೂರ್ವಕಥೆಯಿಂದ ಸಿದ್ಧವು. ಆದರೆ ಆತನು ಈ ಕಾವೇರೀ ಮಧ್ಯದಲ್ಲಿ ನಿಂತು ಪಾಮರರಿಗೆಲ್ಲಾ ಸೇವೆಯನ್ನೀಯುತ್ತಾ ಇರಲು ಕಾರಣವೇನೆಂದು ಪ್ರಶ್ನಿಸಿದರೆ, ವಿಭೀಷಣನು ಲಂಕೆಗೆ ಹೋಗುವಾಗ, ಈ ಕಾವೇರೀ ಮಧ್ಯದೇಶದಲ್ಲಿ ಚೋಳದೇಶದ ನಿಚೆಳಾಪುರದ (ಇದಕ್ಕೆ ವರಯೂರೆಂದು ಈಗ ಹೆಸರು) ರಾಜನಾದ ಧರ್ಮವರ್ಮನೆಂಬುವನನ್ನು ಕಂಡು, ಆತನಿಂದ ಇಕ್ಷ್ವಾಕು ಕುಲ ರಾಜರಿಂದ ನಡಿಸಲ್ಪಡುತ್ತಿದ್ದ ರಥೋತ್ಸವವು ಇಲ್ಲಿಯೇ ನಡಿಸಿಕೊಡಬೇಕೆಂದು ಬಹಳವಾಗಿ ಪ್ರಾರ್ಥಿಸಲ್ಪಟ್ಟನು. ಈ ರಾಜನಿಗಾಗಿ, ಸರ್ವೇಶ್ವರನ ಆತನ ರಾಜ್ಯದಲ್ಲಿ ವಸಿಸುತ್ತೇನೆಂಬ ವಾಗ್ದಾನವಾಗಿತ್ತು. ಅದೂ ಅಲ್ಲದೆ, ಕಾವೇರೀ ನದಿಯು ಗಂಗೆಗಿಂತ ಅಧಿಕವೆಂದು ಹೇಳಿಸಿಕೊಳ್ಳಬೇಕೆಂದು ತಪಸ್ಸನ್ನು ಮಾಡಿದ್ದಳು. ಇವೆರಡು ಕಾರಣಗಳಿದ್ದುದರಿಂದ, ವಿಭೀಷಣನು ರಥೋತ್ಸವವನ್ನು ಅಲ್ಲೇ ನಡಿಸಲು ಒಪ್ಪಿಕೊಳ್ಳುವ ಹಾಗೆ ಸರ್ವೇಶ್ವರನು ಪ್ರೇರಿಸಿದನು. ರಥೋತ್ಸವಕ್ಕಾಗಿ ಅಲ್ಲೇ ಶ್ರೀರಂಗನಾಥನನ್ನು ೧೫ ದಿನಗಳು ಬಿಜಮಾಡಿಸಲು ಬಹು ಸಂಭ್ರಮದಿಂದ ರಾಜನು ಸರ್ವವೈಭವಗಳಿಂದ ಉತ್ಸವಗಳನ್ನು ನೆರವೇರಿಸಿದನು. ಅಲ್ಲಿಂದ ಶ್ರೀರಂಗನಾಥನನ್ನು ಲಂಕೆಗೆ ಕರೆದುಕೊಂಡು ಹೋಗಲು, ಸರ್ವವಿಧ ಪ್ರಯತ್ನ ಮಾಡಿದರೂ, "**ನಾಶಕದ್ರುಜ್ಞಮುದ್ಧರ್ತುಮಪಿ ಸರ್ವ ಪ್ರಯತ್ನತಃ**" ಎಂದು ಸ್ವಾಮಿಯನ್ನು ಎತ್ತಲು ಸಾಧ್ಯವಾಗಲಿಲ್ಲವೆಂದು ಶ್ರೀರಂಗ ಮಾಹಾತ್ಮ್ಯದಲ್ಲಿ ಹೇಳಲ್ಪಟ್ಟಿರುತ್ತದೆ. ಅನಂತರ ವಿಭೀಷಣನು ತುಂಬಾ ವಿಷಾದವನ್ನು ಹೊಂದಿ,

ನನಗೆ ಮೋಕ್ಷಸಾಧನ ಮೂರ್ತಿಯು ಇಲ್ಲದೆ ಮಿಕ್ಕಿದ್ದೆಲ್ಲವನ್ನೂ ದಯಪಾಲಿಸಬ ಹುದೇ ಎಂದು ಶ್ರೀ ರಂಗನಾಥನಲ್ಲಿ ಅರಿಕೆ ಮಾಡಿಕೊಳ್ಳಲು, ಅದಕ್ಕೆ ಶ್ರೀ ರಂಗ ನಾಥನು "ತವಾಭಿಮುಖಮೇವಾತ್ರ ಶಯಿಷ್ಯೇಹಂ ವಿಭೀಷಣ" ನಿನಗೆ ಅಭಿಮುಖವಾಗಿ ಎಂದರೆ ದಕ್ಷಿಣಾಭಿಮುಖವಾಗಿ ಮಲಗಿರುವೆನು ಎಂದು ಹೇಳಿ, ಸಮಾಧಾನಗೊಳಿಸಿ, ಆತನು ಮಾಡಿದ ಶರಣಾಗತಿಯನ್ನನುಸಂಧಾನ ಮಾಡುತ್ತಾ, ಇತರ ಕರ್ಮಗಳನ್ನೆಲ್ಲಾ ಪರಿತ್ಯಾಗ ಮಾಡಿ, ಆಜ್ಞಾನುಜ್ಞಾ ಕೈಂಕರ್ಯಗಳ ಫಲಸಂಗ ವನ್ನೂ ತ್ಯಜಿಸಿದರೆ ಮುಕ್ತಿಯುಂಟಾಗುವದೆಂದು ಹೇಳಲು, ಶ್ರೀ ರಂಗನಾಥನ ಆಜ್ಞೆಯನ್ನು ಹೊಂದಿ ಲಂಕೆಗೆ ತೆರಳಿದನೆಂಬ ಪುರಾಣೋಕ್ತಿಯಿರುತ್ತದೆ. ಆದುದ ರಿಂದ ಆತನು ಮಾಡಿರುವ ಶರಣಾಗತಿಯು ಸಾಂಗ ಶರಣಾಗತಿಯಾಗಿ ಸಮಸ್ತ ವಾದ ಐಹಿಕಗಳನ್ನೂ ತೊರೆದುದರಿಂದ ದೇಹಾವಸಾನವಾದ ಒಡನೆ ಪರಮಪದ ಪ್ರಾಪ್ತಿಯು ನಿಸ್ಸಂಶಯವು "ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ" ಎಂಬುವದು ಸಿದ್ಧವಾದುದರಿಂದ, ಶ್ರೀ ರಂಗನಾಥನನ್ನು ಸರಿಯಾಗಿ ಶ್ರದ್ಧಾನ್ವಿತ ನಾಗಿ ಆಶ್ರಯಿಸಿದರೆ ಯಾವ ವಿಧ ಪುರುಷಾರ್ಥಗಳಿಗೆ ತಾನೇ ಕೊರತೆಯುಂಟು. ಆ ಕಾರಣದಿಂದ **ಶೇರಾದ ಪಯನೆಲ್ಲಾಮ್ ಶೇರ್ ಕ್ಕುಂ ಕೋಯಿಲ್** ಎಂದು ಹೇಳುತ್ತಾರೆ. ಪುರುಷಾರ್ಥಗಳಲ್ಲೆಲ್ಲಾ ತುಂಬಾ ದುಷ್ಕರವಾದುದು ದಿವ್ಯ ವೈಕುಂಠ ಪ್ರಾಪ್ತಿಯು. ಇದನ್ನೂ ಕೂಡ ತನ್ನ ಸೌಲಭ್ಯ ಸೌಶೀಲ್ಯಾದಿ ಗುಣ ಗಳಿಂದ ಪ್ರಪನ್ನನಿಗೆ ಕೊಡಲು ಕಂಕಣಬದ್ಧನಾಗಿರುವಾಗ, ಇನ್ನು ಯಾವ ಪುರು ಷಾರ್ಥಗಳನ್ನು ತಾನೇ ಕೊಡುವದಿಲ್ಲವು, ಆದುದರಿಂದ **ಪಯನೆಲ್ಲಾಮ್ ಶೇರ್ ಕುಮ್ ಕೋಯಿಲ್** ಎಂದು ಹೇಳಿರುತ್ತಾರೆ.

ಈ ಶ್ರೀರಂಗ ವಿಮಾನಕ್ಕೆ ಇಷ್ಟೆಲ್ಲಾ ಮಾಹಾತ್ಮ್ಯೆಯಲ್ಲದೆ, ಇನ್ನೊಂದು ವಿಶೇಷವಾದ ಪ್ರಾಧಾನ್ಯ ಉಂಟೆಂದೂ, ಇದರಿಂದ ಇತರ ಕ್ಷೇತ್ರಗಳಿಗಿಂತ ವಿಲಕ್ಷಣ ವಾದುದೆಂದೂ ತಿಳಿಸುತ್ತಾರೆ:—**ಶೆಲುಮಱೈಯಿನ್ ಮುದಲೆಳುತ್ತು ಚ್ಚೇರ್ನ್ದ ಕೋಯಿಲ್, ಅನಂತಾವೈ ವೇದಾಃ** ಎಂದು ಹೇಳಿರುವ ಹಾಗೆ ಸಮೃದ್ಧಗಳಾದ ವೇದಗಳ ಪ್ರಥಮಾಕ್ಷರವಾದ ಓಂ ಎಂಬ ಪ್ರಣವದ ಆಕಾರದಿಂದಲೂ ಅದರ ಅರ್ಥವನ್ನು ಪ್ರಕಾಶಪಡಿಸುವದರಿಂದಲೂ, ಅದರ ಸಂಬಂಧವುಳ್ಳದ್ದು. "**ಯದ್ವೇ ದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ**" ಎಂದು ಹೇಳಿ ರುವ ಹಾಗೆ ವೇದವನ್ನು ಪ್ರಾರಂಭಿಸುವಾಗಲೂ, ಮುಗಿಸುವಾಗಲೂ ಪ್ರಣವವನ್ನು ಹೇಳಬೇಕೆಂಬ ವಿಧಿಯುಂಟು. ಹಾಗೆಯೇ "**ಆದ್ಯಂತು ತ್ರ್ಯಕ್ಷರಂ ಬ್ರಹ್ಮ ತ್ರಯೀ ಯಸ್ಮಿನ್ ಪ್ರತಿಷ್ಠಿತಾ**" ಎಂದೂ ಹೇಳಲ್ಪಟ್ಟಿರುತ್ತದೆ ಈ ಪ್ರಣವವು ಮುಖ್ಯವಾಗಿ ನಾಲ್ಕು ಅಭಿಪ್ರಾಯಗಳನ್ನು ಪ್ರಕಾಶಗೊಳಿಸುತ್ತದೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದೆಯಷ್ಟೆ. ಅವುಗಳು ಯಾವುವೆಂದರೆ:—ಸರ್ವೇಶ್ವರನು (೧)

ಕಣ್ಣನಡಿಯಿಣೈ ಯೆಮಕ್ಕು ಕ್ಕಾಟ್ಟುವಶ್ ವೆರ್ಪ್ಪು, ಕ್ಕಡು ವಿನೈಯ

ಆದಿಕಾರಣನೆಂದೂ, (೨) ಸರ್ವರಕ್ಷಕನೆಂದೂ, (೩) ಸರ್ವಶೇಷಿಯೆಂದೂ, (೪) ಶ್ರಿಯಃಪತಿಯೆಂದೂ ಪ್ರಣವವು ಪ್ರಕಟಿಸುತ್ತದೆ. ಶ್ರೀರಂಗವಿಮಾನದಲ್ಲಿ ರಂಗೇಶ ನಿದ್ದುಕೊಂಡು ಹೊರಗೆ ಅಕಾರವು ಪ್ರಣವರೂಪವಾಪುದರಿಂದ ಆತನು ಈ ಧರ್ಮಗಳುಳ್ಳವನೆಂದು ಸ್ಪಷ್ಟವಾಗಿ ಪ್ರಕಾಶಗೊಳಿಸುತ್ತಿದೆ ಎಂಬ ಭಾವವು. "**ವಿಮಾನಂ ಪ್ರಣವಾಕಾರಂ ವೇದಶೃಙ್ಗಂ ಮಹಾದ್ಭುತಂ । ಶ್ರೀರಙ್ಗಶಾಯೀಭಗವಾನ್ ಪ್ರಣವಾರ್ಥಪ್ರಸಾದಕಃ** ॥" ಎಂಬ, ಮತ್ತು "**ಪ್ರಪದ್ಯೇ ಪ್ರಣವಾಕಾರಂ ಭಾಷ್ಯಂ ರಂಗವಿಮಾನಪರಂ**" ಎಂಬ ಉಕ್ತಿಗಳು ಈ ಮೇಲಿನ ಅಭಿಪ್ರಾಯಗಳನ್ನು ಸೂಚಿಸುತ್ತವೆ.

ಈ ದೇವಾಲಯವು ಇನ್ನೂ ಎಂಥಾದ್ದೆಂದರೆ **ತೀರಾದವಿನೆಯುನೈತ್ತುಮ್ ತೀರ್ಕ್ಕುಂ ಕೋಯಿಲ್** - ಆ ಶ್ರೀ ರಂಗನಾಥನ ಚರಣಸನ್ನಿಧಿಯಲ್ಲಿ ಸಕೃತ್ ಶರಣಾಗತಿಯನ್ನು ಅನುಷ್ಠಿಸಿದ ಪ್ರಪನ್ನನ ಸರ್ವ ಪಾಪಗಳನ್ನೆಲ್ಲಾ ಸುಲಭವಾಗಿ ಹೋಗಲಾಡಿಸುವಂಥಾದ್ದು. ಪಾಪಗಳೋ "**ಯದ್ಬ್ರಹ್ಮಕಲ್ಪ ನಿಯುತಾನುಭವೇ ಪ್ಯನಾಶ್ಯಂ ತತ್ಕಿಲ್ಬಿಷಂ ಸೃಜತಿ ಜಂತುರಿಹಕ್ಷಣಾರ್ಧೇ**" ಎಂದು ಹೇಳಿರುವ ಹಾಗೆ ಲೆಖ್ಖ ಮಾಡಲು ಕೂಡ ಕಷ್ಟವಾದವು. ಇಂತಹ ಪಾಪಗಳೆಲ್ಲಾ ಆತನ ಪಾದವನ್ನಾಶ್ರಯಿಸಿದರೆ "**ಏವಂ ಹಾಸ್ಯಸರ್ವೇ ಪಾಪ್ಮಾನಃ ಪ್ರದೂಯಂತೇ**" ಎಂದು ಹೇಳಿರುವ ಹಾಗೆ ಪಾಪಗಳೆಲ್ಲಾ ದಗ್ಧವಾಗಿಬಿಡುತ್ತವೆ.

ಇಷ್ಟೆಲ್ಲಾ ಮಾಹಾತ್ಮ್ಯೆಯುಳ್ಳದುದು **ತಿರುವರಙ್ಗಮೆನ ತ್ತಿಗಳುಮ್ ಕೋಯಿಲ್** - ಶ್ರೀರಂಗನಾಮದಿಂದ ಕಂಗೊಳಿಸುತ್ತಿರುವ ರಂಗವಿಮಾನವೆಂದು ವರ್ಣಿಸಿರುತ್ತಾರೆ. ಶ್ರೀರಂಗವು ತುಂಬಾ ಹೃದ್ಯವಾದುದರಿಂದ "**ರಂಗ ರಂಗಮಿತಿ ಬ್ರೂಯಾತ್**" ಎಂದು ಹೇಳಲ್ಪಟ್ಟಿರುತ್ತದೆ; ಮತ್ತು ಪ್ರತಿದಿನದ ಭಗವದಾರಾಧನ ಕಾಲದ ಶಾತ್ತುಮರೈಯಲ್ಲಿ "**ಶ್ರೀರಙ್ಗ ಶ್ರಿಯಮನುಪದ್ರವಾಮನುದಿನಂ ಸಂವರ್ಧಯ**" ಎಂದು ರಂಗವಿಮಾನಕ್ಕೆ ಮಂಗಳಾಶಾಸನವು ಸರ್ವ ಶ್ರೀವೈಷ್ಣವ ಮಂಡಲಿಯಿಂದಲೂ ನಡೆಯುತ್ತಲಿದೆ.

ಅವತಾರಿಕೆ:—ಶ್ರೀ ರಂಗನಾಥನಿಗೆ ರಾಮಾತ್ಮಕತ್ವವೂ, ಶ್ರೀ ಶ್ರೀನಿವಾಸನಿಗೆ ಕೃಷ್ಣಾತ್ಮಕತ್ವವೂ, ಶ್ರೀಮದ್ವರದರಾಜನಿಗೆ ಉಭಯಾತ್ಮಕತ್ವವೂ ಎಂಬ ಸಂಪ್ರದಾಯಾಭಿಪ್ರಾಯವಿರುವದರಿಂದ, ಶ್ರೀರಂಗನಾಥನನ್ನು ಸ್ತುತಿಸಿದ ನಂತರ, ಈ ಪಾಶುರ ಮೂಲಕ ಶ್ರೀ ವೇಂಕಟಾದ್ರಿನಾಥನನ್ನೂ, ಮುಂದಿನ ಪಾಶುರದ ಮೂಲಕ ಶ್ರೀ ಕರಿಶೈಲನಾಥನನ್ನೂ ಸ್ತುತಿಸುತ್ತಾರೆ:—

ರಿರು ವಿನೈಯುಮ್ ಕಡಿಯುಮ್ ವೆರ್ಪ್ಪು । ತಿಣ್ಣಮಿದು ವೀಡೆನ್ನ ತ್ತಿಗ ಳುಮ್ ವೆರ್ಪ್ಪು, ತ್ತೆಳಿನ್ದ ಪೆರುಮ್ ತೀರ್ಥಙ್ಗಳ್ ಶೇ(ರ)ರಿನ್ದ ವೆರ್ಪ್ಪು ॥ ಪುಣ್ಣಿಯತ್ತಿನ್ ಪುಕಲಿದೆನ್ನ ಪುಗಳುಮ್ ವೆರ್ಪ್ಪು, ಪೊನ್ನುಲಗಿಲ್ಭೋಗಮೆ ಲ್ಲಾಮ್ ಪುಣರ್ಕ್ಕುಮ್ ವೆರ್ಪ್ಪು । ವಿಣ್ಣವರು ಮಣ್ಣವರುಮ್ ವಿರುಮ್ಬು ಮ್ ವೆರ್ಪ್ಪು, ವೇಙ್ಗಡ ವೆರ್ಪ್ಪನ ವಿಳಙ್ಗುಮ್ ವೇದವೆರ್ಪ್ಪೇ ॥

ಅರ್ಥ :—**ಕಣ್ಣನ್** - ಕೃಷ್ಣ ರೂಪಿಯಾಗಿ ಅತ್ಯಂತ ಮಹಿಮೆಯುಳ್ಳ ಶ್ರೀನಿ ವಾಸನ, **ಅಡಿಯಿಣೈ** - ಚರಣದ್ವಂದ್ವವನ್ನು, **ಎಮಕ್ಕುಮ್** - ಅತ್ಯಲ್ಪರಾದ ನಮಗೆ (ಆತನೆಲ್ಲಿ ನಾವೆಲ್ಲಿ ಎಂಬ ಭಾವವು), **ಕಾಟ್ಟುಮ್** - ಪ್ರತ್ಯಕ್ಷವಾಗಿ ತೋರಿ ಸುವ, **ವೆರ್ಪ್ಪು** - ಶೈಲವು ; ಅಥವಾ, **ಕಣ್ಣನ್** - ಕೃಷ್ಣನಾದ ಶ್ರೀನಿವಾಸನು, **ಎಮಕ್ಕು** - ಅತ್ಯಂತ ನಿಕೃಷ್ಟರಾದ ನಮಗೆ, **ಅಡಿಯಿಣೈ** - ಅತ್ಯಂತ ಸೌಲಭ್ಯ ದಿಂದಲೂ ಕೃಪೆಯಿಂದಲೂ ತನ್ನ ಪಾದದ್ವಂದ್ವವೇ ಎಲ್ಲರಿಗೂ ಉಪಾಯವೂ ಮತ್ತು ಉಪೇಯವೂ ಎಂದು, ಅವುಗಳನ್ನು, **ಕಾಟ್ಟುಮ್** - ತನ್ನ ದಕ್ಷಿಣಕರ ದಿಂದ ಅಭಯ ಮುದ್ರೆಯಾಗಿ ತೋರಿಸುವ, **ವೆರ್ಪ್ಪು** - ಬೆಟ್ಟವು ; **ಕಡು ವಿನೈ ಯರ್** -- ಕ್ರೂರಪಾಪಗಳನ್ನುಳ್ಳವರ, **ಇರುವಿನೈಯುಮ್** - ಪುಣ್ಯಪಾಪರೂಪ ಎರಡು ವಿಧ ಪಾಪಗಳನ್ನೂ, **ಕಡಿಯುಮ್** - ಸಂಹರಿಸುವ, **ವೆರ್ಪ್ಪು**-ಪರ್ವತವು ; ಸಾರವಿವರಣೆ ವ್ಯಾಖ್ಯಾತೃವು, ಇರೈ - ಅಧಿಕವಾದ, ವಿನೈಯುಮ್ - ಪಾಪ ಗಳನ್ನು ಎಂದು ಅರ್ಥ ಬರೆದಿರುತ್ತಾರೆ. **ತಿಣ್ಣಮ್** - ಸತ್ಯವಾಗಿಯೂ, **ಇದು ವೀಡೆನ್ನ** - ಇದು ದಿವ್ಯ ವೈಕುಂಠವೋ ಎಂಬದಾಗಿ, **ತಿಗಳುಮ್ ವೆರ್ಪ್ಪು** - ಪ್ರಕಾಶಿಸುವ ಪರ್ವತವು ; ಇದು ಸತ್ಯವಾಗಿಯೂ ಭೂವೈಕುಂಠವೆಂಬಭಿಪ್ರಾ ಯವು; **ತೆಳಿನ್ದ** - ನಿರ್ಮಲವಾದ, **ಪೆರುಮ್ ತೀರ್ಥಙ್ಗಳ್** - ಉತ್ಕೃಷ್ಟವಾದ ಆಕಾಶಗಂಗೆ, ಪಾಪನಾಶನೀ, ಪಾಂಡವ ತೀರ್ಥಗಳು, **ಶೆರಿನ್ದ** - ಸೇರಿರುವ, **ವೆರ್ಪ್ಪು** - ಪರ್ವತವು ; **ಪುಣ್ಯಯತ್ತಿನ್ ಪುಗಲ್** - ಪರಮ ನಿಶ್ರೇಯಸ್ಸನ್ನು ಹೊಂದಲು, ಮಾರ್ಗವು, ಅಥವಾ ಸಮಸ್ತ ವಿಧ ಶ್ರೇಯಸ್ಸನ್ನೂ ಪಡೆಯಲುಪಾ ಯವು, **ಇದೆನ್ನ ಪುಗಳುಮ್ ವೆರ್ಪ್ಪು** - ಇದೇ ಎಂದು ಹೊಗಳುವ ಪರ್ವತವು ; **ಪೊನ್ನುಲಗಿಲ್** - ಹಿರಣ್ಮಯವಾದ ಪುರವೆಂದು ಹೇಳಿಸಿಕೊಳ್ಳುವ ಪರಮಪದದ, **ಭೋಗಮೆಲ್ಲಾಮ್** - ಪರಿಪೂರ್ಣಾನಂದಾನುಭವರೂಪ ಭೋಗವನ್ನೆಲ್ಲಾ, **ಪುಣರ್ಕ್ಕುಮ್ ವೆರ್ಪ್ಪು** - ಇಲ್ಲಿಯೇ ಉಂಟುಮಾಡುವ ಪರ್ವತವು ; **ವಿಣ್ಣವ ರುಮ್** - ದೇವತೆಗಳೂ, **ಮಣ್ಣವರುಮ್** - ಈ ಲೋಕದ ಮನುಷ್ಯರೂ ಸಹ, **ವಿರಮ್ಬುಮ್ ವೆರ್ಪ್ಪು** - ಆದರಿಸಿ ಸೇವಿಸತಕ್ಕ ಬೆಟ್ಟವು ; **ವೇಙ್ಗಡ ವೆರ್ಪ್ಪನ**-

ಶ್ರೀ ವೇಂಕಟಾದ್ರಿ ಎಂದು ಕೊಂಡಾಡುವ ಹಾಗೆ, ವಿಳಙ್ಗುಮ್ - ಪ್ರಕಾಶಿಸುತ್ತಿರುವ, ವೇದವೆರ್ಪ್ಪೇ - ಋಗ್ವೇದ ಪ್ರಸಿದ್ಧವಾದ ಪರ್ವತವು.

ತಾತ್ಪರ್ಯ:—ತಿರುಮಲೆಯ ಪ್ರಭಾವವು ಲೋಕವಿಖ್ಯಾತವಾದುದರಿಂದ ಅಲ್ಲಿ ವಾಸಮಾಡುವದರಿಂದುಂಟಾಗುವ ಪ್ರಯೋಜನಗಳನ್ನು ತಿಳಿಸುವವರಾಗಿ ವಾಸಯೋಗ್ಯ ದಿವ್ಯಸ್ಥಳಗಳಲ್ಲಿ ಎರಡನೆಯದೆಂದು ಕೊಂಡಾಡುತ್ತಾರೆ:—

ಕಣ್ಣ ಅಡಿಯಿಣೈ ಯೆಮಕ್ಕು ಕಾಟ್ಟುಮ್ ವೆರ್ಪ್ಪು - ಶ್ರೀ ಕೃಷ್ಣನೇ ಶ್ರೀನಿವಾಸ ರೂಪವನ್ನು ತಾಳಿರುವನೆಂಬಭಿಪ್ರಾಯವು. ಆದುದರಿಂದ **ಕಣ್ಣ** ಎಂಬ ಪ್ರಯೋಗವು. ಶ್ರೀ ಕೃಷ್ಣನ ಪಾದದ್ವಂದ್ವವನ್ನು **"ಮಗ್ನಾನಾಂ ಭವಿನಾಂ ಸಮುತ್ತಾರಾಯ"** ಸಂಸಾರ ಸಾಗರದಲ್ಲಿ ಮುಳುಗಿರುವ ನಮಗೆ ಪರಮೋತ್ತಾರಕವೆಂದು ಪ್ರತ್ಯಕ್ಷವಾಗಿ ತೋರಿಸುವ ಅರ್ಚ್ಯಾವತಾರಿಯಾದ ಶ್ರೀನಿವಾಸನನ್ನುಳ್ಳ ಪರ್ವತವೆಂದು ಅರ್ಥ ಮಾಡಬಹುದು. ಅಥವಾ ಶ್ರೀ ಕೃಷ್ಣರೂಪಿಯಾದ ಶ್ರೀನಿವಾಸನು ತನ್ನ ಭಕ್ತರಿಗೆ ಪರಮಹಿತವನ್ನುಪದೇಶಿಸುವನಾಗಿ ಭಯಪಡಬೇಡಿರಿ ಅಥವಾ ಶೋಕಿಸಬೇಡಿರಿ, ನೀವುಗಳು ನನ್ನ ಪಾದದ್ವಂದ್ವಗಳನ್ನೇ ಪರಮೋಪಾಯವೆಂದೂ, ಪರಮಪ್ರಾಪ್ಯವೆಂದೂ ಆಶ್ರಯಿಸಿ ಎಂದು ತನ್ನ ಕರಕಮಲದಿಂದ ತನ್ನ ಪಾದಗಳ ಕಡೆ ತೋರುವ ಹಾಗೆ ಅಭಯ ಮುದ್ರೆಯನ್ನು ಪ್ರದರ್ಶಿಸುವ ಶ್ರೀನಿವಾಸನನ್ನುಳ್ಳ ಪರ್ವತವೆಂದೂ ಅರ್ಥ ಮಾಡಬಹುದು.

ಕಡುವಿನೈಯರ್ ಇರುವಿನೈಯುಮ್ ಕಡಿಯುಮ್ ವೆರ್ಪ್ಪು - ಕ್ರೂರ ಪಾಪಗಳನ್ನು ಮಾಡಿದವರ ಎರಡುವಿಧಗಳಾದ ಪುಣ್ಯಪಾಪಗಳನ್ನು ನಾಶಮಾಡುವ ಪರ್ವತವು. ದಯಾಶತಕದಲ್ಲಿ ಶ್ರೀನಿವಾಸನ ದಯಾ ಮಾಹಾತ್ಮ್ಯೆಯನ್ನು ಕೊಂಡಾಡುವ ಸಂದರ್ಭದಲ್ಲಿ **"ವೃಷಗಿರಿ ಸವಿಧೇಷು ವ್ಯಾಜತೋ ವಾಸಭಾಜಾಂ । ದುರಿತಕಲುಷಿತಾನಾಂ ದೂಯಮಾನಾದಯೇ ತ್ವಮ್"** ॥ (೩೭) ಎಂದರೆ ಓ ಶ್ರೀನಿವಾಸದಯೆಯೇ! ವೃಷಗಿರಿಯ ಸಮೀಪ ಸ್ಥಳಗಳಲ್ಲಿ ದುಷ್ಕರ್ಮಗಳಿಂದ ದೋಷವಿಶಿಷ್ಟರಾಗಿ ದೇಹಯಾತ್ರೆ ಮೊದಲಾದ ವ್ಯಾಜಮೂಲಕವಾಗಿಯಾಗಲಿ ವಾಸಮಾಡುವವರಿಗೆ ನೀನು ಪಶ್ಚಾತ್ತಾಪದಿಂದ ಅವರ ಪಾಪಗಳನ್ನೆಲ್ಲಾ ಪರಿಹರಿಸುವವಳಾಗಿದ್ದೀ ಎಂದು ಈ ಗ್ರಂಥಕರ್ತರೇ ಹೇಳಿರುತ್ತಾರೆ. **ಪುಣ್ಯವೂ** ಸಹ ಪಾಪಕ್ಕೆ ಸಮವಾದುದೆಂದೂ ದಿವ್ಯ ವೈಕುಂಠಪ್ರಾಪ್ತಿಗೆ ಪ್ರತಿಬಂಧಕವೆಂದೂ ಅನೇಕ ಸ್ಥಳಗಳಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಏಕೆಂದರೆ ಶ್ರುತಿಯು **"ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ"** ಎಂದು ಹೇಳಿರುತ್ತದೆ. ಹಾಗೆ ವ್ಯಾಜಮಾತ್ರದಿಂದಲ್ಲದೆ ಆತನನ್ನೇ ಧ್ಯಾನಿಸಿದರೆ **"ಅವ್ಯಾಹ**

ತಾನಿ ಕೃಷ್ಣಸ್ಯ ಚಕ್ರಾದೀನ್ಯಾಯುಧಾನಿತವ। ರಕ್ಷನ್ತಿ ಸಕಲಾಪದ್ಭ್ಯೋ ಯೇನ ವಿಷ್ಣುರುಪಾಸಿತಃ ॥" ಎಂದು ವಿಷ್ಣುಧರ್ಮದಲ್ಲಿ ಹೇಳಿರುವ ಹಾಗೆ, ಈ ಚೇತನನಿಗೆ ಮುಖ್ಯವಾದ ಆಪತ್ತು ಸಂಸಾರವು, ಅದರಿಂದುಂಟಾಗುವ ಇತರ ಆಪತ್ತುಗಳು, ಇವುಗಳಿಂದೆಲ್ಲಾ ಶ್ರೀನಿವಾಸನ ದಿವ್ಯಾಯುಧಗಳು ರಕ್ಷಿಸುತ್ತವೆ. ವ್ಯಾಜಮಾತ್ರದಿಂದ ವಸಿಸಿದರೆ ಆತನಲ್ಲಿ ಭಕ್ತಿಯೂ ಕೂಡ ಕಾಲಕ್ರಮೇಣ ಪ್ರಾಪ್ತವಾಗಬಹುದು. ಶ್ರೀ ನಮ್ಮಾಳ್ವಾರ್ರವರು "ಶೆಡಿಯಾರ್ ವಿನೈಗಳ್ ತೀರ್ ಮರುನ್ದೇ ತಿರುವೇಙ್ಗಡತ್ತೆಂಬರುಮಾನೇ" (೬ ೧೦. ೭) ಶೆಡಿ ಎಂದರೆ ಪಾಪವು, ಆ ಪಾಪದಿಂದುಂಟಾಗುವ ದುಃಖಗಳನ್ನೆಲ್ಲಾ ನಿವರ್ತಿಸುವ ದಿವ್ಯೌಷಧಿಯು ಈ ವೇಂಕಟಾದ್ರಿಯಲ್ಲಿ ಬಿಜಮಾಡಿಸಿರುವ ಶ್ರೀನಿವಾಸನು ಎಂದು ಹೇಳಿರುತ್ತಾರೆ. ತಿಣ್ಣಮಿದು ವೀಡೆನ್ನ ತ್ತಿಗಳುಮ್ ಶೆರ್ಪ್ಪು - ಪರಮಪದದಲ್ಲಿ ಯಾವ ಯಾವ ಪ್ರಯೋಜನಗಳು ಲಭಿಸುವುವೋ ಅವುಗಳೆಲ್ಲಾ ಇಲ್ಲಿಯೇ ಉಂಟಾಗುತ್ತವೆಯಾದುದರಿಂದ ಇದೇ ಸತ್ಯವಾಗಿಯೂ ಭೂವೈಕುಂಠವೋ ಎನ್ನುವ ಹಾಗೆ ಈ ಪರ್ವತವು ಬೆಳಗುತ್ತಿದೆ ಎಂದು ಹೇಳುತ್ತಾರೆ. ಸರ್ವೇಶ್ವರನನ್ನು ಐಕಾಂತ್ಯದಿಂದ ಅನುಭವಿಸುವ ಪರಮಾನಂದವೂ, ಆತನಿಗೆ ಪ್ರೀತಿಯನ್ನುಂಟುಮಾಡುವ ಕೈಂಕರ್ಯಪ್ರಾಪ್ತಿಯೂ ಇಲ್ಲಿಯೇ ದೊರಕುವದರಿಂದ ಇದೂ ವೈಕುಂಠಸಮಾನವೇ ಎಂಬ ಭಾವವು. "ವೈಕುಂಠ ಮೇತತ್ಕರಪಲ್ಲವೇನ ಸಂದರ್ಶಯನ್ ಸರ್ವ ಸುರಾಸುರಾಣಾಂ। ಆಸ್ತೇಹಿ ಲಕ್ಷ್ಮ್ಯಾ ಸಹವಿಶ್ವಮೂರ್ತಿ ರಾದ್ಯಃ ಪುಮಾ ನಂಜನ ಶೈಲ ಶೃಂಗೇ ॥" "ಇದೇ ವೈಕುಂಠವೆಂದೇನಾದರೂ ಚಿಗುರಿಗೆ ಸಮಾನವಾದ ತಮ್ಮ ಕೈಯಿಂದ ಸಮಸ್ತ ದೇವತೆಗಳಿಗೂ ಅಸುರರಿಗೂ ಸಹ ತೋರಿಸುವ ಹಾಗೆ ಸೇವೆಯನ್ನೀಯುತ್ತಾ, ಸಮಸ್ತಕ್ಕೂ ಆದಿಯಾಗಿರುವ ಪರಮಪುರುಷನಾದ ಮತ್ತು ಲಕ್ಷ್ಮಿಯನ್ನು ವಕ್ಷಸ್ಥಳದಲ್ಲಿ ಉಳ್ಳ ಈ ವಿಶ್ವಮೂರ್ತಿಯಾದ ಶ್ರೀನಿವಾಸನು ಅಂಜನಾದ್ರಿಯಲ್ಲೇ ಬಿಜಮಾಡಿಸಿರುತ್ತಾನೆ" ಎಂದು ಹೇಳಿರುವ ಶ್ಲೋಕವು ಅನುಸಂಧೇಯವು. ಪರಮಪದದಲ್ಲಿ ಶ್ರಿಯಃಪತಿಯು ಹೇಗೆ ನಿತ್ಯಸೂರಿಗಳಿಂದ ಸೇವ್ಯನೋ ಹಾಗೆಯೇ ಇಲ್ಲಿಯೂ ಕೂಡ ಅವರುಗಳಿಂದ ಸೇವ್ಯನು ; ಆದುದರಿಂದ ಶ್ರೀ ನಮ್ಮಾಳ್ವಾರ್ರವರು "ದೆಯ್ವ ಕ್ಕೋನೇಮಾನೇ" ನಿತ್ಯಸೂರಿಗಳಿಗೆ ಸ್ವಾಮಿಯೇ "ಇಮೈಯೋರ್ ಅಧಿಪತಿಯೇ" ನಿತ್ಯಸೂರಿಗಳಿಗೆ ನಿರ್ವಾಹಕನೇ, "ಇಮೈಯೋರ್‌ಗಳ್ ಎನ್ನಾಳುಮ್ ನಿನ್ರು ಏತ್ತಿ" ನಿತ್ಯಸೂರಿಗಳು ಯಾವಾಗಲೂ ಸೇರಿದ್ದು ನಿನ್ನನ್ನು ಸ್ತೋತ್ರಮಾಡುತ್ತಾ, "ಅಮರರ್ ಮುನಿಗಣಙ್ಗಳ್ ವಿರುಮ್ಬುಮ್ ತಿರುವೇಙ್ಗಡತ್ತಾನೆ" ಇತ್ಯಾದಿ ಪ್ರಯೋಗಗಳನ್ನು ಶ್ರೀನಿವಾಸ ವಿಷಯವಾದ ಆರನೆಯ ಪತ್ತು ಹತ್ತನೆಯ ತಿರುವಾಯ್‌ಮೊಳಿಯಲ್ಲಿ ಮಾಡಿರು

ತ್ತಾರೆ. ಆದುದರಿಂದಲೇ ಮುಂದೆ, ಪೊನ್ನುಲಗಿಲ್ ಭೋಗಮೆಲ್ಲಾಮ್ ಪುಣ ರ್ಕುಮ್ ವೆರ್ಪೆಂದೂ, ವಿಣ್ಣವರುಮ್ ಮಣ್ಣವರುಮ್ ವಿರುಮ್ಬುಮ್ ವೆರ್ಪೆಂದೂ ವರ್ಣಿಸಿರುತ್ತಾರೆ.

ತೆಳಿನ್ದ ಪೆರುಮ್ ತೀರ್ಥಙ್ಗಳ್ ಶೆರಿನ್ದ ವೆರ್ಪು - ಈ ಪರ್ವತದಲ್ಲಿ ಶ್ರೀನಿವಾಸ ಸನ್ನಿಧಿಗೆ ಸಮೀಪದಲ್ಲಿ ಗುಪ್ತಗಾಮಿನಿಯಾದ ಆಕಾಶಗಂಗೆಯೂ, ವೇಗದಿಂದ ಪ್ರವಹಿಸುವ ಪಾಪನಾಶನೀ ಎಂಬ ಜಲಪಾತವೂ ಇವೆ. ಆಕಾಶಗಂಗೆ ಯಿಂದ ನಿತ್ಯವೂ ಸ್ವಾಮಿಯ ಅಭಿಷೇಕಕ್ಕಾಗಿ ರಜತಕುಂಭದಲ್ಲಿ ಸ್ವಚ್ಛಸ್ವಾದೂದ ಕವು ತರಲ್ಪಡುತ್ತದೆ. ಆ ಉದಕವು ಎಂಥಾದ್ದೆಂದರೆ **"ರಮಣೀಯಂ ಪ್ರಸ ನ್ನಾಂಬು ಸನ್ಮನುಷ್ಯ ಮನೋಯಥಾ"** ಎಂದು ಮಹರ್ಷಿಯು ಹೇಳಿರುವ ಹಾಗೆ, ಸತ್ಪುರುಷನ ಮನಸ್ಸಿನ ಹಾಗೆ ತುಂಬಾ ನಿರ್ಮಲವಾಗಿರುವಂಥಾದ್ದು. ಆದುದರಿಂದ **ತೆಳಿನ್ದ ಪೆರುಮ್ ತೀರ್ಥಙ್ಗಳ್** ಎಂಬ ಪ್ರಯೋಗವು.

ಪುಣ್ಣಿಯತ್ತಿ ಪುಗುಲಿದೆನ್ನಪ್ಪುಗಳುಮ್ ವೆರ್ಪು - ಸಮಸ್ತ ಲೌಕಿಕ ಶ್ರೇಯಸ್ಸುಗಳಿಗೂ ಸಾಧನಭೂತವೆಂದು ಹೊಗಳುವ ಪರ್ವತವು. ಅನೇಕ ಮಕ್ಕ ಳಿಲ್ಲದವರು, ಕಣ್ಣು ಕಾಣದವರು, ವ್ಯಾಧಿಪೀಡಿತರಾದವರು, ಇನ್ನೂ ಅನೇಕ ವಿಧ ಆರ್ತರೆಲ್ಲಾ ಶ್ರೀನಿವಾಸನನ್ನಾಶ್ರಯಿಸಿ, ತಮ್ಮ ಕೋರಿಕೆಗಳನ್ನು ಪಡೆದವರಾಗಿ ಕೃತಜ್ಞತಾಭಾವದಿಂದ ಬಹು ದೂರದಿಂದಲೂ ಬಂದು ಸ್ವಾಮಿಯನ್ನಾರಾಧಿಸಿ ಆತನಿಗೆ ಕೈಂಕರ್ಯವನ್ನು ಮಾಡಿ ಮನಸ್ಸಿನ ನೆಮ್ಮದಿಯನ್ನು ಹೊಂದಿ ತಮ್ಮತಮ್ಮ ಸ್ಥಳಗಳಿಗೆ ತೆರಳುತ್ತಾರೆಂಬುವದು ಸರ್ವರಿಗೂ ವಿದಿತವಾದ ವಿಷಯವಾದುದರಿಂದ ಸರ್ವ ಶ್ರೇಯಸ್ಸಾಧನೆಗೂ ಸಾಧನವೆಂದು ಉದ್ಘೋಷಿಸುವ ಪರ್ವತವೆಂದು ಹೇಳಿರು ತ್ತಾರೆ. ಪುಣ್ಯವೆಂದರೆ ಸರ್ವಶ್ರೇಯಸ್ಸಾಧಕವಾದ ಧರ್ಮವಾದುದರಿಂದ, ಅದು **"ಕೃಷ್ಣಂ ಧರ್ಮಂ ಸನಾತನಂ"** ಎಂದು ಹೇಳಲ್ಪಟ್ಟಿರುವದರಿಂದ, ಅಂತಹ ಧರ್ಮ ರೂಪಿಯಾದ ಶ್ರೀನಿವಾಸನೇ ಈ ಪರ್ವತದಲ್ಲಿ **"ಮಾಯಾವೀ ಪರಮಾನಂದಂ ಮುಕ್ತ್ವಾ ವೈಕುಂಠಮುತ್ತಮಮ್ । ಸ್ವಾಮಿ ಪುಷ್ಕರಣೀತೀರೇ ರಮಯಾ ಸಹಮೋದತೆ"** ಎಂದರೆ ಸರ್ವೇಶ್ವರನು ದಿವ್ಯ ವೈಕುಂಠವನ್ನು ಬಿಟ್ಟು (ಅಲ್ಲಿ ಇಲ್ಲ ಎಂಬಭಿಪ್ರಾಯವಲ್ಲವು) ಈ ಸ್ವಾಮಿ ಪುಷ್ಕರಣೀ ತೀರವನ್ನಾಶ್ರಯಿಸಿ ಲಕ್ಷ್ಮಿಯೊಂ ದಿಗೆವಿಹರಿಸುತ್ತಿರುವನೆಂದು ಹೇಳಿರುವ ಹಾಗೆ ವಸಿಸುತ್ತಾನೆಂದು ಹೇಳಲ್ಪಟ್ಟಿತು. ಆದುದರಿಂದ ಸರ್ವ ಶ್ರೇಯಸ್ಸಾಧನಭೂತವಾದುದು ಈ ಪರ್ವತವೆಂಬ ಭಾವವು.

ಈ ಪರ್ವತವು ಸಾಮಾನ್ಯವಾದುದಲ್ಲ. ಇದು ಋಗ್ವೇದದಲ್ಲಿ **"ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛ ಸದಾನ್ವೇ"** ಎಂದು ವೇದಪ್ರತಿಪಾದಿತ ಪರ್ವತ ವಾದುದರಿಂದ. **ವಿಳಙ್ಗುಮ್ ವೇದವೆರ್ಪೇ** ಎಂದು ಕೊಂಡಾಡಿರುತ್ತಾರೆ.

ಉತ್ತಮ ಮಮರ್ತ್ತಲ ಮನ್ನೈತ್ತದೋರೆಳಿಱ್ಱನು ವುಯರ್ತ್ತ ಕಣೈಯಾಲ್। ಅತ್ತಿರ ವರಕ್ಕ ನ್ಮುಡಿಪತ್ತು ನೊರುಕೊತ್ತೆನ ವುದಿರ್ತ್ತ (ವರುಳೋ) ತಿರಲೋ। ಮತ್ತುರು ಮಿಗುತ್ತ ತ್ತಯಿರ್ ನೊಯ್

ಇಂತಹ ವಿಶೇಷ ಮಾಹಾತ್ಮ್ಯೆಯುಳ್ಳ ತಿರುಮಲೆಯೂ ಪ್ರಪನ್ನನಿಗೆ ವಾಸ ಯೋಗ್ಯಸ್ಥಳವೆಂಬ ಭಾವವು.

ಅವತಾರಿಕೆ:—ಮುಂದೆ ಕಾಂಚೀಪುರವೂ ಕೂಡ ಭಗವದ್ಭಾಗವತರುಗ ಳಿಗೆ ತುಂಬಾ ಪ್ರಿಯವಾದ ಸ್ಥಳವಾದುದರಿಂದ ಅದೂ ಪ್ರಪನ್ನನಿಗೆ ವಾಸಯೋಗ್ಯ ವೆಂದು ತಿಳಿಸುತ್ತಾರೆ. ಇಲ್ಲಿರುವ ಅರ್ಚ್ಯಾವತಾರಿಯು ಶ್ರೀರಾಮರೂಪಿ ಎಂದೂ ಶ್ರೀ ಕೃಷ್ಣರೂಪಿ ಎಂದೂ ಅಭಿಪ್ರಾಯವಿರುವದರಿಂದ, ಪೂರ್ವಾರ್ಧದಿಂದ ಶ್ರೀ ರಾಮನಿಗೆ ಆವಾಸಭೂತವೆಂದೂ ಉತ್ತರಾರ್ಧದಿಂದ ಶ್ರೀಕೃಷ್ಣನಿಗೆ ಆವಾಸಭೂತ ವೆಂದೂ ಶ್ರೀಕಾಂಚೀ ನಗರದಲ್ಲಿರುವ ಹಸ್ತಿಗಿರಿಯನ್ನು ಕೊಂಡಾಡಿರುತ್ತಾರೆ.

ಅರ್ಥ:—**ಉತ್ತಮ** - ಶ್ರೇಷ್ಠವಾದ, **"ರಾಮ ರಾವಣಯೋರ್ಯುದ್ಧಂ ರಾಮ ರಾವಣಯೋರಿವ"** ರಾಮ ರಾವಣರ ಯುದ್ಧವು ಹೇಗಿತ್ತು ಎಂದರೆ ಅದಕ್ಕೆ ಸಮಾನವಾದುದಾಗಿ ಉಪಮಾನ ಹೇಳಲು ಸಾಧ್ಯವಿಲ್ಲದುದರಿಂದ, ರಾಮ ರಾವಣರ ಹಾಗೆಯೇ ಇತ್ತು ಎಂದು ಹೇಳಿರುವ ಹಾಗೆ, ಅಸದೃಶವಾದ ಎಂಬ ರ್ಥವು, **ಅಮರ್** - ಯುದ್ಧಮಾಡುವ, **ತಲಮ್** - ಸ್ಥಳದಲ್ಲಿ, **ಅಮೈತ್ತ**ದು - ಯೋಗ್ಯವಾದ ಅಥವಾ ಸಾಕಾದ ಎಂದರೆ ಶತ್ರುನಾಶಕ ಶಕ್ತಿಯುಳ್ಳ, **ಓರ್** - ಅದ್ವಿತೀಯವಾದ, **ಎಳಿಲ್** - ಔಜ್ವಲ್ಯವನ್ನು ಹೊಂದಿದ, **ತನು** - ಧನುಸ್ಸಿನಲ್ಲಿ, **ಉಯರ್ತ್ತ** - ಏರಿಸಲ್ಪಟ್ಟ, **ಕಣೈಯಾಲ್** - ಬಾಣದ ದೆಸೆಯಿಂದ, **ಅತ್ತಿರ ವರಕ್ಕ** - ಅಸ್ತ್ರಬಲ ಹೊಂದಿದ ರಾವಣನ, **"ದ್ವಿಧಾ ಭಜ್ಯೇಯ ಮಪ್ಯೇವಂ ನನಮೇಯಂ ಕಥಂಚನ"** "ಎರಡು ತುಂಡಾಗಿ ಕತ್ತರಿಸಿದರೂ ಕೂಡ ನಾನು ಯಾರಿಗೂ ತಗ್ಗಿ ನಮಸ್ಕಾರಮಾಡೆನು" ಎಂದು ಸ್ಥಿರಪ್ರತಿಜ್ಞೆ ಮಾಡಿದ ರಾವಣನ, **ಮುಡಿ ಪತ್ತುಮ್** - ಹತ್ತು ತಲೆಗಳನ್ನೂ, ಒರು **ಕೊತ್ತೆನ** - ಒಂದೇ ಗೊಂ ಚಲು ಎಂದು ಹೇಳುವ ಹಾಗೆ **ವುದಿರ್ತ್ತ** - ನೆಲಕ್ಕೆ ಉದುರಿಸಿದ, **ತಿರಲೋನ್**- ಸಾಮರ್ಥ್ಯ ಹೊಂದಿದ ಶ್ರೀ ರಾಮಚಂದ್ರನಾಗಿ, **ಅರಳೋ** - ಎಂಬ ಪಾಠವಾ **ದರೆ,** ಅಂತಹ ದುಷ್ಟನಿಗ್ರಹ ಮಾಡಿ ಲೋಕಕ್ಷೇಮವನ್ನುಂಟುಮಾಡಿದ ಪರಮ ಕೃಪಾಳುವಾದ ಶ್ರೀರಾಮನಾಗಿ ಎಂಬರ್ಥವು; ಮುಂದೆ ಕೃಷ್ಣಾವತಾರಿಯಾಗಿ ಭಾವಿಸಿ ಸ್ತುತಿಸುತ್ತಾರೆ:—**ಮತ್ತುರು** - ಕಡೆಗೋಲಿನಿಂದ ಬಲವಾಗಿ ಕಡೆಯಲ್ಪ

ತ್ತ ವೆಣ್ಣೆಯ್ ನೈತ್ತ್ತಉಣುಮತ್ತ ನಿಡಮಾ। ಮತ್ತಿಗಿರಿ ಪತ್ತರ್ ವಿನೈ ಶೊತ್ತರವರುಕ್ಕು ಮಣಿಯತ್ತಿಗಿರಿಯೇ ॥

ಟ್ಟದುದರಿಂದ, ಮಿಗತ್ತ ತಯಿರ್ - ಅಭಿವೃದ್ಧಿ ಹೊಂದಿದ ಮೊಸರು, ಮೊಸರು ತುಂಬಾ ಗಟ್ಟಿಯಾಗಿದ್ದುದರಿಂದ ಬಲದಿಂದ ಕಡೆಯಲ್ಪಟ್ಟದುದೆಂದು ಹೇಳಲ್ಪಟ್ಟಿತು, ಅಂತಹ ಮೊಸರನ್ನು ಕಡೆದರೆ ಅದು ವೃದ್ಧಿಯಾಗುತ್ತದೆಂಬ ತಾತ್ಪರ್ಯವು, ಅಂತಹ ಮೊಸರಿನಲ್ಲಿ, **ಶೊಯ್ತ್ತ** - ಉಂಟಾದ, **ವೆಣ್ಣೆಯ್** - ಬೆಣ್ಣೆಯು, **ನೈತ್ತ** - ಯಶೋದೆಯೂ ಮತ್ತು ಇತರ ಗೋಪಿಕಾ ಸ್ತ್ರೀಯರೂ ಇಟ್ಟಂಥಾದ್ದನ್ನು, **ಉಣುಮ್** - ಭುಜಿಸುವ, **ಅತ್ತ್ತ** - ಪರಮಾಪ್ತನಾದ ಶ್ರೀಕೃಷ್ಣನೂ ಆಗಿ, ಇಂತಹ ರಾಮ ಕೃಷ್ಣಾವತಾರಗಳನ್ನು ಮಾಡಿದ ಸರ್ವೇಶ್ವರನ, **ಇಡಮಾಯ್** - ವಾಸಸ್ಥಳವಾಗಿರುವ, **ಅತ್ತಿಗಿರಿ** – ಹಸ್ತಿಗಿರಿಯು ಕಾಂಚೀಪುರದಲ್ಲಿ ಶ್ರೀ ವರದನು ಬಿಜಮಾಡಿಸಿರುವ ಶ್ರೀ ಹಸ್ತಿಶೈಲವು, **ಪತ್ತರ** - ತನ್ನನ್ನಾಶ್ರಯಿಸಿದ ಭಕ್ತರ, ವಿನೈ - ಪಾಪಗಳನ್ನು, **ಶೊತ್ತರ** - ಅವರುಗಳೊಂದಿಗೆ ಸ್ವಲ್ಪವೂ ಸಂಬಂಧವಿಲ್ಲದ ಹಾಗೆ ಆಮೂಲಾಗ್ರವಾಗಿ, **ಅರುಕ್ಕುಮ್** - ನಾಶಮಾಡುತ್ತದೆ. ಹಸ್ತಿಗಿರಿ ಪರ್ವತವೇ ನಾಶಮಾಡುತ್ತದೆಯಾದುದರಿಂದ, **ಅತ್ತಿಗಿರಿ** – ಈ ಶ್ರೀ ವರದನು ತನ್ನ ಭಕ್ತರ ಶತ್ರುಗಳನ್ನೂ ವಿರೋಧಿಗಳಾದ ಪಾಪಗಳನ್ನೂ ಪರಿಹರಿಸುವದಕ್ಕಾಗಿ ಧರಿಸಿದ ದಿವ್ಯಾಯುಧರೂಪವಾದ ಚಕ್ರಾಯುಧವು, **ಅಣಿಯೇ** – ಇಲ್ಲಿ ಅಲಂಕಾರಪ್ರಾಯವಾದುದು ಮಾತ್ರವೇ, ಏಕೆಂದರೆ ಭಕ್ತರ ವಿರೋಧಿ ನಿಗ್ರಹವೆಲ್ಲಾ ಹಸ್ತಿಗಿರಿಯೇ ಮಾಡುವದರಿಂದ, ಸ್ವಾಮಿ ಚಕ್ರವು ಅಲಂಕಾರ ಮಾತ್ರವೇ ಎಂಬಭಿಪ್ರಾಯವು.

ತಾತ್ಪರ್ಯವು. ಶ್ರೀ ಕಾಂಚೀ ವರದನನ್ನು ಶ್ರೀರಾಮನೆಂದು ಭಾವಿಸಿ ರಾವಣ ಸಂಹಾರಕನಾಗಿ ಸ್ತುತಿಸುತ್ತಾರೆ. ಶ್ರೀರಾಮ ರಾವಣರ ಯುದ್ಧವು ಅದ್ಭುತವಾದುದಾಗಿ ಅಸದೃಶವಾದುದು, ಆದುದರಿಂದ **ಉತ್ತಮ ಅಮರ್** - ಎಂದು ಹೇಳುತ್ತಾರೆ. ಅವರುಗಳ ಯುದ್ಧವು "ಸುಘೋರಂರೋಮಹರ್ಷಣಂ" ಆದುದು. ಗಗನಂ ಗಗನಾಕಾರಂ ಸಾಗರಸ್ಸಾಗರೋಪಮಃ," ಗಗನ ಸಾಗರಗಳಿಗೆ ಉಪಮೆಯಾಗಿ ಯಾವುದೂ ಇಲ್ಲದೆ ಗಗನವು ಗಗನದ ಹಾಗೆ ಸಾಗರವು ಸಾಗರದ ಹಾಗೆ ಎಂದು ಹೇಗೆ ಹೇಳಬೇಕಾಗುತ್ತದೋ, ಹಾಗೆಯೇ ಇವರುಗಳ ಯುದ್ಧವು ಬೇರೆ ಉಪಮೆ ಇಲ್ಲದುದರಿಂದ ರಾಮ ರಾವಣರ ಯುದ್ಧದ ಹಾಗೆ ಎಂದೇ ಹೇಳಬೇಕಾಗಿದೆ. ಅಂತಹ ನಿರುಪಮವಾದ ಯುದ್ಧದಲ್ಲಿ ಧರಿಸಿದ

ಅದ್ವಿತೀಯವಾದ ತೇಜಸ್ಸುಳ್ಳ ಧನುಸ್ಸನ್ನು ಧರಿಸಿದನೆಂದು **ಅನ್ಯತ್ರದ ಓರ್ ಎಳಿಲ್‌ತನು** ಎಂದುಪಯೋಗಿಸಿದ್ದಾರೆ. ಇದು ಪೂರ್ವದಲ್ಲಿ ದೇವತೆಗಳಿಗಾಗಿ ವಿಷ್ಣುರುದ್ರರ ಪಾರಮ್ಯ ಪರೀಕ್ಷಾರ್ಥವಾಗಿ ವಿಶ್ವಕರ್ಮನಿಂದ ಮಾಡಲ್ಪಟ್ಟ ಎರಡು ಧನುಸ್ಸುಗಳಲ್ಲಿ ಒಂದು ಶಿವನ ಧನುಸ್ಸು ವಿಷ್ಣುವಿನ ಧನುಸ್ಸಿನಿಂದ ಸ್ತಂಭೀಭೂತವಾಗಿ ಮಾಡಲ್ಪಟ್ಟದುದರಿಂದ **ಜೃಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣು ಪರಾಕ್ರಮೈಃ। ಅಧಿಕಂ ಮೇನಿರೆ ವಿಷ್ಣುಂ ದೇವಾಸ್ಸರ್ಷಿಗಣಾಸ್ತದಾ॥** ವಿಷ್ಣುವೇ ಪರದೇವತೆಯೆಂದು ದೇವತೆಗಳೂ ಋಷಿಗಳೂ ನಿಷ್ಕರ್ಷಿಸಿರುವರು, ರುದ್ರನು ಆ ಧನುಸ್ಸನ್ನು ವಿದರ್ಭರಾಜನಾದ ದೇವರಾತನಿಗೆ ಕೊಟ್ಟನು. ವಿಷ್ಣುವು ತನ್ನ ಧನುಸ್ಸನ್ನು ಋಚೀಕನೆಂಬ ಋಷಿಯ ಆಶ್ರಮದಲ್ಲಿಟ್ಟನು. ಆ ರುದ್ರನ ಧನುಸ್ಸನ್ನು ಜನಕರಾಜನ ಸಭೆಯಲ್ಲಿ ಶ್ರೀರಾಮನು ವಿಷ್ಣ್ವವತಾರಿಯಾದುದರಿಂದ ಬಹು ಸುಲಭವಾಗಿ ಮುರಿದು ಸೀತಾ ವಿವಾಹವನ್ನು ಮಾಡಿಕೊಂಡನು. ಋಚೀಕನಲ್ಲಿದ್ದ ವೈಷ್ಣವ ಧನುಸ್ಸು, ಆತನ ಮಗ ಜಮದಗ್ನಿ ಮೂಲಕವಾಗಿ ಆತನ ಪುತ್ರನಾದ ಪರಶುರಾಮನಿಗೆ ಸೇರಿತು. ಶ್ರೀರಾಮನು ಶಿವ ಧನುಸ್ಸನ್ನು ಮುರಿದನೆಂದು ಕೇಳಿದ ಒಡನೆಯೇ, ಪರಶುರಾಮನು ಶ್ರೀರಾಮನೊಂದಿಗೆ ದ್ವಂದ್ವಯುದ್ಧಕ್ಕೆ ನಿಂತು, ಆ ವೈಷ್ಣವ ಧನುಸ್ಸನ್ನೂ ಬಾಣವನ್ನೂ ತೋರಿಸಿ, ಇದಕ್ಕೆ ಹೆದೆಯನ್ನು ಕಟ್ಟಿ ಬಾಣಪ್ರಯೋಗವನ್ನು ಮಾಡಿದರೆ ಆಗ ನೀನು ದ್ವಂದ್ವ ಯುದ್ಧಕ್ಕೆ ಅರ್ಹನೆಂದು ಭಾವಿಸುವೆನೆನ್ನಲು, ಒಡನೆ ಶ್ರೀರಾಮನು ಧನುಸ್ಸನ್ನು ಬಗ್ಗಿಸಿ, ಹೆದೆಯನ್ನು ಬಿಗಿದು ಬಾಣವನ್ನೇರಿಸಲು, ಪರಶುರಾಮನು ಇದನ್ನು ಕಂಡು ಆ ಧನುಸ್ಸನ್ನೂ ಬಾಣಗಳನ್ನೂ ಶ್ರೀರಾಮನಲ್ಲೇ ಬಿಟ್ಟು ಅವತಾರ ಸಮಾಪ್ತಿಗಾಗಿ ಮಹೇಂದ್ರಾದ್ರಿಗೆ ತೆರಳಿದನು. ಶ್ರೀರಾಮನು ಆ ಧನುಸ್ಸನ್ನು ವರುಣನಲ್ಲಿ ಕೊಟ್ಟಿದ್ದುದರಿಂದ ಅವು ಇಂದ್ರನ ಮೂಲಕ ಅಗಸ್ತ್ಯ ಋಷಿಯ ವಶಕ್ಕೆ ಬಂದವು. ಅದನ್ನು **"ಇದಂ ದಿವ್ಯಂ ಮಹಚ್ಚಾಪಂ ಹೇಮರತ್ನ ವಿಭೂಷಿತಂ। ವೈಷ್ಣವಂ ಪುರುಷವ್ಯಾಘ್ರ ನಿರ್ಮಿತಂ ವಿಶ್ವಕರ್ಮಣಾ॥"** ಎಂದು ಹೇಳಿ, ಮತ್ತು ಬ್ರಹ್ಮದತ್ತಶರೋತ್ತಮವನ್ನೂ ಕತ್ತಿಯನ್ನೂ ಅಗಸ್ತ್ಯ ಮಹಾ ಋಷಿಯು **"ಆಜಹಾರ ಶ್ರಿಯಂ ದೀಪ್ತಾಂ"** ಎಂದು ಹೇಳಿ ಶ್ರೀರಾಮನಿಗೆ ಸಮರ್ಪಿಸಿದರು. ಅಂತಹ ಪ್ರಖ್ಯಾತಿ ಹೊಂದಿದ ಧನುಸ್ಸಾದುದರಿಂದ, ಅದರಿಂದಲೇ ರಾವಣ ವಧೆಯನ್ನು ಮಾಡಿದುದರಿಂದಲೇ, **ಎಳಿಲ್‌ತನು**, ಮಹಾ ತೇಜಸ್ಸನ್ನು ಹೊಂದಿದ ಧನುಸ್ಸೆಂದು ಹೇಳಲ್ಪಟ್ಟಿತು ಇಂತಹ ಧನುಸ್ಸಿನಲ್ಲಿ ಮಾತಲಿಯಿಂದ ಪ್ರೇರಿತನಾಗಿ ಶ್ರೀರಾಮನು **"ಬ್ರಹ್ಮದತ್ತಂ ಮಹಾಬಾಣಂ ಅಮೋಘಂ ಯುಧಿವೀರ್ಯವಾನ್। ಬ್ರಹ್ಮಣಾ ನಿರ್ಮಿತಂ ಪೂರ್ವಂ ಇಂದ್ರಾರ್ಥ ಮಮಿತೌಜಸಾ"** ಎಂದು

ಹೇಳಿರುವ ಹಾಗೆ ಅಗಸ್ತ್ಯರಿಂದ ಪಡೆದ ಈ ಜ್ವಲಿಸುವ ಬಾಣದಿಂದ ಆ ರಾವಣ ವಧೆಯನ್ನು ನೆರವೇರಿಸಿದನು. ರಾವಣನೂ ಸಾಮಾನ್ಯನಲ್ಲವು, ಮಹಾ ಪರಾಕ್ರಮ ಶಾಲಿಯು, ಆತನಿಗೂ ಮಹಾ ಅಸ್ತ್ರ ಶಸ್ತ್ರ ಬಲವುಂಟೆಂದು "ಅತ್ತಿರವರರ್ಕ್ಕ" ಎಂಬ ವಿಶೇಷಣವನ್ನು ಕೊಟ್ಟಿರುತ್ತಾರೆ. ಅಷ್ಟಘಂಟೆಗಳುಳ್ಳ ಶಕ್ತಿಯನ್ನು ವಿಭೀಷಣನ ಮೇಲೆ ಪ್ರಯೋಗಿಸಿದಾಗ ವಿಭೀಷಣನಿಗೆ ಪ್ರಾಣಭಯ ಉಂಟಾಯಿತೆಂದು ಭಾವಿಸಿ ಲಕ್ಷ್ಮಣನು ಅಡ್ಡಲಾಗಿ ಬಂದುದರಿಂದ ಲಕ್ಷ್ಮಣನ ಬಾಣಗಳು ಆ ಶಕ್ತಿಯಮೇಲೆ ನಾಟದೆ, ಆ ಲಕ್ಷ್ಮಣನ ವಕ್ಷಸ್ಥಳವನ್ನು ಭೇದಿಸಿ ಮೂರ್ಛೆಯನ್ನುಂಟು ಮಾಡಿತು. ಅಂತಹ ಬಹು ಪರಾಕ್ರಮವುಳ್ಳ ರಾವಣನು. ಇಂತವನ ದಶ ಶಿರಸ್ಸುಗಳನ್ನು ಒಂದೇ ಸಲ, ಒಂದು ಮರದ ಗೊಂಚಲನ್ನು ಛೇದಿಸುವ ಹಾಗೆ ನೆಲಕ್ಕೆ ಬೀಳಿಸಿದ ಶ್ರೀರಾಮನು. ಇಂತಹ ಅಪ್ರತಿಮ ವೀರನಾದ ಧೀರೋದಾತ್ತನು ಬಿಜಮಾಡಿಸಿರುವ ಕಾಂಚೀಪುರವೆಂದು ವರ್ಣಿಸಿರುತ್ತಾರೆ.

ಹೀಗೆ ಶ್ರೀರಾಮನೆಂದು ಭಾವಿಸಿ ಆತನ ಅತಿಮಾನುಷ ಚೇಷ್ಟಿತಗಳನ್ನು ಕೊಂಡಾಡಿ ಮುಂದೆ ಕೃಷ್ಣನೆಂಬ ಭಾವನೆಯಿಂದ ಆತನ ದಿವ್ಯಲೀಲೆಗಳನ್ನು ಪ್ರಶಂಸಿಸುತ್ತಾರೆ. ಯಶೋದೆಯೂ ಮತ್ತು ಇತರ ಗೋಪಿಕಾ ಸ್ತ್ರೀಯರೂ ಘಟ್ಟಿಯಾಗಿ ಹೆಪ್ಪು ಹಾಕಿದ ಮೊಸರನ್ನು ಕಡೆದು ತೆಗೆದ ನವನೀತವನ್ನು ಶ್ರೀಕೃಷ್ಣನ ಭಯಕ್ಕಾಗಿಯೇ ಆತನಿಗೆ ಸಿಕ್ಕದ ಹಾಗೆ ನಿಲುವಿನ ಮೇಲೆ ಇಟ್ಟಿದ್ದರೂ, ಅದನ್ನೂ ಕೂಡ ಸ್ನೇಹಿತರೊಂದಿಗೆ ಮೆದ್ದವನು. ಈ ಸಂದರ್ಭದಲ್ಲಿ ಶ್ರೀ ಕೂರೇಶರವರ ಅತಿಮಾನುಷಸ್ತವದ ೩೮ನೆಯ ಶ್ಲೋಕವನುಸಂಧೇಯವು :—

ಸತ್ಯೇವ ಗವ್ಯನಿವಹೇ ನಿಜಧಾಮ್ನಿ ಭೂಮ್ನಾ ಪರ್ಯನ್ತ ಸದ್ಮಸು ಕಿಮರ್ಥ ಮಚೂಚುರಸ್ತ್ವಂ । ಮುಷ್ಣಂಶ್ಚ ಕಿಂ ವ್ಯಜಘಟೋ ಘಟಶೇಷಮಗ್ರೇ ಗೋಪೀಜನಸ್ಯ ಪರಿಹಾಸಪದಂ ಕಿಮಾಸೀಃ ॥ "ನಿನಗೆ ಸ್ವಕೀಯವಾದ ಯಶೋದೆಯ ಮನೆಯಲ್ಲೇ ಹಾಲು ಮೊಸರು ಬೆಣ್ಣೆ ಎಲ್ಲವೂ ಸಮೃದ್ಧಿಯಾಗಿದ್ದರೂ ನೆರೆಹೊರೆಯವರ ಮನೆಯಲ್ಲಿ ಇವುಗಳನ್ನೇಕೆ ಕಳವು ಮಾಡಿದೆ ? ಆಗಲಿ ನೀನು ಬಿಜಿಸಿದ್ದೇನೋ ಹೋಗಲಿ, ನೀನು ತಿಂದು ಮಿಕ್ಕಿದುದನ್ನು ಗಡಿಗೆಯೊಂದಿಗೆ ಅವರುಗಳ ಮುಂದೆಯೇ ಏಕೆ ಒಡದುಹಾಕಿದೆ? ಹಾಲು ಮೊಸರು ಬೆಣ್ಣೆ ಮುಂತಾದುದನ್ನು ಮೈಮೇಲೆಲ್ಲಾ ಸುರಿಸಿಕೊಂಡು ಗೋಪೀಜನರ ಪರಿಹಾಸಕ್ಕೆ ಏಕೆ ಗುರಿಯಾದೆ ?'' ಎಂದು ವರ್ಣಿಸಿರುತ್ತಾರೆ. ಹೀಗೆ ಬೆಣ್ಣೆಯನ್ನು ಯಶೋದೆಯ ಮತ್ತು ಇತರ ಗೋಪೀಜನರ ಮನೆಯಲ್ಲಿ ಸ್ವೀಕರಿಸಿದುದು, ಸರ್ವೇಶ್ವರನಿಗೆ ಆಶ್ರಿತರಲ್ಲಿರುವ ಪರಮ ಸೌಲಭ್ಯ ವಾತ್ಸಲ್ಯಾದಿಗಳನ್ನು ನಿದರ್ಶಿಸುತ್ತದೆ. ರಾಮಾವತಾರಿಯಾಗಿ ಶರಣಾಗತರ ರಕ್ಷಣವೂ, ಅವರುಗಳ ವಿರೋಧಿಗಳ ನಿರಸನವೂ, ಕೃಷ್ಣಾವತಾರಿಯಾಗಿ

ಆಶ್ರಿತರಲ್ಲಿ ವಿಶೇಷ ಪ್ರೇಮವೂ ಪ್ರದರ್ಶಿಸಲ್ಪಟ್ಟವು. ಎರಡು ಅವತಾರಗಳಲ್ಲೂ ತನಗೆ ಪ್ರಪನ್ನಜನ ರಕ್ಷಣವೇ ಮುಖ್ಯವೆಂದು ತನ್ನ ಸುಸಂಕಲ್ಪವನ್ನು **ಅಭಯಂ ಸರ್ವ ಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ** ಎಂದೂ "**ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ**" ಎಂದೂ ಅಮೋಘೋಕ್ತಿಗಳಿಂದ ಮಹಾನುಭಾವನು ಪ್ರಕಟಿಸಿರುತ್ತಾನೆ. ಹೀಗೆ ಪ್ರಕಟಿಸಿ ಮಹಾ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯ, ಕೃಪಾ ಪ್ರಭಾವಗಳಿಂದ ಗೃಧ್ರ, ವಾನರ, ವಾಯಸ, ರಾಕ್ಷಸಾದಿಗಳನ್ನೂ, ಗೋಪಿಕಾ ಸ್ತ್ರೀ, ಅಕ್ರೂರ, ಉದ್ಧವ ಮಾಲಾಕಾರಾದಿಗಳನ್ನೂ ಸಂರಕ್ಷಿಸಿದ ಮಹಾನುಭಾವನಾದುದರಿಂದ, **ಅತ್ತ್ರ್ಗ** ಪರಮಾಪ್ತನೆಂದು ಹೇಳಲ್ಪಟ್ಟಿರುತ್ತಾನೆ. **ರಾಮೋದ್ವಿರ್ನಾಭಿಭಾಷತೇ**, ಶ್ರೀರಾಮನು ಎರಡು ಮಾತನ್ನಾಡುವನಲ್ಲವು; ಸತ್ಯಸಂಕಲ್ಪನಾದುದರಿಂದ, **ದ್ಯೌಃಪತೇತ್ ಪೃಥಿವೀಶೀರ್ಯೇದ್ಧಿಮವಾರ್ನ್ ಶಕಲೀ ಭವೇತ್ । ಶುಷ್ಯೇತ್ತೋಯನಿಧಿಃ ಕೃಷ್ಣೇ ನಮೇಮೋಘಂ ವಚೋ ಭವೇತ್ ॥**" "ಓ ದ್ರೌಪದಿಯೇ, ಆಕಾಶವಾದರೂ ನೆಲಕ್ಕೆ ಉರುಳೀತು, ಪೃಥಿವೀ ಶೀಳಿಹೋದೀತು, ಹಿಮವತ್ಪರ್ವತವು ಚೂರುಚೂರಾದೀತು, ಸಮುದ್ರವು ಶೋಷಿಸಿಹೋದೀತು, ನನ್ನ (ಶ್ರೀ ಕೃಷ್ಣನ) ವಾಕ್ಯವೋ ಎಂದಿಗೂ ವ್ಯರ್ಥವಾಗಲಾರದು ಎಂದು ಹೇಳಿದವನು. ಆದುದರಿಂದ ಪ್ರಪನ್ನರಿಗೆ ಆಪ್ತತಮನು. ಹಾಗೆಯೇ ಇನ್ನೊಂದು ಕಡೆಯಲ್ಲೂ, "**ಅಪ್ಯಹಂ ಜೀವಿತಂಜಹ್ಯಾಂ ತ್ವಾಂವಾಸೀತೇ ಸಲಕ್ಷ್ಮಣಾಂ । ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥**" ಎಂದರೆ ಶರಣಾಗತನ ಕೋರಿಕೆಯನ್ನು ನಡೆಸುವನೆಂಬ ಸಂಕಲ್ಪವು ಸಿದ್ಧಿಸುವದಕ್ಕಾಗಿ, ನನ್ನ ಪ್ರಾಣವನ್ನಾದರೂ ತೊರೆಯುವೆನು, ಪರಮಪ್ರಿಯಳಾದ ನಿನ್ನನ್ನಾದರೂ ಬಿಟ್ಟಗಲುವೆನು, ಲಕ್ಷ್ಮಣನನ್ನೂ ಕೂಡ ತ್ಯಜಿಸುವೆನು, ಇನ್ನು ಆ ಶರಣಾಗತರು ಬ್ರಹ್ಮವಿತ್ತುಗಳಾದರೆ ಇನ್ನೂ ವಿಶೇಷವೇ, ಹೇಳತಕ್ಕದ್ದೇನಿದೆ ಎಂದು ಶ್ರೀರಾಮನು ಪ್ರಪನ್ನಜನರ ವಿಷಯದಲ್ಲಿ ತನ್ನ ಸಂಕಲ್ಪವನ್ನು ಸೀತೆಗೆ ತಿಳಿಸಿರುವದರಿಂದ, ಆತನಿಗಿಂತ ಆಪ್ತರು ಇಲ್ಲವಾದುದರಿಂದ **ಅತ್ತ್ರ್ಗ** ಎಂದು ಪ್ರಯೋಗಿಸಿರುತ್ತಾರೆ. ಇಂತಹ ವಿಭವಾವತಾರಿಗೆ **ಇಡಂ** - ವಾಸಸ್ಥಾನವು **ಈ** ಹಸ್ತಿಗಿರಿಯಾದುದರಿಂದ ಪ್ರಪನ್ನಜನವಾಸಯೋಗ್ಯವೆಂಬ ಭಾವವು. ಇಷ್ಟು ಮಾತ್ರವೇ ಅಲ್ಲವು. ಇಲ್ಲಿ ವಸಿಸುವದರಿಂದ ಪ್ರಪನ್ನನಿಗೆ ಬುದ್ಧಿಪೂರ್ವೋತ್ತರಾಘ ಪ್ರಾಪ್ತವಾದೀತೆಂಬ ಭಯ ಲೇಶವೂ ಇರುವದಿಲ್ಲವು ಏಕೆಂದರೆ **ಈ ಅತ್ತಿಗಿರಿ** - ಹಸ್ತಿಗಿರಿಯು, **ಪತ್ತರ್ ವಿನೈ ತೊತ್ತರವರುಕ್ಕುಮ್** - ಪ್ರಪನ್ನರ ಪಾಪಗಳನ್ನು ಆಮೂಲಾಗ್ರವಾಗಿ ಛೇದಿಸಿಬಿಡುತ್ತದೆ. ಆದುದರಿಂದ ಪ್ರಪನ್ನರ ವಿರೋಧಿವರ್ಗ ನಿವೃತ್ತಿಗೋಸ್ಕರ

ಸ್ವಾಮಿಯು ಕೈಯಲ್ಲಿ "ನಿಖಿಲದುಷ್ಕರ್ಮ ಕರ್ಶನ" ಎಂದು ಸುದರ್ಶನಾಷ್ಟಕದಲ್ಲಿ ಹೇಳಿರುವ ಹಾಗೆ, ಆಯುಧವಾಗಿ ಆಭರಣರೂಪದಲ್ಲಿ ಧರಿಸಿರುವ ಸುದರ್ಶನ ಚಕ್ರವು, ಬೇರೆ ಮಣಿಯು ಅಲಂಕಾರವೇ. ಭಕ್ತರ ಪಾಪನಿವರ್ತಕ ಕರ್ಮವನ್ನು ಹಸ್ತಿಗಿರಿಯೇ ನಡೆಸುವದರಿಂದ, ಚಕ್ರಾಪೇಕ್ಷೆಯಿಲ್ಲವೆಂಬ ಭಾವವು.

ಹೀಗೆ ಈ ಮೂರು ಪಾಶುರಗಳಿಂದ ಶ್ರೀರಂಗ, ತಿರುಮಲೆ, ಕಾಂಚೀಪುರಗಳ ಮಾಹಾತ್ಮ್ಯಗಳನ್ನು ವರ್ಣಿಸಿ ಇವುಗಳೇ ಪ್ರಪನ್ನನಿಗೆ ಪ್ರಧಾನವಾಸಯೋಗ್ಯ ಸ್ಥಳಗಳೆಂದುಪದೇಶಿಸಿರುತ್ತಾರೆ. ಹೀಗೆ ಮೂರು ಸ್ಥಳಗಳು ಮುಖ್ಯವೆಂದು ಹೇಳಿರುವದರಲ್ಲಿ ಇನ್ನೊಂದು ಸ್ವಾರಸ್ಯಾರ್ಥವು ತೋರಿಬರುತ್ತದೆ. ನಿತ್ಯಂತಚ್ಚರಣಾರವಿಂದ ಧ್ಯಾನಾಮೃತಾಸ್ವಾದಿಗಳಾದ ಪ್ರಪನ್ನರಿಗೆ ರಹಸ್ಯತ್ರಯವೇ ಪರಮಜೀವನವಾದುದರಿಂದ, ಈ ಮೂರು ಸ್ಥಳಗಳು ಈ ಮೂರು ರಹಸ್ಯಗಳ ಪ್ರತಿಪಾದಕಗಳೆಂದು ಈ ಮೂರು ಪಾಶುರಗಳಿಂದಲೂ ತೋರ್ಪಡಿಸಿರುತ್ತಾರೆ:—

(೧) ಆರಾಪವರುಳೆಮುದಮ್ ಎಂಬ ಪಾಶುರದಲ್ಲಿ, ಶೆಳುಮರೈಯಿಲ್ ನೊಢಲೆಳತ್ತು ಎಂಬುವದರಿಂದ ಮೂಲಮಂತ್ರದ ಪ್ರಣವಾರ್ಥವೂ, ತೀರಾದ ವಿನೈಯುನೈತ್ತುಮ್ ತೀರ್ಕ್ಕುಂ ಕೋಯಿಲ್ ಎಂಬುವದರಿಂದ ಸಖಂಡ ನಮಶ್ಶಬ್ದಾರ್ಥವೂ, ವೀಡಣರುಕ್ಕು ತುಣೈಯಾಂ ಕೋಯಿಲ್ ಎಂಬುವದರಿಂದ ಅಖಂಡ ನಮಶ್ಶಬ್ದಾರ್ಥವೂ, ಆರಾಡವರುಳ ಮುದಮ್ ಎಂಬುವದರಿಂದ ನಾರಾಯಣ ಶಬ್ದಾರ್ಥವೂ, ತೊಳುದ ಕೋಯಿಲ್ ಎಂಬುದರಿಂದ ವ್ಯಕ್ತ ಚತುರ್ಥ್ಯರ್ಥವೂ ತೋರಿಬರುತ್ತವೆ.

(೨) ತಿರುಮಲೆ ಪಾಶುರದಲ್ಲಿ ದ್ವಯಮಂತ್ರದ ಪೂರ್ವಖಂಡದರ್ಥವು "ಪುಣ್ಣಿಯತ್ತಿನ್ ಪುಗುಲಿಡೆನ್ನ ಪುಗಳುಮ್ ವೆರ್ಪ್ಪು" ಎಂಬುವದರಿಂದಲೂ, ಉತ್ತರ ಖಂಡಾರ್ಥವು "ಪೊನ್ನುಲಗಿಲ್ ಭೋಗಮೆಲ್ಲಾಮ್ ಪುಣರ್‌ಕುಮ್ ವೆರ್ಪ್ಪು" ಎಂಬುವದರಿಂದಲೂ ಪ್ರದರ್ಶಿಸಲ್ಪಟ್ಟವು.

(೩) ಹಸ್ತಿಗಿರಿ ಪಾಶುರದಲ್ಲಿ ಶ್ರೀರಾಮಾವತಾರಿಯಾಗಿ ಪ್ರಪನ್ನರಿಗೆ ಪ್ರಬಲ ವಿರೋಧಿಯಾದ ದಶಶಿರೋರೂಪ ದಶೇಂದ್ರಿಯಗಳಿಂದುಂಟಾದ ಅನರ್ಥಗಳನ್ನು ಹೋಗಲಾಡಿಸುವ ಕೃಪಾಳು ಎಂದು ಹೇಳಿದುದರಿಂದಲೂ ಪತ್ತರ ವಿನೈತೊತ್ತುರವರುಕ್ಕುಮ್ ಎಂದು ಹೇಳಿರುವದರಿಂದಲೂ, ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಂಬುವದರ ಅರ್ಥವೂ, ಪತ್ತರ ಎಂದು ಹೇಳಿರುವದರಿಂದ ಶರಣಂ ವ್ರಜ ಎಂಬುವದರ ಅರ್ಥವೂ ತೋರಿಬರುವದರಿಂದ, ಚರಮಶ್ಲೋಕಾಭಿಪ್ರಾಯವು ಉಪಪಾದಿತವಾಗಿರುತ್ತದೆ. ಚರಮಶ್ಲೋಕವೆನಿಸಿರುವ ಅರ್ಜುನ ಲೀಲಾ ಸಾರಥಿಯಾದ ಶ್ರೀಕೃಷ್ಣನ ಅಮೋಘೋಕ್ತಿಯು ಹಾಗೆಯೇ ದಂಡಕಾರಣ್ಯ ತಪೋ

ತೇನಾರ್ ಕಮಲ ತ್ತಿರುಮಗಳಾತನ್ರಿಕಳ್‌ನ್ದುರೈಯುಮ್ ।
ವಾನಾಡು ಗನ್ಪರ್ ನ್ಪೈಯತ್ತಿರುಪ್ಪಿಡಮ್ ವನ್ದರುಮ ॥

ಧನರ ಪರಮ ಸುಹೃತ್ತಾದ ಶ್ರೀರಾಮನೂ **"ಸಕೃದೇವ ಪ್ರಪನ್ನಾಯ ತವಾಸ್ಮೀತಿಚಯಾಚತೇ । ಅಭಯಂಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ ॥"** ಎಂಬ ಅಮೋಘೋಕ್ತಿಯನ್ನು ಹೇಳಿರುವದರಿಂದ ಇದು ಶ್ರೀಮದ್ರಾಮಾಯಣ ಚರಮಶ್ಲೋಕವೆಂದು ಹೇಳಿಸಿಕೊಳ್ಳುತ್ತದೆ. ಹೀಗೆ ರಾಮಾವತಾರಿಯಾಗಿಯೂ, ಕೃಷ್ಣಾವತಾರಿಯಾಗಿಯೂ ತನ್ನ ದೃಢಸಂಕಲ್ಪವನ್ನು ಪ್ರಕಟಿಸಿದುದರಿಂದ **ಅತ್ತ್ರ್**, ಪರಮಾಪ್ತವಾಕ್ಯವನ್ನುಪದೇಶಿಸಿದುದರಿಂದ **ಪರಮಾಪ್ತನು** ಎಂದು ಪ್ರಯೋಗಿಸಿರುತ್ತಾರೆ.

ಮೇಲಿನ ಮೂರು ಶ್ಲೋಕಗಳಿಂದಲೂ ಭಾಗವತೋತ್ತರ ಭಗವತ್ ಕ್ಷೇತ್ರಗಳಲ್ಲಿ ಪ್ರಧಾನವಾದ ಮೂರು ಸ್ಥಳಗಳು, ಪ್ರಪನ್ನನಿಗೆ ದೇಹಾವಸಾನದವರೆಗೂ ಇರಲು ಯೋಗ್ಯವಾದ ಸ್ಥಳಗಳೆಂದು ಹೇಳಲ್ಪಟ್ಟವು. ಆದರೆ ದೇಹಯಾತ್ರೆ ಮೊದಲಾದ ಅನುಪಪತ್ತಿಗಳಿಂದ ಅಂತಹ ಸ್ಥಳಗಳಲ್ಲಿ ವಾಸಮಾಡಲು ಸಾಧ್ಯವಿಲ್ಲದೆ ಹೋದರೆ, ಆಗ ಭಗವಂತನಲ್ಲಿ ನ್ಯಸ್ತಭರರಾಗಿಯೂ ಮಹಾಪ್ರಾಜ್ಞರಾಗಿಯೂ ಇರುವ ಮಹಾ ಭಾಗವತರು ವಸಿಸುವ ಸ್ಥಳವೇ ಸಕಲ ಪುಣ್ಯಸ್ಥಳಗಳೂ ಪುಣ್ಯತೀರ್ಥಗಳೆಂದು ಒಂದು ಪಾಶುರದ ಮೂಲಕ, ಈ ಅಧಿಕಾರದಲ್ಲಿ ಉಪಪಾದಿಸಿದ ಅರ್ಥವನ್ನೇ, ಸಂಗ್ರಹಿಸುತ್ತಾರೆ. ಅಂಥಾವನು ವಸಿಸುವ ದೇಶವೇ, **"ವಸಂತಿ ವೈಷ್ಣವಾ ಯತ್ರ ತತ್ರ ಸನ್ನಿಹಿತೋ ಹರಿಃ"** ಎಲ್ಲಿ ವೈಷ್ಣವರು ವಾಸ ಮಾಡುತ್ತಾರೋ ಅಲ್ಲಿಯೇ ಶ್ರೀಹರಿಯು ಸಿದ್ಧವಾಗಿರುವನು ಎಂದೂ, **"ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶಿನಂ । ಅನುವ್ರಜಾಮ್ಯಹ ನ್ನಿತ್ಯಂ ಪೂಯೇ ಯೇತ್ಯಂಘ್ರಿ ರೇಣುಭಿಃ"** ಯಾವುದರಪೇಕ್ಷೆಯೂ ಇಲ್ಲದೆ, ಬಾಹ್ಯೇಂದ್ರಿಯ ಅಂತರಿಂದ್ರಿಯ ನೈರ್ಮಲ್ಯ ಹೊಂದಿ, ಯಾರನ್ನೂ ದ್ವೇಷಿಸದೆ ಎಲ್ಲರನ್ನೂ ಸಮವಾಗಿ ನೋಡುವ ಮಹಾನುಭಾವನನ್ನು ಸದಾ ಅನುಸರಿಸಿ ನಡೆಯುವೆನು, ಆತನ ಪಾದರಜಸ್ಸಿನಿಂದ ಪವಿತ್ರತೆಯನ್ನು ಹೊಂದುವೆನೆಂದು ಹೇಳಿರುವ ಹಾಗೆ, ಸರ್ವವಿಧ ಪುಣ್ಯಕ್ಷೇತ್ರಗಳೂ ಸೇರಿರುವ ಸ್ಥಳವೆಂದು ಭಾವಿಸತಕ್ಕದ್ದೆಂದು ಹೇಳುತ್ತಾರೆ.

ಅರ್ಥ :—**ತೇನ್** - ಮಧುವಿನಿಂದ, **ಆರ್** – ಪೂರ್ಣವಾದ, **ಕಮಲ** - ಪದ್ಮಸ್ಥಾನೀಯಳಾದ, ತಾವರೇ ಪುಷ್ಪದಲ್ಲವತರಿಸಿದ, **ತಿರುಮಗಳ್** - **ನಾರೀಣಾಮುತ್ತಮಾ ವಧೂಃ** ಎಂದು ಹೇಳಿರುವ ಹಾಗೆ, ಶ್ರೀಸ್ತ್ರೀಯಾದ ಲಕ್ಷ್ಮಿಯ,

ಕ್ಕಾನಾರಿಮಯುಮುಮ್ ಗಙ್ಗೈಯುಮ್ ಕಾವಿರಿಯುಮ್ ಕಡಲುಮ್।
ನಾನಾ ನಗರುಮುಮ್ ನಾಕಮುಮ್ ಕೂಡಿಯ ನನ್ನಿಲಮೇ ॥ ೭೫ ॥

ನಾಥರ್ - ಪತಿಯಾದ ನಾರಾಯಣನು, **ತಿಗಳ್‌ನ್ದು** - ಪ್ರಕಾಶಿಸುತ್ತಿರುವನಾಗಿ, ಸ್ವಯಂಪ್ರಕಾಶನಾಗಿ, **ತಿಗಳ್‌ನ್ದು** ಎಂಬುವದನ್ನು **ವಾನಾಡು**ವಿಗೆ ವಿಶೇಷಣವೆಂದು ಭಾವಿಸಿ, ಸ್ವಯಂಪ್ರಕಾಶವಾಗಿರುವ ಎಂಬರ್ಥವನ್ನು ಹೇಳಬಹುದು **ಉರೈಯುಮ್** – ನಿತ್ಯವಾಸ ಮಾಡುವ, **ವಾನಾಡು** – ಪರಮಪದವನ್ನು, **ಉಗನ್ದವರ್** - ಪ್ರಯೋಜನಾಂತರಾಭಿಲಾಷೆಯಿಲ್ಲದೆ, ಅಲ್ಲಿ ಭಗವತ್ಕೈಂಕರ್ಯವನ್ನೇ ಪ್ರಾರ್ಥಿಸುವ ಮಹಾಭಾಗವತರಾದ ಪ್ರಪನ್ನರ, **ವೈಯ್ಯತ್ತು** - ಭೂಮಿಯಲ್ಲಿ, **ಇರುಪ್ಪಿಡಮ್** - ವಾಸಸ್ಥಾನವು, **ವನ್ದರುಮ** - ಬಲವಾದ ಧರ್ಮಕ್ಷೇತ್ರಗಳಾದ, ಎಂದರೆ ಶಾಸ್ತ್ರದ ವಿಧಿ ನಿಷೇಧ ವಾಕ್ಯಗಳಿಗನುಸಾರವಾಗಿ ಪ್ರವೃತ್ತಿನಿವೃತ್ತಿ ಧರ್ಮಗಳುಳ್ಳ ಎಂಬರ್ಥವು, ಇದು ಮುಂದೆ ಹೇಳುವ **ಕಾನಾರಿಮಯುಮುಮ್, ಗಙ್ಗೈಯುಮ್** ಎಂಬ ಎರಡಕ್ಕೂ ವಿಶೇಷಣವು. **ಕಾನಾರಿಮಯುಮುಮ್** – ಕಾನ್, ಆರ, ಯಿಮಯಮುಮ್ ಕಾನನದಿಂದ ಪೂರ್ಣವಾದ ಹಿಮವತ್ಪರ್ವತವು ಇದರಿಂದ ಬದರಿಕಾಶ್ರಮವೂ ; ಸಾರದೀಪಿಕಾ, ಸಾರಗಿವರಣೆ ಮೊದಲಾದ ಎಲ್ಲಾ ವ್ಯಾಖ್ಯಾತೃಗಳು **ವನ್ದರುಮ** ಎಂಬುದನ್ನು ಕಾನನಪೂರ್ಣವಾದ ಹಿಮವತ್ಪರ್ವತಕ್ಕೆ ಮಾತ್ರವೇ ವಿಶೇಷಣವಾಗಿ ಭಾವಿಸಿರುತ್ತಾರೆ; ಮುಂದೆ ಹೇಳಿರುವ ಪುಣ್ಯಸ್ಥಳಗಳೂ ಧರ್ಮಕ್ಷೇತ್ರಗಳಾದುದರಿಂದ, **ವನ್ದರುಮ ಗಙ್ಗೈಯುಮ್, ವನ್ದರುಮ ಕಾವಿರಿಯುಮ್** ಎಂದು ಅನ್ವಯಿಸಬಹುದು. **ಗಙ್ಗೈಯುಮ್** - ಗಂಗಾತೀರ ಪುಣ್ಯಸ್ಥಳಗಳಾದ ಹರಿದ್ವಾರ, ಪ್ರಯಾಗ, ಕಾಶಿ ಮೊದಲಾದ ಪುಣ್ಯತೀರ್ಥಗಳೂ, **ಕಾವಿರಿಯುಮ್** - ಕಾವೇರೀ ನದಿಯ ತೀರಕ್ಷೇತ್ರಗಳಾದ ಶ್ರೀರಂಗ, ಶ್ರೀರಂಗಪಟ್ಟಣಾದಿ ದಿವ್ಯದೇಶಗಳೂ ಪುಣ್ಯತೀರ್ಥಗಳೂ, **ಕಡಲುಮ್** - ಸಮುದ್ರತೀರದಲ್ಲಿರುವ ಪುಣ್ಯಕ್ಷೇತ್ರಗಳಾದ ದರ್ಭಶಯನ, ಜನಾರ್ದನ, ಸೇತು ಮೊದಲಾದವುಗಳೂ, **ನಾನಾನಗರುಮುಮ್** - ಅವಂತೀ, ಮಧುರಾ, ಮಾಯಾ, ಮೊದಲಾದ ಅನೇಕ ದಿವ್ಯ ಕ್ಷೇತ್ರಗಳೂ, **ನಾಕಮುಮ್** - ಪರಮಪದವೂ, **ಕೂಡಿಯ** - ಇವೆಲ್ಲಾ ಒಟ್ಟಿಗೆ ಸೇರಿರುವ, **ನನ್ನಿಲಮೇ** - ಪರಮೋತ್ಕೃಷ್ಟವಾದ ದಿವ್ಯಸ್ಥಳವೆಂದೇ ಭಾವಿಸತಕ್ಕದ್ದು.

ತಾತ್ಪರ್ಯ :—ಭಗವದಭಿಮತವಾಗಿ ಭಾಗವತ ಪ್ರಾಚುರ್ಯವುಳ್ಳ ಸ್ಥಳವು ಪ್ರಪನ್ನನಿಗೆ ವಾಸಯೋಗ್ಯವಾಗಿ ಲಭಿಸಿದರೆ ಅತ್ಯುತ್ತಮವೆಂದು ಹೇಳಲ್ಪಟ್ಟಿತು.

ಇವೆರಡೂ ಸೇರಿರುವ ಸ್ಥಳವು ಅನುಕೂಲಿಸದಿದ್ದರೆ, ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಂದ ಬೆಳಗುತ್ತಿರುವ ಒಬ್ಬ ಮಹಾಭಾಗವತನು ವಸಿಸುವ ಸ್ಥಳದಲ್ಲೇ ವಾಸ ಮಾಡುವದು ಯೋಗ್ಯವು. ಅಂತಹ ಭಾಗವತೋತ್ತಮನಿಂದ, "ದರ್ಶನಾದೇವ ಸಾಧವಃ" ಎಂದೂ, "ಅಘಂ ವಿಪಶ್ಚಿತೋಘ್ನಂತಿ ಮುಹೂರ್ತ ಸೇವಯಾ" ಎಂದೂ ಹೇಳಿರುವ ಹಾಗೆ, ಆ ಸ್ಥಳವು ತುಂಬಾ ಪವಿತ್ರವಾದುದು ಆಗುವದರಿಂದ, ಎಲ್ಲಾ ಧರ್ಮಕ್ಷೇತ್ರಗಳೂ ಪುಣ್ಯತೀರ್ಥಗಳೂ ಅಲ್ಲಿಯೇ ಸೇರಿವೆಯೆಂದು ಭಾವಿಸತಕ್ಕದ್ದು. ಸಮುದ್ರಸ್ನಾನ, ಗಂಗಾಸ್ನಾನ, ಕಾವೇರೀ ಸ್ನಾನ, ಮತ್ತು ನಾನಾ ನಗರಿಯಲ್ಲಿನ ಪುಣ್ಯಕ್ಷೇತ್ರಗಳ ವಾಸ, ಇವುಗಳಿಂದೆಲ್ಲಾ ಉಂಟಾಗುವ ಫಲವು ಅಂತಹ ಭಾಗವತೋತ್ತಮನಿರುವ ಸ್ಥಳದಲ್ಲೇ ಲಭಿಸುತ್ತದೆ ಎಂಬ ಭಾವವು.

ತೇನಾರ್ ಕಮಲ ತ್ತಿರುಮಗಳ್ ನಾಥ್ನ. ಮಕರಂದ ರಸಪರಿಪೂರ್ಣವಾದ ಕಮಲದಲ್ಲಿ ಅವತರಿಸಿದವಳು ಲಕ್ಷ್ಮಿಯು ಎಂದು ಹೇಳಿರುವದರಿಂದ ಆಕೆಯು ಮಾರ್ದವ ಲಾವಣ್ಯಗಳಿಂದ ಕೂಡಿದವಳೆಂದೂ ಹಾಗೆಯೇ ಅನುಗ್ರಹ ಮೂರ್ತಿ ಎಂದೂ, ಅಜ್ಞಾತನಿಗ್ರಹಳೆಂದೂ ಹೇಳಲ್ಪಟ್ಟಿತು. ತೇನಾರ್ ಎಂದು ಹೇಳಿರುವದರಿಂದ ಅವಳನ್ನಾಶ್ರಯಿಸಿದರೆ ಮನೋರಥ ಪೂರ್ಣವಾಗದೇ ಇರಲಾರದೆಂಬ ಭಾವವು. ಇಂತಹ ಪುರುಷಕಾರಭೂತಳಾದವಳಿಗೆ ನಾಥನಾದುದರಿಂದ, ಶ್ರೀಮನ್ನಾರಾಯಣನು ಶಾಸ್ತ್ರವಾಗಿ ಶಿಕ್ಷಿಸಬೇಕೆಂದಿದ್ದರೂ, ಲಕ್ಷ್ಮಿಯ ಮಾತಿಗೆ ಕಟ್ಟುಬಿದ್ದು, ಶಿಕ್ಷಿಸದೆ ರಕ್ಷಿಸುವನು. ಪ್ರಾಪ್ಯದೆಸೆಯಲ್ಲಿ ಪರಮಪದದಲ್ಲಿ ಲಕ್ಷ್ಮೀಯುಕ್ತನಾಗಿಯೇ ಯಾವಾಗಲೂ ಇರುವನೆಂಬುವದೂ ತಿರುಮಗಳ್ ನಾಥ್ನ ಎಂಬುವದರಿಂದ ತೋರಿಬರುತ್ತದೆ. **ತಿರುಮಗಳ್ ನಾಥ್ನ** ವಾಸಮಾಡುವ ಪರಮಪದವೆಂದು ಹೇಳಿಮದರಿಂದ ದ್ವಯದ ಉತ್ತರ ಖಂಡಾರ್ಥವೂ ಶ್ರೀಮಚ್ಛಬ್ದಾರ್ಥವೂ ಸಹ ಸೂಚಿಸಲ್ಪಟ್ಟವು. ಇಂತಹ ಪ್ರಾಪ್ಯದಲ್ಲಿ ಅಭಿಲಾಷೆಯುಳ್ಳ ಪರಮ ಭಾಗವತರು ವಸಿಸುವ ಪುಣ್ಯಸ್ಥಳವೇ ಭಗವತ್‌ಕ್ಷೇತ್ರಗಳೂ, ಪುಣ್ಯಕ್ಷೇತ್ರಗಳೂ, ದಿವ್ಯವೈಕುಂಠವೂ ಎಲ್ಲವೂ ಎಂಬ ಭಾವವು ಹಾಗೆಯೇ ಅಂತಹ ಭಾಗವತೋತ್ತಮನು ವಸಿಸುವ ಸ್ಥಳವನ್ನು ಅಭೀತಿಸ್ತವದಲ್ಲೂ "ತದಕ್ಷತತಪೋವನಂ ತವಚ ರಾಜಧಾನೀ ಸ್ಥಿರಾ ಸುಖಸ್ಯ ಸುಖಮಾಸ್ಪದಂ ಸುಚರಿತಸ್ಯ ದುರ್ಗಂ ಮಹತ್" ಅದೇ ಬದರಿಕಾಶ್ರಮವೇ ಮೊದಲಾದ ತಪೋವನವೆಂದೂ, ಸರ್ವೇಶ್ವರನಿಗೆ ರಾಜಧಾನಿಯಾದ ನಿತ್ಯವಿಭೂತಿಯೆಂದೂ, ಭಗವದ್ವಿಷಯಾನುಭವಕ್ಕೆ ಯೋಗ್ಯವಾದ ಸ್ಥಳವೆಂದೂ, ಭಾಗವತೋತ್ತಮ ಧರ್ಮದ ನಿರ್ಭೇದ್ಯವಾದ ದುರ್ಗಪ್ರದೇಶವೆಂದೂ ಹೇಳಿರುತ್ತಾರೆ. ಇಲ್ಲಿ **ತಿರುಮಗಳ್ ನಾಥ್ನ ತಿಗಳ್‌ನ್ನು ಉರೈಯುನ್ ನಾನಾಡು** ಎಂದು ಪ್ರಾಪ್ಯದೆಶೆಯನ್ನು ಸೂಚಿಸಿರುವದರಿಂದ,

ಸಾ ಕಾಶೀತಿ ನ ಚಾಕಶೀತಿ ಭುವಿ ಸಾ ಯೋಧ್ಯೇತಿ ನಾಧ್ಯಾಸ್ಯತೇ ।

ಅದಕ್ಕೆ ಪೂರ್ವಭಾವಿಯಾದ ವಿಷಯವನ್ನು ತಿಳಿಸುವ ನಿರ್ಯಾಣಾಧಿಕಾರವು ಮುಂದೆ ಹೇಳಲ್ಪಡುವದೆಂಬುವದು ಸೂಚಿಸಲ್ಪಟ್ಟಿತು. ಹೀಗೆ ಭಾಗವತಾಧಿಷ್ಠಿತ ಸ್ಥಳವು ಪರಮ ಮಾಹಾತ್ಮ್ಯಯುಳ್ಳದು ಎಂಬುವ ಸಂದರ್ಭದಲ್ಲಿ **"ಯತ್ರ ಯತ್ರ ಚ ಮದ್ಭಕ್ತಾಃ ಪ್ರಶಾನ್ತಾಸ್ಸಮದರ್ಶಿನಃ । ಸಾಧವಸ್ಸಮುದಾಚಾರಾಸ್ತೇ ಪೂಯನ್ತೇಽಪಿ ಕೀಕಟಾಃ ॥"** ಎಂಬ ಭಾಗವತ (೭. ೧೦. ೧೮) ಶ್ಲೋಕವು ಇಲ್ಲಿ ಅನುಸಂಧೇಯವು. ನರಹರಿಯು ಪ್ರಹ್ಲಾದನಿಗೆ ಹೇಳುತ್ತಾನೆ. ಎಲ್ಲೆಲ್ಲಿ ಬಾಹ್ಯೇಂದ್ರಿಯ ಅಂತರಿಂದ್ರಿಯಗಳನ್ನು ಜಯಿಸಿ, ಸಮಸ್ತ ಜಗತ್ತೂ ಭಗವದಾತ್ಮಕವಾದುದರಿಂದ ಸಮವಾಗಿ ನೋಡುತ್ತಾ, ಪರೋಪಕಾರಕರಾಗಿ ಆಚಾರ್ಯನಿಷ್ಠೆ ಜ್ಞಾನನಿಷ್ಠೆಗಳುಳ್ಳ ನನ್ನ ಭಕ್ತರು ವಸಿಸುತ್ತಾರೋ ಅವರೆಲ್ಲರೂ ಮ್ಲೇಚ್ಛದೇಶಗತರಾದರೂ ಹಾಗೆಯೇ ಅಲ್ಲಿ ಜನಿಸಿದರೂ ಪವಿತ್ರರೇ.

ಅವತಾರಿಕೆ :— ಮುಖ್ಯವಾಗಿ ಭಗವದ್ಭಾಗವತರಿಗೆ ಉಪಾದೇಯಸ್ಥಳವೇ ಕೃತಕೃತ್ಯನಾದ ಪ್ರಪನ್ನನಿಗೆ ದೇಹಾವಸಾನದವರೆಗೂ ವಾಸಯೋಗ್ಯಸ್ಥಳವೆಂದು ಹೇಳಿದರು. ಹಾಗೆ ಎರಡೂ ಲಭ್ಯವಾಗುವ ಸ್ಥಳದಲ್ಲಿರಲು ಅನುಕೂಲವಿಲ್ಲದಿದ್ದರೆ ಮಹಾ ಭಾಗವತೋತ್ತಮರಲ್ಲಿ ಒಬ್ಬನಾದರೂ ಇರುವ ಸ್ಥಳದಲ್ಲಿ ಆತನ ಪ್ರಸನ್ನತೆಯನ್ನು ಹೊಂದಿ ವಸಿಸಿದರೆ, ಸರ್ವಪುಣ್ಯಕ್ಷೇತ್ರ ಸರ್ವಪುಣ್ಯತೀರ್ಥಗಳಲ್ಲಿ ವಾಸ ಮಾಡಿದುದಕ್ಕೇನೂ ಕಮ್ಮಿಯಾಗುವದಿಲ್ಲವೆಂದುಪದೇಶಿಸಿದರು. ಈ ಎರಡನೇ ಅಭಿಪ್ರಾಯವನ್ನೇ ಸ್ಥಿರಪಡಿಸುವದಕ್ಕಾಗಿ, ಹಿಂದೆ **"ಪ್ರಾಯೋದೇಶಾ ಮುನಿಭಿರುದಿತಾಃ ಪ್ರಾಯಕೌಚಿತ್ಯವಂತಃ"** ಅಧಿಕಾರಾದಿ ಶ್ಲೋಕದಲ್ಲಿ ಅನ್ವಯರೀತಿಯಲ್ಲಿ ಹೇಳಿದುದನ್ನು, ಈಗ ವ್ಯತಿರೇಕ ರೀತ್ಯಾ ಹೇಳುವವರಾಗಿ, ಒಂದಾನೊಂದು ಕಾಲದಲ್ಲಿ ಭಗವದಧಿಷ್ಠಿತ ಪ್ರದೇಶವೆಂದು ಮಹಾಪ್ರಸಿದ್ಧಿಯನ್ನು ಭಾಗವತರಿಂದಲಾಗಲಿ ಋಷಿಗಳಿಂದಾಗಲಿ ಹೊಂದಿದ್ದರೂ, ಈಗ ಅಂತಹ ಭಾಗವತರುಗಳಿಗೆ ಅದು ಉಪಾದೇಯವಲ್ಲದೆ ಹೋದರೆ, ತಮಗೂ ಕೂಡ ಅಂತಹ ಪ್ರದೇಶವು ವಾಸಯೋಗ್ಯವಲ್ಲವೆಂದುಪದೇಶಿಸುತ್ತಾರೆ.

ಅರ್ಥತಾತ್ಪರ್ಯಗಳು :— **ವೈಕುಂಠಕಥಾ ಸುಧಾರಸಭುಜಾಂ**– ವೈಕುಂಠ–ಶ್ರೀಮನ್ನಾರಾಯಣನ, ಕಥಾ–ದಿವ್ಯಚೇಷ್ಟಿತಗಳ ಕಥಾರೂಪ, ಸುಧಾರಸಭುಜಾಂ-ಸುಧೆಯನ್ನು ಸೇವಿಸಿದ ಮಹನೀಯರಾದ ಮಹಾಭಾಗವತರುಗಳ, **ಚೇತಸೇ** - ಮನಸ್ಸಿಗೆ, **ಯಾ** - ಯಾವ ಪ್ರಸಿದ್ಧ ಸ್ಥಳವಾಗಲಿ **ನೋರೋಚೇತ** - ವಾಸ

ಸಾವಂತೀತಿ ನ ಕಲ್ಮಷಾ ದವತಿ ಸಾಕಾಂಚೀತಿ ನೋದಂಚ ತಿ । ಧತ್ತೇಸಾ ಮಧುರೇ ತಿ ನೋತ್ತ ಮಧುರಂ (೭೨೦) ಮಾನ್ಯಾ ಪಿ ನಾನ್ಯಾ ಪುರೀ । ಯಾ ವೈಕುಂಠ ಕಥಾ ಸುಧಾರಸ ಭುಜಾಂ ರೋಚೇತ ನೋ ಚೇತಸೇ ॥ ೪೩ ॥

ಯೋಗ್ಯವಾಗಿ ರುಚಿಸುವದಿಲ್ಲವೋ, **ಸಾ** - ಅಂತಹ ಸ್ಥಳವು, **ಕಾಶೀತಿ** - ಕೇವಲ ಪ್ರಸಿದ್ಧಿ ಹೊಂದಿದ ಗಂಗಾಸ್ನಾನಕ್ಕನುಕೂಲವಾದ ಕಾಶಿ ಎಂಬ ನಾಮಮಾತ್ರ ದಿಂದ, **ನಚಾಕಶೀತಿ** - ಪ್ರಕಾಶಿಸುವದಿಲ್ಲವು. **ಸಾ** - ಅಂತಹ ಸ್ಥಳವು, **ಭುವಿ**- ಭೂಮಿಯಲ್ಲಿ, **ಅಯೋಧ್ಯೇತಿ** - ಶ್ರೀರಾಮನ ಜನ್ಮಸ್ಥಳವೆಂಬುವದರಿಂದ ಪ್ರಸಿದ್ಧ ವಾಗಿ ಕೇವಲ ಅಯೋಧ್ಯೆ ಎಂಬ ಮಾತ್ರದಿಂದಲೇ, **ನಾಧ್ಯಾಸ್ಯತೇ** - ಪ್ರಪನ್ನ ರಿಂದ ವಸಿಸಲ್ಪಡುವದಿಲ್ಲವು, ಪಾಪಿಷ್ಠರಿಂದ ಜಯಿಸಲು ಸಾಧ್ಯವಿಲ್ಲವೆಂಬ ಹೆಸ ರನ್ನು ಹೊಂದಿದ್ದರೂ ಭಾಗವತರುಗಳಿಗೆ ಅದು ರುಚಿಸದಿದ್ದರೆ ಅದು ಪ್ರಪನ್ನ ರಿಗೂ ಗ್ರಾಹ್ಯವಲ್ಲವೆಂಬ ಭಾವವು; **ಸಾ** - ಅಂತಹ ಸ್ಥಳವು, **ಅವಂತೀತಿ** - ಒಂದಾನೊಂದು ಕಾಲದಲ್ಲಿ ಅವಂತೀ ಎಂದು ಪ್ರಸಿದ್ಧವಾದ ಹೆಸರನ್ನು ಹೊಂದಿ ದ್ದರೂ, ಆ ಕೇವಲ ನಾಮಮಾತ್ರದಿಂದಲೇ, **ನ ಕಲ್ಮಷಾದವತಿ** - ಪಾಪಗಳಿಂದ ರಕ್ಷಿಸಲಾರದು, **ಸಾ** - ಅಂತಹ ಸ್ಥಳವು, **ಕಾಂಚೀತಿ** - ಶ್ರೀ ವರದರಾಜರಿಂದ ಅಧಿ ಷ್ಠಿತವೆಂದು ಪ್ರಸಿದ್ಧಿಯನ್ನು ಹೊಂದಿದ ನಾಮಮಾತ್ರದಿಂದಲೇ, **ನೋದಂಚತಿ** - ಉತ್ಕೃಷ್ಟತೆಯನ್ನು ಹೊಂದುವದಿಲ್ಲವು. ಬರೀ ಭಗವದಧಿಷ್ಠಿತವಾದುದರಿಂದಲೇ ಅದಕ್ಕೆ ಉತ್ಕೃಷ್ಟತೆಯಿಲ್ಲವು; ಅದಕ್ಕೆ ಮಾಹಾತ್ಮ್ಯೆಯು ಗರುಡೋತ್ಸವಾದಿ ಕಾಲಗಳಲ್ಲಿಯೂ ಇತರ ಕಾಲಗಳಲ್ಲಿಯೂ ಸದಾ ಭಾಗವತಾಭಿಮತವುಳ್ಳದ್ದಾಗಿ ವೇದಘೋಷವೇನು, ದ್ರಾವಿಡ ವೇದಘೋಷವೇನು, ಇವುಗಳುಳ್ಳದ್ದಾಗಿರುವದರಿಂ ದಲೇ ಅದಕ್ಕೆ ಮಾಹಾತ್ಮ್ಯೆ ಎಂಬ ಭಾವವು; **ಸಾ** - ಅಂತಹ ಭಾಗವತಾಭಿ ಮಾನವಿಲ್ಲದ ಸ್ಥಳವು, **ಮಧುರೇತಿ** - ಶ್ರೀಕೃಷ್ಣ ಜನ್ಮಸ್ಥಳವಾಗಿ ಪ್ರಸಿದ್ಧಿಯನ್ನು ಹೊಂದಿದುದರಿಂದಲೇ ಕೇವಲ ಮಧುರೆ ಎಂಬ ಹೆಸರು ಮಾತ್ರದಿಂದಲೇ, **ಉತ್ತಮ ಧುರಂ** ಅಥವಾ **ಧುರಾಂ** - ದಿವ್ಯ ವೈಕುಂಠವನ್ನು ಹೊಂದಿಸುವ ಉತ್ತಮವಾದ ಭಾರವನ್ನು, ಅಥವಾ ದಿವ್ಯಕ್ಷೇತ್ರಗಳಲ್ಲಿ ಉತ್ತಮವೆಂಬ ಪ್ರಸಿದ್ಧಿ ಯನ್ನು, **ನಧತ್ತೇ** - ಧರಿಸಲಾರದು, ಹೊಂದಲಾರದು, **ಅನ್ಯಾಪುರೀ** - ಇವು ಗಳಲ್ಲಿ ಬಿಟ್ಟುಹೋದ ಮಾಯಾ ಎಂಬ ಪ್ರಸಿದ್ಧ ಪಟ್ಟಣವಾಗಲಿ, ಅಥವಾ ಇನ್ನ್ಯಾವ ಪ್ರಸಿದ್ಧ ಪಟ್ಟಣವಾಗಲಿ, **ನಮಾನ್ಯಾ** - ಆದರಣೀಯುವಲ್ಲವು, ಗ್ರಾಹ್ಯವಲ್ಲವು.

ಶ್ರೀಮುಷ್ಣಂ ವೇಙ್ಕಟಾದ್ರಿಂಚ ಸಾಲಗ್ರಾಮಂಚ ನೈಮಿಶಂ । ತೋತಾದ್ರಿಂ ಪುಷ್ಕರಂ ಚೈವ ನರನಾರಾಯಣಾಶ್ರಮಂ ॥ ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ । ಪುರೀ ದ್ವಾರವತೀ ಚೈವ ಸಪ್ತೈತಾ ಮುಕ್ತಿದಾಯಕಾಃ ॥ ಇವೇ ಮೊದಲಾದ ಕ್ಷೇತ್ರಗಳು ಮಹಾ ಪ್ರಸಿದ್ಧಿಯನ್ನು ಹೊಂದಿದವು ಒಂದು ಕಾಲದಲ್ಲಿ ಪ್ರಸಿದ್ಧಿಯನ್ನು ಏಕೆ ಹೊಂದಿದವು ಎಂದರೆ ಆಗಲೂ ಭಾಗವತಾಗ್ರೇಸರರಿಗೆ ಅಭಿಮತವಾದುದರಿಂದಲೇ ಪ್ರಾಶಸ್ತ್ಯವು ಎಂದು ಅಧಿಕಾರದ ಆದಿ ಶ್ಲೋಕದಲ್ಲಿ ಹೇಳಿದರು. ಈ ಶ್ಲೋಕದಲ್ಲಿ ಹಿಂದೆ ಎಷ್ಟು ಪ್ರಸಿದ್ಧಿಯನ್ನು ಕೆಲವು ಕ್ಷೇತ್ರಗಳು ಹೊಂದಿದ್ದರೂ, ಈಗ ಅವುಗಳು ಮಹಾಭಾಗವತ ಪರಿಗ್ರಹವಿಲ್ಲದುದಾದರೆ ಗ್ರಾಹ್ಯವಲ್ಲವೆಂದು ಹೇಳುತ್ತಾರೆ. ಕಾಶೀ, ಅಯೋಧ್ಯಾ, ಅವಂತೀ, ಕಾಂಚೀ, ಮಥುರಾ, ಮಾಯಾ ಎಂಬುವ ಕ್ಷೇತ್ರಗಳೇನೋ ಮಹಾ ಪ್ರಸಿದ್ಧವಾದವುಗಳೇ. ಅವುಗಳಲ್ಲಿ ಯಾವುದಾದರೂ ಭಾಗವತಾಭಿಮಾನವನ್ನು ಕಳಕೊಂಡವಾದರೆ ಆಗ ಪ್ರಪನ್ನನಿಗೆ ಅವು ವಾಸಯೋಗ್ಯವಾಗುವದಿಲ್ಲವು. ಒಂದು ನಗರದಲ್ಲಿ ಒಂದು ವಿಷ್ಣ್ವಾಲಯವಿರಬಹುದು, ಅದರಿಂದಲೇ ಆ ನಗರವು ಪ್ರಪನ್ನನಿಗೆ ವಾಸಯೋಗ್ಯವಾಗುವದಿಲ್ಲವು. ಪರಮ ಭಾಗವತೋತ್ತಮನು ಒಬ್ಬನಾದರೂ ಅಲ್ಲಿ ಇದ್ದು ಆತನ ಸಾನ್ನಿಧ್ಯವನ್ನು ಹೊಂದಿ ಆತನ ಪ್ರಸನ್ನತೆಯನ್ನು ಸಂಪಾದಿಸಲನುಕೂಲವಿದ್ದರೆ ಅಂತಹ ಸ್ಥಳದಲ್ಲಿ ವಸಿಸಬಹುದೆಂಬುವದು ಮುಖ್ಯ ತಾತ್ಪರ್ಯವು. ಅದೇನು ಪರಮ ಭಾಗವತಾಭಿಮತವಾದ ಪ್ರದೇಶವೇ ವಸಿಸಲು ಯೋಗ್ಯವಾದುದು ಎಂದರೆ ಅವರು ವೈಕುಂಠಕಥಾಸುಧರಸ ಭುಜರು, ಸರ್ವೇಶ್ವರನ ದಿವ್ಯಚೇಷ್ಟೆಗಳ ಕಥಾಮೃತವನ್ನು ಆಸ್ವಾದನ ಮಾಡಿದವರು; **ಕಥಾ ಸುಧಾರಸ** ವೆಂದು ಹೇಳಿದುದರಿಂದ **"ಕೋನಾಮ ತೃಪ್ಯೇದ್ರಸವಿತ್ಕಥಾಯಾಂ ಮಹತ್ತಮೈಕಾನ್ತ ಪರಾಯಣಸ್ಯ"** (ಭಾಗ. ೧. ೧೮. ೧೪) ಎಂಬ ಉಕ್ತಿಯಲ್ಲಿ ತೋರಿಬರುವ, ಪರಮೋತ್ಕೃಷ್ಟನಾಗಿ ಪ್ರಾಪ್ಯನಾಗಿಯೂ ಪ್ರಾಪಕನಾಗಿಯೂ ಆಧಾರಭೂತನಾಗಿಯೂ ಇರುವ ಸರ್ವೇಶ್ವರನ ದಿವ್ಯಕಥಾ ಶ್ರವಣದಲ್ಲಿ ಎಷ್ಟು ಕೇಳಿದರೂ ಅವರಿಗೆ ಅತೃಪ್ತಿಯುಂಟೆಂಬ ಭಾವವು ತೋರಿಬರುತ್ತದೆ. **ಕಥಾಸುಧಾರಸಭುಜಾಂ** ಎಂದು ಹೇಳಿರುವದು ಶ್ರವಣ ಸಾರ್ಥಕ್ಯ ಮಾತ್ರವೇ ಅಲ್ಲದೆ ಇತರೇಂದ್ರಿಯಗಳ ಸಾರ್ಥಕ್ಯಕ್ಕೂ ಉಪಲಕ್ಷಣವಾಗಿ ಅವುಗಳ ಸಾರ್ಥಕ್ಯವನ್ನೂ ಹೊಂದಿದವರು ಎಂಬ ತಾತ್ಪರ್ಯವು ಅವರುಗಳು **"ಮನಃ ಕೃಷ್ಣಪದಾರವಿಂದಯೋಃ ವಚಾಂಸಿ ವೈಕುಂಠ ಗುಣಾನುವರ್ಣನೇ"** ಎಂದು ಹೇಳಿರುವ ಹಾಗೆ ಮನಸ್ಸನ್ನು ಶ್ರೀಕೃಷ್ಣನ ಪಾದಕಮಲಗಳಲ್ಲೂ, ಮಾತುಗಳನ್ನು ಮುಕುಂದನ ಗುಣಗಳ ವರ್ಣನೆಯಲ್ಲೂ ಇಟ್ಟವರು, ಮತ್ತು ಕರಯುಗ್ಮವನ್ನು

ಅವನ ಅರ್ಚನಾದಿಗಳಲ್ಲೂ, "**ಮುಕುಂದ ಲಿಙ್ಗಾಲಯ ದರ್ಶನೇ ದೃಶೌ**" ಕಣ್ಣುಗಳನ್ನು ಮುಕುಂದನ ಅರ್ಚಾವತಾರ ರೂಪದಲ್ಲಿರುವ ದಿವ್ಯಮಂಗಳ ವಿಗ್ರಹ ಮತ್ತೂ ಆತನ ಆಲಯ ದರ್ಶನದಲ್ಲೂ, ಘ್ರಾಣೇಂದ್ರಿಯವನ್ನು ಆತನ ಪಾದ ಕಮಲದಲ್ಲರ್ಪಿಸಿದ ತುಲಸೀ ಸೌರಭವನ್ನು ಆಘ್ರಾಣಿಸುವದರಲ್ಲೂ "**ಪಾದೌ ಹರೇಃ ಕ್ಷೇತ್ರ ಪಥಾನುಸರ್ಪಣೇ**" ಪಾದಗಳನ್ನು ಶ್ರೀ ಹರಿಯ ಆಲಯವನ್ನು ಕುರಿತು ಹೋಗುವದರಲ್ಲಿಯೂ, "**ಶಿರೋ ಹೃಷೀಕೇಶ ಪದಾಭಿವನ್ದನೇ**" ಶಿರಸ್ಸನ್ನು ಆತನ ಪಾದಕ್ಕೆ ಎರಗುವದರಲ್ಲಿಯೂ, ಹೀಗೆ ಸರ್ವಾವಯವಗಳಿಗೂ ಸಾರ್ಥಕ್ಯವನ್ನು ಕಲ್ಪಿಸಿಕೊಂಡ ಮಹಾನುಭಾವರು. ಇಂಥಾವರಿಗೆ ಯಾವ ಸ್ಥಳವಾಗಲಿ ಹಿಂದೆ ಎಷ್ಟು ಪ್ರಸಿದ್ಧಿಯನ್ನು ಹೊಂದಿದ್ದರೂ, ಈಗ ಗ್ರಾಹ್ಯವಲ್ಲವಾದುದಾದರೆ, ಪ್ರಪನ್ನನಿಗೂ ಕೂಡ ಗ್ರಾಹ್ಯವಲ್ಲವೆಂಬ ಭಾವವು. ಆದರೆ ಒಂದು ವಿಧ ಸಂದೇಹವು ಕೆಲವು ಪ್ರಪನ್ನರಿಗೆ ಇದರಿಂದ ಉಂಟಾಗಬಹುದು. ವೃತ್ತ್ಯರ್ಥವಾಗಿ ಒಬ್ಬ ಕೃತಕೃತ್ಯನಾದ ಪ್ರಪನ್ನನಿಗೆ ಭಗವದ್ಭಾಗವತ ಪ್ರಾಚುರ್ಯವುಳ್ಳ ಸ್ಥಳದಲ್ಲಾಗಲಿ, ಪರಮಭಾಗವತನೊಬ್ಬನಾದರೂ ಇರುವ ಸ್ಥಳದಲ್ಲಾಗಲಿ ಇರಲು ಅನುಕೂಲವಿಲ್ಲದೆ ಒಂದು ಕುಗ್ರಾಮದಲ್ಲಿ ವಸಿಸಿದನಾದರೆ ಆತನಿಗೇನಾದರೂ ಮೋಕ್ಷಪ್ರಾಪ್ತಿಯಲ್ಲಿ ಕುಂದುಕವೇ ಎಂದು ಪ್ರಶ್ನಿಸಬಹುದು. ಇದಕ್ಕೆ ಉತ್ತರವಾಗಿ ಆತನಿಗೂ ಕೂಡ ಮೋಕ್ಷಪ್ರಾಪ್ತಿಯಲ್ಲಿ ಸಂದೇಹವಿಲ್ಲವು. ಅಂಥಾವರಿಗೆ ಬುದ್ಧಿಪೂರ್ವೋತ್ತರಾಘವು ಉಂಟಾಗದೇ ಇರಲು ಯಾವದೊಂದು ಸಾಧನವೂ ಇರುವದಿಲ್ಲವು ಅವರಿಗೆ ಜ್ಞಾನಸಂಪಾದನೆಗೂ ಅನುಕೂಲತೆ ಇರುವದಿಲ್ಲವು. ಆದುದರಿಂದ ಅಂಥಾವರೂ ಕೂಡ, ಸರ್ವ ಪ್ರಯತ್ನವನ್ನೂ ಮಾಡಿ ಮೇಲೆ ಹೇಳಿದ ಸ್ಥಾನ ವಿಶೇಷದಲ್ಲೇ ವಸಿಸುವದು ಯೋಗ್ಯವು.

ಇಂತು ಶ್ರೀಮದ್ರಹಸ್ಯತ್ರಯಸಾರದ ೧೯ನೆಯ ಅಧಿಕಾರವಾದ

ಸ್ಥಾ ನ ವಿ ಶೇ ಷಾ ಧಿ ಕಾ ರ ಕ್ಕೆ

ತಿರುನಾರಾಯಣಪುರಂ ವಿಜಯರಾಘವ ಶರ್ಮನ

ಆ ಚಾ ರ್ಯ ಹೃ ದ ಯಾ ನ್ವೇ ಷಿ ಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಅಥ ನಿರ್ಯಾಣಾಧಿಕಾರಃ ೨೦

ಮನಸಿ ಕರಣಗ್ರಾಮಂ ಪ್ರಾಣೇ ಮನಃ ಪುರುಷೇ ಚ ತಂ ।
ಝಟಿತಿ ಘಟಯನ್ ಭೂತೇಷ್ವೇನಂ ಪರೇ ಚ ತಮಾತ್ಮನಿ ॥

ಅವತಾರಿಕೆ. ಮುಮುಕ್ಷುವು ಸಾಙ್ಗಪ್ರಪದನಾನುಷ್ಠಾನವನ್ನು ಮಾಡಿದ ಮೊದಲು ದೇಹಾವಸಾನದವರೆಗೂ ಪ್ರಪನ್ನನು ವರ್ತಿಸುವ ರೀತಿಯನ್ನು ಹಿಂದಿನ ಏಳುಅಧಿಕಾರಗಳಿಂದ ಉಪದೇಶಿಸಿದರು. ಪ್ರಥಮತಃ ಆತನು ಮೋಕ್ಷಪ್ರಾಪ್ತಿಗಾಗಿ ಇನ್ನೇನೂ ಮಾಡಬೇಕಾದುದಿಲ್ಲದುದರಿಂದ ಕೃತಕೃತ್ಯನೆಂದೂ, ಆತನಿಗೆ ಸ್ವಸ್ವರೂಪ, ಉಪಾಯ, ಪುರುಷಾರ್ಥಗಳ ವಿಷಯದಲ್ಲಿ, ಸ್ವನಿಷ್ಠಾಭಿಜ್ಞಾನವಿರಬೇಕೆಂದೂ, ಕೃತಕೃತ್ಯನಾದರೂ ಆತನಿಗೆ ಉತ್ತರ ಕೃತ್ಯಗಳುಂಟೆಂದೂ, ಆ ಕೃತ್ಯಗಳಲ್ಲಿ ಪುರುಷಾರ್ಥಕಾಷ್ಠಾರೂಪವಾದುದು ಭಾಗವತಕೈಂಕರ್ಯವೆಂದೂ, ಇಂತಹ ಉತ್ತರ ಕೃತ್ಯಗಳಾದ ಆಜ್ಞಾನುಜ್ಞಾ ಕೈಂಕರ್ಯದಲ್ಲಿ ಶಾಸ್ತ್ರೀಯ ನಿಯಮನವಾವಶ್ಯಕವೆಂದೂ, ಕೃತಕೃತ್ಯನಾದ ನಂತರ ಅಪರಾಧಗಳು ಬಾರದಹಾಗೆ ಜಾಗರೂಕನಾಗಿರಬೇಕೆಂದೂ, ಒಂದುವೇಳೆ ಅವು ಬುದ್ಧಿಪೂರ್ವಕವಾಗಿ ಅಚಾತುರ್ಯದಿಂದ ಪ್ರಾಪ್ತವಾದರೆ ಪ್ರಾಯಶ್ಚಿತ್ತ ಮೂಲಕ ಪರಿಹಾರ ಮಾಡಿಕೊಳ್ಳಬೇಕೆಂದೂ, ಅಂತಹ ಅಪರಾಧಗಳು ಬಾರದಿರುವದಕ್ಕಾಗಿ ಈತನು ಭಗವದ್ಭಾಗವತಾಭಿಮಾನವುಳ್ಳ ಸ್ಥಳದಲ್ಲಿ ವಸಿಸಿ ಅವರುಗಳ ಪ್ರಸನ್ನತೆಯನ್ನು ಹೊಂದಬೇಕೆಂದೂ ಹೇಳಲ್ಪಟ್ಟಿತು. ಈ ಅಧಿಕಾರದಲ್ಲಿ ದೇಹಾವಸಾನಕಾಲದಲ್ಲಿ ಪ್ರಾಪ್ತವಾಗುವ ಪ್ರಕ್ರಿಯೆಯು ಹೇಳ

ಸ್ವವಿದ ವಿದುಷೋ ರಿತ್ಥಂ ಸಾಧಾರಣೇ ಸರಣೇ ರ್ಮು (ಖ್ಯೈಃ) ಖೇ ।
ನಯತಿ ಪರತೋಃ ನಾಡೀ ಭೇದೈ ರ್ಯಥೋಚಿತ ಮೀಶ್ವರಃ ॥೪೪॥

ಲ್ಪಡುತ್ತದೆ. ಈ ಪ್ರಕ್ರಿಯೆಗೆ ಪ್ರಪನ್ನೇತರರ ದೇಹಾವಸಾನಪ್ರಕ್ರಿಯೆಗಿಂತ ಏನಾದರೂ ವೈಲಕ್ಷಣ್ಯ ಉಂಟೋ? ಪ್ರಪನ್ನನಿಗೆ ಪಾಪಪುಣ್ಯವಿನಾಶಗಳು ಪ್ರಪದನ ಸಮಯದಲ್ಲಿಯೋ? ದೇಹಾವಸಾನ ಸಮಯದಲ್ಲಿಯೋ? ಪ್ರಪನ್ನನ ದೇಹಾವಸಾನಕ್ಕೆ ಕಾಲನಿಯಮಗಳೇನಾದರೂ ಉಂಟೋ? ಇಲ್ಲವೋ? ಯಾವ ಕಾಲದಲ್ಲಿ ಮರಣವಾದರೂ ಮುಕ್ತಿಯುಂಟೋ? ಅಂತಿಮಸ್ಮರಣೆಯುಂಟಾಗುತ್ತದೆಯೋ? ಅದು ಆವಶ್ಯಕವೋ? ಅದಿಲ್ಲದಿದ್ದರೆ ಪುನರ್ಜನ್ಮಪ್ರಾಪ್ತಿಯುಂಟೋ? ಇತ್ಯಾದಿ ವಿಷಯಗಳು ಈ ಅಧಿಕಾರದಲ್ಲಿ ಚರ್ಚಿಸಲ್ಪಡುತ್ತವೆ. ಪ್ರಥಮತಃ ಈ ಸಙ್ಗ್ರಹ ಶ್ಲೋಕದಿಂದ ನಿರ್ಯಾಣಕ್ರಮವನ್ನೂ, ಪ್ರಪನ್ನನ ನಿರ್ಯಾಣಕ್ರಮಕ್ಕೂ ತದಿತರರ ನಿರ್ಯಾಣಕ್ರಮಕ್ಕೂ ಇರುವ ವ್ಯತ್ಯಾಸವನ್ನೂ, ತಿಳಿಸುತ್ತಾರೆ:—

ಅರ್ಥ—**ಮನಸಿ** - ಮನಸ್ಸಿನಲ್ಲಿ, **ಕರಣಗ್ರಾಮಂ** – ಇಂದ್ರಿಯಗಳ ಸಮುದಾಯವನ್ನೂ, **ಝಟಿತಿ** - ಬೇಗ, **ಘಟಯನ್** - ಸೇರಿಸುವನಾಗಿ, **ಪ್ರಾಣೇ** - ಪಂಚವೃತ್ತಿಪ್ರಾಣದಲ್ಲಿ ಮನಸ್ಸನ್ನೂ, **ಘಟಯನ್** - ಸೇರಿಸುವನಾಗಿ **ತಂ** - ಆ ಪ್ರಾಣವನ್ನು, **ಪುರುಷೇ** - ಆತ್ಮನಲ್ಲೂ, **ಝಟಿತಿ ಘಟಯನ್** ಬೇಗ ಸೇರಿಸುವನಾಗಿ, **ಏನಂ** - ಹೀಗೆ ಈ ಕರಣಗ್ರಾಮ, ಮನಸ್ಸು, ಪ್ರಾಣಗಳಿಂದ ಸೂಕ್ಷ್ಮದೆಶೆಯಲ್ಲಿ ಯುಕ್ತನಾದ ಜೀವಾತ್ಮನನ್ನು, **ಭೂತೇಷು** - ಪಂಚಭೂತಗಳಿಂದ ಸೇರಿದ ಸೂಕ್ಷ್ಮಶರೀರದಲ್ಲೂ **ಘಟಯನ್**, ಮತ್ತು ತಂ-ಆ ಇಂದ್ರಿಯಗಳೂ, ಮನಸ್ಸೂ, ಭೂತಸೂಕ್ಷ್ಮಗಳಿಂದ ಸೇರಿದ ಆತ್ಮನನ್ನು, **ಪರೇಚ ಆತ್ಮನಿ** - ಪರಮಾತ್ಮನಾದ ಹಾರ್ದನಾಗಿ ಹೃದಯದಲ್ಲಿರುವ ತನ್ನಲ್ಲೂ, **ಘಟಯನ್**-ಸೇರಿಸುವನಾಗಿ, **ಇತ್ಥಂ**- ಈ ಮೇಲೆ ಹೇಳಿದ ಪ್ರಕಾರವಾಗಿ, **ಈಶ್ವರಃ** - ಸರ್ವೇಶ್ವರನು, **ಸ್ವವಿದವಿದುಷೋಃ** - **ಸ್ವವಿತ್** - ತನ್ನನ್ನು ತಿಳಿದ ಎಂದರೆ ಭಕ್ತಿಪ್ರಪತ್ತಿಮಾರ್ಗಗಳಿಂದ ಆಶ್ರಯಿಸಿದ ಪ್ರಪನ್ನರ, ಮತ್ತು **ಅವಿದುಷಃ** - ಹಾಗೆ ಪರಮಾತ್ಮನನ್ನು ತಿಳಿಯದೇ ಇರುವವರ ಹೀಗೆ ಎರಡು ವಿಧದವರಿಗೂ, **ಸರಣೇಃ** – ಮುಂದಕ್ಕೆ ಮಾರ್ಗವಾದ ಅರ್ಚಿರಾದಿ ಧೂಮಾದಿ ಮಾರ್ಗಗಳ, **ಮುಖೇ** - ಆರಂಭವು, **ಸಾಧಾರಣೇ ಸತಿ** - ಇಬ್ಬರಿಗೂ ಒಂದೇಯಾಗಿರಲಾಗಿ, ಎಂದರೆ ಸ್ಥೂಲಶರೀರವನ್ನು ದೇಹಾವಸಾನಕಾಲದಲ್ಲಿ ಬಿಟ್ಟು, ಪ್ರಪನ್ನರಿಗೆ ಅರ್ಚಿರಾದಿ ಮಾರ್ಗವೂ ಪ್ರಪನ್ನರಲ್ಲದವರಿಗೆ ಧೂಮಾದಿ ಮಾರ್ಗವೂ ಉಂಟಾಗುವದಕ್ಕೆ ಪೂರ್ವಭಾವಿಯಾದ ನಿರ್ಯಾಣಕ್ರಮವು ಇಬ್ಬರಿಗೂ

ಒಂದೇ ಸಮನಾಗಿರಲಾಗಿ ಎಂಬ ಭಾವವು, **ಪರತಃ** - ಹೀಗೆ ಪರಮಾತ್ಮನಲ್ಲಿ ಸೇರಿದ ನಂತರ, **ಯಥೋಚಿತಂ** - ಇಂತಹ ಪ್ರಪನ್ನ ಅಪ್ರಪನ್ನರಿಗೆ ಯೋಗ್ಯವಾದ, **ನಾಡೀಭೇದೈಃ** - ಪ್ರಪನ್ನರನ್ನು ಸುಷುಮ್ನಾ ನಾಡಿಯ ಮೂಲಕವಾಗಿಯೂ, ಇತರರನ್ನು ವಿಷಜ್ಞ ನಾಡಿಗಳ, ಸುತ್ತಲೂ ಇರುವ ನಾಡಿಗಳ, ಮೂಲಕವಾಗಿಯೂ, **ನಯತಿ** - ಕರೆದುಕೊಂಡು ಹೋಗುವನು ಎಂದರೆ ಹೋಗುವ ಹಾಗೆ ಮಾಡುವನು.

ತಾತ್ಪರ್ಯ—ಈ ಶ್ಲೋಕದ ಮೂಲಕ ಜೀವಾತ್ಮನು ತನ್ನ ಶರೀರವನ್ನು ಬಿಟ್ಟು ಹೊರಗೆ ಹೊರಡುವ ಪ್ರಕಾರವನ್ನು ತಿಳಿಸುತ್ತಾರೆ. ಈ ಕ್ರಮವು ಛಾಂದೋಗ್ಯದಲ್ಲೂ ಶಾರೀರಕ ಸೂತ್ರಗಳಲ್ಲೂ ಹೇಳಿರುವದರಿಂದ ಅವುಗಳನ್ನನುಸರಿಸಿ "ಮನಸಿಕರಣಗ್ರಾಮಂ" ಎಂದಾರಂಭಿಸಿ ಹೇಳುತ್ತಾರೆ. ಆ ಛಾಂದೋಗ್ಯ ಶ್ರುತಿಯು ಯಾವುದೆಂದರೆ "ಅಸ್ಯ ಸೋಮ್ಯ ಪುರುಷಸ್ಯ ಪ್ರಯತಃ ವಾಙ್ಮನಸಿ ಸಂಪದ್ಯತೇ, ಮನಃ ಪ್ರಾಣೇ, ಪ್ರಾಣಸ್ತೇಜಸಿ, ತೇಜಃ ಪರಸ್ಯಾಂ ದೇವತಾಯಾಂ" ಎಂದರೆ **ಪ್ರಯತಃ** - ಹೊರಟುಹೋಗುವ ಎಂದರೆ ದೇಹವನ್ನು ಬಿಟ್ಟುಹೋಗುವ, **ಪುರುಷಸ್ಯ** - ಪುರುಷನ, **ವಾಕ್** - ವಾಕ್ಕು, ಇದೂ ಮಿಕ್ಕ ಒಂಭತ್ತು ಬಾಹ್ಯೇಂದ್ರಿಯಗಳಿಗೂ ಉಪಲಕ್ಷಣವು, **ಮನಸಿ ಸಂಪದ್ಯತೇ**-ಮನಸ್ಸಿನಲ್ಲಿ ಹೋಗಿಸೇರುತ್ತವೆ. ಮನಸ್ಸು ಮುಖ್ಯಪ್ರಾಣನಲ್ಲೂ, ಪ್ರಾಣವು ಜೀವಾತ್ಮನಲ್ಲೂ ಹೀಗೆ ಹತ್ತು ಬಾಹ್ಯೇಂದ್ರಿಯಗಳೂ, ಮನಸ್ಸೂ, ಪ್ರಾಣವೂ ಸೇರಿದ ಜೀವಾತ್ಮನು **ತೇಜಸಿ** ಎಂದರೆ ಸೂಕ್ಷ್ಮರೂಪದಲ್ಲಿ ಶರೀರವಾಗಿರುವ ಪಂಚಭೂತದಲ್ಲೂ, ಅನಂತರ ಹೀಗೆ ಸೂಕ್ಷ್ಮಶರೀರ ಹೊಂದಿದ ಜೀವಾತ್ಮನು, **ಪರಸ್ಯಾಂ ದೇವತಾಯಾಂ** - ಹೃದಯ ಗುಹೆಯಲ್ಲಿಯೇ ಹಾರ್ದರೂಪಿಯಾದ ಪರಮಾತ್ಮನಲ್ಲೂ ಹೋಗಿ ಸೇರುತ್ತಾನೆ ಎಂಬುದು ಶ್ರುತ್ಯರ್ಥವು. ಇಷ್ಟು ಮಾತ್ರ ಗತಿಯು ಪ್ರಪನ್ನನಿಗೂ ಪ್ರಪನ್ನನಲ್ಲದವನಿಗೂ ಸಾಮಾನ್ಯವು. ಅನಂತರ ಪ್ರಪನ್ನನು ಸುಷುಮ್ನಾ ನಾಡಿಯ ಮೂಲಕ ಈ ಸ್ಥೂಲದೇಹವನ್ನು ಬಿಟ್ಟು ಅರ್ಚಿರಾದಿ ಗತಿಯನ್ನು ಹೊಂದುವನು ; ಪ್ರಪನ್ನನಲ್ಲದವನು ಇತರ ನಾಡಿಗಳ ಮೂಲಕ ಧೂಮಾದಿ ಗತಿಯನ್ನು ಹೊಂದುವನೆಂಬುದು ಈ ಶ್ಲೋಕದ ಸಂಗ್ರಹ ತಾತ್ಪರ್ಯವು.

ಶ್ರೀ ದೇಶಿಕರವರು ಈ ಶ್ಲೋಕದಲ್ಲಿ ಈ ಶ್ರುತ್ಯರ್ಥವು ಶ್ರೀ ಭಾಷ್ಯದ ೪ನೇ ಅಧ್ಯಾಯದ ೨ನೆಯ ಪಾದದ ಮೊದಲು ಆರು ಅಧಿಕರಣಗಳಲ್ಲಿ ಪ್ರತಿಪಾದಿತವಾಗಿರುವದನ್ನನುಸರಿಸಿ ಅಷ್ಟನ್ನೇ ಕೊಡಿಸಿರುತ್ತಾರೆ.

ವಾಙ್ಮನಸಿ ಎಂದರೆ ದೇಹಾವಸಾನದಲ್ಲಿ ವಾಕ್ಕು ಮನಸ್ಸಿನಲ್ಲಿ ಸೇರುತ್ತವೆ. ಶ್ರುತಿಯು **ಸಂಪದ್ಯತೇ** ಎಂದು ಪ್ರಯೋಗಿಸಿರುವದರಿಂದ ವಾಕ್ಕು ಮನಸ್ಸಿನಲ್ಲಿ

ಲೀನವಾಗುತ್ತದೆ ಎಂಬರ್ಥವನ್ನು ಹೇಳಕೂಡದೆಂದೂ, ವಾಗಿಂದ್ರಿಯಕ್ಕೆ ಮನಸ್ಸಿನೊಂದಿಗೆ ಸಂಘಟನೆಯುಂಟಾಗುತ್ತದೆಂದೂ ತಿಳಿಸುವದಕ್ಕಾಗಿ **ಝಟಿತಿ ಘಟಯನ್** ಎಂದು ಈ ಶ್ಲೋಕದಲ್ಲಿ ಪ್ರಯೋಗಿಸಿರುತ್ತಾರೆ. ವಾಕ್ಕು ಮನಸ್ಸಿನಲ್ಲಿ ಸೇರುತ್ತದೆ ಎಂದರೆ ಮನಸ್ಸಿನ ವ್ಯಾಪಾರವೇನೋ ಉಂಟು, ವಾಕ್ಕಿನ ವ್ಯಾಪಾರ ನಿಂತುಹೋಯಿತು ಎಂಬರ್ಥವಲ್ಲವು. ವಾಗಿಂದ್ರಿಯವು, ಮನಸ್ಸೆಂಬ ಇಂದ್ರಿಯದೊಂದಿಗೆ ಸೇರಿಕೊಳ್ಳುತ್ತದೆಂಬ ಭಾವವು. ಶ್ರುತಿಯು ವಾಗಿಂದ್ರಿಯವನ್ನು ಹೇಳಿದುದು ಹತ್ತು ಬಾಹ್ಯೇಂದ್ರಿಯಗಳಿಗೂ ಉಪಲಕ್ಷಣವು. ಈ ಅಭಿಪ್ರಾಯವು, **"ವಾಙ್ಮನಸಿ ದರ್ಶನಾಚ್ಛಬ್ದಾಚ್ಚ"** ಮತ್ತು **"ಅತ ಏವ ಸರ್ವಾಣ್ಯನು"** ಎಂಬ ಎರಡು ವ್ಯಾಸಸೂತ್ರಗಳಿಂದಲೂ ಹೇಳಲ್ಪಟ್ಟಿತು. ಇವುಗಳನ್ನನುಸರಿಸಿ, ಇಲ್ಲಿ **"ಮನಸಿ ಕರಣಗ್ರಾಮಂ"**. ಎಂದುಪದೇಶಿಸಿರುತ್ತಾರೆ. **ಕರಣಗ್ರಾಮಂ** ಎಂಬುದರಿಂದ ದಶೇಂದ್ರಿಯಗಳೂ ಹೇಳಲ್ಪಟ್ಟವು.

ಛಾಂದೋಗ್ಯ ಶ್ರುತಿಯಲ್ಲಿ **ಮನಃಪ್ರಾಣೇ** ಎಂದು ಹೇಳಿರುವದನ್ನನುಸರಿಸಿ ಶ್ರೀ ದೇಶಿಕರವರೂ **ಪ್ರಾಣೇ ಮನಃ,** ಈ ಹತ್ತು ಇಂದ್ರಿಯಗಳಿಂದಲೂ ಸೂಕ್ಷ್ಮದೆಸೆಯಲ್ಲಿ ಸೇರಿದ ಮನಸ್ಸು ಮುಖ್ಯಪ್ರಾಣದಲ್ಲಿ ಹೋಗಿ ಸೇರಿರುತ್ತದೆ. ಈ ಶ್ರುತ್ಯಭಿಪ್ರಾಯವು **"ತನ್ಮನಃ ಪ್ರಾಣ ಉತ್ತರಾತ್"** ಎಂಬ ವ್ಯಾಸ ಸೂತ್ರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. **ತನ್ಮನಃ** - ಹಾಗೆ ದಶೇಂದ್ರಿಯಗಳಿಂದ ಕೂಡಿದ ಮನಸ್ಸು, **ಪ್ರಾಣೇ** - ಪ್ರಾಣದಲ್ಲಿ ಸೇರುತ್ತದೆ. ಏಕೆಂದರೆ **ಉತ್ತರಾತ್** - ಮುಂದೆ ಶ್ರುತಿಯು **ಮನಃಪ್ರಾಣೇ** ಎಂದು ಹೇಳಿರುವದರಿಂದ, ಎಂಬುವದು ಈ **ಸೂತ್ರಾರ್ಥವು.**

ಈ ದಶೇಂದ್ರಿಯ ಮನಸ್ಸಿನಿಂದ ಸೇರಿದ ಪ್ರಾಣವು ಮುಂದಕ್ಕೆ ಜೀವನೊಂದಿಗೆ ಸೇರುತ್ತದೆ ಎಂದು ತಿಳಿಸುವದಕ್ಕಾಗಿ, **ಪುರುಷೋಚ ತಂ** ಎಂದು ತಿಳಿಸಿರುತ್ತಾರೆ. ಆದರೆ ಛಾಂದೋಗ್ಯ ಶ್ರುತಿಯು **"ಪ್ರಾಣಸ್ತೇಜಸಿ"** ಪ್ರಾಣವು ತೇಜಸ್ಸೆಂದರೆ ಭೂತಸೂಕ್ಷ್ಮ, ಸೂಕ್ಷ್ಮದೆಶೆಯಲ್ಲಿರುವ ಪಂಚೇಂದ್ರಿಯದೊಂದಿಗೆ ಸೇರುತ್ತದೆಂದು ಹೇಳಿರುತ್ತದೆ. ಇದು ಶ್ರೀ ದೇಶಿಕೋಕ್ತಿಗೆ ವಿರುದ್ಧವಾಯಿತಲ್ಲಾ ಎಂದರೆ ಹಾಗಲ್ಲವು. ಏಕೆಂದರೆ ಬೃಹದಾರಣ್ಯದಲ್ಲಿ **"ಏವ ಮೇವೇಮಮಾತ್ಮಾನಮನ್ತಕಾಲೇ ಸರ್ವೇ ಪ್ರಾಣಾ ಅಭಿಸಮಾಯನ್ತಿ, ತಮುತ್ಕ್ರಾಮನ್ತಂ ಪ್ರಾಣೋನೂತ್ಕ್ರಾಮತಿ"** ಎಂಬ ಶ್ರುತಿಯಿಂದ ಪಂಚಪ್ರಾಣವೂ ಜೀವಾತ್ಮನಲ್ಲಿ ಸೇರುತ್ತದೆ ಎಂದು ಹೇಳಿರುವದರಿಂದ, ಶ್ರುತಿಗಳಿಗೆ ಅರ್ಥ ಹೇಳುವಾಗ ಪರಸ್ಪರ ವಿರೋಧವಿಲ್ಲದ ಹಾಗೆ ಅರ್ಥ ಹೇಳಬೇಕಾದುದು ಆವಶ್ಯಕವಾದುದರಿಂದ ವ್ಯಾಸಮಹರ್ಷಿಯು, **"ಸೋಧ್ಯಕ್ಷೇ ತದುಪಗಮಾದಿಭ್ಯಃ"** ಎಂಬ ಸೂತ್ರ

ದಿಂದ ಸಃ-ಇಂದ್ರಿಯಗಳಿಂದ ಸೇರಿದ ಮನೋವಿಶಿಷ್ಟವಾದ ಪ್ರಾಣವು, **ಅಧ್ಯಕ್ಷೇ ಕರಣಾಧಿಪೇ** - ಇಂದ್ರಿಯಗಳಿಗೆ ಯಜಮಾನನಾದ ಜೀವಾತ್ಮನಲ್ಲಿ ಸೇರುವಿಕೆಯನ್ನು ಶ್ರುತಿಯು ಹೇಳುತ್ತದೆಂದು ತಿಳಿಸಿರುತ್ತಾರೆ. ಶ್ರೀ ದೇಶಿಕರವರು ಈ ಬೃಹದಾರಣ್ಯಕ ಶ್ರುತಿಯನ್ನೂ ಈ ವ್ಯಾಸಸೂತ್ರವನ್ನೂ ಅನುಸರಿಸಿ "**ಪುರುಷೇಚ ತಂ ಘಟಯೇತ್**" ಎಂದು ಹೇಳಿದುದೇನೋ ಸರಿಯೇ. ಆದರೆ ಛಾಂದೋಗ್ಯ ಶ್ರುತಿಯ ವಾಕ್ಯವಾದ "**ಪ್ರಾಣಸ್ತೇಜಸಿ**" ಎಂಬುದಕ್ಕೆ ಅವಿರೋಧಾರ್ಥವು ಹೇಗೆ ಎಂದರೆ ಅದಕ್ಕೆ ಪ್ರಾಣವೂ ಜೀವನನ್ನು ಹೊಂದಿ ತೇಜಸ್ಸನ್ನು ಸೇರುತ್ತದೆ ಎಂದು ಹೇಳುವದಕ್ಕೇನೂ ತೊಂದರೆಯಿಲ್ಲವು. ಹೇಗೆಂದರೆ ಯಮುನಾ ನದಿಯು ಗಂಗೆಯನ್ನು ಸೇರಿ ಸಮುದ್ರವನ್ನು ಹೊಂದಿದರೂ, ಯಮುನಾ ನದಿಯು ಸಮುದ್ರವನ್ನು ಸೇರುತ್ತದೆಂಬ ವಾಕ್ಯವೂ ಹೇಗೆ ಅದಕ್ಕೆ ವಿರೋಧವಲ್ಲವೋ, ಹಾಗೆಯೇ ಇಲ್ಲಿಯೂ ಎಂದು ಶ್ರೀ ಯತಿವರ್ಯರು ಅಭಿಪ್ರಾಯಪಟ್ಟಿರುತ್ತಾರೆ. ಅದೂ ಅಲ್ಲದೆ ಆ ಶ್ರುತಿವಾಕ್ಯವೇ ಜೀವನಿರ್ಯಾಣ ಕ್ರಮವನ್ನು ಬೋಧಿಸುವದರಿಂದ ತೇಜಶ್ಶಬ್ದದಿಂದ ಭೂತಸೂಕ್ಷ್ಮವು ಜೀವನಿಗೆ ಶರೀರವಾಗುತ್ತದೆಂದು ಭಾವಿಸತಕ್ಕದ್ದು.

ಅಲ್ಲಿಂದ ಮುಂದಕ್ಕೆ ಗತಿಯನ್ನು ತಿಳಿಸಲು ಹೊರಟು **ಘಟಯೇತ್ ಭೂತೇಷ್ವೇನಂ** ಎಂಬುದರಿಂದ, ಹೀಗೆ ಇಂದ್ರಿಯಗಳು, ಮನಸ್ಸು, ಪ್ರಾಣನೊಂದಿಗೆ ಸೇರಿದ ಜೀವಾತ್ಮನು ಸೂಕ್ಷ್ಮದಶೆಯಲ್ಲಿರುವ ಪಂಚಭೂತಗಳೊಂದಿಗೆ ಸೇರುತ್ತಾನೆಂದು, ಬೋಧಿಸಿರುತ್ತಾರೆ. ಇದನ್ನೇ ವ್ಯಾಸಸೂತ್ರವಾದ "**ಭೂತೇಷು ತಚ್ಛ್ರುತೇಃ**" ಎಂಬುದು ಬೋಧಿಸುತ್ತದೆ. ಆದುದರಿಂದ ಛಾಂದೋಗ್ಯದ **ತೇಜಶ್ಶಬ್ದವು** ತೇಜಸ್ಸನ್ನು ಮಾತ್ರ ಬೋಧಿಸುವದಲ್ಲವು, ಅದು ಪೃಥಿವೀ ಅಪ್ತೇಜೋವಾಯ್ವಾದಿ ಸರ್ವಭೂತಗಳಿಗೆ ಉಪಲಕ್ಷಣವಾಗಿ ಭೂತಸೂಕ್ಷ್ಮವನ್ನು ತಿಳಿಸುತ್ತದೆಂದು ಭಾವಿಸತಕ್ಕದ್ದು. ಹಾಗೆಯೇ ಬೃಹದಾರಣ್ಯಕ ಶ್ರುತಿಯಿರುವದರಿಂದ ಭೂತಸೂಕ್ಷ್ಮವನ್ನು ಶರೀರವಾಗಿ ಹೊಂದುವದಕ್ಕಾಗಿ, ಈ ಇಂದ್ರಿಯಗಳು ಮನಸ್ಸು ಪ್ರಾಣದಿಂದ ಸೇರಿದ ಜೀವಾತ್ಮನು ಆ ಭೂತಸೂಕ್ಷ್ಮದೊಂದಿಗೆ ಸೇರುವನೆಂದು ಹೇಳಲ್ಪಟ್ಟಿತು. "**ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ**" ಎಂಬ ಗೀತಾ ಶ್ಲೋಕಾನುಸಾರ ಮುಂದಿನ ನಾಡಿಗಳ ಮೂಲಕ ಅರ್ಚಿರಾದಿ ಧೂಮಾದಿ ಮಾರ್ಗ ಗತಿಗಳಿಗೆ ಬೇಕಾದ ಕರಣವನ್ನೂ, ಅಧಿಷ್ಠಾನವಾದ ಭೂತಸೂಕ್ಷ್ಮವನ್ನೂ ಈ ಕರ್ತಾವಾದ ಜೀವಾತ್ಮನು ಹೊಂದುತ್ತಾನೆಂಬ ಭಾವವು

ಅಲ್ಲಿಂದ ಈ ಜೀವಾತ್ಮನು **ಪರೇಚ ಆತ್ಮನಿ** - ಪರಮಾತ್ಮನಾದ ತನ್ನಲ್ಲೂ ಸರ್ವೇಶ್ವರನು, **ಘಟಯೇತ್** - ಸೇರಿಸುವನೆಂದುಪದೇಶಿಸಲ್ಪಟ್ಟಿತು. ಛಾಂದೋಗ್ಯವೂ ಹಾಗೆಯೇ "**ತೇಜಃ ಪರಸ್ಯಾಂ ದೇವತಾಯಾಂ**" ಇವುಗಳೊಂದಿಗೆ

ಸೇರಿದ ಭೂತಸೂಕ್ಷ್ಮವು ಪರಮಾತ್ಮನಲ್ಲಿ ಹೋಗಿ ಸೇರುತ್ತದೆ ಎಂದು ಹೇಳಿದರೂ, ತೇಜಸ್ಸೊಂದಕ್ಕೇ ಶರೀರವಾಗಲು ಸಾಮರ್ಥ್ಯವಿಲ್ಲದುದರಿಂದ ಎಲ್ಲಾ ಭೂತಸೂಕ್ಷ್ಮವೂ ಹೇಳಲ್ಪಟ್ಟತೆಂದು ಇನ್ನೊಂದು ಬ್ರಹ್ಮಸೂತ್ರದಿಂದ ವಿಶದೀಕರಿಸುತ್ತಾರೆ. ಅದೂ ಅಲ್ಲದೆ ಜೀವಾತ್ಮನ ಪ್ರವೇಶವಿಲ್ಲದೆ ಭೂತಸೂಕ್ಷ್ಮಕ್ಕೆ ಪರಮಾತ್ಮನನ್ನು ಹೋಗಿ ಸೇರುವ ಪ್ರವೃತ್ತಿ ಇಲ್ಲವಾದುದರಿಂದ, ಭೂತಸೂಕ್ಷ್ಮಶರೀರಕನಾದ ಜೀವನೇ ಪರಮಾತ್ಮನೊಂದಿಗೆ ಸಂಪತ್ತಿಯನ್ನು ಹೊಂದುವನೆಂದು ಭಾವಿಸತಕ್ಕದ್ದು. ಹೀಗೆ ಜೀವಾತ್ಮನು ಪರಮಾತ್ಮನಲ್ಲಿ ಸೇರಿದುದು ಸ್ವರೂಪೈಕ್ಯರೂಪಲಯವೋ ಇಲ್ಲವೇ ಹಿಂದೆ ಹೇಳಿದ ಸಂಪತ್ತಿಯೋ, ಎಂಬ ಸಂದೇಹದಲ್ಲಿ ಸಂಪತ್ತಿಮಾತ್ರವೇ ಎಂದು **"ಅವಿಭಾಗೋ ವಚನಾತ್"** ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ. **ವಾಙ್ಮನಸಿ ಸಂಪದ್ಯತೇ** ಎಂಬಲ್ಲಿ ಎರಡೂ ಒಟ್ಟಿಗೆ ಸೇರಿ ಭಾಗವಿಲ್ಲದಹಾಗೆ ಇರುವಿಕೆಯು ; ಏಕೆಂದರೆ **ವಚನಾತ್** ಶ್ರುತಿಯಲ್ಲಿ ಸಂಪದ್ಯತೇ ಎಂಬ ಅನುಷಂಗ ವಚನವಿರುವದರಿಂದ ಲೀನವೆಂಬರ್ಥವಲ್ಲವು. ಹೀಗೆ ಸಂಪತ್ತಿಯನ್ನು ಹೇಳಿರುವದರಿಂದ ಇಲ್ಲಿಯೇ ಜೀವನು ಜೀವನ್ಮುಕ್ತಿಯನ್ನು ಹೊಂದಿದನು ಎಂಬರ್ಥವಲ್ಲವು. ಏಕೆಂದರೆ ಇದು ಪ್ರಪನ್ನನ ವಿಷಯದಲ್ಲಿ ಮಾತ್ರವೇ ಹೇಳಲ್ಪಟ್ಟಿದ್ದರೆ ಒಂದು ವೇಳೆ ಹಾಗೆ ಅರ್ಥಮಾಡಬಹುದಿತ್ತು, ಇದು ಪ್ರಪನ್ನ ಮತ್ತು ಅಪ್ರಪನ್ನ ಸಾಮಾನ್ಯ ವಾಕ್ಯವೆಂದು **"ಸಮಾನಾಚಾ ಸೃತ್ಯುಪಕ್ರಮಾತ್"** ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಇದನ್ನೇ ಇಲ್ಲಿಯೂ **"ಸ್ವವಿದ ವಿದುಷೋರಿತ್ಥಂ ಸಾಧಾರಣೇ ಸರಣೇರ್ಮಾರ್ಗೇ"** ಎಂಬುದರಿಂದುಪದೇಶಿಸಿರುತ್ತಾರೆ. **ಅಸೃತ್ಯುಪಕ್ರಮಾತ್,** **ಸೃತಿ** ಎಂದರೆ ಗಮನವು, ಆದುದರಿಂದ ಅರ್ಚಿರಾದಿ ಗಮನವು ಪ್ರಪನ್ನನಿಗೆ ಪ್ರಾರಂಭವಾಗುವವರೆಗೂ, ಪ್ರಪನ್ನನಿಗೂ ಪ್ರಪನ್ನನಲ್ಲದವನಿಗೂ, **ಸಮಾನಾಚ - ಸಮಾನವಾದುದೇ.**

ಹೀಗೆ ಇಂದ್ರಿಯ ಮನಃ ಪ್ರಾಣಗಳಿಂದ ಯುಕ್ತನಾದ ಜೀವನು ಭೂತಸೂಕ್ಷ್ಮಶರೀರವನ್ನು ಹೊಂದಿ ಪರಮಾತ್ಮಸಂಪತ್ತಿಯನ್ನು ಹೊಂದಿದ ನಂತರ, **"ನಯತಿ ಪರತೋ ನಾಡೀಭೇದೈರ್ಯಥೋಚಿತ ಮೀಶ್ವರಃ"** ಆತನನ್ನು ಸರ್ವೇಶ್ವರನು ಈತನ ಯೋಗ್ಯತಾನುಸಾರವಾಗಿ ನಾಡೀಭೇದಗಳ ಮೂಲಕ ಕರೆದುಕೊಂಡು ಹೋಗುತ್ತಾನೆ. ಇದಕ್ಕೆ ಪ್ರಮಾಣವು **"ಶತಂಚೈಕಾಚ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿನಿಸ್ಸೃತೈಕಾ। ತಯೋರ್ಧ್ವಮಾಯನ್ನಮೃತತ್ವಮೇತಿ ವಿಷ್ವಙ್ಙನ್ಯಾ ಉತ್ಕ್ರಮಣೇ ಭವನ್ತಿ ॥"** (ಕಠ. ೨. ೬. ೧೬) ಎಂಬ ಕಠಶ್ರುತಿಯು. ಹೃದಯದ ಮುಖ್ಯನಾಡಿಗಳು ನೂರೊಂದು. ಅವುಗಳಲ್ಲಿ ಒಂದು ಶಿರಸ್ಸನ್ನು ವ್ಯಾಪಿಸಿರುತ್ತದೆ. ಆ ಒಂದಾದ ಸುಷುಮ್ನಾ ನಾಡೀ ಮೂಲಕ

ನಿರ್ಯಾಣಸ್ಯ ವಿಳಂಬಾವಿಳಂಬ ಹೇತವಃ

ಇಪ್ಪಡಿ (೧) "ಲೋಕವಿಕ್ರಾನ್ತ ಚರಣೌ ಶರಣಂತೇऽವ್ರಜಂ ವಿಭೋ"

ವಾಗಿ ಊರ್ಧ್ವಗತಿಯುಳ್ಳವನಾಗಿ ದೇಹವನ್ನು ಬಿಟ್ಟುಹೊರಟು ಅರ್ಚಿರಾದಿ ಮಾರ್ಗ ಮೂಲಕ ಹೋಗುವನಾಗಿ ಮೋಕ್ಷವನ್ನು ಹೊಂದುವನು. ಇತರ ನಾನಾ ವಿಧವಾಗಿ ಹೊರಟುಹೋಗಿರುವ ನೂರು ನಾಡಿಗಳು ನಾನಾ ವಿಧವಾದ ಸಂಸಾರ ಹೊಂದಲು ಕಾರಣವಾದ ಉತ್ಕ್ರಮಣಗಳಿಗೆ ಧೂಮಾದಿ ಮಾರ್ಗ ಮೂಲಕವಾಗಿ ಕಾರಣವಾಗುತ್ತವೆ, ಎಂದರೆ ಇತರ ನಾಡಿಗಳ ಮೂಲಕ ಉತ್ಕ್ರಮಣ ಉಂಟಾದವರಿಗೆ ಧೂಮಾದಿ ಮಾರ್ಗವು ಪ್ರಾಪ್ತವಾಗಿ ಪುನರ್ಜನ್ಮ ಉಂಟಾಗುತ್ತದೆಂಬ ಭಾವವು. ಆದರೆ ಹೀಗೆ ಇಂದ್ರಿಯಗಳು ಮನಸ್ಸಿನಲ್ಲೂ, ಮನಸ್ಸು ಪ್ರಾಣನಲ್ಲೂ, ಪ್ರಾಣವು ಆತ್ಮನಲ್ಲೂ, ಆತ್ಮವು ಭೂತಸೂಕ್ಷ್ಮದಲ್ಲೂ, ಇವುಗಳೆಲ್ಲಾ ಸೇರಿದ ಆತ್ಮಾ ಪರಮಾತ್ಮನಲ್ಲೂ ಹೋಗಿ ಸೇರುತ್ತದೆ ಎಂದು ಹೇಳಿರುವದರಿಂದ, ಇವೆಲ್ಲಾ ತುಂಬಾ ಕಾಲವಿಳಂಬದಿಂದ ಉಂಟಾಗುತ್ತದೆಂದು ಭಾವಿಸಬಹುದು. ಹಾಗಲ್ಲದೆ ಉತ್ಕ್ರಮಣ ಕಾಲದಲ್ಲಿ ಇವೆಲ್ಲಾ ಬಹು ಶೀಘ್ರವಾಗಿ ಉಂಟಾಗುತ್ತದೆಂದು ತಿಳಿಸುವದಕ್ಕಾಗಿ ಝುಟಿತಿ ಘಟೆರ್ಯ ಎಂದು ಪ್ರಯೋಗಿಸಿರುತ್ತಾರೆ.

ಹೀಗೆ ಇಷ್ಟು ಶಾಸ್ತ್ರಪಙ್ಕ್ತಿಗಳ ಅಭಿಪ್ರಾಯಗಳನ್ನೆಲ್ಲಾ ಮನಸ್ಸಿನಲ್ಲಿಟ್ಟವರಾಗಿ ಈ ಶ್ಲೋಕದಿಂದ ಅರ್ಚಿರಾದಿ ಧೂಮಾದಿ ಗತಿಗಳಿಗೆ ಮುಂಚೆ ಪ್ರಪನ್ನ ಅಪ್ರಪನ್ನ ರಿಬ್ಬರಿಗೂ ಸಾಧಾರಣವಾದ ಉತ್ಕ್ರಮಣ ಕ್ರಮವನ್ನು ನಿರೂಪಿಸಿರುತ್ತಾರೆ.

ಹೀಗೆ ಸಂಗ್ರಹ ಶ್ಲೋಕದಲ್ಲಿ ಹೇಳಲ್ಪಟ್ಟ ದೇಹಾವಸಾನದಲ್ಲುಂಟಾಗುವ ನಿರ್ಯಾಣಕ್ರಮವು, ಯಾವಾಗ ಪ್ರಪನ್ನನಿಗೆ ಉಂಟಾಗುತ್ತದೆಂಬುದನ್ನು ಪ್ರಥಮತಃ ಚರ್ಚಿಸುವರಾಗಿ, ಎಂತಹ ಅಧಿಕಾರಿಗೆ ಇದು ವಿಳಂಬವಿಲ್ಲದೆಯೂ ಎಂತಹ ಅಧಿಕಾರಿಗೆ ವಿಳಂಬದಿಂದಲೂ ಪ್ರಾಪ್ತವಾಗುತ್ತದೆಂದು ಚರ್ಚಿಸಿ, ಆ ವಿಳಂಬಾವಿಳಂಬಕ್ಕೆ ಕಾರಣವನ್ನು ಹಿಂದೆ ಅಪರಾಧಪರಿಹಾರಾಧಿಕಾರದಲ್ಲಿ ಹೇಳಿದುದನ್ನೇ ಪುನಃ ಜ್ಞಾಪಕ ಕೊಡುತ್ತಾರೆ.

ಪ್ರಪನ್ನನ ನಿರ್ಯಾಣದ ವಿಳಂಬಾವಿಳಂಬಕ್ಕೆ ಕಾರಣಗಳು.

ಮೊದಲು ನಿರ್ಯಾಣವಿಳಂಬವಿಲ್ಲದವರು ಯಾರೆಂದು ತಿಳಿಸಿ, ಅವರು ಸರ್ವೇಶ್ವರನಿಗೆ ಪರಮಪ್ರಿಯರಾದ ಅಧಿಕಾರಿಗಳೆನು ತಿಳಿಸುತ್ತಾರೆ. ಇಪ್ಪಡಿ - ಈ

(೧) ಜಿತನ್ತಾ ಸ್ತೋತ್ರವು.

ಎನ್ರಿರ್ವರ್ ಕಾಲ್ಶೈಪ್ಪಿಡಿಕ್ಕ, (೨) "ಹಸ್ತಾವಲಂಬನೋ ಹ್ಯೇಕೋ ಭಕ್ತಿ ಕ್ರೀತೋ ಜನಾರ್ದನಃ" ಎಙ್ಗಿರಪಡಿಯೇ ಇವನೈ ಕ್ಕೈಪಿಡಿತ್ತು (೩) "ರಾಜಾಧಿರಾಜ ಸ್ಸರ್ವೇಷಾಂ" ಎಙ್ಗಿರಪಡಿಯೇ, ಉಭಯ ವಿಭೂತಿ ನಾಥನಾನ ಸರ್ವೇಶ್ವರರ್ ತಾನುಗನ್ದದೊರು ನಿಲತ್ತಿಲೆ ವೈಕ್ಕ, ಅಭಿಷಿಕ್ತೈಯಾನ ಮಹಿಷಿಯೈಪ್ಪೋಲೆ ಬಹುಮತ (ಮಾಯ್) ನಾಯ್‌ತ್ತ್ರ್ ಪರ ನೈಕಾಂತಿತ್ವತ್ತುಕ್ಕು ಅನುರೂಪಮಾನ ವೃತ್ತಿಯೋಡೇ ಪೋರುಮಿವ್ವಧಿ

ಪ್ರಕಾರವಾಗಿ ಹಿಂದಿನ ಅಧಿಕಾರಗಳಲ್ಲಿ ಉಪಪಾದಿಸಿದ ಹಾಗೆ, ಇದಕ್ಕೆ "ಪೋರು ಮಿವ್ವಧಿಕಾರೀ" ಎಂಬುವದರೊಂದಿಗೆ ಅನ್ವಯವು. "ಹೇ ವಿಭೋ - ಓ ಸ್ವಾಮಿಯೇ, **ಲೋಕವಿಕ್ರಾನ್ತ ಚರಣೌ** - ತ್ರಿವಿಕ್ರಮಾವತಾರಿಯಾಗಿ ಸರ್ವ ಲೋಕವನ್ನೂ ಆಕ್ರಮಿಸಿದ ಎರಡು ಪಾದಗಳನ್ನೂ, **ಶರಣಂ** – ಉಪಾಯವಾಗಿ, **ಅವ್ರಜಂ** - ಹೊಂದಿದೆನು" **ಎನ್ರು** - ಎಂದು, **ಇರ್ವರ್** - ಈ ಮೋಕ್ಷಾರ್ಥಿಯು, **ಕಾಲ್ಶೈಪಿಡಿಕ್ಕ** – ಕಾಲನ್ನು ಹಿಡಿದುಕೊಂಡರೆ ಎಂದರೆ ಶರಣಾಗತನಾದರೆ, "**ಹಸ್ತಾವಲಂಬನೋಹಿ** - ಕೈಹಿಡಿದು ಎತ್ತುವವನಾದರೋ, **ಏಕಃ**-ಒಬ್ಬನಾದ, "**ಭಕ್ತಿಕ್ರೀತಃ** - ಭಕ್ತಿಗೆ ಮಾರಲ್ಪಟ್ಟವನಾದ, ಎಂದರೆ ಭಕ್ತಿಯಿಂದ ಸ್ವಾಧೀನ ನಾಗುವ, **ಜನಾರ್ದನಃ** - ಮಹಾ ವಿಷ್ಣುವು, (ಈತನು ಪ್ರಳಯ ಕಾಲದಲ್ಲಿ ಚೇತನ ರನ್ನು ಪೀಡಿಸುವನು ಎಂದರೆ ಸೂಕ್ಷ್ಮಾವಸ್ಥೆಯನ್ನು ಹೊಂದುವಹಾಗೆ ಮಾಡು ವನು, ಆದರಿಂದ ಜನಾರ್ದನನೆಂದು ಹೆಸರು)" **ಎಙ್ಗಿರಪಡಿಯೇ** ಎಂದು ಹೇಳಿ ರುವ ಹಾಗೆ, **ಇವನೈ ಕ್ಕೈಪಿಡಿತ್ತು** - ಈ ಪ್ರಪನ್ನನನ್ನು ಕೈಹಿಡಿದು ಎತ್ತಿ, "**ಸರ್ವೇಷಾಂ** - ಸಮಸ್ತರಿಗೂ, **ರಾಜಾಧಿರಾಜಃ** - ರಾಜರುಗಳಿಗೂ ಕೂಡ ರಾಜ ನಾದ ಚಕ್ರವರ್ತಿಯು" ಎಂದು ಹೇಳಿರುವ ಹಾಗೆ, **ಉಭಯ ವಿಭೂತಿನಾಥ ನಾನ** - ಸೃಷ್ಟಿಸ್ಥಿತಿಲಯಗಳಿಗೆ ವಶವಾದ ಲೀಲಾವಿಭೂತಿಯೂ, ಹಾಗೆ ವಶವಾಗದ ನಿತ್ಯವಾದ ನಿತ್ಯವಿಭೂತಿಯೂ ಇವೆರಡಕ್ಕೂ ಸ್ವಾಮಿಯಾಗಿ ನಿಯಾಮಕನಾದ ಸರ್ವೇಶ್ವರನು, **ತಾನುಗನ್ದದೊರು ನಿಲತ್ತಿಲೆ** - ತಾನು ಅತ್ಯಂತಾಭಿಮಾನದಿಂದ ತನಗಿಷ್ಟಪಟ್ಟ ಸ್ಥಿತಿಯಲ್ಲಿ, **ವೈಕ್ಕ** - ಇಡಲು, **ಅಭಿಷಿಕ್ತೈಯಾನ ಮಹಿಷಿಯೈ ಪ್ಪೋಲೆ** – ಅಭಿಷೇಕ ಮಾಡಲ್ಪಟ್ಟ ಪಟ್ಟ ಮಹಿಷಿಯ ಹಾಗೆ, ಬಹುಮತ ನಾಯ್ - ಸರ್ವೇಶ್ವರನ ಪ್ರೀತಿಗೆ ಪಾತ್ರನಾಗಿ, **ತ್ತ್ರ್ ಪರನೈಕಾಂತಿತ್ವತ್ತುಕ್ಕು ಅನುರೂಪಮಾನ ವೃತ್ತಿಯೋಡೆ** - ಭಕ್ತಿಜ್ಞಾನಗಳ ವಿನಾ ಇನ್ಯಾವದನ್ನೂ

---

(೨) ವಿಷ್ಣು ಧರ್ಮ ೩.೨೪. (೩) ಭಾರತ.

ಅಪೇಕ್ಷಿಸದಿರುವ ತನ್ನ ವೈರಾಗ್ಯಕ್ಕೆ ಅನುಗುಣವಾದ ಅನುಷ್ಠಾನದೊಂದಿಗೆ, ಇವ್ವ ಧಿಕಾರೀ - ಈ ಕೃತಕೃತ್ಯನಾದ ಪ್ರಪನ್ನನು, **ಪೋರುವರ್** - ವರ್ತಿಸತಕ್ಕದ್ದು. ಕೃತಕೃತ್ಯನು ಹೇಗೆ ವರ್ತಿಸತಕ್ಕದ್ದೆಂದು ಹಿಂದಿನ ಎಂಟು ಅಧಿಕಾರಗಳಲ್ಲಿ ಹೇಳಿದುದನ್ನೇ ಸಂಗ್ರಹವಾಗಿ ಈ ವಾಕ್ಯದಿಂದ ಜ್ಞಾಪಕ ಕೊಡುತ್ತಾರೆ. **ಕಾಲೈ ಪಿಡಿಕ್ಕ** ಎಂಬುವದರಿಂದ ಸಾಙ್ಗಪ್ರಪದನಾಧಿಕಾರಾರ್ಥವು ಹೇಳಲ್ಪಟ್ಟಿತು. **ಇವನೈ ಕೈಪಿಡಿತ್ತು** ಎಂಬುವದರಿಂದ ರಕ್ಷ್ಯವಸ್ತುವೆಂದು ಸರ್ವೇಶ್ವರನು ಸ್ವೀಕರಿಸಿದನೆಂಬರ್ಥವು ತೋರಿಬರುವದರಿಂದ ಕೃತಕೃತ್ಯಾಧಿಕಾರಾರ್ಥವು ಬೋಧಿಸಲ್ಪಟ್ಟಿತು. ಇಲ್ಲಿ **ಲೋಕವಿಕ್ರಾನ್ತಚರಣೌ** ಎಂಬುವದರಿಂದ ಸರ್ವೇಶ್ವರನ ನಿರ್ಹೇತುಕ ಕೃಪೆಯೂ, ಆತನು ಸರ್ವಲೋಕ ಶರಣ್ಯನೆಂಬುವದೂ, ಸರ್ವರೂ ತನ್ನನ್ನು ಆಶ್ರಯಿಸಬೇಕೆಂಬ ಸರ್ವೇಶ್ವರನ ಕುತೂಹಲವೂ ಪ್ರದರ್ಶಿಸಲ್ಪಟ್ಟವು. **ವಿಭೋ** ಎಂಬುವ ಸಂಬೋಧನೆಯಿಂದ ಆತನು ಸ್ವಾಮಿ, ನಾವು ಆತನಿಗೆ ಸ್ವಂ, ಆತನಿಗೆ ಶೇಷಭೂತರು ಎಂಬುದು ಹೇಳಲ್ಪಟ್ಟಿತು. **ಹಸ್ತಾವಲಂಬನ** ಎಂಬುವ ಪ್ರಯೋಗದಿಂದ, **ಮಗ್ನಾನಾಂ ಭವಿನಾಂ ಭವಾರ್ಣವಸಮುತ್ತಾರಾಯ ನಾರಾಯಣಃ,** ಸಂಸಾರಸಮುದ್ರದಲ್ಲಿ ಮುಳುಗಿ ಒದ್ದಾಡುತ್ತಿದ್ದಾರಲ್ಲಾ, ಇವರು ನನ್ನನ್ನಾಶ್ರಯಿಸಿದವರಾದುದರಿಂದ ಇವರನ್ನು ಕೈಹಿಡಿದು ಎತ್ತುವದು ತನ್ನ ಕರ್ತವ್ಯವೆಂದು ಭಾವಿಸುವವನೆಂದು ಹೇಳಲ್ಪಟ್ಟಿತು. ಅದೇನು ಹಾಗೆ ಎಂದರೆ ಆತನು **ಭಕ್ತಿಕ್ರೀತಃ** - ಭಕ್ತಿಗೆ ಮಾರಲ್ಪಟ್ಟವನು, ವಶ್ಯನು, ಭಕ್ತಪರಾಧೀನನೆಂಬ ಭಾವವು. ಇಲ್ಲಿ ಹಾಗೆ ಕೈಹಿಡಿದು ಎತ್ತುವನು "**ಏಕಃ**" ಎಂದು ಹೇಳಿರುವದರಿಂದ ಜನಾರ್ದನನಾದ ಶ್ರೀಮನ್ನಾರಾಯಣನಲ್ಲದೆ ಇತರರಿಗೆ ಅಂತಹ ಶಕ್ತಿಯಿಲ್ಲವೆಂಬ ಭಾವವು; ಬ್ರಹ್ಮರುದ್ರೇಂದ್ರಾದಿಗಳಾಶ್ರಯವು ಪ್ರಪನ್ನನಿಗೆ ಸುತರಾಂ ಯೋಗ್ಯವಲ್ಲವೆಂಬ ಭಾವವೂ ಪ್ರದರ್ಶಿಸಲ್ಪಟ್ಟಿತು. **ಕೈಪಿಡಿತ್ತು** ಎಂಬುವದರಿಂದ ಆತನೇ ಪುರುಷಸೂಕ್ತದಲ್ಲಿ ಹೇಳಿರುವ ಹಾಗೆ ಪುರುಷನಾಗಿ, "**ಸ್ತ್ರೀಪ್ರಾಯಮಿತರತ್**" ಎಂಬ ಹೇಳಿಕೆಗೆ ಅನುಸಾರವಾಗಿ ಸ್ತ್ರೀಯಾದುದರಿಂದ, ಈ ಚೇತನನ ಪಾಣಿಗ್ರಹಣವನ್ನು ಮಾಡಿ, ಪತಿಯು ಪಾರತಂತ್ರ್ಯವನ್ನು ಹೊಂದಿರುವ ಅಬಲೆಯಾದ ಮಹಾಪತಿವ್ರತೆಯನ್ನು ರಕ್ಷಿಸುವ ತೆರದಿ ರಕ್ಷಿಸುವನೆಂಬ ಭಾವವು ತೋರಿಬರುತ್ತದೆ. "**ಪ್ರಿಯೋ ಹಿ ಜ್ಞಾನಿನೋತ್ಯರ್ಥ ಮಹಂ ಸಚ ಮಮ ಪ್ರಿಯಃ**" (ಗೀ. ೭ ೧೭.) ನಾನು ಜ್ಞಾನಿಗೆ ಅತ್ಯಂತ ಪ್ರಿಯನು, ಆತನಾದರೋ ನನಗೂ ಪ್ರಿಯನು ಎಂದು ಶ್ರೀಕೃಷ್ಣನೇ ಹೇಳಿರುತ್ತಾನೆ. ಆದುದರಿಂದಲೇ ಮುಂದೆ **ಅಭಿಷಿಕ್ತೈಯಾನ ಮಹಿಷಿಯ್ಯೆಪ್ಪೋಲೆ** ಎಂಬ ದೃಷ್ಟಾಂತವನ್ನು ಸೂಚಿಸಿರುತ್ತಾರೆ. ಪತಿವ್ರತೆಯು ಹೇಗೆ ಪತಿಗೆ ವಿಧೇಯಳಾಗಿ, ಪರಮಪಾರತಂತ್ರ್ಯವನ್ನು ವಹಿಸಿ, ಆತನೇ ಪರಮಗತಿ

ಯಾಗಿ ಭಾವಿಸಿ, ತದೇಕಚಿತ್ತಳಾಗಿ, ತದೇಕಭೋಗ್ಯಳಾಗಿ, ಪತಿ ಕೈಂಕರ್ಯವೇ ಸರ್ವಸಂಪತ್ತೆಂದು ಭಾವಿಸುವಳೋ, ಹಾಗೆಯೇ ಪ್ರಪನ್ನನೂ ಸರ್ವೇಶ್ವರನ ವಿಷಯ ದಲ್ಲಿ ಎಲ್ಲಾದರಲ್ಲೂ ಪರಮಪಾರತಂತ್ರ್ಯವನ್ನು ವಹಿಸಿದವನಾಗಿ, ತದನನ್ಯಗತಿಕ ನಾಗಿ, ತದೇಕಚಿತ್ತನಾಗಿ, ತದೇಕ ಭೋಗ್ಯನಾಗಿ, ಸದಾ ತತ್ಕೈಂಕರ್ಯನಿರತನಾ ಗಿರತಕ್ಕದ್ದೆಂಬುದು ಸೂಚಿಸಲ್ಪಟ್ಟಿತು. ಇದರಿಂದ ಸ್ವನಿಷ್ಠಾಭಿಜ್ಞಾನ, ಉತ್ತರ ಕೃತ್ಯಾಧಿಕಾರಗಳ ಅರ್ಥವು ವ್ಯಕ್ತವು. **ತಾನುಗನ್ದದೊರುನಿಲತ್ತಿಲೆ** ಎಂಬಲ್ಲಿ ನಿಲಶಬ್ದವು ಸ್ಥಾನವಿಶೇಷಕ್ಕೂ ಅರ್ಥವಾಗುವದರಿಂದ ದೇವತಾಂತರ ಸಂಬಂಧ ಗಳಿರುವ ಸ್ಥಳದಲ್ಲಿ ನಿಲ್ಲಿಸದೆ ತನಗಭಿಮತವಾಗಿರುವ ಭಗವದ್ಭಾಗವತ ಪ್ರಾಚುರ್ಯ ವಿರುವ ಸ್ಥಳದಲ್ಲಿ **"ವೃತ್ತಿಂ ಕಲ್ಪಿತವಾನ್ ಪ್ರಭುಃ"** ಎಂದು ಹೇಳಿರುವ ಹಾಗೆ ವೃತ್ತಿಯನ್ನು ಕಲ್ಪಿಸಿ ನಿಲ್ಲಿಸುವನೆಂಬ ಸ್ಥಾನವಿಶೇಷಾಧಿಕಾರಾರ್ಥವು ಪ್ರದರ್ಶಿಸ ಲ್ಪಟ್ಟಿತು. ಇಲ್ಲಿ ಸರ್ವೇಶ್ವರನು ಉಭಯವಿಭೂತಿನಾಥನೆಂದು ಏಕೆ ಹೇಳಲ್ಪಟ್ಟ ನೆಂದರೆ, ಈ ಲೋಕವೂ, ದಿವ್ಯವೈಕುಂಠವೂ, ಎರಡೂ ಆತನ ವಿಭೂತಿಗಳೇಯಾ ದುದರಿಂದಲೂ ಈತನು ಪರತಂತ್ರನಾಗಿ, ಆತನು ಸ್ವತಂತ್ರನಾದುದರಿಂದಲೂ ಈತನನ್ನು ಸರ್ವೇಶ್ವರನು ಎಲ್ಲಿ ಇಡಲಿಷ್ಟವೋ ಅಲ್ಲಿ ಇಡಬಹುದು. ಐಹಿಕದಲ್ಲಿ ಜಿಹಾಸೆಯುಳ್ಳವನಿಗೆ, ಇಲ್ಲಿಯೂ ಕೂಡ ಪರಮಪದದಲ್ಲಿ ಲಭಿಸುವ ಆನಂದ ಕೈಂಕರ್ಯಾದಿಗಳು ಸ್ವಲ್ಪ ಮಟ್ಟಿಗೆ ಲಭಿಸುತ್ತವೆಯಾದುದರಿಂದ ಸರ್ವೇಶ್ವರನು ಇಲ್ಲಿಯೇ ಕೆಲವುಕಾಲವಿಟ್ಟರೆ ಅದೂ ಈತನಿಗೆ ಸಮ್ಮತವೇ ಸರಿ ಎಂಬ ಭಾವದಿಂದ ಹಾಗೆ ಹೇಳಲ್ಪಟ್ಟಿತು. ಈತನು **"ಭಾವೋ ನಾನ್ಯತ್ರಗಚ್ಛತಿ"** ಎಂದು ಹೇಳಿ ರುವ ಹಾಗೆ ಅರ್ಚಾವತಾರಿಯಾದ ಸರ್ವೇಶ್ವರನಲ್ಲೇ ಚಿತ್ತವೃತ್ತಿಯುಳ್ಳವನಾದುದ ರಿಂದ, ಇಲ್ಲಿನ ವಾಸಕ್ಕೂ ದಿವ್ಯ ವೈಕುಂಠ ವಾಸಕ್ಕೂ ಏನೊಂದೂ ವ್ಯತ್ಯಾಸವಿಲ್ಲದೆ ಸ್ವಾಮ್ಯಭಿಮತಾನುಸಾರವಿರಲು ಸಮ್ಮತಿಸುವನೆಂಬ ಭಾವವು. **ಬಹುಮತ ನಾಯ್** ಎಂಬುದರಿಂದ ಸರ್ವೇಶ್ವರನ ಅನುಗ್ರಹವನ್ನು ಮುಖ್ಯವಾಗಿ ಈತನು ಹೊಂದಬೇಕೆಂದೂ ಬುದ್ಧಿಪೂರ್ವೋತ್ತರಾಘಗಳಿಂದ ಆತನ ನಿಗ್ರಹಕ್ಕೆ ಪಾತ್ರ ನಾಗಕೂಡದೆಂದು ಅಪರಾಧಪರಿಹಾರಾಧಿಕಾರಾರ್ಥವು ಇಲ್ಲಿ ತೋರಿಬರುತ್ತದೆ. ಸರ್ವೇಶ್ವರನು ಇತರರನ್ನು ಬಿಟ್ಟು ಈತನನ್ನು ಬಹುಮಾನಿಸುವದು ಯುಕ್ತವಾದು ದೆಂಬಭಿಪ್ರಾಯವೂ **ಬಹುಮತನಾಯ್** ಎಂಬುವದರಿಂದ ತೋರಿಬರುತ್ತದೆ. **ತನ್ ಪರನ್ಮೈಕಾಂತಿತ್ವಕ್ಕೆ ಅನುರೂಪವಾನ ವೃತ್ತಿ** ಎಂದು ಹೇಳಿರುವದ ರಿಂದ, ಆ ವೃತ್ತಿಯು ಆಜ್ಞಾನುಜ್ಞಾ ಕೈಂಕರ್ಯಗಳಾಗುವದರಿಂದ ಶಾಸ್ತ್ರೀಯ ನಿಯಮನಾಧಿಕಾರಾರ್ಥವೂ, ಮತ್ತು ಭಗವತ್ಕೈಂಕರ್ಯವೂ ತತ್ಪರಾಕಾಷ್ಠೆಯಾದ ಭಾಗವತ ಕೈಂಕರ್ಯವೂ ಮತ್ತು ಅವರುಗಳ ಪ್ರಸನ್ನತೆಯ ಸಂಪಾದನೆಯೂ ಆಗು

ಕಾರೀ. ಇಪ್ಪಡಿಪ್ಪಟ್ಟ ಅಧಿಕಾರಿಗಳಿಲೇ ಪ್ರಾರಬ್ಧ ದುಷ್ಕೃತೆ ವಿಶೇಷ ವೈಚಿತ್ರಿಯಾಲೆ ವರುಮ್ ಅಹಂಕಾರ ಮಮಕಾರಗಳೆನ್ನ, ಅನ್ಯೆಯಡಿ ಯಾಕ ವರುಮ್ ಅಪಚಾರಙ್ಗಳೆನ್ನ, ಪ್ರಯೋಜನಾಂತರ ರುಚಿಯೆನ್ನ, ಅದಡಿಯಾಗ ಸಂಭಾವಿತಮಾನ ದೇವತಾಂತರ ಸ್ಪರ್ಶಮೆನ್ನ, ಬುದ್ಧಿ

ವದರಿಂದ ಪುರುಷಾರ್ಥಕಾಷ್ಠಾಧಿಕಾರದಭಿಪ್ರಾಯವೂ ಸೂಚಿಸಲ್ಪಟ್ಟಿತು. ಈ ವಿಧವಾಗಿ ಈ ಕೃತಕೃತ್ಯನಾದ ಪ್ರಪನ್ನನು ದೇಹಾವಸಾನದವರೆಗೂ ವರ್ತಿಸ ತಕ್ಕದ್ದೆಂದುಪದೇಶಿಸಿದರು.

ಈ ಕೃತಕೃತ್ಯರಾದ ಪ್ರಪನ್ನರು ಹಿಂದೆ ಹೇಳಿದ ರೀತಿಯಲ್ಲೇನೋ ಇರ ತಕ್ಕದ್ದು. ಆದರೆ ಪ್ರಾರಬ್ಧ ಪಾಪವಿಶೇಷವು ಕೆಲವರ ವಿಷಯದಲ್ಲಿ ಪ್ರಬಲವಾಗಿ ಕೆಲವು ವೈಪರೀತ್ಯಗಳುಂಟಾಗುತ್ತವೆಂದೂ, ಇನ್ನು ಕೆಲವರಿಗೆ ಕೆಲವು ಸುಕೃತಾದಿ ಕಾರಣಗಳಿಂದ ಅಂತಹ ವೈಪರೀತ್ಯಗಳುಂಟಾಗದೇ ಇರುವದರಿಂದ, ಮೊದಲನೆಯ ವರಿಗೆ ನಿರ್ಯಾಣಕ್ಕೆ ವಿಳಂಬವೂ, ಎರಡನೆಯವರಿಗೆ ಅವಿಳಂಬವೂ ಉಂಟಾಗುತ್ತ ದೆಂದುಪದೇಶಿಸುತ್ತಾರೆ. ಕೆಲವರಿಗೆ ವಿಳಂಬವುಂಟೆಂದು ಹೇಳಿತಲ್ಲಾ, ಆ ವಿಳಂಬ ವೇನು ಕಲ್ಪಾಂತಪರ್ಯಂತವೇ ? ಜನ್ಮಾಂತ ಪರ್ಯಂತವೇ ? ಕೆಲವರಿಗೆ ವಿಳಂಬ ವಿಲ್ಲವೆಂದು ಹೇಳಲ್ಪಟ್ಟಿತಲ್ಲಾ, ಅದೇನು ಉತ್ತರ ಕ್ಷಣದಲ್ಲೇ ? ಅಥವಾ ಶರೀರಾ ವಸಾನದಲ್ಲಿಯೇ ? ಈ ಪ್ರಶ್ನೆಗಳಿಗೂ ಸಮಾಧಾನವನ್ನು ದಯಪಾಲಿಸುತ್ತಾರೆ. **ಇಪ್ಪಡಿಪ್ಪಟ್ಟ ಅಧಿಕಾರಿಗಳಿಲೇ** - ಇಂತಹ ಕೃತಕೃತ್ಯರಾದ ಅಧಿಕಾರಿಗಳಲ್ಲಿ, **ಪ್ರಾರಬ್ಧ ದುಷ್ಕೃತ ವಿಶೇಷ ವೈಚಿತ್ರಿಯಾಲೇ** - ಪ್ರಾರಬ್ಧವು ಅಭ್ಯುಪಗತ, ಅನಭ್ಯುಪಗತವೆಂದು ಎರಡು ವಿಧವೆಂಬದಾಗಿ ಹಿಂದೆಯೇ ಹೇಳಲ್ಪಟ್ಟಿತು. ಅನ ಭ್ಯುಪಗತವು ಇನ್ನೂ ಪ್ರಾರಂಭವಾಗಲಿಲ್ಲವಾದುದರಿಂದ, ಇಲ್ಲಿ ಪ್ರಾರಬ್ಧವೆಂದರೆ ಅಭ್ಯುಪಗತ ಪ್ರಾರಬ್ಧವು, ಅದರ, **ದುಷ್ಕೃತೆ ವಿಶೇಷ** - ಪಾಪಾಂಶದ, **ವೈಚಿತ್ರಿ ಯಾಲೇ** - ವಿಚಿತ್ರತೆಯಿಂದ, ವಿಜಾತೀಯವಾದುದೆಂಬ ಭಾವವು, **ವರುಮ್** - ಉಂಟಾಗುವ, ಅಹಂಕಾರ ಮಮಕಾರಗಳೇನು, **ಅನ್ಯೆಯಡಿಯಾಗ** - ಆ ಅಹಂ ಕಾರ ಮಮಕಾರಗಳ ಮೂಲಕವಾಗಿ, **ವರುಮ್ ಅಪಚಾರಙ್ಗಳೆನ್ನ** - ಉಂಟಾ ಗುವ ಭಗವದ್ಭಾಗವತ ಅಪಚಾರಗಳೇನು, **ಪ್ರಯೋಜನಾಂತರ ರುಚಿಯೆನ್ನ** - ಬೇರೆ ಪ್ರಯೋಜನಗಳಾದ ಅರ್ಥ ಕಾಮಗಳ ರೂಪವಾದ ಐಹಿಕಪ್ರಯೋಜನ ಗಳಲ್ಲಿ ಆಶೆ ಏನು, **ಅದಡಿಯಾಕ ಸಂಭಾವಿತಮಾನ ದೇವತಾಂತರ ಸ್ಪರ್ಶ ಮೆನ್ನ** - ಆ ಐಹಿಕ ಪ್ರಯೋಜನದ ಆಶೆ ಮೂಲಕ ಉಂಟಾಗುವ ಅನ್ಯದೇವತಾ

ದೌರ್ಬಲ್ಯಮೆನ್ನ, ಅದಡಿಯಾಗ ವರುಮ್ ಉಪಾಯಾಂತರ ಪ್ರತ್ಯಾಶೆಯೆನ್ನ, ಇನ್ವೈಪರೀತ್ಯಮ್ ಪಿರನ್ದವರ್‌ಗಳುಕ್ಕುಮ್, ಇನ್ವೈ ಪಿರಿವಾದೆ ಪ್ರಾರಬ್ಧ ಸುಕೃತ ವಿಶೇಷತ್ತಾಲುಮ್, ಪೂರ್ವಪ್ರಪತ್ತಿಯಿಲ್ ಫಲಸಙ್ಕಲ್ಪ ವಿಶೇಷತ್ತಾಲುಮ್, ಛಿದ್ರಮಿಲ್ಲಾದ ಕೈಙ್ಕರ್ಯತ್ತಿಲೆ ಪ್ರತಿಷ್ಠಿತರಾಯ್ ಪ್ಪೋನ್ದವರ್‌ಗಳುಕ್ಕುಮ್, ಸಂಸಾರತ್ತಿಲ್ ನಿನ್ರುಮ್ ನಿರ್ಯಾಣತ್ತುಕ್ಕು ವಿಳಂಬಾ ವಿಳಂಬಙ್ಗಳಿಲ್ ನಿಲ್ೈ ಇರುಕ್ಕುಮ್‌ಪಡಿ, ಎಙ್ಗನೇ ಎನ್ನಿಲ್.

ಸಂಬಂಧವೇನು, **ಸ್ಪರ್ಶವೆಂದು** ಹೇಳಿರುವದರಿಂದ ಅನ್ಯದೇವತಾಸ್ಪೃಕ್ಕೇ ಪ್ರಪನ್ನನಿಗೆ ಸರ್ವಾತ್ಮನಾ ಕೂಡದೆಂಬ ಭಾವವು ತೋರಿಬರುತ್ತದೆ, **ಬುದ್ಧಿದೌರ್ಬಲ್ಯಮೆನ್ನ** - ವಿಶ್ವಾಸ ಕಮ್ಮಿಯಾಗೋಣವೇನು, **ಅದಡಿಯಾಗ ವರುಮ್ ಉಪಾಯಾಂತರ ಪ್ರತ್ಯಾಶೆಯೆನ್ನ**-ಪ್ರಪದನವು ಕಾರ್ಯಕಾರಿಯಾಗುತ್ತದೋ ಇಲ್ಲವೋ ಎಂಬದಾಗಿ ವಿಶ್ವಾಸವು ಯಾವಾಗ ಕಮ್ಮಿಯಾಯಿತೋ ತನ್ಮೂಲಕವಾಗಿ ಉಂಟಾಗುವ ಬೇರೆ ಉಪಾಯವೆಂದರೆ ಉಪಾಸನೆ ಮಾಡಬೇಕೆಂಬ ಆಪೇಕ್ಷೆಯೇನು, **ಇನ್ವೈಪರೀತ್ಯಮ್ ಪಿರನ್ದವರ್‌ಗಳುಕ್ಕುಮ್** - ಇಂತಹ ಅಪರಾಧ ಪ್ರಾಪ್ತಿ ಉಂಟಾದವರಿಗೆ, **ಸಂಸಾರತ್ತಿಲ್ ನಿನ್ರುಮ್ ನಿರ್ಯಾಣತ್ತುಕ್ಕು ವಿಳಂಬತ್ತಿಲ್ ನಿಲ್ೈ ಯಿರುಕ್ಕುಂಪಡಿ** - ಎಂಬುದರೊಂದಿಗೆ ಅನ್ವಯವು, ಈ ಜನ್ಮದಿಂದ ನಿರ್ಯಾಣಕ್ಕೆ ವಿಳಂಬಾವಿಳಂಬ ಉಂಟಾಗುವದರ ಪ್ರಕಾರವೂ, ಹೇಗೆ ಎಂಬುದನ್ನು ತಿಳಿಸುತ್ತಾರೆ. ಮುಂದೆ ಯಾರಿಗೆ ವಿಳಂಬವಿಲ್ಲವೆಂದರೆ ಹೇಳುತ್ತಾರೆ:—**ಇನ್ವೈ ಪಿರಿವಾದೆ** - ಈ ಅಹಂಕಾರ ಮಮಕಾರಗಳೂ, ಅಪಚಾರಗಳೂ, ಐಹಿಕಗಳಲ್ಲಿ ಮಮತೆಯೂ, ದೇವತಾಂತರ ಭಜನವೂ, ಬುದ್ಧಿದೌರ್ಬಲ್ಯವೂ, ಉಪಾಯಾಂತರ ಪರಿಗ್ರಹವೂ, ಇವುಗಳು ಯಾವುವೂ ಉಂಟಾಗದೆ, **ಪ್ರಾರಬ್ಧ ಸುಕೃತ ವಿಶೇಷದಿಂದ, ಪೂರ್ವಪ್ರಪತ್ತಿಯಿಲ್** - ಮೊದಲು ಪ್ರಪತ್ತ್ಯನುಷ್ಠಿಸುವ ಕಾಲದಲ್ಲೇ, **ಫಲಸಙ್ಕಲ್ಪ ವಿಶೇಷತ್ತಾಲುಮ್** - ಬುದ್ಧಿಪೂರ್ವೋತ್ತರಾಘಕ್ಕೆ ಕಾರಣಭೂತವಾದ ಪ್ರಾರಬ್ಧಪಾಪಾಂಶವೂ ನಷ್ಟವಾಗಬೇಕೆಂಬ ಫಲಕ್ಕಾಗಿ ಮಾಡಿದ ಸಙ್ಕಲ್ಪ ವಿಶೇಷದಿಂದ, **ಛಿದ್ರಮಿಲ್ಲಾದ ಕೈಙ್ಕರ್ಯತ್ತಿಲೇ** - **ಉಪಚಾರಾಪದೇಶೇನ ಕೃತಾನಹರಹರ್ಮಯಾ । ಅಪಚಾರಾನಿಮಾನ್ ಸರ್ವಾನ್ ಕ್ಷಮಸ್ವಪುರುಷೋತ್ತಮ** ಎಂಬ ವಾಕ್ಯದಲ್ಲಿ ತೋರಿಬರುವ ಹಾಗೆ ಅಪಚಾರಗಳಿಲ್ಲದ ಕೈಙ್ಕರ್ಯದಲ್ಲಿ, **ಪ್ರತಿಷ್ಠಿತರಾಯ್** - ದೃಢಾಸಕ್ತಿಯುಳ್ಳ, **ಪೋನ್ದವರ್‌ಗಳುಕ್ಕುಮ್** - ಪ್ರವೃತ್ತಿಯುಳ್ಳವರಿಗೆ, **ಸಂಸಾರತ್ತಿಲ್ ನಿನ್ರು ನಿರ್ಯಾಣತ್ತುಕ್ಕು** - ಈ ಜನ್ಮ

ದಿಂದ ನಿರ್ಯಾಣಕ್ಕೆ, ಅವಿಳಂಬಙ್ಗಳಿಲ್ ನಿಲೈ ಯಿರುಕ್ಕುಂಪಡಿ - ವಿಳಂಬವಿಲ್ಲ ದಿರುವವರ ಪ್ರಕಾರವೂ, ಎಙ್ಗನೇ ಎನ್ನಿಲ್ - ಹೇಗೆಂದರೆ, ಮುಂದೆ ಹೇಳು ತ್ತಾರೆ.

"ತಾವದಾರ್ತಿ ಸ್ತಥಾ ವಾಂಛಾ ತಾವನ್ಮೋಹಃ ತಥಾ ಸುಖಂ । ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ ॥" ಎಂಬ ಪ್ರಮಾಣ ದಲ್ಲಿ ಶರಣ ಹೊಂದಿದ ಒಡನೆಯೇ ಫಲಪ್ರಾಪ್ತಿಯು ಎಂದು ತೋರಬಹುದು. (ಈ ಶ್ಲೋಕದ ಸರಿಯಾದ ಅರ್ಥಕ್ಕೆ ೮೪ನೆಯ ಪುಟ ನೋಡಿ) "ತನೂಕೃತ್ಯಾ ಖಿಲಂ ಪಾಪಂ ಮಾಮಾಪ್ನೋತಿ ನರಶ್ಶನೈಃ । ಅಥೋಪಾಯ ಪ್ರಸ ಕ್ತೋಪಿ ಭುಕ್ತ್ವಾ ಭೋಗಾನನಾಮಯಾನ್ । ಅನ್ತೇ ವಿರಕ್ತಿ ಮಾಸಾದ್ಯ ವಿಶತೇ ವೈಷ್ಣವಂ ಪದಂ ॥" ಎಂಬುವ ಪ್ರಮಾಣದಲ್ಲಿ ವಿಳಂಬವು ತೋರಿಬರು ತ್ತದೆ. (೧೫೩ನೆಯ ಪುಟ ನೋಡಿ) ಹೀಗೆ ಪ್ರಮಾಣಗಳು ವಿಳಂಬಾವಿಳಂಬ ಗಳನ್ನು ಬೋಧಿಸುವ ಹಾಗೆ ತೋರುತ್ತವೆ. ಇವುಗಳ ಸರಿಯಾದಭಿಪ್ರಾಯಗಳೇ ನೆಂಬುದನ್ನು ತಿಳಿಸುವರಾಗಿ ಈ ಮೇಲಿನ ವಾಕ್ಯಮೂಲಕವಾಗಿ, ಹೀಗೆ ಪ್ರಪತ್ತ್ಯ ನುಷ್ಠಿಸಿದವರಲ್ಲಿ ಯಾರಿಗೆ ನಿರ್ಯಾಣಕ್ಕೆ ವಿಳಂಬ ಉಂಟೆಂದೂ, ಯಾರಿಗೆ ವಿಳಂಬ ವಿಲ್ಲವೆಂದೂ ಉಪದೇಶಿಸುತ್ತಾರೆ. ಪ್ರಾರಬ್ಧದಲ್ಲಿ ಕೆಲವರಿಗೆ ದುಷ್ಕೃತವಿಶೇಷ ವುಂಟು. ಕೆಲವರಿಗೆ ಸುಕೃತವಿಶೇಷವುಂಟು ದುಷ್ಕೃತವಿಶೇಷವಿದ್ದವರು, ಈ ದುಷ್ಕೃತವು ಬುದ್ಧಿಪೂರ್ವೋತ್ತರಾಘಗಳನ್ನುಂಟುಮಾಡದ ಹಾಗೆ, ಪ್ರಪದನಕಾಲ ದಲ್ಲೇ ದುಷ್ಕೃತನಾಶಕ್ಕಾಗಿ ಸಙ್ಕಲ್ಪಿಸಿ ಅನುಷ್ಠಿಸಬೇಕಾಗಿತ್ತು. ಹಾಗೆ ಅನುಷ್ಠಿ ಸದೇ ಇದ್ದವರಿಗೆ ಬುದ್ಧಿಪೂರ್ವೋತ್ತರಾಘಗಳು ಪ್ರಾಪ್ತವಾಗುವ ಕ್ರಮವನ್ನು ಬೋಧಿಸುತ್ತಾರೆ. ಮೊದಲು ಅಹಂಕಾರ ಮಮಕಾರಗಳೂ, ತನ್ಮೂಲಕ ಭಗವ ದ್ಭಾಗವತಾಪಚಾರಗಳೂ, ಐಹಿಕಾಸಕ್ತಿಗಳೂ, ತತ್ಪ್ರಾಪ್ತಿಗಾಗಿ ಅನ್ಯದೇವತಾ ಭಜನವೂ, ಮಹಾವಿಶ್ವಾಸನಾಶವೂ, ಆ ಕಾರಣದಿಂದ ಅನ್ಯೋಪಾಯಾವಲಂಬ ನವೂ ಉಂಟಾಗುತ್ತವೆಂದೂ ತಿಳಿಸಿ, ಆ ಕಾರಣದಿಂದ ಅಂತಹ ಪ್ರಾರಬ್ಧ ದುಷ್ಕೃ ತವಿರುವಧಿಕಾರಿಗಳಿಗೆ ನಿರ್ಯಾಣಕ್ಕೆ ಕೆಲವರಿಗೆ ವಿಳಂಬವು ಉಂಟಾಗುತ್ತದೆಂಬ ಅಭಿಪ್ರಾಯವು. ಹಾಗಲ್ಲದೆ ಮೊದಲು ಪ್ರಪದನ ಮಾಡುವಾಗಲೇ ಪ್ರಾರಬ್ಧ ದುಷ್ಕೃತವಿನಾಶಕ್ಕೂ ಸಙ್ಕಲ್ಪಿಸಿದ್ದರಾಗಲಿ, ಅಥವಾ ಪ್ರಾರಬ್ಧದಲ್ಲಿ ದುಷ್ಕೃತ ವಿಲ್ಲದೆ ಸುಕೃತವೇ ಇರುವವರಿಗಾಗಲಿ, ಇಂತಹ ವಿಪರೀತಗಳು ಯಾವುವೂ ಪ್ರಾಪ್ತವಾಗುವದಿಲ್ಲವಾದುದರಿಂದ ವಿಳಂಬವೇ ಇಲ್ಲವೆಂದು ಹೇಳುತ್ತಾರೆ.

ಕೆಲವರಿಗೆ ವಿಳಂಬ ಉಂಟು ಎಂದು ಹೇಳಿದರೆ, ಆ ವಿಳಂಬವೇನು ಜನ್ಮಾಂ ತರ ಕಲ್ಪಾಂತರ ಪರ್ಯಂತವೇ ? ಇಲ್ಲವೇ ದೇಹಾವಸಾನದಲ್ಲೇ ವಿಳಂಬವೇ ? ಎಂಬ

ವಿಳಂಬ ಹೇತುಭೂತ ವೈಪರೀತ್ಯಾನಾಂ ಪರಿಹಾರಕ್ರಮಃ

ಇ(ಅ)ವ್ವಿಡತ್ತಿಲವರ್‌ಗಳುಕ್ಕು ಚಾರ್ವಾದಿಗಳಕ್ಕುಪ್ಪೋಲೆ ನಿಲ್ಲೈನಿನ್ರ ಅಹಙ್ಕಾರ ಮಮಕಾರಙ್ಗಳ್ ಪುಗಿರಾದು. ಅವಹಿತರಾಯ್ ನಡಪ್ಪಾ

ಪ್ರಶ್ನೆಯು ನ್ಯಾಯುವಾದುದು. ಅದಕ್ಕೆ ಉತ್ತರವು ಈ ದೇಹಾವಸಾನಕ್ಕೇ ವಿಳಂಬವೇ ವಿನಾ, ಸರಿಯಾಗಿ ಪ್ರಪದನಾನುಷ್ಠಾನ ಮಾಡಿದ ಅಧಿಕಾರಿಗೆ ಜನ್ಮಾಂತರಗಳಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಆ ಅಪರಾಧಗಳ ಪರಿಹಾರ ಹೇಗೆ ಎಂದು ಮುಂದೆ ಕೇಳಬೇಕಾಗುತ್ತದೆ. ಆದುದರಿಂದ ಈ ಅಹಂಕಾರ ಮಮಕಾರವೇ ಮೊದಲಾದ ಕ್ರಮವಾಗಿ ಪ್ರಾಪ್ತವಾಗುವ ವೈಪರೀತ್ಯಗಳ ಪರಿಹಾರ ಹೇಗೆ ಎಂಬುವದನ್ನೂ ಸಹ ಬೋಧಿಸುತ್ತಾರೆ. ಆದುದರಿಂದ ಹಿಂದಿನ ವಾಕ್ಯದಲ್ಲಿ **ನಿಲ್ಲೈ ನಿನ್ರ** - ಎಂದು ಹೇಳಿದುದರಭಿಪ್ರಾಯವು, ಆ ಕಾಲವಿಳಂಬವು ಎಷ್ಟರವಟ್ಟಿಗೆ ಮತ್ತು ಆ ವಿಳಂಬ ಕಾರಣಗಳ ಪರಿಹಾರ ಹೇಗೆಂಬುದನ್ನು ಸೂಚಿಸುವಂಥಾದ್ದಾಗಿದೆ.

ಇನ್ನು ಕೆಲವು ಸುಕೃತಿಗಳಿಗೆ ವಿಳಂಬವಿಲ್ಲವೆಂದರೆ, ಭರನ್ಯಾಸ ಮಾಡಿದ ಉತ್ತರ ಕ್ಷಣದಲ್ಲಿಯೇ ? ಅಥವಾ ದೇಹಾವಸಾನಾನಂತರವೇ ? ಎಂಬ ಪ್ರಶ್ನೆಯು ಯುಕ್ತವಾದುದು. ಆರ್ತನಾದರೆ ಒಡನೆಯೂ, ದೃಪ್ತನಾದರೆ ಪ್ರಾರ್ಥಿಸಿದ ಹಾಗೆ ದೇಹಾವಸಾನದಲ್ಲೂ ನಿರ್ಯಾಣವು ಪ್ರಾಪ್ತವಾಗುತ್ತದೆಂದು ಉಪದೇಶಿಸುತ್ತಾರೆ.

ವಿಳಂಬಕ್ಕೆ ಕಾರಣಗಳಾದ ದೋಷಗಳ ಪರಿಹಾರ ಕ್ರಮವು.

ಮೊದಲು ಅಹಂಕಾರ ಮಮಕಾರಗಳ ಪರಿಹಾರವು ಈ ಅಧಿಕಾರಿಗಳಿಗೆ ನಿರ್ಯಾಣಕಾಲದೊಳಗೇನೆ ಉಂಟಾಗುವ ಕ್ರಮವನ್ನು ಸೂಚಿಸುತ್ತಾರೆ :—**ಇವ್ವಿಡತ್ತಿಲ್** - ಈ ಸಂದರ್ಭದಲ್ಲಿ, **ಅವರ್‌ಗಳುಕ್ಕು** - ಆ ಪ್ರಾರಬ್ಧ ದುಷ್ಕೃತವಿರುವ ಪ್ರಪನ್ನರಿಗೆ, **ಚಾರ್ವಾದಿಗಳುಕ್ಕುಪ್ಪೋಲೆ** - ತಾನಲ್ಲದೆ ಬೇರೆ ಪರಮಾತ್ಮನಿಲ್ಲವೆಂದೂ, ಈ ಲೋಕವಲ್ಲದೆ ಬೇರೇ ಇನ್ನು ಸ್ವರ್ಗ ವೈಕುಂಠಾದಿಗಳು ಯಾವುವೂ ಇಲ್ಲವೆಂದೂ, ಹೇಳುವ ನಾಸ್ತಿಕರ ಹಾಗೆ, **ನಿಲ್ಲೈ ನಿನ್ರ**, **ಅಹಂಕಾರ ಮಮಕಾರಙ್ಗಳ್ ಪುಗಿರಾದು** - ಸ್ಥಿರವಾಗಿ ನಿಲ್ಲುವ ಅಹಂಕಾರ ಮಮಕಾರಗಳು ಪ್ರವೇಶಿಸಲಾರವು. ನಾಸ್ತಿಕನಾದರೋ ಪರಮಾತ್ಮನೇ ಇಲ್ಲವೆಂದು ಹೇಳುವದರಿಂದ ಅಂಥಾವನಲ್ಲಿ ಅಹಂಕಾರ ಮಮಕಾರಗಳು ಸ್ಥಿರವಾಗಿ ನಿಲ್ಲಬಹುದು. **ಋಣಂ ಕೃತ್ವಾ**

ರಿಡರುಮಾಪ್ಪೋಲೆ ಎಙ್ಗನು ನೊರುಕ್ಕಾಲ್ ವರುಮ್ ; ಅಹಂಕಾರ ಮಮಕಾರಙ್ಗಳ್ ವಿವೇಕಾವಧಿಗಳಾಯ್ ಪಿನ್ಪುತ್ತ ತೆಳಿವಾಲೇ ತಳಿನ್ದು ಪೋಮ್. ಅಪರಾಧಙ್ಗಳ್ ಪಿರಿನ್ದಾಲ್ ಕ್ಷಾಪಣಾವಧಿಯಾಯುಮ್, ಶಿಕ್ಷಾವಧಿಯಾಯುಮ್, ಕೋಲಿನ ಕಾಲತ್ತುಕ್ಕುಳ್ಳೇ ಅಪರಾಧ ನಿಸ್ತಾರಮ್ ಪಿರುಕ್ಕುಂಪಡಿ ಅಪರಾಧ ಪರಿಹಾರಾಧಿಕಾರತ್ತಿಲೇ ಶೊನ್ನೋಮ್.

ಘೃತಂ ಪಿಬೇತ್ ಎಂಬುದು ಆತನ ಸಿದ್ಧಾಂತವಾದುದರಿಂದ ಅಹಂಕಾರ ಮಮಕಾರಗಳು ಉಂಟು. ಆದರೆ ಈ ಪ್ರಪನ್ನನು ಸರ್ವೇಶ್ವರನ ಅನುಗ್ರಹವನ್ನು ಹೊಂದಿರುವದರಿಂದ ಈತನಲ್ಲಿ ಅವು ಸ್ಥಿರವಾಗಿ ನೆಲಿಸಲಾರವೆಂಬ ಭಾವವು. ಈತನ ನಿರ್ಯಾಣಕಾಲದವರೆಗೂ ಅನುಸರಿಸಿಕೊಂಡು ಬರಲಾರವು. ಏಕೆಂದರೆ ಭಗವದನುಗ್ರಹವಿರುವದರಿಂದ ಅವು ನಿವರ್ತಿಸುತ್ತವೆ ಎಂಬುದು ಮುಖ್ಯ ತಾತ್ಪರ್ಯವು. ಇರಲಾರವೆಂಬುದು ಕೌಮುತಿಕ ನ್ಯಾಯಸಿದ್ಧವು. **ಅವಹಿತರಾಯ್ ನಡಪ್ಪಾರ್** - ಸಾವಧಾನದಿಂದ ನಡೆಯುವರು, ಜಾಗರೂಕತೆಯಿಂದ ನಡೆಯುವರೆಂಬರ್ಥವು, **ಇಡರುಮಾಪ್ಪೋಲೆ** - ಎಡವುವ ಹಾಗೆ, **ಎಙ್ಗನು ಒರಕ್ಕಾಲ್** - ಎಲ್ಲೋ ಒಂದು ಕಾಲದಲ್ಲಿ, **ವರುಮ್** – ಬರಬಹುದು. ಈ ಅಹಂಕಾರ ಮಮಕಾರಗಳು, **ವಿವೇಕಾವಧಿಗಳಾಯ್** - ವಿವೇಕ ಹುಟ್ಟುವ ತನಕ ಇರುವವುಗಳಾಗಿ, **ಪಿನ್ಪುತ್ತ ತೆಳಿವಾಲೇ** - ಆಮೇಲೆ ಉಂಟಾದ ತತ್ವಜ್ಞಾನದಿಂದ, **ಕಳಿನ್ದು ಪೋಮ್** - ನಾಶವಾಗಬಹುದು. **ಅಪರಾಧಙ್ಗಳ್ ಪಿರಿನ್ದಾಲ್** - ಇಂತಹ ದೋಷಗಳು ಪ್ರಾಪ್ತವಾದರೆ, **ಕ್ಷಾಪಣಾವಧಿಯಾಯುಮ್** - ಕ್ಷಮಾಪಣೆ ಪ್ರಾರ್ಥನೆಯನ್ನೇ ಅವಧಿಯಾಗಿ ಉಳ್ಳದ್ದಾಗಿಯೂ ಎಂದರೆ ಸರ್ವೇಶ್ವರನನ್ನು ಕ್ಷಮಿಸು ಎಂದು ಪ್ರಾರ್ಥಿಸಿದ ಒಡನೆಯೇ ಈ ಅಹಂಕಾರ ಮಮಕಾರ ರೂಪ ದೋಷವು ತೊಲಗುತ್ತದೆಂಬ ಭಾವವು. **ಶಿಕ್ಷಾವಧಿಯಾಯುಮ್** – ಹಾಗೆ ಅನುತಾಪಾದಿಗಳೊಂದಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಸರ್ವೇಶ್ವರನು ಕೊಡುವ ಅಲ್ಪಶಿಕ್ಷೆಯೇ ಅವಧಿಯಾಗಿಯೂ, ಎಂದರೆ ಹಾಗೆ ಅಲ್ಪಶಿಕ್ಷೆಯನ್ನನುಭವಿಸಿದ ಒಡನೆಯೇ ಅವು ತೊಲಗುತ್ತವೆಂಬ ಭಾವವು; **ಕೋಲಿನ ಕಾಲತ್ತುಕ್ಕುಳ್ಳೇ** - ದೇಹಾವಸಾನವಾದ ಒಡನೆಯೋ ಹೇಗೋ ತಾನು ಅಪೇಕ್ಷಿಸಿದ ಕಾಲದೊಳಗೇನೇ, **ಅಪರಾಧ ನಿಸ್ತಾರಮ್ ಪಿರಕ್ಕುಮ್ಪಡಿ** - ಈ ಅಹಂಕಾರ ಮಮಕಾರ ರೂಪದೋಷ ನಿವೃತ್ತಿಯ ಉತ್ಪತ್ತಿಯುಂಟಾಗುವ ಕ್ರಮವನ್ನು, **ಅಪರಾಧ ಪರಿಹಾರಾಧಿಕಾರದಲ್ಲಿ, ಶೊನ್ನೋಮ್** - ಹೇಳಿದೆವು. ಪ್ರಾರಬ್ಧ ದುಷ್ಕೃತ

ಮೋಕ್ಷಮ್ ಪೆರುಗೈಕ್ಕು ಕಾಲವಿಶೇಷಮ್ ಕುರಿಯಾದೆ ಪ್ರಪನ್ನರಾನಾ ರ್ರೈಪ್ಪತ್ತು (೧) " ಅಪಾಯಾ (ವಿರತಃ) ದ್ವಿರತೆಶ್ಯೆಶ್ವನ್ಮಾಂಚ್ಚೈವ ಶರಣಂ

ಮೂಲಕ ಪ್ರಾಪ್ತವಾಗುವ ಅಹಂಕಾರ ಮಮಕಾರಗಳು ಸ್ಥಿರವಾಗಿ ಈ ಪ್ರಪನ್ನನಲ್ಲಿ ನಿಲ್ಲಲಾರವೆಂದು ಹೇಳುತ್ತಾರೆ. ಚಾರ್ವಾಕನಿಗಾದರೆ ಸ್ಥಿರವಾಗಿ ನಿಲ್ಲಬಹುದು. ಈ ಪ್ರಪನ್ನನಿಗಾದರೆ ಭಗವದನುಗ್ರಹ ಮಹಿಮೆಯಿಂದ ಇಂತಹ ಅಹಂಕಾರ ಮಮಕಾರಗಳು ಎಲ್ಲೋ ಒಂದು ಕಾಲದಲ್ಲಿ ಉಂಟಾಗಬಹುದು. ಉಂಟಾದಗೂ ಶೀಘ್ರ ನಿವೃತ್ತಿಯುಂಟೆಂದು ಹೇಳುತ್ತಾರೆ. ಪರಿತಾಪ ಹುಟ್ಟಿ ಪ್ರಾಯಶ್ಚಿತ್ತ ಮೂಲಕ ಕ್ಷಮಾಪಣೆಯನ್ನು ಕೇಳಿಕೊಂಡ ಒಡನೆಯೇ ನಿವರ್ತಿಸಬಹುದು. ಹಾಗೆ ಕ್ಷಮಾಪಣೆಯನ್ನು ಪ್ರಾರ್ಥಿಸದಿದ್ದರೆ ಅಲ್ಪಶಿಕ್ಷೆಯಿಂದ ನಿವರ್ತಿಸಬಹುದು. ಅಥವಾ ಸ್ವಲ್ಪಕಾಲವಿದ್ದು ವಿವೇಕ ಉಂಟಾದ ಒಡನೆಯೇ ನಿವರ್ತಿಸಿಹೋಗಬಹುದು. ಆದುದರಿಂದ ಈತನು ದೇಹಾವಸಾನದಲ್ಲಿ ಮೋಕ್ಷವನ್ನು ಪ್ರಾರ್ಥಿಸಿದ್ದಲ್ಲಿ, ಅಷ್ಟರೊಳಗೇ ಇವೆಲ್ಲಾ ಕಳೆದುಹೋಗಿ ಪ್ರಪನ್ನನ ಪ್ರಾರ್ಥನೆಗೆ ಅನುಸಾರವಾಗಿ ನಿರ್ಯಾಣವುಂಟಾಗಲು ಅಭ್ಯಂತರವಿಲ್ಲವೆಂದು ಹೇಳಿರುತ್ತಾರೆ. ಈ ಪ್ರಪನ್ನನು ಪ್ರಪತ್ತಿ ಕಾಲದಲ್ಲಿ ಪ್ರಾರ್ಥಿಸಿದ ಕಾಲಕ್ಕೆ ಮೇಲೆ ವಿಳಂಬವಿಲ್ಲವೆಂಬುದು ಮುಖ್ಯಾಭಿಪ್ರಾಯವು. ಸತ್ಯವ್ರತನಲ್ಲಿ ಮಾಡಿದ ಶರಣಾಗತಿ ಸಙ್ಕಲ್ಪಾನುಗುಣ ಆ ಸತ್ಯಸಙ್ಕಲ್ಪನು ನಡಿಸಿಕೊಡದೇ ಇರನು. ಈ ಅಭಿಪ್ರಾಯಗಳು ಹಿಂದೆಯೇ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಿದುದನ್ನು ಜ್ಞಾಪಕ ಕೊಟ್ಟಿರುತ್ತಾರೆ.

ನಿರ್ಯಾಣಕಾಲದ ವಿಳಂಬಕ್ಕೆ ಕಾರಣಗಳು.

ಹಾಗಾದರೆ ಈ ಸಂದರ್ಭದಲ್ಲೂ ವಿಳಂಬ ಉಂಟಾಗದಿದ್ದರೆ, "ಅಪಾಯಾ ವಿರತಃ" ಎಂಬ ಲಕ್ಷ್ಮೀತಂತ್ರ ಪ್ರಮಾಣದಲ್ಲಿ ವಿಳಂಬ ಹೇಳಿದೆಯಲ್ಲಾ, ಅದರ ತಾತ್ಪರ್ಯವೇನೆಂದರೆ, ಅದನ್ನು ಮುಂದಿನ ವಾಕ್ಯದಿಂದ ಬೋಧಿಸುತ್ತಾರೆ. ಮೋಕ್ಷಕ್ಕೆ ಕಾಲವನ್ನು ನಿರ್ದೇಶಿಸಿ ಪ್ರಾರ್ಥಿಸಿದವನಿಗೆ, ಅದಕ್ಕೆ ಮೇಲೆ ವಿಳಂಬ ವಿಲ್ಲವೆಂದು ಹಿಂದಿನ ವಾಕ್ಯದಿಂದ ಹೇಳಿದರು. ಈ ಮುಂದಿನ ವಾಕ್ಯದಿಂದ ಹಾಗೆ ಕಾಲವಿಶೇಷವನ್ನು ನಿರ್ದೇಶಿಸದೆ ಪ್ರಪದನ ಮಾಡಿದವರಿಗೆ ವಿಳಂಬ ಉಂಟಾಗುತ್ತದೆಂದೂ ಲಕ್ಷ್ಮೀತಂತ್ರ ಪ್ರಮಾಣವು ಅಂತಹ ಪ್ರಪನ್ನರನ್ನು ಕುರಿತದ್ದೆಂದೂ ಉಪದೇಶಿಸಿರುತ್ತಾರೆ. ಮೋಕ್ಷಮ್ ಪೆರುಗೈಕ್ಕು - ಮೋಕ್ಷವನ್ನು ಹೊಂದುವ

(೧) ಲಕ್ಷ್ಮೀತಂತ್ರ. ೧೭. ೧೦೨.

ಗತಃ। ತನೂಕೃತ್ಯಾಖಿಲಂ ಪಾಪಂ ಮಾಮಾಪ್ನೋತಿ ನರಶ್ಶನೈಃ। ” ಎನ್ನು ಶೊಲ್ಲುಗಿರದು.

ದಕ್ಕೆ, **ಕಾಲವಿಶೇಷಂ ಕುರಿಯಾದೆ** - ಇಂತಹ ಕಾಲವೆಂದು ಪ್ರಾರ್ಥಿಸದೆ, **ಪ್ರಪನ್ನರಾನಾರೈಪ್ಪತ್ತ**-ಭರನ್ಯಾಸವನ್ನು ಮಾಡಿದವರನ್ನು ಕುರಿತು **“ಅಪಾಯಾ ವಿರತಃ” ಎನ್ನು ಶೊಲ್ಲುಗಿರದು**-ಎಂದು ಹೇಳುತ್ತದೆ. ಆ ಶ್ಲೋಕಾರ್ಥವೇನೆಂದರೆ:—**ಅಪಾಯಾ ವಿರತಃ** ಎಂಬ ಪಾಠವಾದರೆ, **ಮಾಂ ಶರಣಂಗತೋಪಿ** - ನನ್ನನ್ನು ಶರಣುಹೊಂದಿದರೂ ಕೂಡ, **ಶಶ್ವತ್** - ಶರಣುಹೊಂದಿದ ನಂತರ ಬಾರಿ ಬಾರಿಗೂ, **ಅಪಾಯ**-ಮಾಡಲ್ಪಟ್ಟ ಅಪರಾಧಗಳಿಂದ, **ಅವಿರತಶ್ಚೇತ್**-ಕೂಡಿದವನಾದರೆ, **ಸ ನರಃ** - ಅಂತಹ ಮನುಷ್ಯನು, **ಅಖಿಲಂ ಪಾಪಂ ತನೂಕೃತ್ಯ**-ಅದಕ್ಕಾಗಿ ಪ್ರಾಯಶ್ಚಿತ್ತ ಮಾಡದಿದ್ದರೆ ಆ ಸರ್ವಪಾಪವನ್ನೂ ಅನುಭವಿಸುವದರಿಂದ ಕ್ಷೀಣವಾಗುವಹಾಗೆ ಮಾಡಿಕೊಂಡು ಎಂದರೆ ನಾಶಮಾಡಿಕೊಂಡು, **ಶನೈಃ**-ಕಾಲವಿಳಂಬದಿಂದ, **ಮಾಮಾಪ್ನೋತಿ** - ನನ್ನನ್ನು ಹೊಂದುವನು. **“ಅಪಾಯಾದ್ವಿರತಃ”** ಎಂಬ ಪಾಠವಾದರೆ, ಅಪಾಯಗಳಿಂದ ಎಂದರೆ ಅಪರಾಧಗಳಿಂದ, **ವಿರತಸ್ಸನ್** - ಬಿಡಲ್ಪಟ್ಟವನಾಗಿ, ಎಂದು ಅರ್ಥ ಹೇಳತಕ್ಕದ್ದು. ಇಲ್ಲಿ ವಿಳಂಬವೆಂಬುದು ಈ ಜನ್ಮದಲ್ಲಿಯೇ, ಅಥವಾ ಇನ್ನೊಂದು ಜನ್ಮವುಂಟಾಗುವ ಹಾಗೂ ವಿಳಂಬವಾಗಬಹುದೋ ಎಂಬಂಶವು ಹೇಳಲ್ಪಡಲಿಲ್ಲವು. ಸಾರಾಸ್ವಾದಿನಿ ವ್ಯಾಖ್ಯಾತೃವು ಮುಂದಿನ ವಾಕ್ಯದ ವ್ಯಾಖ್ಯಾನದಲ್ಲಿ ಪ್ರಯೋಜನಾಂತರ ರುಚಿಯು ನಶಿಸಿ ಹೋಗದೆ ಇದ್ದ ಪಕ್ಷದಲ್ಲಿ, ಕಾಲನಿಷ್ಕರ್ಷೆಯಿಲ್ಲದೆ ಸುಮ್ಮನೆ ಪ್ರಪದನ ಮಾಡಿದವನಿಗೆ ಜನ್ಮಾಂತರ ವಿಳಂಬವೂ ಉಂಟಾಗಬಹುದೆಂದು ಅಪ್ಪಣೆ ಕೊಡಿಸಿರುತ್ತಾರೆ. ಹಿಂದಿನ ವಾಕ್ಯದಲ್ಲಿ ಪ್ರಪನ್ನನಿಗೆ ಅಹಂಕಾರ ಮಮಕಾರಗಳು ಪ್ರಾಪ್ತವಾಗುವದೇ ಇಲ್ಲವೆಂದೂ, ಒಂದುವೇಳೆ ಪ್ರಾಪ್ತವಾದರೂ, ವಿವೇಕಾವಧಿಯಾಗಲಿ, ಜ್ಞಾಪನಾವಧಿಯಾಗಲಿ, ಶಿಕ್ಷಾವಧಿಯಾಗಲಿ ಇರುವದಾಗಿ, ಆತನು ದೇಹಾವಸಾನದಲ್ಲೇ ಮೋಕ್ಷವನ್ನು ಅಪೇಕ್ಷಿಸಿದ್ದರೆ ವಿಳಂಬಕ್ಕೆ ಕಾರಣವಿಲ್ಲವೆಂದು ಹೇಳಿದರು. ಆದರೆ ಲಕ್ಷ್ಮೀತಂತ್ರವಾಕ್ಯವು ವಿಳಂಬ ಉಂಟೆಂದು ಹೇಳುತ್ತದೆಯಲ್ಲಾ ಎಂದರೆ ಮೇಲೆ ಹೇಳಿದ ಪ್ರಕಾರ ಕಾಲವನ್ನು ಕುರಿತು ಭರನ್ಯಾಸಮಾಡದೇ ಸುಮ್ಮನೆ ಭರನ್ಯಾಸ ಮಾಡಿದ್ದರೆ, ಆಗ ವಿಳಂಬ ಉಂಟಾಗಬಹುದೆಂದು ಉಪದೇಶಿಸಿದರು. ಹೀಗೆ ಅಹಂಕಾರ ಮಮಕಾರಗಳ ವಿಷಯದಲ್ಲಿ ಯಾವ ಸಂದರ್ಭದಲ್ಲಿ ಅವಿಳಂಬವೂ, ಯಾವ ಸಂದರ್ಭದಲ್ಲಿ ವಿಳಂಬವೆಂಬುವದನ್ನು ಹೇಳಿದರು.

ಪ್ರಯೋಜನಾನ್ತರರುಚ್ಯಾಃ ವಿಳಂಬಾವಿಳಂಬ ಹೇತುತ್ವಂ.

ಮುಮುಕ್ಷುವಾಯಿಳಿನ್ದವನಾಗೈಯಾಲೆ ಪ್ರಯೋಜನಾನ್ತರ ರುಚಿ ನಿಲೈನಿರ್ಕ ಉಣ್ಡಾಗಾದು. ಉಭಯಭಾವನರ್ಕ್ಕುಪ್ಪೋಲೆ ಮೋಕ್ಷರುಚಿಯೋಡೇ ಕೂಡ ಪ್ರಯೋಜನಾಂತರ ರುಚಿಯುಮ್ ಕಲನ್ದುವನ್ದಾಲ್, ಇವನುಕ್ಕು ಹಿತಪರನಾನ ಈಶ್ವರನ್ (೧) "ಯಾಚಿತೋಪಿ ಸದಾಭಕ್ತ್ಯೈ

ಪ್ರಯೋಜನಾನ್ತರ ರುಚಿಗೆ ವಿಳಂಬಾವಿಳಂಬಗಳು ಯಾವ ಸಂದರ್ಭದಲ್ಲಿ ?

ಮುಂದೆ ಎರಡನೆಯ ವಿಧ ದೋಷವಾದ ಪ್ರಯೋಜನಾಂತರ ರುಚಿ ಎಂದರೆ ಐಶ್ವರ್ಯಾದಿ ಕಾಮನೆಗಳು ಪ್ರಾಪ್ತವಾದರೆ ವಿಳಂಬಾವಿಳಂಬಗಳುಂಟೋ ಎಂಬ ವಿಷಯವನ್ನು "ಮುಮುಕ್ಷುವಾಯ್" ಎಂದಾರಂಭಿಸಿ ಚರ್ಚಿಸುತ್ತಾರೆ. **ಮುಮುಕ್ಷುವಾಯಿಳಿನ್ದವನಾಗೈಯಾಲೆ** - ಮೋಕ್ಷಾರ್ಥಿಯಾಗಿ ಪ್ರವರ್ತಿಸಿದವನಾದುದರಿಂದ ಎಂದರೆ ಭರನ್ಯಾಸ ಮಾಡಿರುವದರಿಂದ, **ಪ್ರಯೋಜನಾನ್ತರ ರುಚಿ** - ಮೋಕ್ಷವಲ್ಲದ ಇತರೆ ಪುರುಷಾರ್ಥಗಳಲ್ಲಿ ಅಭಿರುಚಿಯು, ಆಶೆಯು, **ನಿಲೈ ನಿರ್ಕ ಉಣ್ಡಾಗಾದು** - ಸ್ಥಿರವಾಗಿ ಈ ಪ್ರಪನ್ನಾಧಿಕಾರಿಯಲ್ಲಿ ನಿಲ್ಲಲಾರದು. ಏನೋ ಒಂದು ಸಮಯದಲ್ಲಿ ಉಂಟಾಗಬಹುದು. ಆದರೆ ಆ ಉಪಭೋಗವು ಅಲ್ಪಾಸ್ಥಿರವಾದುದರಿಂದಲೂ ದುಃಖೋದರ್ಕತ್ವ, ದುಃಖಮಿಶ್ರತ್ವಾದಿ ದೋಷಯುಕ್ತವಾದುದರಿಂದಲೂ, ಮೋಕ್ಷವು ಸ್ಥಿರವಾಗಿ ನಿರತಿಶಯ ಸುಖ ರೂಪವಾದುದರಿಂದಲೂ, ಈ ಪ್ರಯೋಜನಾಂತರದಲ್ಲಿ ಮಮತೆಯು ಶೀಘ್ರದಲ್ಲೇ ತೊಲಗುತ್ತದೆಂಬ ಭಾವವು ಆದುದರಿಂದ ಇಂತಹ ಸಂದರ್ಭದಲ್ಲೂ ವಿಳಂಬಕ್ಕೆ ಕಾರಣವಿಲ್ಲವೆಂಬುದು ಮುಖ್ಯ ತಾತ್ಪರ್ಯವು. ಆಗಲಿ ಮೋಕ್ಷದಲ್ಲೂ ರುಚಿಯುಂಟು, ಇತರ ಪ್ರಯೋಜನಗಳಾದ ಧರ್ಮಾರ್ಥಕಾಮಗಳಲ್ಲೂ ಅಭಿರುಚಿಯುಂಟು, ಅಂಥಾವರಿಗೆ ಹೇಗೆ? ವಿಳಂಬ ಉಂಟೇ ಇಲ್ಲವೇ ? ಎಂದರೆ, ಹೇಳುತ್ತಾರೆ. **ಉಭಯ ಭಾವನರ್ಕ್ಕುಪ್ಪೋಲೆ** - ಐಹಿಕ ಕರ್ಮಗಳಲ್ಲೂ ಬ್ರಹ್ಮಪ್ರಾಪ್ತಿಯಲ್ಲೂ ರುಚಿಯುಳ್ಳ ಬ್ರಹ್ಮರುದ್ರಾದಿಗಳ ಹಾಗೆ, **ಮೋಕ್ಷರುಚಿಯೋಡೇ ಕೂಡ** - ಮೋಕ್ಷದಲ್ಲಿ ಅಭಿಲಾಷೆಯೊಂದಿಗೆ, **ಪ್ರಯೋಜನಾಂತರ ರುಚಿಯುಮ್** – ಬೇರೆ ಪ್ರಯೋಜನಗಳಾದ ಧರ್ಮಾರ್ಥಕಾಮಗಳಲ್ಲೂ ಅಭಿಲಾಷೆಯು, **ಕಲನ್ದು ವನ್ದಾಲ್** - ಸೇರಿಬಂದರೆ,

---

(೧) ವಿಷ್ಣುಧರ್ಮ.

ನಾರ್ಹಿತಂ ಕಾರಯೇದ್ಧರಿಃ" । (೧) ಯಸ್ಯಾನುಗ್ರಹಮಿಚ್ಛಾಮಿ ಧನಂತಸ್ಯ ಹರಾಮ್ಯಹಂ ಇತ್ಯಾದಿಗಳಿಲುಮ್, ಕುಂಡಧಾರೋಪಾಖ್ಯಾನಾದಿಗಳಿಲುಮ್, ಶೊಲ್ಲುಗಿರಪಡಿಯೇ ಶಿಲಪ್ರಯೋಜನಾಂತರಙ್ಗಳೈಕ್ಕೊಡಾದೆ ಕಣ್ಣಳಿತ್ತುಮ್, ಶಿಲವತ್ತಿಲೆ ಅಲ್ಪಾಸ್ಥಿರತ್ವ ದುಃಖಮಿಶ್ರತ್ವಾದಿ ವಿವೇಕತ್ತಾಲೆ ಇವರ್ಗ ತನುಕ್ಕು ಅರುಚಿಯೈ ವಿಳೈಪ್ಪಿತ್ತುಮ್, ಸೌಭರಿ ಕುಚೇಲಾ

ಇವನುಕ್ಕು – ಇಂತಹ ಪ್ರಪನ್ನನಿಗೆ, **ಹಿತಪರನಾನ ಈಶ್ವರ್ಗ** – ಯಾವಾಗ ಶರಣಾಗತಿಯನ್ನು ಮಾಡಿದನೋ ಒಡನೆಯೇ ತನ್ನವನೆಂದು ಭಾವಿಸಿ ಹಿತಮಾಡುವದರಲ್ಲೇ ಆಸಕ್ತಿಯುಳ್ಳ ಸರ್ವೇಶ್ವರನು "**ಯಾಚಿತೋಽಪಿ ಸದಾಭಕ್ತೈಃ** – ಭಕ್ತರುಗಳಿಂದ ಹಿತಾಹಿತಗಳೆಂಬ ವಿವೇಕವಿಲ್ಲದೆ ಅಹಿತವು ಸದಾ ಯಾಚಿಸಲ್ಪಟ್ಟರೂ, **ಹರಿಃ** – ಪಾಪಹರನಾದ ಸರ್ವೇಶ್ವರನು, **ಅಹಿತಂ** – ಅಹಿತವಾದುದನ್ನು, **ನಕಾರಯೇತ್** – ಮಾಡುವದಿಲ್ಲವು. ಪ್ರಪನ್ನನಾದ ನಂತರ ಆತನು ಭಗವಂತನಿಗೆ ಇಷ್ಟನಾದುದರಿಂದ ಆತನು ಬುದ್ಧಿಯಿಲ್ಲದೆ ಒಂದು ವೇಳೆ ಅಹಿತವಾದುದನ್ನು ಕೇಳಿಕೊಂಡರೂ ಸರ್ವೇಶ್ವರನು ಪರಮಹಿತೈಷಿಯಾಗಿ ಅದನ್ನು ಕೊಡುವದಿಲ್ಲವೆಂಬ ಭಾವವು," ಎಂಬ, ಮತ್ತು "**ಯಸ್ಯ** – ಯಾವನಿಗೆ, **ಅನುಗ್ರಹಮಿಚ್ಛಾಮಿ** – ಅನುಗ್ರಹವನ್ನು ಸಙ್ಕಲ್ಪಿಸಿರುವೆನೋ, **ತಸ್ಯ** – ಅವನ, **ಧನಂ** – ಧನವನ್ನೂ ಅಥವಾ ಪರಮಧನವಾಗಿ ಭಾವಿಸುವ ಆತನ ಪ್ರಿಯವಸ್ತುವನ್ನು, **ಅಹಂ ಹರಾಮಿ** – ನಾನು ಅಪಹರಿಸುವೆನು ಎಂದರೆ ನನ್ನ ಸಙ್ಕಲ್ಪದಿಂದಲೇ ಹೋಗಲಾಡಿಸುವೆನು, ಎಂಬುದು ಸರ್ವೇಶ್ವರನ ವಾಕ್ಯವು. ಅದೇತಕ್ಕೆ ಹಾಗೆ ಹೋಗಲಾಡಿಸುವದೆಂದರೆ, ಅವುಗಳೆಲ್ಲಾ ನಶ್ವರವಾದವು, ಅವುಗಳಲ್ಲಿ ಮಮತೆ ಕೂಡದೆಂದು ವೈರಾಗ್ಯವು ತಲೆದೋರುವದಕ್ಕಾಗಿ ಎಂಬ ಭಾವವು" ಎಂಬ, **ಇತ್ಯಾದಿಗಳಿಲುಮ್** – ಇಂತಹ ಪ್ರಮಾಣಗಳಲ್ಲೂ, ಮತ್ತು ಕುಂಡಧಾರೋಪಾಖ್ಯಾನವೇ ಮೊದಲಾದವುಗಳಲ್ಲೂ, **ಶೊಲ್ಲುಗಿರಪಡಿಯೇ** – ಹೇಳಿರುವ ಮೇರಿಗೆ, **ಶಿಲಪ್ರಯೋಜನಾನ್ತರಙ್ಗಳೈ ಕೊಡಾದೆ** – ಯಾಚಿಸಿದರೂ ಇಂತಹ ಕೆಲವು ಪ್ರಯೋಜನಾಂತರಗಳನ್ನು ಕೊಡದೆ, **ಕಣ್ಣಳಿತ್ತುಮ್** – ಉಪೇಕ್ಷಿಸಿಯೂ, ಮತ್ತು **ಶಿಲವತ್ತಿಲೆ** – ಇನ್ನು ಕೆಲವು ಪ್ರಯೋಜನಾಂತರಗಳಲ್ಲಿ, **ಅಲ್ಪಾಸ್ಥಿರತ್ವ** – ತುಚ್ಛವಾಗಿರುವದೇನು, ಅಸ್ಥಿರವಾಗಿರುವದೇನು, **ಆದಿ** – ಇವೇ ಮೊದಲಾದವುಗಳಿಂದುಂಟಾಗುವ, **ವಿವೇಕತ್ತಾಲೆ** – ವಿವೇಕದಿಂದ, **ಇವರ್ಗ ತನಕ್ಕು** – ಈ

---

(೧) ಭಾಗವತ.

ದಿಗಳಕ್ಕುಪ್ಪೋಲೆ ಶಿಲಭೋಗಙ್ಗಳೈ ಕೊಡುತ್ತು ತಾನೇ ಯಿಲವುರನ್ನು ವಿಡಪ್ಪಣ್ಣಿಯುಮ್ ವಿಡುಗೈಯಾಲೇ ಮೋಕ್ಷಕಾಲಮ್ ಕುರಿತ್ತು ಪ್ರಪತ್ತಿ ಪಣ್ಣಿನವನುಕ್ಕು ಅಕ್ಕಾಲತ್ತುಕ್ಕುಳ್ಳೇ ಪ್ರಯೋಜನಾನ್ತರ ವೈಮುಖ್ಯಂ ಪಿರನ್ದು ವಿಡಮ್.

ಪ್ರಪನ್ನನಿಗೆ, ಅರುಚಿಯೈ ವಿಳೈಪ್ಪಿತ್ತುಮ್ - ಆ ಪ್ರಯೋಜನಾಂತರಗಳಲ್ಲಿ ಜಿಹಾಸೆಯನ್ನುಂಟುಮಾಡಿ, ಅಥವಾ ವೃದ್ಧಿಪಡಿಸಿಯೂ, ಸೌಭರಿ ಮತ್ತು ಕುಚೇಲರೇ ಮೊದಲಾದವರ ಹಾಗೆ, **ಶಿಲಭೋಗಙ್ಗಳೈ ಕೊಡುತ್ತು** - ಸಂಸಾರಸುಖ, ಧನ ವಸನಾದಿಗಳಾದ ಕೆಲವು ಭೋಗಗಳನ್ನು ಕೊಟ್ಟು ತಾನೇ, **ಅಲವುರನ್ನು ವಿಡಪ್ಪಣ್ಣಿಯುಮ್** - ತಾವೇ ಜುಗುಪ್ಸೆ ಹೊಂದಿ ತಟಸ್ಥರಾಗಿಯಾಗುವ ಹಾಗೆ ಮಾಡಿಯೂ, **ವಿಡುಗೈಯಾಲೇ** – ಬಿಡುವದರಿಂದ, **ಮೋಕ್ಷಕಾಲವನ್ನು ಕುರಿತು ಪ್ರಪತ್ತಿ ಮಾಡಿದವನಿಗೆ, ಅಕ್ಕಾಲತ್ತುಕ್ಕುಳ್ಳೇ** - ತಾನು ಅಪೇಕ್ಷಿಸಿದ ಕಾಲದ ಒಳಗೇನೆ, **ಪ್ರಯೋಜನಾನ್ತರ ವೈಮುಖ್ಯಮ್ ಪಿರನ್ದುವಿಡುಮ್** - ಮೋಕ್ಷೇತರ ಪ್ರಯೋಜನಗಳಲ್ಲಿ ಜಿಹಾಸೆಯು ಹುಟ್ಟಿಬಿಡುತ್ತದೆ. ಪ್ರಥಮತಃ ಪ್ರಪನ್ನಾಧಿಕಾರಿಗೆ ಪ್ರಯೋಜನಾಂತರದಲ್ಲಿ ಅಭಿರುಚಿಯುಂಟಾಗುವದಿಲ್ಲವೆಂದು ಹೇಳಿದರು. ಆತನು ಪರಮಪದವೇ ಪರಮನಿಶ್ರೇಯಸ್ಸು ಎಂದು ಭಾವಿಸಿರುವದರಿಂದ ಅಂತಹ ಆಶೆಯು ಆತನಲ್ಲಿ ನೆಲಸಲು ಸಾಧ್ಯವಿಲ್ಲವೆಂಬ ಭಾವವು. ಆದರೆ ಬ್ರಹ್ಮರುದ್ರೇಂದ್ರಾದಿಗಳಿದ್ದಾರೆ; ಅವರು ಪ್ರಪನ್ನರೂ ಹೌದು, ಐಹಿಕ ವ್ಯಾಪಾರಗಳಾದ ಸೃಷ್ಟಿಲಯಾದಿಗಳೇನು, ಇನ್ನೂ ರಾಜಸ ತಾಮಸರೂಪ ಕಾರ್ಯಗಳೇನು ಹೀಗೆ ಮೋಕ್ಷರುಚಿಯೂ ಪ್ರಯೋಜನಾಂತರರುಚಿಯೂ ಎರಡೂ ಅವರಿಗೆ ಉಂಟು. ಅವರಿಗೆ ಇರುವ ಹಾಗೆ ಇತರ ಪ್ರಪನ್ನರಿಗೂ ಇರಬಹುದಲ್ಲಾ ಅಂತಹ ಸಂದರ್ಭದಲ್ಲಿ ಹೇಗೆ ಎಂದು ಪ್ರಶ್ನಿಸಿದರೆ ಉತ್ತರವನ್ನು ಹೇಳುತ್ತಾರೆ:—

(ಅ) ಕಾಲವನ್ನು ಕುರಿತು ಶರಣಾಗತಿ ಮಾಡಿದ್ದರೆ, ಅಂಥಾವನ ವಿಷಯದಲ್ಲಿ ಹಿತವನ್ನೇ ಮಾಡಬೇಕೆಂಬ ಕೋರಿಕೆಯುಳ್ಳ ಸರ್ವೇಶ್ವರನು,

೧. ಅಹಿತವಾದ ಆತನ ಕೋರಿಕೆಯನ್ನು ಕೊಡದೆ ಕಾಪಾಡುವನು. ಅಥವಾ,

೨. ಪ್ರಯೋಜನಾಂತರದಲ್ಲಿ ಜಿಹಾಸೆ ಹುಟ್ಟುವದಕ್ಕಾಗಿ ಆತನಿಗೆ ತುಂಬಾ ಮಮತೆಯುಳ್ಳ ದ್ರವ್ಯಾದಿಗಳನ್ನು ಅಪಹರಿಸಿಬಿಡುವನು.

ಇದಕ್ಕೆ ದೃಷ್ಟಾಂತವು ಕುಂಡಾಧಾರೋಪಾಖ್ಯಾನವೆಂದು ಹೇಳಿದರು. ಅಥವಾ

೩. ಈ ಪ್ರಯೋಜನಾಂತರಗಳು ಅಲ್ಪಾಸ್ಥಿರವಾದವು, ದುಃಖಮಿಶ್ರವಾದವು ಎಂಬ ವಿವೇಕ ಹುಟ್ಟಿಸುವನು. ಅಥವಾ

೪. ಕೆಲವು ದಿನ ಅವರಿಗೆ ಉಪಭೋಗಗಳನ್ನುಂಟುಮಾಡಿ, ಅನಂತರ ಅವುಗಳಲ್ಲಿ ಜಿಹಾಸೆಯನ್ನುಂಟುಮಾಡುವನು. ಇದಕ್ಕೆ ದೃಷ್ಟಾಂತಗಳು, ಸೌಭರಿ ಕುಚೇಲರು.

ಹೀಗೆ ಕಾಲವನ್ನುದ್ದೇಶಿಸಿ ಭರನ್ಯಾಸ ಮಾಡಿದವನಿಗೆ ಪ್ರಯೋಜನಾಂತರದಲ್ಲಿ ಆಶೆಯನ್ನು ಬಿಡಿಸಿ, ವಿಳಂಬವಿಲ್ಲದೆ ಆತನು ಕೋರಿದ ಕಾಲದಲ್ಲೇ ನಿರ್ಯಾಣವನ್ನುಂಟುಮಾಡಿ, ಮೋಕ್ಷವನ್ನು ಕೊಡುವನು ಎಂಬ ತಾತ್ಪರ್ಯವು.

(ಆ) ಹಾಗೆ ಕಾಲವನ್ನು ಕುರಿತು ಶರಣಾಗತಿ ಮಾಡದಿದ್ದರೆ, ಅಂಥಾವನಿಗೆ ವೈರಾಗ್ಯ ಹುಟ್ಟುವ ತನಕವೂ ಕಾಲವಿಳಂಬ ಉಂಟೆಂದು ಮುಂದಿನ ವಾಕ್ಯದಿಂದ ಸಪ್ರಮಾಣವಾಗಿ ಉಪದೇಶಿಸುತ್ತಾರೆ.

ನಾಹಿತಂ ಕಾರಯೇದ್ಧರಿಃ - ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ ನಮಗೆ ಕರಣಕಳೇಬರ ಯೋಗವನ್ನು ಕೊಟ್ಟು, ಸಚ್ಛಾಸ್ತ್ರವನ್ನು ದಯಪಾಲಿಸಿ, ಅವುಗಳನ್ನುಪದೇಶಿಸುವ ಸದ್ಗುರುಗಳು ಈ ಪೃಥಿವಿಯಲ್ಲವತರಿಸುವ ಹಾಗೆ ಮಾಡಿ, ಚೇತನರು ತನ್ನನ್ನು ಶರಣುಹೊಂದಿ ತನ್ನನ್ನು ಬಂದು ಸೇರಿಯಾರೇ ಎಂದು ಅವಸರ ಪ್ರತೀಕ್ಷೆಯುಳ್ಳಿರುವನು. ಇಂತಹ ಕೃಪಾಸಾಗರನು ಎಂದಿಗಾದರೂ ಅಹಿತವನ್ನು ಮಾಡಿಯಾನೇ ? ಎಂದಿಗೂ ಇಲ್ಲವೆಂಬ ಭಾವವು. ಆದರೆ ಅನೇಕ ಕೆಟ್ಟ ಜಂತುಗಳಾದ ವ್ಯಾಘ್ರ ಹಾವು ಮುಂತಾದವುಗಳನ್ನು ಸೃಷ್ಟಿಸಿರುವದಿಲ್ಲವೇ ? ಅನೇಕ ಕೆಟ್ಟವರು ಹುಟ್ಟಿ ಈ ಲೋಕದ ಜನರು ಕೆಡುವಹಾಗೆ ಮಾಡುವದಿಲ್ಲವೇ ? ಅನೇಕ ಕೆಟ್ಟಶಾಸ್ತ್ರಗಳೂ, ರಾಜಸ ತಾಮಸಪುರಾಣಗಳೂ ನಿರ್ಮಿತವಾಗಿಲ್ಲವೇ? ಇವುಗಳನ್ನುಪದೇಶಿಸಿ ಬುದ್ಧಿ ಕೆಡಿಸುತ್ತಾ ತಾವು ತತ್ತ್ವದರ್ಶಿಗಳೆಂದು ಹೇಳಿಕೊಳ್ಳುವ ಹಾಗೆ ಮಾಡಿಲ್ಲವೇ ? ಇವೆಲ್ಲಾ ಅಹಿತ ಕಾರ್ಯಗಳಲ್ಲವೇ ? ಎಂಬಾಕ್ಷೇಪ ಉಂಟಾಗಬಹುದು. ಇವೆಲ್ಲಾ ಕರ್ಮಾನುಗುಣ ಶಾಸ್ತಾವಾಗಿರುವ ಸ್ವಾಮಿಗೆ ಅವರವರ ದುಷ್ಕರ್ಮಾನುಗುಣ ದುಃಖಪ್ರಾಪ್ತಿಗೋಸ್ಕರ ಸಾಧನಗಳು. ಅಪರಾಧಾನುಗುಣವಾಗಿ ಶಿಕ್ಷಿಸುವ ನ್ಯಾಯಾಧಿಪತಿಗೆ ಜೈಲು ಮುಂತಾದವುಗಳು ಹೇಗೆ ಸಾಧನಗಳೋ ಹಾಗೆಯೇ ಸರ್ವೇಶ್ವರನೂ ಕೆಲವು ಸಾಧನಗಳನ್ನು ಅಪರಾಧಿಗಳ ಶಿಕ್ಷೆಗಾಗಿ ಕಲ್ಪಿಸಿಕೊಂಡಿರುತ್ತಾನೆ. ನ್ಯಾಯಾಧಿಪತಿಯು ಅಪರಾಧಿಗಳನ್ನು ಶಿಕ್ಷಿಸುವದರಿಂದ ಹೇಗೆ

ನಿಷ್ಕರುಣಿಯಲ್ಲವೋ, ಅಹಿತ ಮಾಡುವನಲ್ಲವೋ, ಹಾಗೆಯೇ ಸರ್ವೇಶ್ವರನೂ ಅಲ್ಲ ವೆಂಬ ಭಾವವು. ಮುಂದಕ್ಕೆ ಆತನು ಸುಕೃತ ಮಾಡಲು ಪ್ರಾರಂಭಿಸಿದರೆ, ಆತ ನಿಗೆ ಹಿತಮಾಡಲುಪಕ್ರಮಿಸಿ, ಆತನು ತನ್ನನ್ನಾಶ್ರಯಿಸುವ ಹಾಗೆ ಮಾಡಿ ಕಾಪಾ ಡುವನು ಎಂಬ ಭಾವವು. ಆದುದರಿಂದ ಆತನು ಎಂದಿಗೂ **ನಾಹಿತಂ ಕಾರ ಯೇದ್ಧರಿಃ** ಎಂದು ಹೇಳಲ್ಪಟ್ಟಿರುತ್ತದೆ.

ಕುಂಡಧಾರೋಪಾಖ್ಯಾನ ಸಙ್ಗ್ರಹವು:—ಒಬ್ಬ ಬಡ ಬ್ರಾಹ್ಮಣನು ಯಜ್ಞಗಳನ್ನು ಮಾಡಬೇಕೆಂಬ ಅಪೇಕ್ಷೆಯುಳ್ಳವನಾಗಿ ದೇವತೆಗಳನ್ನು ಕುರಿತು ತಪಸ್ಸನ್ನು ಮಾಡಿದನು ಅದು ಕಾರ್ಯಕಾರಿಯಾಗದಿರಲು, ಆಮೇಲೆ ಒಂದು ದಿನ ಕುಂಡಧಾರವೆಂಬುವರನ್ನು ಕಂಡು, ಇವನೀಗ ನನ್ನ ಮನೋರಥವನ್ನು ಪೂರ್ಣ ಮಾಡುವನು ಎಂದು ಭಾವಿಸಿ, ಆ ಕುಂಡಧಾರರನ್ನು ಅರ್ಘ್ಯ ಪಾದ್ಯ ಗಂಧ ಧೂಪ ದೀಪಾದಿಗಳಿಂದ ಅರ್ಚಿಸಿ ತನ್ನ ಪ್ರಾರ್ಥನೆಯನ್ನು ಅರಿಕೆಮಾಡಿಕೊಂಡನು. ಆಗ **"ಆಶಾಯಾ ಸ್ತನಯೋಽಧರ್ಮಃ ಕ್ರೋಧೋಽಸೂಯಾ ಸುತ ಸ್ಸ್ಮೃತಃ"** ಎಂದು ಈ ಬ್ರಾಹ್ಮಣನಿಗೆ ಉಪದೇಶಿಸಿ, ಅನಂತರ ಒಂದು ದಿನ ಕುಂಡಧಾರರು ತಮ್ಮ ಮಾಹಾತ್ಮ್ಯಯಿಂದ ಈತನಿಗೆ ಸ್ವಪ್ನ ಉಂಟಾಗುವ ಹಾಗೆ ಮಾಡಿದರು. ಆ ಸ್ವಪ್ನದಲ್ಲಿ ಅನೇಕರು ಕುಶಾಸನದಲ್ಲಿರುವವರಾಗಿ ತಪಸ್ಸು ಮಾಡುತ್ತಾ, ಮಾಣಿ ಭದ್ರನೆಂಬ ದೇವತೆಯ ಮೂಲಕ ಅನೇಕ ವರಗಳನ್ನು ಪಡೆಯುತ್ತಿರುವ ಸಮಯ ದಲ್ಲಿ, ಈ ಕುಂಡಧಾರರೂ ಸಹ ಹಾಗೆಯೇ ಮಾಣಿಭದ್ರ ದೇವತೆಗೆ ನಮಿಸಿ, ತನ್ನ ಶಿಷ್ಯನಾದ ಬ್ರಾಹ್ಮಣನಿಗೆ ಧನವನ್ನೀಯಬೇಕೆಂದು ಪ್ರಾರ್ಥಿಸಿದುದಲ್ಲದೆ, ಆತನಿಗೆ ಈ ಧನಾಶೆಯು ತೊಲಗಿ ಧರ್ಮದಲ್ಲಿ ಮನಸ್ಸುಂಟಾಗುವ ಹಾಗೂ ಆಶೀರ್ವದಿಸ ಬೇಕೆಂದು ಕೇಳಿಕೊಳ್ಳಲು, ಹಾಗೇ ಆಗಲೆಂದು ದೇವತೆಯು ವರವನ್ನು ಕೊಡಲು, ಈ ಸ್ವಪ್ನದಿಂದ ಬ್ರಾಹ್ಮಣನಿಗೆ ಜ್ಞಾನೋದಯವಾಗಿ ಧನಾಶೆಯನ್ನು ತೊರೆದು ಧರ್ಮದಿಂದ ಜೀವಿಸುವೆನೆಂದು ವನಕ್ಕೆ ತಪಸ್ಸಿಗಾಗಿ ಹೋದನು. ಕೆಲವು ಕಾಲಾ ನಂತರ ಕುಂಡಧಾರರು ಆ ಬ್ರಾಹ್ಮಣೋತ್ತಮನಿಗೆ ಕಾಣಿಸಿಕೊಂಡು, ಓ ಬ್ರಾಹ್ಮ ಣೋತ್ತಮನೇ, ನಿನಗೆ ದಿವ್ಯ ಚಕ್ಷುಸ್ಸನ್ನಿತ್ತಿರುವೆನು, ನೀನು ದ್ರವ್ಯವನ್ನಪೇಕ್ಷಿಸಿದೆ ಯಲ್ಲವೇ ? ಪುಷ್ಕಳ ದ್ರವ್ಯವಿದ್ದ ರಾಜರುಗಳ ಗತಿಯನ್ನು ನೋಡು. ಮಹಾ ಪಾಪಿಗಳಾಗಿ ನರಕಭಾಕ್ಕುಗಳಾಗಿದ್ದಾರೆ. ಆದುದರಿಂದ ಕಾಮಾರ್ಥಿಗಳಿಗೆಲ್ಲಾ ಪರಮ ನಿಶ್ರೇಯಸ್ಸಿನ ದ್ವಾರವು ಮುಚ್ಚಿರುವುದನ್ನು ನೀನೇ ನೋಡು. ಈ ಕಾಮನೆಗೆ ಅನುಬಂಧಿಗಳು ಕ್ರೋಧ, ಲೋಭ, ಮದ, ಮಾತ್ಸರ್ಯ, ಭಯಾದಿಗಳು ಎಂದು ಹೇಳಿ, ನಿನಗೆ ಬೇಕಾದರೆ ಧನಸಮೃದ್ಧಿಯನ್ನೀಯುವ ಶಕ್ತಿ ನನಗುಂಟು. ಅಪೇಕ್ಷೆಯಿದ್ದರೆ ಕೊಡುವೆನು, ಎನಲು, ಅದಕ್ಕೆ ಬ್ರಾಹ್ಮಣೋತ್ತಮನು ಅವರ

ಪಾದಕ್ಕೆರಗಿ, **"ಧರ್ಮೇತು ಪರಮಂ ಸುಖಂ"** ಎಂಬ ಪರಮತತ್ವವನ್ನು ಬೋಧಿಸಿ ಅನುಗ್ರಹಿಸಿ ಕಾಪಾಡಿದಿರಿ, ನನಗೆ ಈಗ ಧನವು ಬೇಕಾಗಿಲ್ಲವೆಂದು ವಿಪ್ರವರನು ಅರಿಕೆ ಮಾಡಿಕೊಳ್ಳಲು, ಬ್ರಾಹ್ಮಣನನ್ನು ಹರಿಸಿ ಕುಂಡಧಾರರು ಅಂತರ್ಧಾನವನ್ನು ಹೊಂದಿದರು. (ಭಾರತ, ಶಾಂತಿಪರ್ವ, ೨೭೭ನೆಯ ಅಧ್ಯಾಯ)

ಸೌಭರಿ ವೃತ್ತಾಂತವು, ವಿಷ್ಣು ಪುರಾಣದ ಚತುರ್ಥಾಂಶ ದ್ವಿತೀಯಾಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ. ಈ ಋಷಿಯು ನೀರಿನಲ್ಲಿದ್ದು ತಪಸ್ಸು ಮಾಡುತ್ತಾ ಹೀಗೆ ಹನ್ನೆರಡು ವರ್ಷ ವಾಸವಾಗಿದ್ದನು. ಹೀಗಿರುವಾಗ ಪ್ರತಿದಿನವೂ ಆ ನೀರಿನಲ್ಲಿದ್ದ ಒಂದು ದೊಡ್ಡ ಮೀನು ದಾರ ಪುತ್ರ ಪೌತ್ರಾದಿಗಳೊಂದಿಗೆ ವಿನೋದವಾಗಿ ರಮಿಸುವದನ್ನು ನೋಡುತ್ತಿದ್ದುದರಿಂದ ಸಂಗದೋಷದಿಂದ ತಾನೂ ಹೀಗೆಯೇ ಕನ್ಯಾರತ್ನವನ್ನು ಮದುವೆ ಮಾಡಿಕೊಂಡು ಪುತ್ರ ಪೌತ್ರಾದಿಗಳೊಂದಿಗೆ ಸೇರಿ ಸಂಸಾರಭೋಗವನ್ನನುಭವಿಸಬೇಕೆಂಬ ಕಾಮನೆಯುಂಟಾಯಿತು. ಆಗ ಚಕ್ರವರ್ತಿಯಾಗಿದ್ದ ಮಾಂಧಾತರಾಯನಲ್ಲಿ ಹೋಗಿ ನಿನಗಿರುವ ಐವತ್ತು ಕನ್ಯಾರತ್ನಗಳಲ್ಲಿ ಒಬ್ಬಳನ್ನು ನನಗೆ ಕೊಡು ಎಂದು ಪ್ರಾರ್ಥಿಸಿದನು. ರಾಜನು ಈ ವೃದ್ಧ ಋಷಿಗೆ ತನ್ನ ಕನ್ಯೆಯನ್ನು ಕೊಡಲು ಇಷ್ಟವಿಲ್ಲದೆ, ತನ್ನ ಕನ್ಯೆಗಳಲ್ಲಿ ಯಾರಾದರೂ ಒಪ್ಪಿದರೆ ವಿವಾಹ ಮಾಡಿಕೊಡುವೆನೆಂದು ಹೇಳಿದನು. ಅದಕ್ಕಾ ಮಹರ್ಷಿಯು ಸಮ್ಮತಿಸಿ, ಬಹು ಲಾವಣ್ಯಯುಕ್ತವಾದ ಶರೀರವನ್ನು ಧರಿಸಿ, ಐವತ್ತು ಕನ್ನಿಕೆಯರೂ ತನ್ನನ್ನು ಮೋಹಿಸುವಹಾಗೆ ಮಾಡಿಕೊಂಡು, ಈ ಐವತ್ತು ಪತ್ನಿಯರಿಗೂ ಸರ್ವವಿಧ ಭೋಗದ್ರವ್ಯಗಳನ್ನು ಕಲ್ಪಿಸಿಕೊಟ್ಟು ಅವರೊಂದಿಗೆ ರಮಿಸಿ, ನೂರೈವತ್ತು ಪುತ್ರರನ್ನೂ ಪೌತ್ರರನ್ನೂ ಪಡೆದು ಸುಖದಿಂದಿದ್ದು ಅನಂತರ ಜಿಹಾಸೆ ಹುಟ್ಟಿ, ತನ್ನ ಅವಿವೇಕವನ್ನು ನಿಂದಿಸಿಕೊಂಡು ಹೇಳುತ್ತಾರೆ:—**"ಪೂರ್ಣೇಷು ಪೂರ್ಣೇಷು ಪುನರ್ನವಾನಾ ಮುತ್ಪತ್ತಯಸ್ಸಂತಿ ಮನೋರಥಾನಾಂ,** ಐಹಿಕ ಮನೋರಥಗಳು ಪೂರ್ಣಪೂರ್ಣವಾದಹಾಗೆಲ್ಲಾ ಪುನಃ ಪುನಃ ಉತ್ಪತ್ತಿಯುಳ್ಳವುಗಳು," ಆದುದರಿಂದ ಅವುಗಳಿಗೆ ಅಂತ್ಯವೇ ಇಲ್ಲವು, **"ನಿಸ್ಸಂಗತಾ ಮುಕ್ತಿಪದಂ,"** ಮುಕ್ತಿಗೆ ನಿಸ್ಸಂಗತ್ವವೇ ಹೇತುವು, **"ಸಂಗಾದಶೇಷಾಃ ಪ್ರಭವಂತಿ ದೋಷಾಃ"** ಸಂಗದಿಂದಲೇ ಎಲ್ಲಾ ದೋಷಗಳು ಎಂದು ತಿಳಿದವರಾಗಿ, ಆರಾಧಯಿಷ್ಯೇ ತಪಸೈವ ವಿಷ್ಣುಮ್ ತಪಸ್ಸಿನಿಂದ ಶ್ರೀ ಮಹಾವಿಷ್ಣುವನ್ನಾರಾಧಿಸುವೆನೆಂದು, ವನಕ್ಕೆ ಪತ್ನಿಯರೊಂದಿಗೆ ತೆರಳಿ, ಅವರನ್ನು ಅನಂತರ ತ್ಯಜಿಸಿ, ಯತ್ಯಾಶ್ರಮವನ್ನು ಕೈಕೊಂಡು ಅಚ್ಯುತಪದವನ್ನು ಸೇರಿದರು.

ಕುಚೇಲೋಪಾಖ್ಯಾನವು. ಭಾಗವತಾಗ್ರೇಸರರಾಗಿಯೂ ಬ್ರಹ್ಮವಿತ್ತಮರಾಗಿಯೂ ಶ್ರೀಕೃಷ್ಣನಿಗೆ ಪ್ರಿಯಸಖರಾಗಿಯೂ ಕುಚೇಲರೆಂಬುವರೊಬ್ಬರಿದ್ದರು.

ಮಹಾಪತಿವ್ರತೆಯಾದ ಇವರ ಪತ್ನಿಯು ಇವರನ್ನು ಕುರಿತು, ದಾರಿದ್ರ್ಯವು ಪೂರಾ ಬಾಧಿಸುತ್ತಿರುವದರಿಂದ ಸರ್ವ ಪುರುಷಾರ್ಥದಾಯಕನಾದ ಶ್ರೀಕೃಷ್ಣನಲ್ಲಿಗೆ ಹೋಗಿ, ಬೇಡಿದರೆ ಪುಷ್ಕಳದ್ರವ್ಯವು ಸಿಕ್ಕಬಹುದು ಎಂದು ಹೇಳಿದಳು. ಶ್ರಿಯಃ ಪತಿಯನ್ನು ಹೋಗಿ ನೋಡಿ ನಮಿಸಿ ದೇಹಸಾರ್ಥಕ್ಯವನ್ನು ಹೊಂದಿ ಬರುವ ಸುಕೃತವು ಲಭಿಸಿತಲ್ಲಾ ಎಂದು ಕುಚೇಲರು ಪರಮಹರ್ಷಿತರಾಗಿ, ಪತ್ನಿಯು ನೆರೆಮನೆಯಿಂದ ತಂದುಕೊಟ್ಟ ಅವಲಕ್ಕಿಯನ್ನು ಉಪಾಯನವಾಗಿ ತೆಗೆದುಕೊಂಡು ದ್ವಾರಕಿಗೆ ಹೋಗಿ ಶ್ರೀ ಕೃಷ್ಣನ ದಿವ್ಯಮಂಗಳ ವಿಗ್ರಹವನ್ನು ಕಂಡು ಪರವಶರಾಗಿರುವಾಗ, ಶ್ರೀಕೃಷ್ಣನು ಓಡಿಬಂದು ಗಾಢಾಲಿಂಗನವನ್ನು ಮಾಡಿಕೊಂಡು ಆತನನ್ನು ಮಂಚದಲ್ಲಿ ಕೂಡಿಸಿ, ಅರ್ಘ್ಯಪಾದ್ಯಾದಿ ಸಮಸ್ತೋಪಚಾರಗಳನ್ನೂ ಹೊಂದಿ, ಅನಂತರ ಕುಶಲಪ್ರಶ್ನೆಗಳೂ ಒಟ್ಟಿಗೆ ಇಬ್ಬರೂ ಸಾಂದೀಪಿನೀ ಎಂಬ ಗುರುಗಳಲ್ಲಿ ವಾಸಮಾಡಿದಾಗ ನಡೆದ ಬಾಲ್ಯದ ದಿವ್ಯಚೇಷ್ಟಿತಗಳ ಕಥಾಪ್ರಸಂಗವೂ, ಜರಗಿದ ನಂತರ, ಸರ್ವೇಶ್ವರನು ಈ ವಿರಕ್ತಶಿಖಾಮಣಿಯನ್ನು ಕುರಿತು "ಕಿಮುಪಾಯನಮಾನೀತಂ ಬ್ರಹ್ಮನ್" ಓ, ಬ್ರಹ್ಮವಿತ್ತಾದ ಪ್ರಿಯಸಖನೆ, ಮಿತ್ರನಿಗಾಗಿ ಉಪಾಯನವೇನನ್ನು ತಂದಿದ್ದೀ ಎಂದು ಪ್ರಶ್ನಿಸಲು, ಎಲ್ಲಾ ಶ್ರೀಕೃಷ್ಣನದೇಯಾಗಿ, ಅಂತಹ ರಾಜಾಧಿರಾಜನಿಗೆ ಕೊಡಲೂ ಕೂಡ ಯೋಗ್ಯವಾದುದಲ್ಲದುದರಿಂದ ಲಜ್ಜೆಯಿಂದ ತಲೆಬಾಗಿ ನಿಂತಿರಲು ಆಗ "ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್ । ಭೂರ್ಯಪ್ಯಭಕ್ತೋಪಹೃತಂ ನಮೇ ತೋಷಾಯ ಕಲ್ಪತೇ ॥" ಎಂದರೆ ಭಕ್ತರುಗಳು ಎಷ್ಟು ಅಲ್ಪವಾದುದನ್ನು ತಂದುಕೊಟ್ಟರೂ ಅದು ಅವರುಗಳ ಪ್ರೀತ್ಯತಿಶಯದಿಂದ ನನಗೆ ಸಮೃದ್ಧಿಯಾಗುತ್ತದೆ. ಇದಕ್ಕೆ ವಿದುರಾನ್ನವು ನಿದರ್ಶನವು. ಅಭಕ್ತರುಗಳು ಎಷ್ಟು ಸಮೃದ್ಧಿಯಿಂದ ತಂದುಕೊಟ್ಟರೂ ನನಗೆ ತೃಪ್ತಿಯಾಗದು, ಎಂದೂ, ಇದಕ್ಕೆ ನಿದರ್ಶನವು, ದುರ್ಯೋಧನನು ಸರ್ವಸಮೃದ್ಧಿಯಿಂದ ಕೃಷ್ಣಾತಿಥ್ಯಕ್ಕಾಗಿ ಮಾಡಿದ ಏರ್ಪಾಡು, "ಅಶ್ನಾಮಿ ಪ್ರಯತಾತ್ಮನಃ" ಎಂದೂ ಹೇಳಿರುವ ಹಾಗೆ, ಶ್ರೀ ಕೃಷ್ಣನು ತಾನೇ ಆತನ ಹರಕು ಬಟ್ಟೆಯ ಗಂಟನ್ನು ಬಿಚ್ಚಿ, ಒಂದು ಹಿಡಿ ಅವಲಕ್ಕಿಯನ್ನು ಪರಮಸಂತೋಷದಿಂದ ಪರಿಗ್ರಹಿಸಿದನು. ಶ್ರೀಕೃಷ್ಣ ರುಕ್ಮಿಣಿಯವರು ಮಾಡಿದ ವಿಧವಿಧವಾದ ಸತ್ಕಾರಗಳನ್ನು ಹೊಂದಿದವನಾಗಿ ಕುಚೇಲನು ಮಾರನೇ ದಿನ ತನ್ನ ಊರಿಗೆ ಹಿಂತಿರುಗಿ ಪ್ರಯಾಣವಾಡಿದನು ಶ್ರೀ ಕೃಷ್ಣನು ತನ್ನ ಸರ್ವಜ್ಞತೆಯಿಂದ ಕುಚೇಲಪತ್ನಿಯ ಇಂಗಿತವನ್ನು ತಿಳಿದವನಾದರೂ, ದ್ರವ್ಯವನ್ನೇನೂ ಕೊಡಲಿಲ್ಲವು. ಮಹಾ ವಿರಕ್ತಾಗ್ರೇಸರನು ಕೇಳಲಿಲ್ಲವು. "ಅಧನೋಯಂ ಧನಂ ಪ್ರಾಪ್ಯ ಮಾದ್ಯನ್ನುಚ್ಚೈರ್ನಮಾಂ ಸ್ಮರೇತ್ । ಇತಿ ಕಾರುಣಿಕೋ

ನೂನಂ ಧನಂ ಮೇ ಭೂರಿನಾ ದದಾತ್ ॥ ನನ್ನಂತಹ ದರಿದ್ರನು ಧನವನ್ನು ಹೊಂದಿದರೆ ತುಂಬಾ ಗರ್ವಿತನಾಗಿ ತನ್ನನ್ನು ಸ್ಮರಿಸದೆ ಹೋಗುವನೆಂದೆಣಿಸಿ, ಪರಮ ಕಾರುಣಿಕನು ನನಗೆ ಹೆಚ್ಚಾಗಿ ದ್ರವ್ಯವನ್ನು ಕೊಡಲಿಲ್ಲವು" ಎಂದು ಹರ್ಷಗೊಂಡವನಾಗಿ, ದರಿದ್ರನಾದ ನಾನೆಲ್ಲಿ, ಸಕಲಕ್ಕೂ ಸಾರ್ವಭೌಮನಾದ ಶ್ರೀಕೃಷ್ಣನೆಲ್ಲಿ, ಅಂಥಾವನು ಲಕ್ಷ್ಮಿಗೆ ಆವಾಸಯೋಗ್ಯವಾದ ವಕ್ಷಸ್ಥಳದಲ್ಲಿ ನನ್ನನ್ನು ಬಿಗಿದಪ್ಪಿದನೇ, ನನಗಿಂತ ಸುಕೃತಿಯು ಯಾರು ಎಂದು ಪರಮಾನಂದಭರಿತನಾಗಿ, ಸ್ವಸ್ಥಾನವನ್ನು ಸೇರಲು, ಮನೆಯು ದಿವ್ಯಪ್ರಾಸಾದವಾಗಿ, ಭಾರ್ಯೆಯು ಸರ್ವಾಭರಣ ಪೀತಾಂಬರಾದಿಗಳಿಂದ ಭೂಷಿತಳಾಗಿ, ಮನೆಯಲ್ಲಿ ಸರ್ವಸಮೃದ್ಧಿಯುಂಟಾಗಿರುವದನ್ನು ನೋಡಿ ವಿಸ್ಮಿತನಾಗಿ, ಇದೆಲ್ಲಾ ಶ್ರೀಕೃಷ್ಣ ಪರಮಾತ್ಮನ ಲೀಲೆಯೆಂದು ಭಾವಿಸಿ, ಈ ಸಮೃದ್ಧಿಗೆ ಮನಗೊಡದೆ ವಿರಕ್ತನಾಗಿಯೇ ಇದ್ದುಕೊಂಡು, ಪರಮಾತ್ಮನನ್ನು ಧ್ಯಾನಿಸುತ್ತಾ ದೇಹಾವಸಾನದಲ್ಲಿ ಮೋಕ್ಷವನ್ನು ಹೊಂದಿದನು. ಈ ಇತಿಹಾಸದಲ್ಲಿ ಮುಖ್ಯವಾಗಿ ಗ್ರಹಿಸತಕ್ಕದ್ದು ಸ್ವಾಮಿಯು ತನ್ನ ನಿರ್ಹೇತುಕ ಕೃಪೆಯಿಂದ ನಮಗೆ ಸಮೃದ್ಧಿಯನ್ನು ಕೊಟ್ಟರೂ, ಅದರಿಂದ ಮದಾಂಧರಾಗಿ ಆತನನ್ನು ಸ್ಮರಿಸದೆ ಇರಕೂಡದೆಂದೂ, ಕೃತಜ್ಞತಾ ಭಾವದಿಂದ ಇನ್ನೂ ಆತನನ್ನು ವಿಶೇಷವಾಗಿ ಆರಾಧಿಸಿಕೊಂಡು, "**ವಿಷಯಾನ್ಜಾಯಯಾ ತ್ಯಕ್ಷ್ಯನ್ಬುಭುಜೇ ನಾತಿ ಲಂಪಟಃ**" ವಿಷಯಗಳಲ್ಲಿ ಆಶೆಯನ್ನು ತೊರೆಯುತ್ತಾ ಅವುಗಳಲ್ಲಿ ಅತಿ ಲಂಪಟನಾಗದೆ ತನ್ನ ಹೆಂಡತಿ ಮಕ್ಕಳೊಂದಿಗೆ ಸಂಸಾರದಲ್ಲಿ ಲಿಪ್ತನಾಗದೆ ಅನುಭವಿಸತಕ್ಕದ್ದೆಂಬುವದು. ಈ ಮಹಾಭಾಗವತ ಬ್ರಾಹ್ಮಣನ ಕಾಲು ತೊಳೆಯುವದೇ ಮೊದಲಾದ ಉಪಚಾರಗಳಿಂದ ಶ್ರೀಕೃಷ್ಣನು ನಮಗೆ ಬೋಧಿಸಿರುವ ಮುಖ್ಯೋಪದೇಶವು ಏನೆಂದರೆ :—

ತಸ್ಯೈವ ದೇವದೇವಸ್ಯ ಹರೇರ್ಯಜ್ಞಪತೇಃ ಪ್ರಭೋಃ ।
ಬ್ರಾಹ್ಮಣಾಃ ಪ್ರಭವೋ, ದೈವಂ ನತೇಭ್ಯೋ ವಿದ್ಯತೇ ಪರಂ ॥

ಭಗವಂತನು ತಾನೇ ನಿಸ್ಸಮಾಭ್ಯಧಿಕನಾಗಿದ್ದರೂ, ತಾನೇ ದೇವದೇವನಾಗಿ ಸಮಸ್ತಕ್ಕೂ ಪ್ರಭುವಾಗಿದ್ದರೂ, ತಾನೇ ಸರ್ವ ಕರ್ಮಾರಾಧ್ಯನಾಗಿದ್ದರೂ, ಆತನು ಮಹಾಭಾಗವತರಾದ ಬ್ರಹ್ಮವಿತ್ತುಗಳನ್ನು ತನಗೆ ಪ್ರಭುಗಳನ್ನಾಗಿಯೂ, ಅವರುಗಳಿಗಿಂತ ಪರದೈವವು ಬೇರೆ ಇಲ್ಲವೆಂದು ಭಾವಿಸುವನು ಎಂಬುದು. ಹೀಗಿರುವಲ್ಲಿ ನಾವುಗಳು ಅಂತವರನ್ನು ಪರದೈವವೆಂದು ಭಾವಿಸಬೇಡವೇ ?

ಈ ಅದ್ಭುತವಾದ ಉತ್ತಮಃಶ್ಲೋಕ ಚಾರಿತ್ರದಿಂದಲೂ, ಸೌಭರಿ ವೃತ್ತಾಂತದಿಂದಲೂ, ಸರ್ವೇಶ್ವರನು ತಾನೇ "ಶಿಲಭೋಗಜ್ಞಳೈಕೊಡುತ್ತು ತಾನೇ ಅಲ

ಮತ್ತೈಯುವನುಕ್ಕುಮ್ (೧) "ಅಥೋಽಪಾಯ ಪ್ರಸಕ್ತೋಽಪಿ ಭುಕ್ತ್ವಾ ಭೋಗಾನ ನಾಮಯಾರ್ । ಅಂತೇ ವಿರಕ್ತಿ ಮಾಸಾದ್ಯ ವಿಶತೇ ವೈಷ್ಣವಂಪದಂ", ಎಙ್ಗಿರಪಡಿಯೇ ವೈರಾಗ್ಯಾವಧಿ ವಿಳಂಬಮಾಯಿರುಕ್ಕುಮ್.

ಮರನ್ದು ವಿಡಪ್ಪಣ್ಣಿಯುಮ್" ಎಂಬುವದರಿಂದ ಆ ಭೋಗಗಳಲ್ಲಿ ಜಿಹಾಸೆಯುಂಟುಮಾಡುವನೆಂಬುದು ನಿದರ್ಶಿಸಲ್ಪಟ್ಟಿತು.

ಮುಂದೆ ಕಾಲವನ್ನು ಕುರಿತು ಭರನ್ಯಾಸ ಮಾಡದೆ ಸುಮ್ಮನೆ ಭರನ್ಯಾಸ ಮಾಡಿದವನಿಗೆ ಪ್ರಯೋಜನಾಂತರಾಸಕ್ತಿಯುಂಟಾದರೆ ಹೇಗೆ ಎಂಬುವದನ್ನು ತಿಳಿಸುತ್ತಾರೆ:—**ಮತ್ತೈಯುವನಕ್ಕುಮ್** - ಇತರರಾದ, ಕಾಲವನ್ನುದ್ದೇಶಿಸಿ ಶರಣಾಗತಿ ಮಾಡದೇ ಇರುವ, ಪ್ರಪನ್ನನಿಗೂ ಕೂಡ, "**ಅಥ** - ಅನಂತರ, ಪ್ರಪದನಾನಂತರ, **ಉಪಾಯ ಪ್ರಸಕ್ತೋಽಪಿ** - ಪ್ರಯೋಜನಾಂತರಕ್ಕಾಗಿ, ಸಾಧನವನ್ನವಲಂಬಿಸಿದರೂ ಕೂಡ, ಎಂದರೆ ಕಾಮ್ಯಕರ್ಮಗಳನ್ನು ಮಾಡಿದರೂ, **ಅನಾಮಯಾರ್** - ನಿರುಪದ್ರವಗಳಾದ ಎಂದರೆ ಅಧರ್ಮಗಳಿಗೆ ಒಳಗಾಗದೆ ನಿರ್ದುಷ್ಟಗಳಾದ, **ಭೋಗಾರ್** - ಐಹಿಕ ಭೋಗಗಳನ್ನು, **ಭುಕ್ತ್ವಾ** - ಅನುಭವಿಸಿ, **ಅಂತೇ** - ಕಡೆಗೆ, **ವಿರಕ್ತಿಮಾಸಾದ್ಯ**-ವಿರಕ್ತಿಭಾವವನ್ನು ಹೊಂದಿ, **ವೈಷ್ಣವಂಪದಂ** - ವಾಸುದೇವನ ದಿವ್ಯ ವೈಕುಂಠವನ್ನು, **ವಿಶತೇ** - ಪ್ರವೇಶಿಸುವನು" **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ವೈರಾಗ್ಯಾವಧಿ** - ವೈರಾಗ್ಯವು ಹುಟ್ಟುವ ತನಕ, **ವಿಳಂಬಮಾಯಿರುಕ್ಕುಮ್** - ವಿಳಂಬವಾಗುತ್ತದೆ, ಮೋಕ್ಷಪ್ರಾಪ್ತಿಗೆ ವಿಳಂಬವೆಂಬ ಭಾವವು. ಈ ಕಾಲವನ್ನುದ್ದೇಶಿಸದೆ ಶರಣಾಗತಿ ಮಾಡಿದವನಿಗೆ, ವಿರಕ್ತಿ ಉಂಟಾಗುವವರೆಗೂ ದೇಹಾವಸಾನದ ವಿಳಂಬವೇ, ಅಥವಾ ದೇಹಾವಸಾನದವರೆಗೂ ವಿರಕ್ತಿಯುಂಟಾಗದೆ ಹೋದರೆ, ಮುಂದಿನ ಜನ್ಮದಲ್ಲಾದರೂ ವಿರಕ್ತಿ ಹೊಂದುವವರೆಗೂ ವಿಳಂಬವೇ ಎಂಬುವ ಸಂದೇಹದಲ್ಲಿ, ಹಿಂದಿನ ವಾಕ್ಯದಲ್ಲಿ ಅಕ್ಕಾಲತಕ್ಕುಳ್ಳೇ ಪ್ರಯೋಜನಾಂತರ ವೈಮುಖ್ಯಮ್ ಪಿರನ್ದು ವಿಡುಮ್ ಎಂದು ವಿಕಲ್ಪಿಸಿರುವದರಿಂದ, ಈ ಸಂದರ್ಭದಲ್ಲಿ ಹಾಗಲ್ಲವೆಂದು ತೋರಿಬರುವುದರಿಂದ ಜನ್ಮಾಂತರ ವಿಳಂಬವಾದರೂ ಆಗಬಹುದೆಂದು ತೋರಿಬರುತ್ತದೆ. ಸ್ವಾರಾಸ್ವಾದಿನಿ ವ್ಯಾಖ್ಯಾತೃವು ಹೀಗೆಯೇ ಅಭಿಪ್ರಾಯಪಡುತ್ತಾರೆ. ಸಾರವಿವರಣೆಯವರು ಈ ವಾಕ್ಯವು ಅನಿಯತಾಯುಸ್ಸುಗಳ ಪರವಾದುದೆಂದೂ,

---

(೧) ಲಕ್ಷ್ಮೀತಂತ್ರ ೧೭. ೧೦೩.

ದೇವತಾನ್ತರ ಸ್ಪರ್ಶೇ ವಿಳಂಬಾವಿಳಂಬ ಕಥನಂ

ದೇವತಾನ್ತರ ಸ್ಪರ್ಶಮುಣ್ಡಾಯಿತ್ತಾಗಿಲುಮ್ ಸರ್ವೇಶ್ವರನ್ ಏದೇನುಮೊರುನಾಳಿಲೆ ಶ್ರುತ್ಯುಕ್ತಮಾನ ಪಡಿಯೇ ಪರಮೈಕಾನ್ತಿಗಳೋಡೆ ಶೇರ್ತ್ತು ಲಜ್ಜಾವಧಿಯಾಗತ್ತಿರುತ್ತಿ ಇವನುಡೈಯ ವ್ಯಭಿಚಾರತ್ತೈ

ಇದರ ಹಿಂದಿನ ವಾಕ್ಯವು ನಿಯತಾಯುಸ್ಸುಗಳ ಪರವೆಂದೂ ಹೇಳಿರುತ್ತಾರೆ. ಮಿಕ್ಕವರೇನನ್ನೂ ಹೇಳಲಿಲ್ಲವು.

ದೇವತಾಂತರ ಸ್ಪರ್ಶ ಪ್ರಾಪ್ತಿಯಲ್ಲಿ ವಿಳಂಬಾವಿಳಂಬದ ಕಥನವು.

ದೇವತಾಂತರ ಸ್ಪರ್ಶಮುಣ್ಡಾಯಿತ್ತಾಗಿಲುಮ್ - ಅನ್ಯದೇವತಾ ಸಂಬಂಧವು ಉಂಟಾದುದೇಯಾದರೆ, ಸರ್ವೇಶ್ವರನು, **ಏದೇನುಮೊರು ನಾಳಿಲೆ** - ಯಾವುದಾದರೂ ಒಂದು ಕಾಲದಲ್ಲಿ, ಎಂದರೆ ದೇಹಾವಸಾನದೊಳಗೆ ತೋರಿದ ಕಾಲದೊಳಗೆ, **ಶ್ರುತ್ಯುಕ್ತಮಾನಪಡಿಯೇ** - ಶ್ರುತಿಯಲ್ಲಿ ಹೇಳಿರುವ ಹಾಗೆ, **ಪರಮೈಕಾನ್ತಿಗಳೋಡೆ ಶೇರ್ತ್ತು** - ಪರಮೈಕಾನ್ತಿಗಳಾದ ಮಹಾ ಭಾಗವತರೊಂದಿಗೆ ಸೇರಿಸಿ, **ಲಜ್ಜಾವಧಿಯಾಗತ್ತಿರುತ್ತಿ** - ಹಿಂದೆ ಹೀಗೆ ಮಾರ್ಗ ತಪ್ಪಿ, ಪ್ರಪನ್ನನಾದವನು ಅನ್ಯದೇವತಾ ಭಜನ ಮಾಡಬಹುದೇ ಎಂಬ ನಾಚಿಕೆಯು ಉಂಟಾಗುವದೇ ಅವಧಿಯು, ಅದು ಉಂಟಾಯಿತೋ ಇಲ್ಲವೋ, ಒಡನೆ ಆತನನ್ನು, **ತಿರುತ್ತಿ**-ಅನ್ಯದೇವತಾ ಭಜನದಿಂದ ಹಿಂತಿರುಗಿಸಿ, **ಇವನುಡೈಯ ವ್ಯಭಿಚಾರತ್ತೈ** - ಈತನು ತನ್ನ ಪತಿಯನ್ನು ಬಿಟ್ಟು ಅನ್ಯದೇವತಾವಲಂಬನ ಮಾಡಿದ ದೋಷವನ್ನು, ಪ್ರಪನ್ನನು ಪತಿವ್ರತಾ ಸ್ತ್ರೀಯ ಹಾಗೆ ತನ್ನ ಪತಿಯಾದ ಶ್ರೀಮನ್ನಾರಾಯಣನನ್ನೇ ನಂಬಿಕೊಂಡಿರಬೇಕು, ಹಾಗಲ್ಲದೆ ಬ್ರಹ್ಮರುದ್ರಾದಿಗಳನ್ನು ನಂಬಿದರೆ ವ್ಯಭಿಚಾರದೋಷಕ್ಕೆ ಒಳಗಾಗುವನೆಂಬ ಭಾವವು. **ತೀರ್ಕ್ಕುಮ್**- ಅಲ್ಪ ದಂಡನೆ ಮೂಲಕ ಕೃಪಯಾ ಹೋಗಲಾಡಿಸುವನು. ಶ್ರೀ ಮಹಾವಿಷ್ಣುವೇ ನನಗೆ ಗತಿಯು, ಇನ್ಯಾರೂ ಗತಿಯಿಲ್ಲವೆಂದು ಹೇಳಿ, ಸ್ವರೂಪಕ್ಕೆ ಹಾನಿಕರವಾಗಿ ಅನ್ಯದೇವತಾ ಭಜನ ಮಾಡಿದೆನೇ ಎಂಬ ಲಜ್ಜೆಯು ಸ್ವಾಮಿ ಕೃಪೆಯಿಂದ ಪ್ರಾಪ್ತವಾಗಿ, ಅದಕ್ಕಾಗಿ ಆತನು ಪ್ರಾಯಶ್ಚಿತ್ತ ಮಾಡಿಕೊಂಡರೆ ಮನ್ನಿಸಿಬಿಟ್ಟು, ಹಾಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ಅಲ್ಪ ದಂಡನೆ ವಿಧಿಸಿ, ಕೋರಿದ ಕಾಲದಲ್ಲೇ ನಿರ್ಯಾಣ ಮೂಲಕ ಮೋಕ್ಷವನ್ನೀಯುವನೆಂಬ ಭಾವವು. ಈ ಅಭಿಪ್ರಾಯವು ಶ್ರುತಿಸಿದ್ಧವಾದುದೆಂದು ಹೇಳುತ್ತಾರೆ. ಆ ಶ್ರುತಿಗಳು ಯಾವುವೆಂದರೆ :-

೧. ಸಂಧ್ಯಾಂಚಯೋಂ ಸಂದಧೇ ಬ್ರಹ್ಮಣ್ಯೈಷಃ, ರಮತೇ ತಸ್ಮಿನ್ನುತ ಜೀರ್ಣೇಶಯಾನೇ, ನೈನಂ ಜಹಾತ್ಯಹಸ್ಸುಪೂರ್ವ್ಯೇಷು (ತೈ. ಆರ. ೩. ೧೪) ಎಂದರೆ, ಯಾವನು ಪರಮಾತ್ಮನೊಂದಿಗೆ ಸಂಬಂಧವನ್ನು ಬೆಳಸಿದನೋ, ಅವನು ಆ ಪರಮಾತ್ಮನಲ್ಲಿ, ದೇಹವು ಜೀರ್ಣವಾಗಿ ಮರಣ ಹೊಂದಿದಮೇಲೆ ರಮಿಸುವನು, ಇದಕ್ಕೆ ಮುಂದಿನ ಹಾಗೆ ಈತನನ್ನು ಆ ಪರಮಾತ್ಮನು ತ್ಯಜಿಸುವದಿಲ್ಲವು. ಸಾರದೀಪ ಸಾರಾಸ್ವಾದಿನಿ ಸಾರವಿವರಣೆ ವ್ಯಾಖ್ಯಾತೃಗಳು ಹೀಗೆ ಅಭಿಪ್ರಾಯ ಪಟ್ಟಿರುತ್ತಾರೆ. ಸಾರಪ್ರಕಾಶಿಕೆ ಮತ್ತು ಸಾರವಿವರಣೆಯುವರೂ ಜಾನಶ್ರುತಿರೈಕ್ವರ ಸಂವಾದವು ಶ್ರುತಿಯಲ್ಲಿ ಹೇಳಿರುವದೇ ಈ ಪ್ರಕರಣದ ಶ್ರುತಿ ಪ್ರಮಾಣವೆಂದು ತಿಳಿಸುತ್ತಾರೆ. ಆದರೆ ಜಾನಶ್ರುತಿಗೆ ದೇವತಾಂತರಸಂಬಂಧವೂ ಇಲ್ಲವು. ಆತನು ರೈಕ್ವರ ಸಮಾಗಮವನ್ನು ಹೊಂದುವದಕ್ಕೆ ಮುಂಚೆ ಭರನ್ಯಾಸವನ್ನು ಮಾಡಿಯೂ ಇರಲಿಲ್ಲವು. ಜಾನಶ್ರುತಿ ವೃತ್ತಾಂತಕ್ಕೆ ನೆಯ ಪುಟ ನೋಡಿ. ಪರಮೈಕಾಂತಿಗಳೊಡು ಶೇರ್ತ್ತು ಎಂಬುವದಕ್ಕೆ "ಯೇತತ್ರ ಬ್ರಾಹ್ಮಣಾಸ್ಸಮ್ಮರ್ಶಿನಃ ಯುಕ್ತಾ ಆಯುಕ್ತಾಃ ಅಲೂಕ್ಷಾ ಧರ್ಮಕಾಮಾಸ್ಸ್ಯುಃ, ಯಥಾತೇ ತೇಷು ವರ್ತೇರನ್, ತಥಾ ತೇಷು ವರ್ತೇಥಾಃ" ಹೀಗೆಯೇ "ನ ಖಲು ಭಾಗವತಾ ಯಮವಿಷಯಂ ಗಚ್ಛಂತಿ" ಎಂದು ಹೇಳಿರುವದೂ ಕೂಡ ಅನ್ಯದೇವತಾಭಜನ ಮಾಡದೇ ಇರುವ ಸರಿಯಾದ ಉಪಾಯನಿಷ್ಠರನ್ನು ಕುರಿತೇ ಹೇಳಿದುದು ಎಂದು ತಿಳಿಯತಕ್ಕದ್ದು. ಈ ಶ್ರುತ್ಯಭಿಪ್ರಾಯವು ದೇವತಾಂತರ ಸಂಬಂಧವು ಸ್ಥಿರವಾಗಿ ನಿಲ್ಲದೆ, ನಿರ್ಯಾಣ ಕಾಲದ ಒಳಗಾಗಿ ಲಜ್ಜಾಪ್ರಾಪ್ತವಾದವನ ವಿಷಯವು. ಆದರೆ ಇನ್ನು ಬೇರೆ ಶ್ರುತಿಗಳು "ಯೋ ವೈಸ್ವಾಂ ದೇವತಾಮತಿಯಜತೇ ಪ್ರಸ್ವಾಯೈ ದೇವತಾಯೈ ಚ್ಯವತೇ ನಪರಾಂ ಪ್ರಾಪ್ನೋತಿ ಪಾಪೀಯಾನ್ ಭವತಿ." "ಧ್ಯಾಯತೇಽರ್ಚಯತೇ ಯೋಽನ್ಯಂ ವಿಷ್ಣುಲಿಙ್ಗಮುಪಾಶ್ರಿತಃ । ಕಲ್ಪಕೋಟಿಶತೇನಾಪಿ ಗತಿಸ್ತಸ್ಯ ನ ವಿದ್ಯತೇ" ಎಂದರೆ "ಯಾವನೊಬ್ಬನು ತಾನು ಆಶ್ರಯಿಸಿದ ಪರದೇವತೆಯನ್ನು ಬಿಟ್ಟು ಅನ್ಯ ದೇವತೆಯನ್ನು ಆರಾಧಿಸುತ್ತಾನೋ, ಅವನು ಮೊದಲಾಶ್ರಯಿಸಿದ ಪರದೇವತೆಯಿಂದ ಜಾರಿಬೀಳುವನು, ಎಂದರೆ ಆತನು ಇವನನ್ನು ರಕ್ಷಿಸನು ಎಂಬ ಭಾವವು; ಅಂಥಾವನು ಪ್ರಾಪ್ಯವನ್ನು ಹೊಂದುವದಿಲ್ಲವು. ಅಪರಾಧಿಯಾಗಿ ಜನ್ಮಾಂತರವನ್ನು ಹೊಂದುವನು" ಮತ್ತು "ವಿಷ್ಣುವಿನ ದಿವ್ಯಮಂಗಳ ವಿಗ್ರಹವನ್ನು ಆಶ್ರಯಿಸಿದವನು ಎಂದರೆ ಧ್ಯಾನಿಸಿ ಅರ್ಚಿಸಬೇಕಾದವನು, ಬೇರೇ ದೇವತೆಯನ್ನು ಧ್ಯಾನಿಸಿ ಪೂಜಿಸಿದರೆ, ಕಲ್ಪಕೋಟಿ ಶತವಾದರೂ ಆತನಿಗೆ ಉತ್ತಮಗತಿಯಿಲ್ಲವು." ಶ್ರೀಮಾನ್ ಶೆಟ್ಟಲೂರು ನರಸಿಂಹಾಚಾರ್ಯರು ಈ ಸಂದರ್ಭದಲ್ಲಿ ಉದಾಹರಿಸಿರು

ತೀರ್ಕ್ಕುವರ್ ; ಶಿಲರ್ಕ್ಕು ದೇವತಾಂತರ ಸ್ಪರ್ಶಮ್ ನಿಲೈನಿರ್ಕ್ಕುಮಾಗಿಲ್ ಮುನ್ಬು ಉಪಾಯಸ್ಪರ್ಶಮಿಲ್ಲೈ ; ಮೇಲ್ ನರಕಾದಿಗಳು ಮುಣ್ಡೆನ್ರರಿಯ

ವದು, "**ಅಥಿಯಃಜೇತ ನಿಜಾಂಯದಿ ದೇವತಾಮುಭಯತಶ್ಚ್ಯವತೇ ಜುಷ ತೇಪ್ಯಥಂ**" (ಯಾದವಾಭ್ಯುದಯ ೬) ಎಂದರೆ ತನ್ನ ಸ್ವಂತದೇವತೆಯಾದ ಸರ್ವೇಶ್ವರನನ್ನು ತ್ಯಜಿಸಿ ಇತರ ದೇವತೆಯನ್ನು ಭಜಿಸುತ್ತಾನೋ, ಆತನು ಎರಡು ಕಡೆಯಿಂದಲೂ ಶ್ರೇಯಸ್ಸಿಲ್ಲವದನಾಗುತ್ತಾನೆ, ಶಕ್ತಿಯುಳ್ಳ ಸರ್ವೇಶ್ವರನೂ ಕೈಬಿಡುತ್ತಾನೆ ; ಆ ಅನ್ಯದೇವತೆಗೆ ಪುರುಷಾರ್ಥವನ್ನು ಕೊಡುವ ಶಕ್ತಿಯೇ ಇರುವದಿಲ್ಲ ; ಹೀಗೆ ಭಿನ್ನಾಭಿಪ್ರಾಯಗಳಿವೆಯಲ್ಲಾ, ಅದು ಹೇಗೆ ಎಂದರೆ, ಇದು ದೇವತಾಂತರ ಸಂಬಂಧವು ನೆಲೆಯಾಗಿ ನಿಂತವನ ವಿಷಯವೆಂದೂ, ಹಾಗೆ ನೆಲೆಯಾಗಿ ನಿಂತಿದ್ದರೆ, ಅಂಥಾವನಿಗೆ ಭರನ್ಯಾಸರೂಪೋಪಾಯದ ಸಂಬಂಧವೂ ಸರಿಯಾಗಿ ಉಂಟಾಗಿಲ್ಲವೆಂದು ಭಾವಿಸತಕ್ಕದ್ದೆಂದೂ ಅಂಥಾವನಿಗೆ ನರಕಪ್ರಾಪ್ತಿಯಾದರೂ ಆಗಬಹುದೆಂದೂ, ಮುಂದೆ ತಿಳಿಸುತ್ತಾರೆ. ಈತನಿಗೆ ವಿವೇಕೋತ್ಪತ್ತಿಯೂ ಲಜ್ಜೆಯೂ ಉಂಟಾಗದೇ ಇರುವದಕ್ಕೆ ಕಾರಣವು, ಭಗವದನುಗ್ರಹವಿಲ್ಲದಿರುವದು ; ಯಾವಾಗ ಭಗವದನುಗ್ರಹವಿಲ್ಲವೋ ಆಗ ಭರನ್ಯಾಸವೇ ಸಿದ್ಧಿಸಲಿಲ್ಲವೆಂಬ ಭಾವವು.

ಶಿಲರ್ಕ್ಕು-ಕೆಲವರಿಗೆ, ದೇವತಾಂತರ ಸಂಬಂಧವು, **ನಿಲೈನಿರ್ಕ್ಕುಮಾಗಿಲ್**-ಸ್ಥಿರವಾಗಿ ಕೊನೆವರೆಗೂ ನಿಂತಿದುದಾದರೆ, **ಮುನ್ಬು ಉಪಾಯಸ್ಪರ್ಶಮಿಲ್ಲೈ**-ಮೊದಲು ಭರನ್ಯಾಸ ಸಂಬಂಧವೇ ಉಂಟಾಗಲಿಲ್ಲವೆಂದು ಹೇಳತಕ್ಕದ್ದು, ಏಕೆಂದರೆ ಅನ್ಯದೇವತೆಯನ್ನು ಹುಡುಕಿಕೊಂಡು ಹೋದುದರಿಂದ ಮಹಾ ವಿಶ್ವಾಸವೆಂಬಂಗವೇ ಇಲ್ಲವಾದುದರಿಂದ ಪ್ರಪತ್ತಿ ನಿಷ್ಪತ್ತಿಯೇ ಆಗಲಿಲ್ಲವೆಂಬ ತಾತ್ಪರ್ಯವು. **ಮೇಲ್** - ಇದೂ ಅಲ್ಲದೆ ಮುಂದಕ್ಕೆ ನರಕಾದಿಗಳೂ, **ಉಂಡೆನ್ರರಿಯಲಾಮ್**-ಉಂಟೆಂದು ತಿಳಿಯಬಹುದು. ಇದಕ್ಕೆ ಪ್ರಮಾಣವೇನೆಂದರೆ "**ಯೋಽನ್ಯಸ್ವಾಂ ದೇವತಾಂ**" ಇತ್ಯಾದಿ ಮೇಲೆ ಉದಾಹರಿಸಿರುವ ಶ್ರುತಿಗಳು. ನರಕಪ್ರಾಪ್ತಿಯೂ ಉಂಟಾಗಬಹುದೆಂದು ಹೇಳಿರುವದರಿಂದ, ಹಾಗೆ ನರಕವು ಪ್ರಾಪ್ತವಾಗದಿದ್ದರೂ ಜನ್ಮಾಂತರಾದಿ ಶಿಕ್ಷೆಗಳೂ ಉಂಟೆಂಬುದು ಕೈಮುತಿಕ ನ್ಯಾಯಸಿದ್ಧವು ಎಂಬ ಭಾವವು. ಮೊದಲುಪಾಯವಾದ ಪ್ರಪತ್ತಿಯು ಕೈಗೂಡಿದ್ದರೆ, ಶ್ರಿಯಃಪತಿಯನ್ನು ಬಿಟ್ಟು ಎಂದೆಂದಿಗೂ ಹೋಗದಿರುವನು. ಯಾವಾಗ ಬಿಟ್ಟೇ ಹೋದನೋ ಆಗ ಪ್ರಪತ್ತಿಯು ಮಹಾ ವಿಶ್ವಾಸವಿಲ್ಲದುದರಿಂದ ಕೈಗೂಡಲೇ ಇಲ್ಲವೆಂಬ ಭಾವವು.

ಆದರೆ, ಇವನಿಗೆ ಮಹಾವಿಶ್ವಾಸದ ನ್ಯೂನತೆಯಿಂದೇನೋ ಅನ್ಯದೇವತಾ

ಲಾವ್. ಇವನುಕ್ಕು ಭಗವದ್ವಿಷಯತ್ತಿಲ್ ಕೃತಾಂಶಮ್, ಎನ್ರೇನು ಮೊರುನಾಳ್ ಉಪಾಯನಿಷ್ಪತ್ತಿಯೈಪ್ಪಣ್ಣಿ ಕಾರ್ಯಕರಮಾಮ್.

ಸಂಬಂಧ ಪ್ರಾಪ್ತಿಯುಂಟಾಯಿತು. ಶರಣಾಗತಿ ಮಾಡಬೇಕೆಂಬ ಆಭಿಮುಖ್ಯತೆಯನ್ನು ಪ್ರದರ್ಶನೆ ಮಾಡಿರುವದೂ, ಪಂಚಸಂಸ್ಕಾರವನ್ನು ಹೊಂದಿರುವದೂ, ಪ್ರಪತ್ತಿಯ್ನು ಇತರ ಅಂಗಗಳಾದ ಆನುಕೂಲ್ಯ ಸಂಕಲ್ಪಾದಿಗಳನುಗುಣವಾಗಿ ಪ್ರವೃತ್ತಿಯೂ ಇವೆಲ್ಲಾ ಹಾಗಾದರೆ ವ್ಯರ್ಥವೋ ಎಂದರೆ, ಅದಕ್ಕೆ ಸಮಾಧಾನ ಹೇಳುತ್ತಾರೆ. ಇದು ವ್ಯರ್ಥವಾಗುವದಿಲ್ಲವೆಂಡೂ ಯಾವತ್ತಾದರೂ ಒಂದು ದಿನ ಉಪಾಯವು ಸಂಪೂರ್ಣವಾಗುವ ಹಾಗೆ ಮಾಡಿ ಕಾರ್ಯಕಾರಿಯಾಗುವ ಹಾಗೆ ಮಾಡುತ್ತವೆಂದು ತಿಳಿಸುತ್ತಾರೆ:—

ಇವನಕ್ಕು - ಈ ಅನ್ಯದೇವತಾಸಂಬಂಧವು ಸ್ಥಿರವಾಗಿ ನೆಲಸಿರುವವನಿಗೆ, **ಭಗವದ್ವಿಷಯ ಕೃತಾಂಶಮ್** - ಭಗವತ್ಸನ್ನಿಧಿಯಲ್ಲಿ ಮಾಡಿದ ಉಪಾಯ ನಿಷ್ಪತ್ತಿಯುಂಟಾಗದ ಈ ಅನುಷ್ಠಾನಾಂಶವು, **ಏನ್ರೇನು ಮೊರುನಾಳ್**-ಯಾವಾಗಲಾದರೂ ಒಂದು ದಿನವೆಂದರೆ, ಈ ಜನ್ಮದಲ್ಲೋ, ಮುಂದಿನ ಜನ್ಮಗಳಲ್ಲೋ ಒಂದು ದಿನ, **ಉಪಾಯ ನಿಷ್ಪತ್ತಿಯೈ** - ಸರ್ವೇಶ್ವರನ ಕೃಪೆಯಿಂದ ಉಪಾಯ ಸಂಪೂರ್ಣತೆಯನ್ನು, **ಪಣ್ಣಿ** - ಮಾಡಿ, **ಕಾರ್ಯಕರಮಾಮ್** - ಪ್ರಯೋಜನರೂಪವಾಗುವದು, ಮೋಕ್ಷದಾಯಕವಾಗುವದು. ಗೀತೆಯಲ್ಲಿ "**ನೇಹಾಭಿ ಕ್ರಮನಾಶೋಸ್ತಿ ಪ್ರತ್ಯವಾಯೋ ನ ವಿದ್ಯತೇ । ಸ್ವಲ್ಪಮಪ್ಯಸ್ಯಧರ್ಮಸ್ಯ ತ್ರಾಯತೇ ಮಹತೋಭಯಾತ್**" (ಗೀ. ೨. ೪೦) ಎಂಬಂತೆ ಪ್ರಾರಂಭಿಸಿ ಮುಗಿಸದ ಸತ್ಕಾರ್ಯವು ನಿಷ್ಫಲವಾದದ್ದಾಗುವದಿಲ್ಲವು, ಪ್ರಾರಂಭಿಸಿ ನಿಂತುಹೋದರೂ ಪ್ರತ್ಯವಾಯವಿಲ್ಲವು; ಸುಕೃತ ಕರ್ಮದ ಸ್ವಲ್ಪಾಂಶವಾದರೂ ಮಹತ್ತಾದ ಸಂಸಾರಭಯದಿಂದ ರಕ್ಷಿಸುತ್ತದೆ" ಎಂದು ಹೇಳಿರುವದರಿಂದ ಯಾವಾಗಲಾದರೂ ಈ ಆರಂಭಿಸಿದ ಪ್ರಪದನವು ಸದ್ಯದಲ್ಲಿ ನಿಷ್ಪನ್ನವಾಗದಿದ್ದರೂ ಕಾಲಾನುಕಾಲದಲ್ಲಿ ಫಲಕಾರಿಯಾಗಲು ಸಂದೇಹವಿಲ್ಲವೆಂಬ ತಾತ್ಪರ್ಯವು. ಯೋಗಮೂಲಕವಾಗಿಯೂ ಪರಬ್ರಹ್ಮನನ್ನು ಹೊಂದಬೇಕೆಂಬುವನಿಗೂ ಪ್ರಾರಂಭಿಸಿದ ಕೆಲಸವು ಕಾರಣಾಂತರದಿಂದ ನಿಂತುಹೋದರೂ "**ಪಾರ್ಥ ನೈವೇಹನಾಮುತ್ರ ವಿನಾಶಸ್ತಸ್ಯವಿದ್ಯತೇ**" (ಗೀ. ೬ ೧೦) ಶ್ರದ್ಧೆಯಿಂದ ಯೋಗಾರಂಭವನ್ನು ಮಾಡಿ ನಿಲ್ಲಿಸಿಬಿಟ್ಟ ಮೋಕ್ಷಕಾಂಕ್ಷಿಗೆ ದುರ್ಗತಿ ಎಂಬುವದಿಲ್ಲವು. ಒಂದಾನೊಂದು ಕಾಲದಲ್ಲಿ "**ಬುದ್ಧಿಸಂಯೋಗಂ ಲಭತೇ**" ಯೋಗವಿಷಯಕವಾದ ಬುದ್ಧಿಯೋಗವನ್ನು ಹೊಂದಿ,

ಬುದ್ಧಿ ದೌರ್ಬಲ್ಯಸ್ಯ ಉಪಾಯಾನ್ತರ ಪ್ರತ್ಯಾಶಾಯಾಶ್ಚ ವಿಳಂಬಾವಿಳಂಬ ಹೇತುತ್ವಂ

ಮಹಾ ವಿಶ್ವಾಸಮ್ ಪೂರ್ಣಮಾಗ ಪ್ಪಿರನ್ದು ಪ್ರಪತ್ತಿಪಣ್ಣಿನಾರ್ಕ್ಕು ಬುದ್ಧಿ ದೌರ್ಬಲ್ಯಮುಮ್ ಉಪಾಯಾನ್ತರ ಪ್ರತ್ಯಾಶೈಯುಮ್ ಪಿರವಾದು. ಇನ್ನೈ ಪಿರನ್ದವರ್‌ಗಳುಕ್ಕು ಮುನ್ಬು ಪಿರನ್ದ ವಿಶ್ವಾಸಮ್ ಮಂದಮಾಯಿರುಕ್ಕುಮ್. ಇವರ್‌ಗಳೈಯುಮ್ ಸರ್ವೇಶ್ವರನ್ ಮಹಾವಿಶ್ವಾಸಾವಧಿಯಾಗ ತಿರುತ್ತಿ ಪೂರ್ಣಪ್ರಪತ್ತಿ ನಿಷ್ಠರಾಕ್ಕುಮ್.

"ತತೋಽಯಾಂತಿ ಪರಾಂಗತಿಂ" ಅನಂತರ ಸದ್ಗತಿಯನ್ನು ಹೊಂದುವನೆಂದು ಹೇಳಲ್ಪಟ್ಟಿರುವದು, ಈ ಪ್ರಪತ್ತಿಯಿಂದ ಜಾರಿದವನಿಗೂ ಅನ್ವಯಿಸುತ್ತದೆಂದು ಭಾವಿಸತಕ್ಕದ್ದು.

ಮುಂದೆ ಬುದ್ಧಿ ದೌರ್ಬಲ್ಯಕ್ಕೂ ಉಪಾಯಾನ್ತರ ಪ್ರತ್ಯಾಶೆಗೂ ವಿಳಂಬಾವಿಳಂಬಗಳು ಯಾವ ಸಂದರ್ಭದಲ್ಲಿ.

ಮಹಾವಿಶ್ವಾಸಮ್ ಪೂರ್ಣಮಾಗಪಿರನ್ದು - ಸರ್ವೇಶ್ವರನು ಎಂದಿಗೂ ರಕ್ಷಿಸದೇ ಇರುವನಲ್ಲವೆಂಬ ಮಹಾವಿಶ್ವಾಸವು ಸಂಪೂರ್ಣವಾಗಿ ಉಂಟಾಗಿ, **ಪ್ರಪತ್ತಿಪಣ್ಣಿನಾರ್ಕ್ಕು** - ಪ್ರಪತ್ತಿಯನ್ನನುಷ್ಠಿಸಿದವರಿಗೆ, ಬುದ್ಧಿ ದೌರ್ಬಲ್ಯವೂ, **ಉಪಾಯಾನ್ತರ ಪ್ರತ್ಯಾಶೆಯುಮ್** - ಇನ್ನೊಂದುಪಾಯವಾದ ಭಕ್ತ್ಯುಪಾಯದಲ್ಲಿ ಆಶೆಯು, **ಪಿರವಾದು** - ಹುಟ್ಟಲಾರದು. ಈ ಲಘುವಾದ ಉಪಾಯದಿಂದಲೇ ಸಮಸ್ತವೂ ಸಾಧ್ಯವೆಂದು ಪೂರ್ಣ ನಂಬಿಕೆ ಇರುವವನು ಇನ್ಯಾವ ಉಪಾಯವನ್ನಾದರೂ ಅವಲಂಬಿಸುವನೇ ಎಂಬ ಭಾವವು. **ಇನ್ನೈ ಪಿರನ್ದವರ್‌ಗಳುಕ್ಕು** - ಈ ಬುದ್ಧಿದೌರ್ಬಲ್ಯವೂ ಉಪಾಯಾಂತರ ಪ್ರತ್ಯಾಶೆಯೂ ಹುಟ್ಟಿದವರಿಗೆ, **ಮುನ್ಬು ಪಿರನ್ದ ವಿಶ್ವಾಸಮ್** - ಮೊದಲು ಪ್ರಪದನ ಮಾಡುವ ಕಾಲದಲ್ಲಿ ಹುಟ್ಟಿದ ಮಹಾ ವಿಶ್ವಾಸವು, **ಮಂದಮಾಯಿರುಕ್ಕುಮ್**- ಅಲ್ಪವಾಗಿರುತ್ತದೆ ಎಂದರೆ ಕ್ಷೀಣವಾಗಿರುತ್ತದೆ; **ಇವರ್‌ಗಳೈಯುಮ್** - ಇವರನ್ನೂ, **ಸರ್ವೇಶ್ವರನು, ಮಹಾ ವಿಶ್ವಾಸಾವಧಿಯಾಗ** - ಮಹಾ ವಿಶ್ವಾಸವು ಪುನಃ ಪ್ರಾಪ್ತವಾಗುವದೇ ಅವಧಿಯಾಗಿ, ಎಂದರೆ ಅದು ಹುಟ್ಟುವವರೆಗೂ ವಿಳಂಬವು ಪ್ರಾಪ್ತವಾಗುತ್ತದೆಂಬ ಭಾವವು, **ತಿರುತ್ತಿ** - ಅಲ್ಪದಂಡನೆಯ ಮೂಲಕ

ವೈಪರೀತ್ಯ ರಹಿತಾನಾಂ ವಿಳಂಬ ಶಙ್ಕಾಪಿ ನಾಸ್ತಿ

ಇವ್ವೈಪರೀತ್ಯಙ್ಗಳೊನ್ರುಮ್ ಪಿರವಾದೆ ನಡನ್ದವರ್‌ಗಳುಕ್ಕು ವಿಳಂಬಾದಿ ಶಙ್ಕೈಯುಮ್ ಕೂಡ ಇಲ್ಲೈ; ಇವರ್‌ಗಳುಕ್ಕು ಇಚ್ಛಾವಧಿ ವಿಳಂಬಮ್; ಇವರ್‌ಗಳ್ ಕೋಲಿನ ಎಲ್ಲೈಯಿಲ್ ಮೋಕ್ಷ ಪುವಿನಾಭೂತಮ್. ಇನ್ನಿಷ್ಟೈಯೆಪ್ಪೆತ್ತ ಇವ್ವಧಿಕಾರಿ (೧) "ಕಡೈತ್ತಲೈ

ತಿದ್ದಿ ಹಿಂತಿರುಗಿಸಿ, **ಪೂರ್ಣಪ್ರಪತ್ತಿನಿಷ್ಠರಾಕ್ಕುಮ್**-ಸಂಪೂರ್ಣವಾಗಿ ಪ್ರಪತ್ತಿಯಲ್ಲಿ ಆಸಕ್ತಿಯುಳ್ಳವರ ಹಾಗೆ ಮಾಡುವನು. ಈ ಸಂದರ್ಭದಲ್ಲಿ ಪ್ರಪದನಾನುಷ್ಠಾನ ಕಾಲದಲ್ಲಿ ಮಹಾ ವಿಶ್ವಾಸಾದಿ ಎಲ್ಲಾ ಅಂಗಗಳೂ ಇರುವದರಿಂದ ದೇಹಾವಸಾನದಲ್ಲಿ ಮೋಕ್ಷವೆಂಬುವದು ಸಿದ್ಧವು ಎಂಬ ತಾತ್ಪರ್ಯವು.

ಇಂತಹ ವೈಪರೀತ್ಯಗಳಿಲ್ಲದವರಿಗೆ ವಿಳಂಬಾ ಶಙ್ಕೆ ಕೂಡ ಇಲ್ಲವು.

ಈ ವೈಪರೀತ್ಯಙ್ಗಳೊನ್ರುಮ್ ಪಿರವಾದೆ - ಈ ಮೇಲೆ ಹೇಳಿದ ಅಹಂಕಾರ ಮಮಕಾರಗಳು ಪ್ರಯೋಜನಾಂತರರುಚಿ, ಇವೇ ಮೊದಲಾದ ವಿಪರೀತ ಪ್ರವೃತ್ತಿಗಳೊಂದೂ ಹುಟ್ಟದಹಾಗೆ, **ನಡನ್ದವರ್‌ಗಳುಕ್ಕು** - ಪ್ರವೃತ್ತಿಯುಳ್ಳ ಪ್ರಪನ್ನರಿಗೆ, ವಿಳಂಬವೇ ಮೊದಲಾದವುಗಳ ಶಂಕೆಯೂ ಕೂಡ, **ಇಲ್ಲೈ**-ಇಲ್ಲವು. ಹಾಗಾದರೆ ಪ್ರಪತ್ತಿಯಾದ ಒಡನೆಯೇ ಮೋಕ್ಷವೋ ಎಂದರೆ, ಹಾಗೆ ಆರ್ತನಾಗಿ, ಇಲ್ಲಿರುವದು ಅಗ್ನಿಮಧ್ಯದಲ್ಲಿರುವ ಹಾಗೆ ದುಸ್ಸಹವಾಗಿ ಎಣಿಸಿ ಒಡನೆಯೇ ನಿರ್ಯಾಣದಿಂದ ಮೋಕ್ಷ ಬೇಕೆಂದಪೇಕ್ಷಿಸುವವರಿಗೆ ಹಾಗೆಯೇ ಪ್ರಾರಬ್ಧವೂ ನಶಿಸಿ ಒಡನೆಯೇ ಮೋಕ್ಷಪ್ರಾಪ್ತಿಯೂ, ಹಾಗಲ್ಲದೆ ಇನ್ನು ಮುಂದೆ ಇರುವ ಆಯುಸ್ಸಿನಲ್ಲಿ ಸ್ವಾಮಿಯು ಕುಚೇಲರಿಗಿತ್ತ ಹಾಗೆ ದಯಪಾಲಿಸಿದ ಭೋಗಗಳನ್ನು ಅವುಗಳಲ್ಲಿ ಲಿಪ್ತನಾಗದೆ ಅನುಭವಿಸಿ ದೇಹಾವಸಾನದಲ್ಲಿ ಮೋಕ್ಷ ಬೇಕೆಂಬ ದೃಪ್ತನಿಗೂ ಆತನ ಇಚ್ಛಾನುಸಾರವೂ ನಡೆಯುತ್ತದೆಂದೂ, "ಇವರ್‌ಗಳುಕ್ಕು" ಎಂದು ಆರಂಭಿಸಿ ತಿಳಿಸುತ್ತಾರೆ. **ಇವರ್‌ಗಳುಕ್ಕು** - ಇಂತಹ ವೈಪರೀತ್ಯಗಳಿಲ್ಲದಿರುವ ಪ್ರಪನ್ನರಿಗೆ, **ಇಚ್ಛಾವಧಿ ವಿಳಂಬಮ್** - ಇವರ ಇಷ್ಟಾನುಸಾರವಾಗಿ ವಿಳಂಬವು; ಆರ್ತನಾಗಿ ವಿಳಂಬ ಬೇಡವೆಂಬುವನಿಗೆ ವಿಳಂಬವಿಲ್ಲವು; ದೇಹಾವಸಾನದವರೆಗೂ ವಿಳಂಬ ಬೇಕೆಂಬುವರಿಗೆ ಹಾಗೆಯೇ ಸರ್ವೇಶ್ವರನು ನಡಿಸಿಕೊಡುವನು;

---

(೧) ತಿರುಮಾಲೈ ೩೮.

ಮತ್ತು ಪ್ರಪದನಕಾಲದಲ್ಲಿ ಕಾಲವನ್ನುದ್ದೇಶಿಸದೆ ಜನ್ಮಾಂತರ ವಿಳಂಬವನ್ನು ಇವರ್‍ಗಳ್ - ಇಂತಹ ಪ್ರಪನ್ನರು, **ಕೋಲಿನ ಎಲ್ಲೈಯಿಲ್** - ಅಪೇಕ್ಷಿಸಿದ ಅವಧಿಗನುಸಾರವಾಗಿ, **ಮೋಕ್ಷಮವಿನಾಭೂತಮ್**-ಮೋಕ್ಷವು ತಪ್ಪದೆ ಸಿದ್ಧವು. ಶರಣಾಗತಿ ಕಾಲದಲ್ಲಿ, ಯಾವ ಕಾಲದಲ್ಲಿ ಮೋಕ್ಷ ಬೇಕೆಂದಪೇಕ್ಷಿಸಿದ್ದನೋ, ಆ ಪ್ರಕಾರವಾಗಿ, ಆ ಕಾಲಕ್ಕೇನೇ ತಪ್ಪದೆ ಮೋಕ್ಷವು ಲಭಿಸುತ್ತದೆ ಎಂಬ ತಾತ್ಪರ್ಯವು. ಪ್ರಪದನವಾದ ಒಡನೆಯೇ ಅಪೇಕ್ಷಿಸಿದರೂ ಹಾಗೆಯೇ ನಡಿಸಿಕೊಡುವನು. ಪ್ರಪದನಕಾಲದಲ್ಲಿ ದೇಹಾವಸಾನದಲ್ಲೆಂದು ಸಂಕಲ್ಪಿಸಿ ವಿವೇಕಶೂನ್ಯನಾಗಿ ಜನ್ಮಾಂತದಲ್ಲಿ ಮೋಕ್ಷಾಪೇಕ್ಷೆಯುಂಟಾದರೂ, ಸತ್ಯಸಂಕಲ್ಪನು, ದೇಹಾವಸಾನ ಸಂಕಲ್ಪವನ್ನು ಮನಸ್ಸಿನಲ್ಲಿಟ್ಟು ಹಾಗೆಯೇ ನಡೆಸುವನು. ಈತನು ಈಶ್ವರನಿಗೆ ಅಭಿಮತನಾಗಿರುವದರಿಂದ ವಿವೇಕಶೂನ್ಯನಾಗಿ ಅಹಿತವನ್ನಪೇಕ್ಷಿಸಿದರೂ ಹಿತವನ್ನೇ ಮಾಡುವನು. ಹಾಗಲ್ಲದೆ,

ಈ ವೈಪರೀತ್ಯಗಳುಂಟಾದ ಸಂದರ್ಭದಲ್ಲಿ ಯಾವ ಸಂದರ್ಭದಲ್ಲಿ ವಿಳಂಬವು, ಯಾವ ಸಂದರ್ಭದಲ್ಲಿಲ್ಲವೆಂದು ಚರ್ಚಿಸಿದ ಸಂದರ್ಭಗಳಲ್ಲಿ, ಎಲ್ಲೋ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಳಂಬವುಂಟಾಗುತ್ತದೆಂದೂ, ಮಿಕ್ಕ ಸಂದರ್ಭಗಳಲ್ಲೆಲ್ಲಾ ಸರ್ವೇಶ್ವರನೇ ಪರಿಹಾರವನ್ನುಂಟುಮಾಡುತ್ತಾನೆಂದೂ ಹೇಳಲ್ಪಟ್ಟಿತು. ವಿಳಂಬಗಳು ಯಾವ ಸಂದರ್ಭದಲ್ಲೆಂದರೆ :—

೧. ಪ್ರಪದನ ಕಾಲದಲ್ಲಿ ಕಾಲವನ್ನುದ್ದೇಶಿಸಿ ಸಙ್ಕಲ್ಪಿಸದೇ ಇರುವ ಸಂದರ್ಭದಲ್ಲಿ ಈ ವೈಪರೀತ್ಯಗಳು ಪ್ರಾಪ್ತವಾದರೆ ವಿಳಂಬವು.
೨. ಪ್ರಯೋಜನಾಂತರ ರುಚಿಯುತ್ಪನ್ನವಾದರೆ ವೈರಾಗ್ಯಾವಧಿ ವಿಳಂಬವು
೩. ದೇವತಾಂತರ ಸಂಬಂಧವು ನೆಲೆಯಾಗಿ ನಿಂತುಬಿಟ್ಟರೆ ವಿಳಂಬವು.

ಹೀಗೆ ಎಲ್ಲೋ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಳಂಬವೂ, ಇನ್ನು ಮಿಕ್ಕ ಸಂದರ್ಭಗಳಲ್ಲಿ ಈ ವೈಪರೀತ್ಯಗಳ ಪರಿಹಾರದೊಂದಿಗೆ ವಿಳಂಬವಿಲ್ಲದಿರೋಣವು, ಭಗವಂತನಲ್ಲಿ ಶರಣಾಗತಿಯನ್ನನುಷ್ಠಿಸಿ ಪ್ರಪನ್ನನು ಸರ್ವೇಶ್ವರನಿಗೆ ತುಂಬಾ ಅಭಿಮತನೆನಿಸಿ, ಆತನನುಗ್ರಹಕ್ಕೆ ಪಾತ್ರನಾದ ಮಾಹಾತ್ಮ್ಯೆ ಎಂದು ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ:—**ಇನ್ನಿಷ್ಠೈಯೈಪ್ಪೆತ್ತ**-ಹೀಗೆ ಯಾವುದೊಂದೂ ವೈಪರೀತ್ಯಗಳಿಗವಕಾಶವಿಲ್ಲದಂತೆ ಪ್ರವೃತ್ತಿ ನಿಷ್ಠೆಯನ್ನು ಹೊಂದಿದ, ಇವ್ವಧಿಕಾರೀ - ಈ ಭರನ್ಯಾಸವನ್ನು ಯಥಾಶಾಸ್ತ್ರವಾಗಿ ಅನುಷ್ಠಿಸಿ ಕೃತಕೃತ್ಯನಾದ ಪ್ರಪನ್ನನು "**ಕಡೈತ್ತಲೆ ಇರುನ್ದು** ನಿನ್ನ ಆಲಯದ ಕಡೇ ಬಾಗಲಿನಲ್ಲಿ ಕಾದಿದ್ದು **ವಾಳುಮ್** - ಬದುಕುವ **ಶೋಮ್ಬರ್ಗೈ** – ಕರ್ಮಯೋಗಾದಿಗಳಿಂದ ಕೂಡಿದ ಉಪಾಸನೆಯನ್ನವಲಂಬಿಸಲಶಕ್ತರಾಗಿ ಪ್ರಪದನಾನುಷ್ಠಾನ ಮಾಡಿದ ಪ್ರಪನ್ನರನ್ನು

ಯಿರುನ್ದು ವಾಳುಮ್ ಶೋಮ್ಬರ್ಗೈಯುಕತ್ತಿ” ಎಙ್ಗರಪಡಿಯೇ ಶ್ರೀಯಃ ಪತಿಯಾನ ಸರ್ವೇಶ್ವರನುಕ್ಕು ಸರ್ವದಾಽಭಿಮತನಾಯಿರುಕ್ಕುಮ್.

ಉಗತ್ತಿ ಪ್ರೋಲುಮ್ ಎಂದು ಮುಂದಿದೆ, ಅತ್ಯಂತ ಸ್ತೋತ್ರ ಮಾಡುತ್ತೀಯಲ್ಲವೇ'' ಎಙ್ಗರಪಡಿಯೇ ಎಂದು ತೊಂಡರಡಿಪ್ಪೊಡಿಯಾಳ್ವಾರ್ರವರು ತಿರುಮಾಲೆಯಲ್ಲಿ ಹೇಳಿರುವ ಹಾಗೆ, ಶ್ರಿಯಃಪತಿಯಾದ ಸರ್ವೇಶ್ವರನಿಗೆ, ಸರ್ವದಾಽಭಿಮತನಾಯಿರುಕ್ಕುಮ್ - ಯಾವಾಗಲೂ ತುಂಬಾ ಪ್ರಿಯನಾಗಿರುವನು. ಈ ಪೂರಾ ಪಾಶುರವು ಯಾವುದೆಂದರೆ:—

ಮೇಂ ಪ್ರೊರುಳ್ಪೋಗ ವಿಟ್ಟುಮೆಯ್ ಮ್ಮೆಯ್ಯೈ ಮಿಗವುಣರ್ನ್ದು
ಆಂ ಪರಿ ಶರಿನ್ದುಕೊಂಡು ಐಂಬುಲನಗತ್ತಡಕ್ಕಿ
ಕಾಂಬರತ್ತಲೈ ಶಿರೈತ್ತುನ್ಕಡತ್ತಲೈ ಯಿರುನ್ದು ವಾಳುಮ್
ಶೋಂಬರ್ಗೈ ಯುಗತ್ತಿಪ್ರೋಲುಮ್ ಶೂಳ್ಪುನಲರಙ್ಗತ್ತಾನೇ ॥೩೮॥

“ಓ, ಕಾವೇರೀ ನದಿಯಿಂದ ಸುತ್ತಲ್ಪಟ್ಟ ಶ್ರೀರಂಗ ಕ್ಷೇತ್ರದಲ್ಲಿ ಪವಡಿಸಿರುವ ಶ್ರೀರಂಗನಾಥನೇ, ಪ್ರತ್ಯೇಕಿಸಲಸಾಧ್ಯವಾದ ಪ್ರಕೃತಿ ಸಂಬಂಧವನ್ನು ಸವಾಸನವಾಗಿ ಹೋಗಲಾಡಿಸಿ, ಈ ಆತ್ಮತತ್ವ ಯಾಥಾತ್ಮ್ಯವನ್ನು ಚೆನ್ನಾಗಿ ಪರಿಶೀಲನೆ ಮಾಡಿ, ಪ್ರಾಪ್ಯವಾದ ಪುರುಷಾರ್ಥವನ್ನರಿತು, ಐದು ಇಂದ್ರಿಯಗಳನ್ನೂ ವಿಷಯಗಳಲ್ಲಿ ಪ್ರವರ್ತಿಸದ ಹಾಗೆ ನಿರೋಧಿಸಿ, ಉಪಸನಾದಿ ಉಪಾಯಾಂತರಗಳಲ್ಲಿ ತನಗೇನೂ ಸಂಬಂಧವಿಲ್ಲದೆ, ತನ್ನ ಪಾಪಗಳೆಲ್ಲಾ ನಾಶವಾಗುವ ಹಾಗೆ ನಿನ್ನ ಆಲಯದ ಕೊನೆಯ ಬಾಗಲನ್ನು ಕಾದುಕೊಂಡು, ಬದುಕಬೇಕೆಂಬಾಶೆಯಿಂದ ನಿನ್ನಲ್ಲಿ ಭರನ್ಯಾಸ ಮಾಡಿ ಕೃತಕೃತ್ಯರಾದ ಅಶಕ್ತರನ್ನು ನೀನು ನಿನಗೆ ತುಂಬಾ ಪ್ರಿಯರೆಂಧೂ ಉದಾರರೆಂದೂ ಸ್ತೋತ್ರಮಾಡುತ್ತೀಯಲ್ಲವೇ” ಈ ವೈಪರೀತ್ಯಾದಿಗಳೊಂದೂ ಇಲ್ಲದ ಪ್ರಪನ್ನನು ಶ್ರೀಯಃಪತಿಗೆ ತುಂಬಾ ಪ್ರಿಯನು. ಇದಕ್ಕೆ ರಾಮಾಯಣದಲ್ಲಿ ಅನೇಕ ನಿದರ್ಶನಗಳುಂಟು. ಶರಣಾಗತ ಪ್ರಪನ್ನರು ತಮಗೆ ಸೀತೆಗಿಂತ ಪ್ರಿಯರೆಂದು ಶ್ರೀರಾಮನು ಹೇಳಿಕೊಂಡಿರುತ್ತಾನೆ:—“ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾಸೀತೇ ಸಲಕ್ಷ್ಮಣಾಂ। ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ” ಶರಣಾಗತರಕ್ಷಣೆಗಾಗಿ ಜೀವವನ್ನಾದರೂ ತೊರೆಯುವೆನು, ಓ ಸೀತೆಯೇ ನಿನ್ನನ್ನಾದರೂ ಲಕ್ಷ್ಮಣನೊಂದಿಗೆ ತ್ಯಜಿಸುವೆನು, ಆ ಶರಣಾಗತರು ಬ್ರಹ್ಮವಿತ್ತುಗಳಾದರೆ ಇನ್ನು ಹೇಳತಕ್ಕದ್ದೇನಿದೆ, ಎಂದು ಹೇಳಿರುತ್ತಾನೆ.” ಹೀಗೆ ಶರಣಾಗತರಾದ ಋಷಿಗಳ ಸಂರಕ್ಷಣಾರ್ಥವಾಗಿಯೇ ವನಕ್ಕೆ

ಪ್ರಪನ್ನ ವಿಷಯೇ ಭಗವದನುಗ್ರಹ ಪರಂಪರಾಃ

ಇವನ್ತಿರತ್ತಿಲ್ ನಿರುಪಾಧಿಕ ಸರ್ವಶೇಷಿಯಾಯ್, ನಿರುಪಾಧಿಕ

ಬಂದು, ಸೀತೆಯನ್ನು ತನ್ನ ಸಂಕಲ್ಪಾನುಸಾರ ಕಳೆದುಕೊಂಡಿರುತ್ತಾನೆ. ಹಾಗೆಯೇ ಸುಗ್ರೀವನೂ, ನೀಚನಾದ ರಾವಣನ ಪ್ರಥಮದರ್ಶನದಲ್ಲೇ, ಇವನೇ ತನ್ನ ಪರಮ ಮಿತ್ರನ ದಾರಚೋರನು ಎಂದು ಕೋಪಗೊಂಡು, ಒಂದೇ ಸಲಕ್ಕೆ ನೆಗೆದು ರಾವಣನಲ್ಲಿಗೆ ಸೇರಿ ಎದೆಯ ಮೇಲೆ ಗುದ್ದಲು, ರಾವಣನ ಮಕುಟವು ಕೆಳಗೆ ಬಿದ್ದು, ಅನಂತರ ಇಬ್ಬರಿಗೂ ದ್ವಂದ್ವಯುದ್ಧ ಪ್ರಾರಂಭವಾಗಲು, ಶತ್ರುಸೈನ್ಯ ಮಧ್ಯೇ ಒಬ್ಬನೇ ಹೀಗೆ ಯುದ್ಧ ಮಾಡಿದುದು ತುಂಬಾ ಅಪಾಯಕರವಾದುದಾಗಿ ತಪ್ಪಿಸಿಕೊಂಡು ಸುಗ್ರೀವನು ಶ್ರೀರಾಮಸನ್ನಿಧಿಗೆ ಬಂದು ಸೇರಲು, ಶ್ರೀರಾಮಪ್ರಭುವು ಹೇಳುತ್ತಾನೆ:—"**ತ್ವಯಿಕಿಂಚಿತ್ಸಮಾಪನ್ನೇ ಕಿಂಕಾರ್ಯಂ ಸೀತಯಾಮಮ**" "ಈಗ ಇಷ್ಟು ಮಹಾಪ್ರಯತ್ನವೂ ಸೀತೆಗಾಗಿಯೇ, ಈ ಪ್ರಯತ್ನದಲ್ಲಿ ಓ ಸುಗ್ರೀವನೇ, ನಿನಗೂ ಏನಾದರೂ ಸ್ವಲ್ಪ ವಿಪತ್ತು ಪ್ರಾಪ್ತವಾದುದಾದರೆ, ನನಗೆ ಸೀತೆಯಿಂದೇನು?" ಎಂದು ಹೇಳಿಕೊಂಡಿರುತ್ತಾನೆ. ಆದುದರಿಂದ ಪ್ರಪನ್ನರು ಸರ್ವೇಶ್ವರನಿಗೆ ತುಂಬಾ ಅಭಿಮತರು. ಆದುದರಿಂದ ಅವರನ್ನು (೧) "**ಉದಾರಾಸ್ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಂ**" ಪರಮೋದಾರರೆಂದೂ (೨) "**ಯೋಮದ್ಭಕ್ತಸ್ಸಮೇ ಪ್ರಿಯಃ**" ಅಂತವನು ತುಂಬಾ ಪ್ರಿಯನೆಂದೂ ಸರ್ವೇಶ್ವರನು ಕೊಂಡಾಡಿರುತ್ತಾನೆ.

ಪ್ರಪನ್ನನ ವಿಷಯದಲ್ಲಿ ಶ್ರಿಯಃಪತಿಯು ಮಾಡುವ ಅನುಗ್ರಹ ಪರಂಪರೆಗಳು.

ಮುಂದೆ "**ಇವನ್ತಿರತ್ತಿಲ್**" ಎಂದು ಪ್ರಾರಂಭಿಸಿ ಪ್ರಪನ್ನನಿಗೆ ಶ್ರಿಯಃಪತಿಯು, ನಿರ್ಯಾಣಕ್ಕೆ ಪೂರ್ವಭಾವಿಯಾಗಿಯೂ, ನಿರ್ಯಾಣಕಾಲದಲ್ಲೂ, ಆಮೇಲೂ ಮಾಡುವ ಉಪಕಾರ ಪರಂಪರೆಗಳನ್ನೆಲ್ಲಾ ಒಂದು ದೊಡ್ಡ ವಾಕ್ಯದ ಮೂಲಕ ಪ್ರಮಾಣಗಳಿಂದಲೂ, ತದನುಗುಣವಾದ ಆಚಾರ್ಯಸೂಕ್ತಿಗಳಿಂದಲೂ ತಿಳಿಸುತ್ತಾರೆ. ವಾಕ್ಯವು ದೊಡ್ಡದಾದುದರಿಂದ ಭಿನ್ನವಾಕ್ಯಗಳಾಗಿ ಭಾವಿಸಬಹುದು. (೧) **ಇವನ್ತಿರತ್ತಿಲ್** - ಇಂತಹ ಪ್ರಪನ್ನನ ವಿಷಯದಲ್ಲಿ, **ನಿರುಪಾಧಿಕ ಸರ್ವಶೇಷಿಯಾಯ್** - ತಂದೆ ಮೊದಲಾದವರ ಹಾಗೆ ಸೋಪಾಧಿಕಶೇಷಿಯಲ್ಲದೆ, ಸಹಜವಾಗಿಯೇ ನಮಗೆ ಶೇಷಿಯಾಗಿ, ನಾವು ಸ್ವತಃ ಶೇಷಭೂತರಾದುದರಿಂದ,

---

(೧) ಗೀ. ೭.೧೮. (೨) ಗೀ. ೧೦.೧೬.

ಸ್ವತಂತ್ರನಾಯ್, ಸತ್ಯಸಙ್ಕಲ್ಪನುಮಾನ ಸರ್ವೇಶ್ವರ್ರ ಸರ್ವಭಯಙ್ಗಳು ಕ್ಕುಮ್ ಕಾರಣಮಾನ ನಿಗ್ರಹ ಸಙ್ಕಲ್ಪತ್ತೈ (೧) "ತದಧಿಗಮ ಉತ್ತರ ಪೂರ್ವಾಘಯೋರಶ್ಲೇಷವಿನಾಶೌ, ತದ್ವ್ಯಪದೇಶಾತ್" ಎಙ್ಗಿರಪಡಿಯೇ ಸದ್ವಾರಕ ಪ್ರಪತ್ತಿನಿಷ್ಠನುಕ್ಕು ಉಪಾಸನ ಪ್ರಾರಂಭತ್ತಿಲ್ಪೋಲೆ ಪ್ರಪತ್ತಿ ವಾಕ್ಯೋಚ್ಚಾರಣತ್ತಿಲ್ ಪ್ರಥಮಕ್ಷಣತ್ತಿಲೆ ವಿಲಕ್ಕಿ, (೨) ಇವನ್ನೈಯುಮ್

ಆತನು ನಮಗೆ ನಿರುಪಾಧಿಕ ಶೇಷಿಯು, **ನಿರುಪಾಧಿಕ ಸ್ವತಂತ್ರನಾಯ್** - ಆತನು ಇನ್ನ್ಯಾರಿಗೂ ಅಧೀನನಲ್ಲದೆ, ನಿರುಪಾಧಿಕ ಸ್ವತಂತ್ರನಾಗಿ, ಸತ್ಯ ಸಂಕಲ್ಪನಾದ ಸರ್ವೇಶ್ವರನು ಸಮಸ್ತ ಭಯಗಳಿಗೂ ಕಾರಣಭೂತವಾದ ಸರ್ವೇಶ್ವರನ ನಿಗ್ರಹ ಸಙ್ಕಲ್ಪವನ್ನು, ಇದಕ್ಕೆ ಮುಂದೆ ಇರುವ ವಿಲಕ್ಕಿ ಎಂಬುವದರಲ್ಲಿರುವ ಕ್ರಿಯೆಯೊಂದಿಗೆ ಅನ್ವಯವು, "**ತದಧಿಗಮೇ** - ಆ ಬ್ರಹ್ಮವಿದ್ಯೆಯ ಅನುಷ್ಠಾನರೂಪವಾದ ಉಪಾಸನೆಯು ಉಂಟಾದ ಒಡನೆಯೇ, **ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ** - ವಿದ್ಯಾರಂಭವಾದಮೇಲೆ ಪ್ರಾಪ್ತವಾಗುವ ಪುಣ್ಯ ಪಾಪಗಳು ಲೇಪಿಸದೇ ಇರೋಣವೂ, ವಿದ್ಯಾರಂಭಕ್ಕೆ ಮುಂಚೆಯಿದ್ದ ಪುಣ್ಯ ಪಾಪಗಳ ನಾಶವೂ, ಉಂಟಾಗುತ್ತವೆ; ಏಕೆಂದರೆ **ತದ್ವ್ಯಪದೇಶಾತ್** - ಹಾಗೆ ಶ್ರುತಿಯಲ್ಲಿ ಹೇಳಿರುತ್ತದೆ. ಯಾವ ಶ್ರುತಿಯಲ್ಲಿ ಎಂದರೆ, "**ತದ್ಯಥೈಷಿಕಾತೂಲಮಗ್ನೌ ಪ್ರೋತಂ ಪ್ರದೂಯೇತ ಏವಂ ಹಾಸ್ಯಸರ್ವೇ ಪಾಪ್ಮಾನಃ ಪ್ರದೂಯಂತೇ**" (ಛಾಂ. ೪. ೧೪. ೩.) ಇಷೀಕವೆಂಬ ಮುಂಜೀ ಹುಲ್ಲಿನಲ್ಲಿರುವ ಹತ್ತಿಯು ಅಗ್ನಿಯಲ್ಲಿಟ್ಟರೆ ಒಡನೆ ಎಲ್ಲವೂ ಹತ್ತಿ ಹೇಗೆ ಉರಿದುಹೋಗುತ್ತೆಯೋ, ಹಾಗೆಯೇ ಉಪಾಸನಪೂರ್ವಕವಾದ ಪ್ರಾಣಾಗ್ನಿಹೋತ್ರಾನುಷ್ಠಾನದಿಂದ ಆತನ ಸರ್ವ ಪಾಪಗಳೂ ಉರಿದುಹೋಗುತ್ತವೆ ಎಂಬ ಮತ್ತು "**ತದ್ಯಥಾ ಪುಷ್ಕರ ಪಲಾಶ ಆಪೋನಶ್ಲಿಷ್ಯನ್ತೇ ಏವಮೇವಂ ವಿದಿಪಾಪಂ ಕರ್ಮ ನ ಶ್ಲಿಷ್ಯತೇ**" (ಛಾಂ. ೪. ೧೪. ೩) ಪದ್ಮಪತ್ರದಲ್ಲಿ ನೀರು ಹೇಗೆ ಅಂಟುವದಿಲ್ಲವೋ ಹಾಗೆಯೇ ಬ್ರಹ್ಮವಿತ್ತಾದ ಉಪಾಸಕನಲ್ಲಿ ಪುಣ್ಯಪಾಪಗಳು ಅಂಟುವದಿಲ್ಲವು, ಎಂಬ ಶ್ರುತಿಗಳು ಹೇಳುತ್ತವೆ." **ಎಙ್ಗಿರಪಡಿಯೇ**- ಎಂದು ಹೇಳಿರುವ ಹಾಗೆ, **ಸದ್ವಾರಕ ಪ್ರಪತ್ತಿನಿಷ್ಠನುಕ್ಕು** - ಭಕ್ತ್ಯುಪಾಯನಿಷ್ಠನಾದ ಉಪಾಸಕನಿಗೆ, **ಉಪಾಸನ ಪ್ರಾರಂಭತ್ತಿಲ್ಪೋಲೆ**-ಉಪಾಸನ ಪ್ರಾರಂಭದಲ್ಲಿ ಹೇಗೋ ಹಾಗೆಯೇ, **ಪ್ರಪತ್ತಿ ವಾಕ್ಯೋಚ್ಚಾರಣತ್ತಿಲ್** - ಭರನ್ಯಾಸ ಮಾಡುವಾಗ ಪ್ರಪತ್ತಿ ಮಂತ್ರವಾದ

---

(೧) ಬ್ರ. ಸೂ. ೪. ೧. ೧೩.

ದ್ವಯೋಚ್ಚಾರಣವಾದ, **ಪ್ರಥಮಕ್ಷಣತ್ತಿಲ್**-ಉತ್ತರಕ್ಷಣದಲ್ಲೇ, ಹೀಗೆ ಹೇಳಿದುದರಿಂದ ಉಕ್ತಿನಿಷ್ಠೆಯರೂಪದಲ್ಲೇ ಆಚಾರ್ಯಮೂಲಕ ಈಗ ಭರನ್ಯಾಸಗಳು ಸಾಧಾರಣವಾಗಿ ನಡೆಯುತ್ತವೆಂಬುದು ಸೂಚಿತವಾಯಿತು. ವಿಲಕ್ಕಿ-ಹೋಗಲಾಡಿಸಿ ; ಇದು ಪ್ರಥಮೋಪಕಾರವು, ಇಲ್ಲಿ **ನಿರುಪಾಧಿಕ ಸರ್ವಶೇಷೀ** ಎಂದು ವಿಶೇಷಣವನ್ನು ಸರ್ವೇಶ್ವರನಿಗೆ ಕೊಟ್ಟಿರುವದು, ನಾವು ಸ್ವತಃ ದಾಸಭೂತರಾದ ಪ್ರಯುಕ್ತ ತಾನೇ ಸ್ವತಂತ್ರಿಸಿ ರಕ್ಷಿಸುವ ಭಾರವು ಸರ್ವಶೇಷಿಯದೆಂದೂ, ಹಾಗೆ ರಕ್ಷಿಸುವದು ತನಗೇ ಪ್ರಯೋಜನವೆಂದೂ ಸೂಚಿಸುವದಕ್ಕಾಗಿ ಎಂದು ಭಾವಿಸತಕ್ಕದ್ದು. **ನಿರುಪಾಧಿಕ ಸ್ವತಂತ್ರನಾಗಿ** ಎಂದು ಹೇಳಿರುವದರಿಂದ ಗುರುತರ ಭಕ್ತಿನಿಷ್ಠಾಪೇಕ್ಷಯಾ ಲಘುತರ ಭರನ್ಯಾಸಕ್ಕೆ ಕ್ಷಿಪ್ರಫಲಪ್ರದತ್ವವು ಸರಿಯೋ ಎಂಬಾಕ್ಷೇಪಕ್ಕೆ ಕಾರಣವಿಲ್ಲವು ; ಮತ್ತು ಕರುಣೆಯನ್ನು ತೋರಿಸಲು ಸಾಮರ್ಥ್ಯವಿದ್ದರೂ ಸ್ವಾತಂತ್ರ್ಯವಿಲ್ಲದಿದ್ದರೆ ಕಾರ್ಯಕಾರಿಯಾಗದಾದುದರಿಂದ ಹಾಗೆ ಪ್ರಯೋಗವು. **"ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ"** ಎಂಬ ಭರನ್ಯಾಸಕಾಲದ ವಾಗ್ದಾನವು ಎಂದಿಗೂ ತಪ್ಪಿದ್ದಲ್ಲವು, **"ಅನೃತಂ ನೋಕ್ತಪೂರ್ವಂಮೇ ನಚವಕ್ಷ್ಯೇ ಕದಾಚನ"** ಎಂದು ಹೇಳಿರುವ ಹಾಗೆ ಆಡಿದ ಭಾಷೆಗೆ ತಪ್ಪುವದಿಲ್ಲವೆಂದು ತೋರಿಸುವದಕ್ಕಾಗಿ **ಸತ್ಯ ಸಙ್ಕಲ್ಪನೆಂಬ** ಪ್ರಯೋಗವು. ವೇದಾಂತವಿದ್ಯೆಗಳಾದ ಉಪಾಸನೆಗಳಿಗೆ ಯಾವ ಫಲವೋ ನ್ಯಾಸವಿದ್ಯೆಗೂ ಅದೇ ಫಲವೆಂದು **"ವಿಕಲ್ಪೋಽವಿಶಿಷ್ಟಫಲತ್ವಾತ್"** ಎಂಬ ಬ್ರಹ್ಮಸೂತ್ರಪ್ರಕಾರ ಏರ್ಪಡುವದರಿಂದ, **"ತದಧಿಗಮೇ"** ಎಂಬ ಸೂತ್ರವೂ ನ್ಯಾಸವಿದ್ಯೆಗೂ ಅನ್ವಯಿಸುತ್ತದೆಂಬಭಿಪ್ರಾಯದಿಂದ, **"ಉಪಾಸನ ಪ್ರಾರಂಭತ್ತಿಲ್ಪೋಲೆ"** ಎಂಬ ಪ್ರಯೋಗವು. ಕೆಲವರು ಶ್ರೀ ಯತಿರಾಜರು ರಚಿಸಿರುವ ಶರಣಾಗತಿಗದ್ಯವನ್ನು ಪಠಿಸಿ, ಪ್ರತಿದಿನವೂ ಸ್ವಾಮಿಸನ್ನಿಧಿಯಲ್ಲಿ ಶರಣಾಗತಿಯನ್ನು ಮಾಡಿದರೇನೆ ಪಾಪಗಳು ಪರಿಹಾರವು, ಇಲ್ಲವಾದರೆ ಇಲ್ಲವೆಂಬಭಿಪ್ರಾಯಪಡುತ್ತಾರೆ; ಇದು ಸರಿಯಲ್ಲವೆಂಬುವದು, ಈ ಪಾಪಗಳನ್ನು **ಪ್ರಥಮಕ್ಷಣತ್ತಿಲೇ ವಿಲಕ್ಕಿ** ಎಂಬುವದರಿಂದ ಸಿದ್ಧವು. ಇಲ್ಲಿ **ಪ್ರಥಮ ಕ್ಷಣತ್ತಿಲೇ** ಎಂಬಲ್ಲಿ ಸರಿಯಾಗಿ ಬೌದ್ಧನಾಗಲಿ ತಾರ್ಕಿಕನಾಗಲಿ ಹೇಳುವ ಕ್ಷಣವೆಂಬಭಿಪ್ರಾಯದಿಂದಲ್ಲವು; ಭರನ್ಯಾಸವಾದ ಒಡನೆಯೇ ಎಂಬರ್ಥದಲ್ಲಿ ಉಪಯೋಗಿಸಿದುದಾಗಿದೆ, ಏಕೆಂದರೆ ಒಂದು ಕ್ಷಣದಲ್ಲೇ ಭರನ್ಯಾಸ ಪ್ರಕ್ರಿಯೆಯೆಲ್ಲಾ ಸಾಙ್ಗವಾಗಿ ನಡೆಯಲಾರದುದರಿಂದ ಕ್ಷಿಪ್ರವೆಂಬಭಿಪ್ರಾಯದಲ್ಲಿ ಕ್ಷಣಶಬ್ದವು ಉಪಯೋಗಿಸಲ್ಪಟ್ಟಿರುತ್ತದೆ. ಅದೂ ಅಲ್ಲದೆ ಉಪಾಸನದಲ್ಲಿಯಾದರೂ ಆವೃತ್ತಿಯುಂಟು, ಹಾಗಿದ್ದರೂ ಅದರ ಪ್ರಾರಂಭದಲ್ಲೇ ಪ್ರತಿಬಂಧಕ ಪಾಪನಾಶವೆಂದು ಹೇಳಿರುವಾಗ, ಇದು ಆವೃತ್ತಿಯಿಲ್ಲದೆ ಸಕೃದನುಷ್ಠೇಯವಾಗಿರುವದರಿಂದಲೂ ಹಾಗೆ ಪ್ರಯೋಗವು. ಭರನ್ಯಾಸವಾದ

ಇವನುಡೈಯ ಅನುಬನ್ಧಿಗಳೈಯುಮ್ ನಿತ್ಯಸೂರಿಗಳ್ ಕೋರ್ವೈಯಿಲೇ ಕೋತ್ತಾಲುಮ್ ಆವಲ್‌ಕಿಡಾದೆ ಆಶ್ರಿತಾಪರಾಧ ರಾಶಿಗಳಿಲುಣ್ಡದು ರುಕ್ಕಾಟ್ಟಾದೇ ವಯಿರುದಾರಿಯಾಯ್, ಅನುಬಂಧಿಗಳುಡೈಯ ಬುದ್ಧಿ ಪೂರ್ವಾಪರಾಧಙ್ಗಳುಕ್ಕುಮ್ ಅನುತಾಪಾದಿಗಳಾಲೇ ನಿಸ್ತಾರಮ್ ಪಣ್ಣಿ ವಿಕ್ಕುಂಪಡಿಕ್ಕೀಡಾದ ಅನುಗ್ರಹ ಸಙ್ಕಲ್ಪತ್ತೈಪ್ಪಣ್ಣಿ,

---

ಉತ್ತರಕ್ಷಣದಲ್ಲೇ, ಈತನ ಪ್ರಾರಬ್ಧದ ವಿನಾ ಪೂರ್ವಾಘಕ್ಕೆಲ್ಲಾ ನಾಶವೂ, ಉತ್ತರಾಘಕ್ಕೆ ಅಬುದ್ಧಿಪೂರ್ವಕವಾದುದಕ್ಕೆ ನಿರ್ಲೇಪವೂ ಹೇಳಲ್ಪಟ್ಟಿತು; ಇದು ಅಪರಾಧ ಪರಿಹಾರಾಧಿಕಾರದಲ್ಲಿ **ಪ್ರಾರಬ್ಧೇತರ** ಎಂಬ ಶ್ಲೋಕದಲ್ಲೂ ಅಧಿಕಾರದ ಉಪಪಾದನದಲ್ಲೂ ಹೇಳಲ್ಪಟ್ಟಿರುತ್ತದೆ. (೨) ಎರಡನೆಯ ಉಪಕಾರವೇನೆಂಬುದನ್ನು **ಇವನೈಯುಮ್** ಎಂದಾರಂಭಿಸಿ **ಸಙ್ಕಲ್ಪತ್ತೈಪ್ಪಣ್ಣಿ** ಎಂದು ಪೂರೈಸಿ ಹೇಳುತ್ತಾರೆ. ಸರ್ವೇಶ್ವರನನುಗ್ರಹವು ಪ್ರಪನ್ನನಿಗೆ ಮಾತ್ರವೇ ಅಲ್ಲವು. ಪ್ರಪನ್ನನ ಭರನ್ಯಾಸದಲ್ಲಿ ಅಂತರ್ಗತರಾದ ದಾರ ಪುತ್ರಾದಿಗಳೂ ಕೂಡ ಅನುಗ್ರಹವನ್ನು ಹೊಂದುವರೆಂದು ಹೇಳುತ್ತಾರೆ:— **ಇವನೈಯುಮ್ ಇವನುಡೈಯುವನುಬನ್ಧಿಗಳೈಯುಮ್** - ಈ ಪ್ರಪನ್ನನನ್ನೂ ಮತ್ತು ಈತನ ಭರನ್ಯಾಸದಲ್ಲಿ ಅಂತರ್ಭೂತರನ್ನೂ, **ನಿತ್ಯಸೂರಿಗಳ, ಕೋರ್ವೈಯಿಲ್** - ಪಙ್ತ್ತಿಯಲ್ಲಿ, **ಕೋತ್ತಾಲುಮ್** - ಸೇರಿಸಿದರೂ, **ಆವಲ್ ಕಿಡಾದೇ** - ಶ್ರದ್ಧಾತಿಶಯವು ಕೆಡದೆ, **ಆಶ್ರಿತಾಪರಾಧರಾಶಿಗಳಿಲ್** - ಆಶ್ರಯಿಸಿದ ಆತ್ಮಾತ್ಮೀಯ ವರ್ಗದ ಪಾಪಸಮೂಹಗಳಲ್ಲಿ, **ಉಣ್ಡದುರುಕಾಟ್ಟಾದೆ** - ಭುಜಿಸಿದುದನ್ನು ತೋರ್ಪಡಿಸದೆ ಎಂದರೆ ಆ ಪಾಪಸಮೂಹಗಳನ್ನೆಲ್ಲಾ ನುಂಗಿದುದನ್ನು, ನಾಶಮಾಡಿದುದನ್ನು ಹೊರಪಡಿಸದೆ, **ವಯಿರುದಾರಿಯಾಯ್** - ಹೊಟ್ಟೆ ತುಂಬಿಕೊಳ್ಳುವನಾಗಿ, ಆಶ್ರಿತಾಪರಾಧಗಳನ್ನು ಬೇಸರವಿಲ್ಲದೆ ಎಷ್ಟು ನುಂಗಿದರೂ ತುಂಬದ ಹೊಟ್ಟೆಯುಳ್ಳವನಾಗಿ, **ಅನುಬಂಧಿಗಳೊಡೈಯ** - ಈ ಪ್ರಪನ್ನನ ಆತ್ಮೀಯರ, **ಬುದ್ಧಿಪೂರ್ವಾಪರಾಧಙ್ಗಳುಕ್ಕು** - ಬುದ್ಧಿಪೂರ್ವಕ ಮಾಡಿದ ಪಾಪಗಳಿಗೆ, **ನಿಸ್ತಾರಮ್ ಪಣ್ಣಿವಿಕ್ಕುಮ್ ಪಡಿ** - ಪರಿಹಾರವನ್ನು ಮಾಡಿಸುವ ಹಾಗೆ, ಹೇಗೆ ಪರಿಹಾರವೆಂದರೆ, ಅನುತಾಪ, ಉಪರಮ, ಪ್ರಯತ್ನ, ಪ್ರಾಯಶ್ಚಿತ್ತಗಳ ಮೂಲಕವಾಗಿ ಪರಿಹಾರ ಮಾಡಿಕೊಳ್ಳುವದಕ್ಕೆ, **ಈಡಾನ** - ಅನುಗುಣವಾದ, **ಸಙ್ಕಲ್ಪತ್ತೈಪ್ಪಣ್ಣಿ** - ಸಂಕಲ್ಪವನ್ನು ಮಾಡಿ ; ಸರ್ವೇಶ್ವರನು ತನ್ನ ತಿರುವಡಿಯನ್ನಾಶ್ರಯಿಸಿದ ಪ್ರಪನ್ನನಿಗೆ ಮಾತ್ರವೇ ಅಲ್ಲದೆ ಆತನ ಭರನ್ಯಾಸದಲ್ಲಿ ಅಡಗಿದ ಅನುಬಂಧಿಗಳಿಗೂ ಕೂಡ ಅನುಗ್ರಹ

ಮಾಡಬೇಕೆಂದು ಕಂಕಣಬದ್ಧನಾಗಿ, ಶ್ರದ್ಧಾಯುಕ್ತನಾಗಿದ್ದಾನೆಂದು ಹೇಳು ತ್ತಾರೆ:— ಕಥಂಚಿದುಪಕಾರರೂಪದಲ್ಲಿ ತನ್ನನ್ನಾಶ್ರಯಿಸಿದುದರಿಂದ ಸಂತೋಷ ಗೊಂಡವನಾಗಿ, ಆತನ ಮತ್ತು ಆತನನುಬಂಧಿಗಳ **"ನಸ್ಮರತ್ಯಪಕಾರಾಣಾ ಶತಮಪ್ಯಾತ್ಮವತ್ತಯಾ"** (ರಾ ಅಯೋಧ್ಯಾ) ಎಂದು ಹೇಳಿರುವ ಹಾಗೆ ಅಸಂ ಖ್ಯಾಕವಾದ ಪಾಪಸಮೂಹಗಳನ್ನು ಪರಿಗಣಿಸದೆ ಅವುಗಳನ್ನೆಲ್ಲಾ ನಾಶಮಾಡಿ ಬಿಡುವನು. ಈ ಅಭಿಪ್ರಾಯವನ್ನು, **ಉಣ್ಡದುರು ಕಾಟ್ಟಾದೆ ವಯರುದಾರಿ ಯರಾಯ್** - ಇಂತವರ ಪಾಪರಾಶಿಗಳನ್ನು ಎಷ್ಟು ತಿಂದರೂ ಆತನಿಗೆ, ಗೋಪಿ ಯರ ಮನೆಯ ಬೆಣ್ಣೆ ತಿಂದಹಾಗೆ ಹೊಟ್ಟೆ ತುಂಬದೆಂದು ಹೇಳಿದ್ದಾರೆ. ಸ್ವಾಮಿ ಯವರು ಈ ಅಭಿಪ್ರಾಯವನ್ನೇ ದಯಾಶತಕದಲ್ಲಿ ಉಪಪಾದಿಸಿರುತ್ತಾರೆ :—

"ಮಯಿತಿಷ್ಠತಿ ದುಷ್ಕೃತಾಂ ಪ್ರಧಾನೇ
ಮಿತದೋಷಾ ನಿತರಾ ನ್ವಿಚನ್ವಿತೀ ತ್ವಂ ।
ಅಪರಾಧ ಗಣೈರಪೂರ್ಣ ಕುಕ್ಷಿಃ
ಕಮಲಾಕಾನ್ತದಯೇ ಕಥಂ ಭವತ್ರೀ ॥ ೨೯ ॥

"ಓ ಲಕ್ಷ್ಮೀಕಾಂತನಾದ ಶ್ರೀನಿವಾಸನ ದಯೆಯೇ, ಲೆಖ್ಖವಿಲ್ಲದೆ ಅಪರಾಧ ಸಮೂಹವನ್ನು ಮಾಡಿದ ನಾನು ಮುಖ್ಯವಾಗಿ ಇರುವಾಗಲೇ, ಅಲ್ಪಸ್ವಲ್ಪ ಅಪ ರಾಧಮಾಡಿದವರನ್ನು ನೀನು ಹುಡುಕಿಕೊಂಡು ಹೋಗುತ್ತೀಯೆ. ಅಪರಾಧ ಸಮೂಹಗಳಿಂದಲೂ ತುಂಬದ ಹೊಟ್ಟೆಯನ್ನು ಹೊಂದಿದವನು ನೀನು ಹೇಗಾ ದೆಯೋ ತಿಳಿಯದು' ಎಂಬುವದು ಈ ಶ್ಲೋಕಾಭಿಪ್ರಾಯವು. ಸರ್ವೇಶ್ವ ರನ ಅನುಗ್ರಹ ಮಾಹಾತ್ಮ್ಯೆಯನ್ನು ಹೀಗೆ ಕೊಂಡಾಡುತ್ತಾರೆ. **ನಿತ್ಯಸೂರಿಗಳ ಕೋರ್ವೆಯಲಿಕೋತ್ತಾಲುಮ್** ಎಂದು ಏತಕ್ಕೆ ಹೇಳಲ್ಪಟ್ಟಿತೆಂದರೆ, ಶರಣಾ ಗತಿ ಕಾಲದಲ್ಲಿ ಪ್ರಪನ್ನನು ಆತ್ಮಾತ್ಮೀಯರನ್ನು ಕುರಿತು ಶರಣಾಗತಿಯನ್ನು ಮಾಡಿ ದನು. ಅದಕ್ಕೆ ಕಟ್ಟುಬಿದ್ದು **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ"** ಎಂದು ಹೇಳಿರುವ ಹಾಗೆ ಅಭಯವನ್ನು **ದೇಹಿ** ಎಂದವರಿಗೆ **ದದಾಮಿ** ಎಂದು ಹೇಳಿದ ಉದಾರಿಯು ಸರ್ವೇಶ್ವರನು, ಅನಂತರ ನೋಡುವಾಗ ಇವನೂ, ಈತನನು ಬಂಧಿಗಳೂ ತನ್ನ ಕೃಪೆಗೆ ಅಷ್ಟು ಯೋಗ್ಯರಲ್ಲದೇ ಇದ್ದಾರಲ್ಲಾ ಎಂದೇನಾದರೂ ಸರ್ವೇಶ್ವರನು ಯೋಚಿಸಿಯಾನೋ ಎಂದರೆ, ಹಾಗೆ ಎಂದಿಗೂ ಇಲ್ಲವು. ಅವರನ್ನು ನಿತ್ಯಸೂರಿಗಳ ಪಙ್ತ್ತಿಗೆ ಸೇರಿಸಿದುದು ಆ ಶರಣಾಗತಿಯನ್ನನುಷ್ಠಿಸಿದ ದಿನವೇ. ಇದು ಸಿದ್ಧವು ಎಂದು ತಿಳಿಸುವದಕ್ಕಾಗಿಯೇ **"ಕೋರ್‌ವೈಯಿಲೇ ಕೋತ್ತಾ ಲುಮ್ ಆವಿಲ್ ಕೆಡಾದೇ"** ಎಂಬ ಪ್ರಯೋಗವು. ವ್ಯಾಖ್ಯಾನ ಮಾಡಿದ್ದೇನೋ

(೩) "ವಿಣ್ಣುಲಗವ್ ತರುವಾನಾಯ್ ವಿರೈಕಿನ್ರಾ" ಎಜ್ಙ್ಗರ ಪಡಿಯೇ ಇವನಿಶೈನ್ದವಿಳಂಬತ್ತುಕ್ಕು ತಾ ಸಾನುಶಯನಾಯ್ ತ್ವರಿತ್ತು

ಉಂಟು, ಇಷ್ಟು ಕೆಟ್ಟವರೆಂದು ಯೋಚಿಸಲಿಲ್ಲವೆಂದೇನಾದರೂ ಈತನಿಗೆ ಅವರ ವಿಷಯದಲ್ಲಿ ಶ್ರದ್ಧೆಯು ಕಮ್ಮಿಯಾದೀತೋ ಎಂದರೆ ಹಾಗೆ ಎಂದಿಗೂ ಶ್ರದ್ಧೆಯು ಕುಂದದು ಎಂದು ಹೇಳುವದಕ್ಕಾಗಿ, **ಆವಿಲ್ ಕೆಡಾದೆ** ಎಂದು ಹೇಳಿರುತ್ತಾರೆ. ಈ ಶ್ರದ್ಧೆಯಿಂದ ಅವರುಗಳಿಗೆ ಎಷ್ಟು ಪಾಪರಾಶಿ ತಾನೇ ಇರಕೂಡದು, ಅವೆಲ್ಲ ವನ್ನೂ ಏಕಾಪೋಶನದಲ್ಲಿ ನುಂಗಿಬಿಟ್ಟು ಇನ್ನೂ ಹೊಟ್ಟೆ ತುಂಬಲಿಲ್ಲವೆಂದು ಹೇಳುವ ಮಹಾ ಕೃಪಾಳುವು ಎಂದು ಹೇಳಿರುತ್ತಾರೆ. ಈ ಪ್ರಪನ್ನನಿಗೂ ತದನು ಬಂಧಿಗಳಿಗೂ ಬುದ್ಧಿಪೂರ್ವೋತ್ತರಾಘಗಳು ಒಂದು ವೇಳೆ ಪ್ರಾಪ್ತವಾದರೆ ಅನು ತಾಪಾದಿಗಳ ಮೂಲಕ ಪರಿಹಾರಮಾಡಿಸಿಯೋ, ಅಲ್ಪದಂಡನೆಯ ಮೂಲಕವೋ, ಹೇಗೋ, ಅಂತು ಸರ್ವಾಪರಾಧ ಪರಿಹಾರ ಮೂಲಕ ಅನುಗ್ರಹ ಮಾಡಬೇಕೆಂಬ ಸಂಕಲ್ಪ ಮಾಡುತ್ತಾನೆಂಬುವದು ಎರಡನೆಯ ಉಪಕಾರವು.

ಮೂರನೆಯ ಉಪಕಾರವು :—"**ವಿಣ್ಣುಲಗವ್** - ಪರಮಪದವನ್ನು, **ತರುವಾನಾಯ್** - ಕೊಡಲಿಚ್ಛೆಯುಳ್ಳವನಾಗಿ, **ವಿರೈಕಿನ್ರಾ** - ನಾನು ತ್ವರೆ ಪಡಿಸುವದಕ್ಕೆ ಬದಲಾಗಿ ಆತನೇ ತ್ವರೆ ಪಡಿಸುತ್ತಾನೆ" **ಎಜ್ಙ್ಗರಪಡಿಯೇ** - ಎಂದು ಹೇಳಿರುವ ಹಾಗೆ, **ಇವನಿಶೈನ್ದ** - ಈ ಪ್ರಪನ್ನನು ಅಪೇಕ್ಷಿಸಿದ ವಿಳಂಬಕ್ಕೆ, **ತಾ ಸಾನುಶಯನಾಯ್** - ಸರ್ವೇಶ್ವರನು ಪಶ್ಚಾತ್ತಾಪವನ್ನು ಹೊಂದಿದವ ನಾಗಿ, **ತ್ವರಿತ್ತು** - ಮೋಕ್ಷ ಕೊಡಲು ಅವಸರಪಟ್ಟು ; ಸರಿಯಾಗಿ ನೋಡಿದರೆ ಒಬ್ಬನನ್ನು ನಾವು ಆಶ್ರಯಿಸಿದರೆ, ನಾವು ಅವನಲ್ಲಿಗೆ ಪದೇಪದೇ ಹೋಗಿ, ಜ್ಞಾಪಕ ಕೊಟ್ಟು, ಕೆಲಸದ ಫಲವುಂಟಾಗುವ ತನಕವೂ ತ್ವರೆಗೊಳಿಸಬೇಕು ; ಆದರೆ ಸರ್ವೇಶ್ವರನನ್ನು ಒಂದು ಕ್ಷಣಕಾಲದ ಭರನ್ಯಾಸ ಮೂಲಕ ಆಶ್ರಯಿಸಿ ಬಿಟ್ಟರೆ, ಮುಂದಕ್ಕೆ ನಾವೇನೂ ಮಾಡತಕ್ಕದ್ದಿಲ್ಲವು, ಸರ್ವಭಾರವನ್ನೂ ಅನಂತರ ತಾನೇ ವಹಿಸಿ, ಈತನ ಮನೋರಥವು ಸಿದ್ಧಿಸುವ ತನಕ ತಾನೇ ಸರ್ವ ಪ್ರಯತ್ನ ಮಾಡುತ್ತಾ, ಆತನಿಗೆ ವಿಳಂಬದಿಂದ ಮೋಕ್ಷಪ್ರಾಪ್ತಿಯಾಗಲಿ ಎಂದಿದ್ದರೂ ಬಿಡದೆ ಸರ್ವೇಶ್ವರನೇ ತ್ವರೆ ಮಾಡುವನೆಂದು ಹೇಳಲ್ಪಟ್ಟಿತು. ಮೇಲಿನ ಪಾಶುರ ವನ್ನು ಈ ಅಭಿಪ್ರಾಯ ಸಮರ್ಥನೆಗಾಗಿ ಉದಾಹರಿಸಿರುತ್ತಾರೆ. ಆ ಪಾಶುರ ವ್ಯಾವುದೆಂದರೆ :—

(೩) ತಿರುವಾಯ್ಮೊಳಿ ೧೦. ೬. ೩.

(೪) " ಇರುಳ್ ತರುಮ್ಮಾಜ್ಞಾಲತ್ತುಳಿನಿ ಪ್ಪಿರವಿಯಾರ್ ವೇಣ್ಡೇನ್ "

"ನಣ್ಣಿನ ನಾರಾಯಣನೈ ನಾಮಙ್ಗಳ್ ಪಲಶೊಲ್ಲಿ,
ಮಣ್ಣುಲಗಿಲ್ ವಳಮಿಕ್ಕ ವಾಟ್ಟಾಱ್ರಾನ್ ವನ್ದಿನ್ರು ।
ವಿಣ್ಣುಲಗಮ್ ತರುವಾನಾಯ್ ವಿರೈಕಿನ್ರಾ ವಿಧಿವಕೈಯೇ
ಯೆಣ್ಣಿನ ವಾರಾಕಾ ವಿಕ್ಕರುಮಙ್ಗಳೆನ್ನೆಞ್ಜೇ ॥

ಇದರರ್ಥವು :—**ಓ ಎನ್ನೆಂಜೇ** - ನನ್ನ ಮನಸ್ಸೇ, **ಪಲನಾಮಂಗಳ್ ಶೊಲ್ಲಿ**-ಕೆಲವು ಅಷ್ಟೋತ್ತರಾದಿಗಳನ್ನು ಹೇಳಿ, ನಾರಾಯಣನನ್ನು, **ನಣ್ಣಿನಮ್**-**ಸರ್ವಸ್ಯ ಶರಣಂ ಸುಹೃತ್** ಎಂದು ಭಾವಿಸಿ, "**ನಮೋ ನಾರಾಯಣಾಯೇತಿ ಮನ್ತ್ರಸ್ಸರ್ವಾರ್ಥ ಸಾಧಕಃ**" ಎಂದು ಹೇಳಿರುವ ಮೇರಿಗೆ, ಆತನನ್ನು ಆಶ್ರಯಿಸಿದೆವು, **ಮಣ್ಣುಲಗಿಲ್** - ಈ ಭೂಲೋಕದಲ್ಲಿ, **ವಳಮ್ ಮಿಕ್ಕ** - ದಯಾ ಮೊದಲಾದ ಕಲ್ಯಾಣಗುಣಗಳುಳ್ಳ ಸಂಪತ್ತಿನ ಅತಿಶಯ ಹೊಂದಿದ, **ವಾಟ್ಟಾತ್ತಾನ್** - ತಿರುವಾಟ್ಟಾತ್ತೆಂಬ ಊರಲ್ಲಿ ಬಿಜಮಾಡಿಸಿರುವ ಶ್ರಿಯಃಪತಿಯು, **ವನ್ದು ಇನ್ರು** - ಬಂದು ಈಗ, **ವಿಣ್ಣುಲಕಮ್** - ಪರಮಪದವನ್ನು, **ವಿಧಿವಗಿಯೇ ತೆರುವಾನಾಯ್** - ನಮ್ಮನಿಯಮನವೆಂದು ಭಾವಿಸಿ ಎಂದರೆ ನಮ್ಮ ಪ್ರಾರ್ಥನೆಯನ್ನೇ ಒಂದು ಆಜ್ಞೆಯಾಗಿ ಶಿರಸಾವಹಿಸಿ ಕೊಡಲು ಇಷ್ಟವುಳ್ಳವನಾಗಿ, **ವಿರೈಕಿನ್ರಾನ್** - ನಾವು ತ್ವರೆ ಮಾಡುವುದಕ್ಕೆ ಮುಂಚೆ ಅವನೇ ತ್ವರೆಪಡಿಸುವನು, **ಇಕ್ಕರುಮಙ್ಗಳ್**-ಈ ಕಾರ್ಯಗಳು, **ಎಣ್ಣಿನವಾರಾಕಾ** - ನಾವು ಯೋಚಿಸಿದ ಹಾಗೆ ಆಗದು, ಎಂದರೆ ನಾವು ಆತನಿಗೆ ತೊಂದರೆ ಕೊಟ್ಟು ನಮ್ಮ ಕೆಲಸವಾಗುವದಕ್ಕಾಗಿ ಆತನನ್ನು ತ್ವರೆಪಡಿಸಬೇಕೆಂದಿದ್ದೆವು, ಅದಕ್ಕೆ ಬದಲಾಗಿ ಯಾವಾಗ ಆತನ ಮೇಲೆ ಭಾರವನ್ನು ಹಾಕಿದೆವೋ, ಆಗ ಎಲ್ಲವನ್ನೂ ತಾನೇ ವಹಿಸಿಕೊಂಡು ನಮ್ಮನ್ನೇ ತ್ವರೆಗೊಳಿಸುವನೆಂಬ ಭಾವವು.

(೪) ಮುಂದಿನ ವಾಕ್ಯಖಂಡದಿಂದ ನಾವು ಸರ್ವೇಶ್ವರನಿಗೆ ಶೇಷತ್ವವನ್ನು ಪ್ರದರ್ಶಿಸಿ ದಾಸಭೂತರೆಂದು ಹೇಳಿಕೊಂಡು ಆತನ ಪಾದವನ್ನು ಯಾವಾಗ ಆಶ್ರಯಿಸಿಬಿಟ್ಟೆವೋ ಆಗ ಪರಮ ಸ್ವತಂತ್ರನಾದವನು ನಮಗೆ ಪರತಂತ್ರನಾಗಿ ನಮಗೆ ಯಾವುದು ಹಿತವೋ ಅದನ್ನು ತಾನೇ ಯೋಚಿಸಿ, ಆ ಹಿತವಾದುದನ್ನೇ ನಾವು ಅಂಗೀಕರಿಸುವ ಹಾಗೆ ಮಾಡುವನೆಂದು ಹೇಳುತ್ತಾರೆ:—**ಇರಳ್ ತೆರುಮ್** - ರಜಸ್ತಮೋಗುಣಗಳ ವಿಜೃಂಭಣೆಯಾದ ಅಜ್ಞಾನವನ್ನು ಕೊಡುವ, **ಮಾ** -

(೪) ತಿರುವಾಯ್ಮೊಳಿ ೧೦. ೬. ೧ ಮತ್ತು ೧೦. ೧೦. ೨.

ಎನ್ರುಮ್, "ಮಾಯುಮ್ ಶೆಯ್ಯೇಲೆನ್ನೈ" ಎನ್ರಾನ್ ಶೊಲ್ಲುಗಿರ ಪಡಿಯೇ ಇವನುಕ್ಕು ಇಶೈವೈಯುಣ್ಡಾಕ್ಕಿ, (೧) "ಉರ್ ತಿರುನಾರ್

ಮಹತ್ತಾದ, ಞಾಲತ್ತುಳ್ - ಈ ಲೀಲಾವಿಭೂತಿಯಲ್ಲಿ, ಇನಿ - ಸರ್ವೇಶ್ವರನ ಕಟಾಕ್ಷದಿಂದ ತತ್ವಜ್ಞಾನ ಉಂಟಾದ ನಂತರ, ಪಿರವಿ - ಪುನರ್ಜನ್ಮವನ್ನು, ಯರ್ಾ ವೇಣ್ಡೇನ್ - ನಾನಪೇಕ್ಷಿಸುವದಿಲ್ಲವು" ಎನ್ರು - ಎಂದೂ, "ಮಾಯುಂ ಶೆಯ್ಯೇ ಲೆನ್ನೈ" - "ನನ್ನನ್ನು ಮುಂಚಿನ ಹಾಗೆ ವಂಚಿಸಿದಿರಪ್ಪಾ" ಎನ್ರುಮ್ - ಎಂದು, ಹೇಳಿರುವ ಹಾಗೆ, ಇವನಿಗೆ - ಈ ಪ್ರಪನ್ನನಿಗೆ, ಇಶೈವೈ ಯುಂಡಾಕ್ಕಿ - ಶೀಘ್ರದಲ್ಲೇ ಮೋಕ್ಷಪ್ರಾಪ್ತಿಯಲ್ಲಿ ಅಂಗೀಕಾರ ಉಂಟಾಗುವ ಹಾಗೆ ಮಾಡಿ ;

ಈ ಎರಡು ಪಾಶುರಗಳು ಯಾವುವೆಂದರೆ:—

"ಅರುಳ್ ಪೆರುವಾರಡಿಯಾರ್ ತಮ್ಮಡಿಯನೇರ್ಕ್ಕು, ಆಳಿಯಾ ।
ನರುಳ್ ತರುವಾನಮೈ ಕಿನ್ರಾನದು ನಮದುವಿದಿವಗೈಯೇ ॥
ಇರುಳ್ ತರುಮಾಞಾಲತ್ತುಳಿನಿ ಪಿರವಿಯರ್ಾ ವೇಣ್ಡೇನ್ ।
ಮರುಳೊಳಿ ನೀಮಡ ನೆಂಜೇ ವಾಟ್ಟಾಱ್ರಾನಡಿ ವಣಙ್ಗೇ ॥"

ಎಂದರೆ, ಅರುಳ್ ಪೆರುವಾರಡಿಯಾರ್ ತಮ್ - ಭಗವದನುಗ್ರಹವನ್ನು ಹೊಂದುವ ಶೇಷತ್ವ ಜ್ಞಾನ ಮೂಲಕ ದಾಸಭೂತರೆಂದು ಹೇಳಿಕೊಳ್ಳುವ ಭಾಗವತರಿಗೆ, ಅಡಿಯರ್ಾಕ್ಕು - ದಾಸಭೂತರಾದ ನಮಗೆ, ಆಳಿಯರ್ಾ - ಅಂಥಾವರನ್ನು ಕಾಪಾಡುವದಕ್ಕಾಗಿ ಚಕ್ರಧರನಾದ ಸ್ವಾಮಿಯು, ಅರುಳ್ ತರುವರ್ಾ - ಕೃಪೆ ಮಾಡಲುದ್ಯುಕ್ತನಾಗಿರುವನು ; ಅದು ನಮದು ವಿದಿವಗೈಯ್ಯೆ - ಹಾಗೆ ಕೃಪೆ ಮಾಡುವದು ಸ್ವತಂತ್ರನಾಗಿ ತನ್ನಿಷ್ಟದಂತಲ್ಲವು, "ಆಜ್ಞಾಪಯ ಯಥೇಷ್ಟಂವೈ" ಎಂದು ಶ್ರೀರಾಮನು ವಿಶ್ವಾಮಿತ್ರರನ್ನು ಪ್ರಾರ್ಥಿಸಿದ ಹಾಗೆ ನಮ್ಮ ನಿಯಮನ ಪ್ರಕಾರ ನಮಗೆ ಪರತಂತ್ರನಾಗಿ ನಡೆಸುವನು ; ಇರುಳ್ ತರುಮಾ ಞಾಲತ್ತುಳಿನಿ ಪಿರವಿಯರ್ಾ ವೇಂಡೇನ್ - ಈ ಅಜ್ಞಾನ ಭೂಯಿಷ್ಠವಾದ ಈ ವಿಶಾಲವಾದ ಲೀಲಾವಿಭೂತಿಯಲ್ಲಿ ಪುನರ್ಜನ್ಮವನ್ನು, ಸರ್ವೇಶ್ವರನ ಕೃಪೆಯಾ ಈ ಬುದ್ಧಿಯೋಗ ವಿವೇಕಗಳುಂಟಾದ ನಂತರ ಪ್ರಾರ್ಥಿಸುವದಿಲ್ಲವು ; ಓ ಮಡ ನೆಂಜೇ - ಓ ಬುದ್ಧಿಯಿಲ್ಲದ ಚಪಲವಾದ ಮನಸ್ಸೇ, ಮರುಳ್ ನೀ ಒಳಿ - ಅಚಾರ್ಯನವತಾರಿಯಾಗಿ ಸ್ವಾಮಿಯು ಇಲ್ಲಿಯೇ ಇರುವಾಗ ಇಲ್ಲಿಯೇ ಇದ್ದು

(೧) ತಿರು. ೧೦. ೬ ೧.

(ವೈತ್ತು) ಪತ್ತು ಮಾಲೈ ನಙ್ಗೈ ವಾಶಮ್ ಶೆಯ್ ಪೂಙ್ಗುಳಲಾಳ್ ತಿರು

ಕೈಂಕರ್ಯ ಮಾಡುವದು ಸಾಲದೇ ಎಂಬ ಭ್ರಮೆಯನ್ನು ಬಿಟ್ಟುಬಿಡು ; ವಾಟ್ಟಾ ಱ್ಱಾನಡಿವಣಙ್ಗೇ-ತಿರುವಾಟ್ಟಾರಲ್ಲಿ ಬಿಜಮಾಡಿಸಿರುವ ಶ್ರೀ ಕೇಶವಸ್ವಾಮಿಯ ಶ್ರೀಪಾದವನ್ನು ಆಶ್ರಯಿಸು. ಹೀಗೆ ತಮ್ಮ ಮನಸ್ಸಿಗೆ ಆಳ್ವಾರ್ರವರುಪದೇಶಿ ಸಿರುತ್ತಾರೆ.

(೧) ಮಾಯಙ್ಗೆಯ್ಯೇ ಲೆನ್ನೈ ಯುನ್ನಿರು ಮಾರ್ವತ್ತುಮಾಲೈನಙ್ಗೈ ।
ವಾಶಂಙ್ಗೆಯ್ ಪೂಙ್ಗುಳಲಾಳ್ ತಿರುವಾಣೈ ನಿನ್ನಾಣೈ ಕಣ್ಡಾಯ್ ।
ನೇಶಙ್ಗೆಯ್‌ದು ನ್ನೋಡೆನ್ನೈಯುಯಿರ್ವೇರಿನ್ರಿಯೊನ್ರಾಗವೇ ।
ಕೂಶಙ್ಗೆಯ್ಯಾದು ಕೊಣ್ಡಾಯೆನ್ನೈ ಕ್ಕೂವಿಕ್ಕೊಳ್ಳಾಯ್ ವನ್ದನ್ದೋ॥

ಇದರರ್ಥವು :---ಮಾಯಙ್ಗೆಯ್ಯೇಲೆನ್ನೈ - ನಿನ್ನನ್ನು ಬಿಟ್ಟ ಒಂದು ಕ್ಷಣವೂ ಇರಲಿಷ್ಟವಿಲ್ಲದ ನನ್ನನ್ನು ಇನ್ನು ಮುಂದೆಯಾದರೂ ವಂಚಿಸಬೇಡ ವೈಯ್ಯ, ಉನ್ ತಿರುಮಾರ್ವತ್ತುಮಾಲೈ - ಹಾಗಿಲ್ಲದೆ ನಾನು ಸ್ವತಂತ್ರನು, ಇಷ್ಟಬಂದಹಾಗೆ ಮಾಡುವೆನೆಂದರೆ, ನಿನಗೆ, (೨ "ಅಪ್ರಮೇಯಂ ಹಿ ತತ್ತೇ ಜಃ ಯಸ್ಯಸಾ ಜನಕಾತ್ಮಜಾ" ಎಂದೂ, ೩) "ವಿಷ್ಣೋಃಶ್ರೀಃ" ಎಂದೂ, ಹೇಳಿರುವ ಹಾಗೆ, ನಿನಗೂ ಕೂಡ ಸಂಪದ್ರೂಪವಾಗಿರುವ, ಮತ್ತು ನಿನ್ನ ವಕ್ಷಸ್ಥಳ ವನ್ನಾಶ್ರಯಿಸಿದ, ಮಾಲೆಯ ಹಾಗೆ ಅಲಂಕಾರಭೂತಳಾಗಿ, ನಙ್ಗೈ - ನಿನ್ನ ಹಾಗೆಯೇ ಅನುರೂಪರೂಪಗುಣವಿಭವೈಶ್ವರ್ಯಾದಿಗಳಿಂದ ಯುಕ್ತಳಾದ, ವಾಶಮ್ ಶೆಯ್ - ಶ್ರುತಿಯಲ್ಲಿ "ಸರ್ವಗಂಧಃ" ಎಂದು ಹೇಳಿಸಿಕೊಳ್ಳುವ ಹಾಗೆ, ನಿನ್ನ ದಿವ್ಯಮಂಗಳ ವಿಗ್ರಹಕ್ಕೆ ಪರಿಮಳರೂಪವಾದ ಅಥವಾ ಪುಷ್ಪಕ್ಕೆ ಒಳ್ಳೇ ಪರಿಮಳದೋಪಾದಿಯಲ್ಲಿ ಭೋಗ್ಯತೆಯನ್ನು ಕೊಡುವ, ಪೂಙ್ಗುಳಲಾಳ್ - ವಿಲ ಕ್ಷಣವಾದ ಕುರುಳಗಳನ್ನು ಹೊಂದಿದ, ತಿರು ಆಣೈ - ಲಕ್ಷ್ಮೀದೇವಿಯ ಮೇಲೆ ಆಣೆಯು, ನಿನ್ ಆಣೆ ಕಂಡಾಯ್ - ಸರ್ವಾಧಿಕನಾಗಿ ಸರ್ವಕಾರಣಭೂತನಾಗಿ ರುವ ನಿನ್ನ ಮೇಲೆಯೂ ಆಣೆಯು, ಇದನ್ನು ನೀನು ತಿಳಿಯುವದು ; ನನ್ನನ್ನು ಬಿಟ್ಟು ನೀನು ಹೇಗೆ ಇರುತ್ತೀ ನೋಡುತ್ತೇನೆಂಬ ಭಾವವು. ನೇಶಮ್ ಶೆಯ್‌ದು - ಸರ್ವಸ್ಯ ಶರಣಂ ಸುಹೃತ್ತೆಂದೂ, "ತ್ವಯಿ ಕಿಂಚಿತ್ಸಮಾಪನ್ನೇ ಕಿಂಕಾ ರ್ಯಂ ಸೀತಯಾ ಮಮ" ಸೀತೆಗಿಂತಲೂ ಹೆಚ್ಚಾದ ಮಮತೆಯು ನಿನ್ನಲ್ಲಿ ಎಂದು ಹೇಳುತ್ತಾ, ಹೀಗೆ ನನ್ನೊಂದಿಗೆ ಸ್ನೇಹವನ್ನು ಬೆಳಸಿ, ಉನ್ನೋಡು ಎನ್ನೇ -

(೧) ತಿರು. ೧೦. ೧೦, ೨. (೨) ರಾಮಾ ಆರ, ೩೭. ೧೮. (೩) ವಿ. ಪು. ೧. ೮.

ವಾಣ್ಮೈ ನಿನ್ನಾಣ್ಮೈ" ಎನ್ರು ಇವರ್ ತಾ೯ ತ್ವರಿತ್ತು ವಳೈಕ್ಕುಮ್ಪಡಿ ಪಣ್ಣಿ, (೧) **"ಶರಣವಾಗುಮ್ ತನತಾಳಡೈನ್ದಾರ್ಕ್ಕೆಲ್ಲಾಮ್ ಮರಣವಾನಾಲ್**

ಹೇಯಪ್ರತ್ಯನೀಕನಾದ ನಿನ್ನೊಂದಿಗೆ ಹೇಯದಿಂದ ಕೂಡಿದ ನನ್ನನ್ನು, **ಉಯರ್ ವೇರೆನ್ರಿ ಒನ್ರಾಕವೇ** - ಜ್ಞಾನೈಕಾಕಾರತೆ ಮೊದಲಾದ ಗುಣಾಷ್ಟಕಗಳಿಂದ ಸಮಭಾವದಿಂದ ಅಪೃಥಕ್ಸಿದ್ಧ ವಿಶೇಷವಾಗಿ, **ಕೂಶಮ್ ಶೆಯ್ಯಾದು ಕೊಂಡಾಯ್** – ನನ್ನ ನಿಕೃಷ್ಟತೆಗಾಗಿ ಸ್ವಲ್ಪವೂ ಸಂಕೋಚಪಡದೆ ನನ್ನನ್ನು ಅಂಗೀಕರಿಸಿರುತ್ತೀಯೆ. **ಎನ್ನೈವನ್ದು ಕೂವಿಕ್ಕೊಳ್ಳಾಯ್** - ನನ್ನನ್ನು ಬಂದು ಕರೆದುಕೊಂಡು ಹೋಗಬೇಕಪ್ಪಾ, **ಅಂದೋ** - ಇದಕ್ಕಾಗಿ ತ್ವರೆ ಮಾಡುವದು ನಿನ್ನ ಕೆಲಸವಲ್ಲವೇ ? ಅಯ್ಯೋ, ಇದಕ್ಕೆ ನಾನು ಆಣೆಯಿಡಬೇಕೇ ? ಎಂಬ ತಾತ್ಪರ್ಯವು" **ಎನ್ರು** - ಎಂಬದಾಗಿ, **ಇವರ್ ತಾ೯** - ಈ ಪ್ರಪನ್ನನು ತಾನೇ, **ತ್ವರಿತ್ತು**-ತ್ವರೆಯನ್ನು ಮಾಡಿ, **ವಳೈಕ್ಕುಂಪಡಿ ಪಣ್ಣಿ**-ಹಿಂದೆ ವಿಳಂಬವನ್ನಪೇಕ್ಷಿಸಿದವನು ಈಗ ಬೇಗ ಪರಮಪದವನ್ನು ಕೊಟ್ಟ ಹೊರತು ಬಿಡುವದಿಲ್ಲವು ಎಂದು ಶ್ರಿಯಃಪತಿಯ ಶ್ರೀಪಾದವನ್ನು ಕಟ್ಟಿಕೊಂಡು ನಿರ್ಬಂಧಿಸುವ ಹಾಗೆ ಮಾಡಿಸಿ ; ಮುಂದೆ ತನಗೆ ಸಮನಾದನೆಂದು ಭಾವಿಸಿ ದಿವ್ಯ ವೈಕುಂಠವನ್ನೂ ಕೊಡುವನು ಎಂದು ಹೇಳುತ್ತಾರೆ. ಈ **ಪೂರಾ** ಪಾಶುರವು ಯಾವುದೆಂದರೆ:—

ಶರಣವಾಗುನ್ದನ ತಾಳಡೈನ್ದಾರ್ ಕ್ಕೆಲ್ಲಾಮ್,
ಮರಣವಾನಾಲ್ ವೈಗುನ್ದಙ್ಕೊಡುಕ್ಕುಮ್ಪಿರಾ೯ ।
ಅರಣಮೈನ್ದ ಮತಿಳ್ ಶೂಳ್ ತಿರುಕ್ಕಣ್ಣಪುರ,
ತ್ತರಣಿಯಾಳನ್ ತನತನ್ಬರ್ ಕ್ಕನ್ಬಾಗುಮೇ ॥

"**ತನತಾಳಡೈನ್ದಾರ್ ಕೆಲ್ಲಾಮ್ ಶರಣಾವಾಗುಮ್** - ಭಕ್ತಿಮಾರ್ಗದಲ್ಲಶಕ್ತರಾಗಿ, ತನ್ನ ಪಾದಕಮಲಗಳನ್ನಾಶ್ರಯಿಸಿ ಭರನ್ಯಾಸ ಮಾಡಿದ ಸಮಸ್ತರಿಗೂ ತಾನೇ ಉಪಾಯಭೂತನಾಗಿ, **ಮರಣವಾನಾಲ್** - ದೇಹಾವಸಾನದಲ್ಲಿ, **ವೈಗುನ್ದಮ್ ಕೊಡುಕ್ಕುಮ್ ಪಿರಾ೯** – ದಿವ್ಯ ವೈಕುಂಠವನ್ನು ಕೊಡುವ ಮಹೋಪಕಾರಕನು, **ಅರಣಮೈನ್ದ**-ರಕ್ಷಣಾರ್ಥವಾಗಿ ನಿರ್ಮಿಸಲ್ಪಟ್ಟ, **ಮದಿಳ್ ಶೂಳ್ ತಿರುಕ್ಕಣಪುರತ್** - ಪ್ರಾಸಾದಗಳಿಂದ ಕೂಡಿದ ತಿರುಕ್ಕಣ್ಣಪುರದ, **ತರಣಿಯಾಳ೯** - ಭೂಮಿದೇವಿಯ ಪತಿಯು, ಅಥವಾ ಭೂಮಿಯಾದ ಲೀಲಾವಿಭೂತಿಯ ನಿರ್ವಾಹಕನು ಎಂದರೆ ಬದ್ಧರಾದ ಚೇತನರಿಗೆ ಸಂರಕ್ಷಕನು, **ತನ**

---

(೧) ತಿರು, ೯. ೧೦. ೫.

ವೈಗುನ್ದಮ್ ಕೊಡುಕ್ಕುಮ್ ಪಿರಾನ್" ಎಙ್ಗಿರಪಡಿಯೇ ಇರ್ವನ್ ಕೋಲುದಲುಕ್ಕೀಡಾಗ ಪ್ರಾರಬ್ಧ ಶರೀರಾವಸಾನತ್ತಿಲೆ ಪರಮಪದ ಯುಂಡಾಕ್ಕುವದಾಕ ಕ್ಕೋಲಿ, (೫) ಪೊನ್ನುಮಿರುಮ್ಬು ಮಾನ ವಿಲಙ್ಗುಗಳ್ ಪೋಲೆ ಬಂಧಕಙ್ಗಳಾನ ಪೂರ್ವೋತ್ತರ ಪುಣ್ಯಪಾಪಙ್ಗಳೈಯುಮ್ ಪ್ರಾರಬ್ಧಕಾರ್ಯಮಾನ ಕರ್ಮತ್ತಿಲಿವನಿಶೈನ್ದವಂಶ ಮೊಳಿಯುಮೇಲುಳ್ಳ ಕೊತ್ತೈ

ತನ್ನವರುಕ್ಕು - ತನ್ನ ತಿರುವಡಿಯಲ್ಲಿ ಭಕ್ತಿ ವಿಶ್ವಾಸವುಳ್ಳವರಿಗೆ, **ಅನ್ಬಾಗುಮ್**- ಅತಿ ಪ್ರವಣನಾಗುವನು ಎಂಬುವದು ಈ ಪಾಶುರಾರ್ಥವು." **ಎಙ್ಗಿರಪಡಿಯೇ**- ಎಂದು ಹೇಳಿರುವ ಹಾಗೆ, **ಇರ್ವನ್ ಕೋಲುದಲುಕ್ಕೀಡಾಗ** - ಈ ಪ್ರಪನ್ನನ ಇಷ್ಟಾನುಸಾರವಾಗಿ, **ಪ್ರಾರಬ್ಧ ಶರೀರಾವಸಾನತ್ತಿಲೇ** - ಈ ಪ್ರಾರಬ್ಧ ಕರ್ಮಾನುಗುಣವಾಗಿ, ಉಂಟಾದ ದೇಹವಿಯೋಗದಲ್ಲಿ, **ಪರಮಪದ ಪ್ರಾಪ್ತಿಯುಂಡಾಕ್ಕುವದಾಕ ಕೋೕಲಿ** - ಪರಮಪದ ಪ್ರಾಪ್ತಿಯುಂಟಾಗುವ ಹಾಗೆ ಸಂಕಲ್ಪಿಸಿ, ಈ ವಿಲಕ್ಕಿ, ಪಣ್ಣಿ, ತ್ವರಿತ್ತು, ಕೋೕಲಿ, ಈ ಕೃದ್ವಾಚಿಗಳಿಗೆಲ್ಲಾ ಸರ್ವೇಶ್ವರನ್ ಎಂಬುದು ಕರ್ತೃಪದವು.

ಇನ್ನು ಮುಂದೆ ನಿರ್ಯಾಣಕಾಲದಲ್ಲಿ ಎಂದರೆ ದೇಹಾವಸಾನ ಕಾಲದಲ್ಲಿ ಮಾಡುವ ಉಪಕಾರಗಳನ್ನೆಲ್ಲಾ ವಿವರಿಸುತ್ತಾರೆ:—ಮೊದಲು ಇವನ ಪುಣ್ಯಪಾಪಗಳು ಏನಾಗುತ್ತವೆಂಬುವದನ್ನು ತಿಳಿಸುತ್ತಾರೆ:- **ಪೊನ್ನುಮ್ ಇರುಮ್ಬುಮಾನ ವಿಲಙ್ಗುಗಳ್ ಪೋಲೆ** - ಚಿನ್ನದಿಂದಲೂ ಕಬ್ಬಿಣದಿಂದಲೂ ಮಾಡಿದ ಬೇಡಿಗಳ ಹಾಗೆ, **ಬಂಧಕಙ್ಗಳಾನ** - ಪುನಃ ಸಂಸಾರಕ್ಕೆ ಕಾರಣಭೂತಗಳಾದ, **ಪೂರ್ವೋತ್ತರ ಪುಣ್ಯಪಾಪಙ್ಗಳೈಯುಮ್** - ಭರನ್ಯಾಸಕ್ಕೆ ಮುಂದೆ ಮಾಡಿದ ಪುಣ್ಯಪಾಪಗಳನ್ನೂ ಮತ್ತು ಆನಂತರ ಮಾಡಿದ ಪುಣ್ಯಪಾಪಗಳನ್ನೂ, ಪುಣ್ಯಪಾಪಗಳೆರಡೂ ಬಂಧಕಗಳು, ಪುಣ್ಯವು ಪಾಪದಷ್ಟು ಕ್ರೂರವಲ್ಲದೆ, ಸ್ವರ್ಗಾದಿ ಭೋಗಪ್ರದವಾದುದರಿಂದ ಚಿನ್ನದ ಬೇಡಿ ಎಂದೂ, ಪಾಪವು ಕ್ರೂರವಾಗಿ ದುಃಖಪ್ರದವಾದುದರಿಂದ ಕಬ್ಬಿಣದ ಬೇಡಿ ಎಂದು ಹೇಳಲ್ಪಟ್ಟಿತು; ಉಪಕಾರ ಪರಂಪರೆಗಳನ್ನು ಇಲ್ಲಿ ಹೇಳಬೇಕಾಗಿರುವದರಿಂದ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಲ್ಪಟ್ಟ ಅಂಶವನ್ನೇ ಇಲ್ಲಿ ಜ್ಞಾಪಕಕ್ಕೆ ತರುತ್ತಾರೆ; ಹೀಗೆ ಪೂರ್ವೋತ್ತರ ಪುಣ್ಯಪಾಪಗಳನ್ನೂ ಮತ್ತು **ಪ್ರಾರಬ್ಧ ಕಾರ್ಯಮಾನ ಕರ್ಮತ್ತಿಲಿವನಿಶೈನ್ದ ವಂಶಂ** - ಪ್ರಾರಬ್ಧಕಾರ್ಯವಾದ ಈ ಶರೀರಾರಂಭಕವಾದ ಕರ್ಮದಲ್ಲಿ ಇವನು ಒಪ್ಪಿಕೊಂಡ ಅಭ್ಯುಪಗತ ಪ್ರಾರಬ್ಧವೆಂಬ ಅಂಶವು, **ಒಳಿಯ** - ಹೋಗಲಾಗಿ,

ಯುಮ್ (೧) "ಪೋಯ ಪಿಳ್ಳೈಯುಮ್ ಪುಕುತರವಾಯ್ ನಿನ್ರನವುಮ್ ತೀಯಿನಿಲ್ ತೂಸಾಕುಮ್" ಎಙ್ಗಿರಪಡಿಯೇ ಮುನ್ಬೇ ಇವನೋಡು ತುವಕ್ಕರುತ್ತು ನೈಕ್ಕೈಯಾಲೆ ಶರೀರಪಾತತ್ತುಕ್ಕು ನಿನೈಪ್ಪಿಟ್ಟ ಸಮಯಮ್ ವನ್ದವಾರೇ, (೩) "ಪ್ರಿಯೇಷು ಸ್ವೇಷು ಸುಕೃತಮಪ್ರಿಯೇಷು ಚ ದುಷ್ಕೃತಮ್ । ವಿಸೃಜ್ಯ ಧ್ಯಾನಯೋಗೇನ ಬ್ರಹ್ಮಾಪ್ಯೇತಿ ಸನಾ

ಮೇಲುಳ್ಳ ಕೂತ್ತೈಯುಮ್ - ಮೇಲುಳ್ಳ ಕೂರು ಎಂದರೆ ಅನಭ್ಯುಪೇಗತ ರೂಪವಾದ ಜನ್ಮಾಂತರಕ್ಕೆ ಕಾರಣವಾದ ಮಿಕ್ಕ ಎಲ್ಲಾ ಭಾಗವು, ಅದನ್ನೂ, ಇದಕ್ಕೆ ತುವಕ್ಕರುತ್ತು ಎಂದು ಮುಂದಿರುವದರೊಂದಿಗೆ ಅನ್ವಯವು, "**ಪೋಯ ಪಿಳ್ಳೈಯುಮ್** - ಪೂರ್ವಾಘಗಳೂ, **ಪುಕುದರವಾನ್ನಿನ್ರನವುಮ್** - ಉತ್ತರಾಘಗಳೂ, **ತೀಯಿನಲ್** - ಬೆಂಕಿಯಲ್ಲಿ, **ದೂಶು** - ಅರಳೆಯು, ಹತ್ತಿಯು, **ಆಗುಮ್** - ಆಗುವದು," ಇದು ಶ್ರುತ್ಯರ್ಥವನ್ನು ಒಳಗೊಂಡಿರುತ್ತದೆ. (೨) "**ತದ್ಯಥೈಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತ, ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ,**" "ಇಷೀಕವೆಂಬ ಮುಂಜೇ ಹುಲ್ಲಿನಲ್ಲಿರುವ ಹತ್ತಿಯು ಅಗ್ನಿಯಲ್ಲಿಟ್ಟರೆ ಒಡನೆ ಹೇಗೆ ದಗ್ಧವಾಗಿ ಹೋಗುತ್ತದೋ, ಹಾಗೆಯೇ ಪ್ರಪನ್ನನ ಸರ್ವ ಪಾಪಗಳೂ ದಗ್ಧವಾಗುತ್ತವೆ" ಎಂಬುದು ಈ ಶ್ರುತ್ಯರ್ಥವು **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಮುನ್ಬೇ** - ಪ್ರಪತ್ತಿ ವಾಕ್ಯೋಚ್ಚಾರಣ ಕಾಲದಲ್ಲೇ, **ಇವನೋಡು** - ಈ ಜೀವಾತ್ಮನೊಂದಿಗೆ, **ತುವಕ್ಕರುತ್ತು** - ಆ ಪೂರ್ವೋತ್ತರಾಘಗಳ ಸಂಬಂಧವನ್ನು ಛೇದಿಸಿ, **ನೈಕ್ಕೈಯಾಲೇ**- ಇಟ್ಟದ್ದರಿಂದ, **ಶರೀರಪಾತತ್ತುಕ್ಕು** - ದೇಹಾವಸಾನಕ್ಕೆ, **ನಿನೈಪ್ಪಿಟ್ಟ ಸಮಯಂ ವನ್ದವಾರೇ** - ಸಂಕಲ್ಪಿಸಿದ ಕಾಲವು ಒದಗಿದ ಒಡನೆಯೇ, "**ಸ್ವೇಷು ಪ್ರಿಯೇಷು** - ಪ್ರಪನ್ನರಲ್ಲದ ತನ್ನ ಸಂಬಂಧಿಗಳಾದ ಇಷ್ಟರಲ್ಲಿ ಸುಕೃತವನ್ನೂ, **ಅಪ್ರಿಯೇಷು** - ತನ್ನ ಶತ್ರುಗಳಲ್ಲಿ, ದುಷ್ಕೃತವನ್ನೂ, **ವಿಸೃಜ್ಯ** - ಬಿಟ್ಟು, **ಧ್ಯಾನಯೋಗೇನ**- ಭಕ್ತಿಯೋಗದಿಂದ, **ಸನಾತನಂ** - ಅನಾದಿಯಾದ, **ಬ್ರಹ್ಮ**- ಪರಬ್ರಹ್ಮವನ್ನು, **ಅಪ್ಯೇತಿ** - ಹೋಗಿ ಸೇರುವನು ಎಂದರೆ ಹೊಂದುವನು ಎಂಬ ಭಾವವು" ಪ್ರಪತ್ತಿಯಾದ ಒಡನೆಯೇ ಸರ್ವೇಶ್ವರನು ಸಂಕಲ್ಪಿಸುವದೇನೆಂದರೆ, ಶರಣಾಗತನಾದುದರಿಂದ ನನಗೆ ತುಂಬಾ ಪ್ರಿಯನಾದ ನಿನ್ನ ಪುಣ್ಯಪಾಪಗಳೆಲ್ಲಾ ನನ್ನಿಂದ ನಿಗ್ರಹಕ್ಕೆ ಕಾರಣವಾಗಿದ್ದರೂ, ದೇಹಾವಸಾನ ಕಾಲದಲ್ಲಿ ನಿನಗೆ ಯಾವ

---

(೧) ತಿರುಪ್ಪಾವೈ ೫. (೨) ಛಾಂ. ೫. ೨೪. ೩. (೩) ಮನುಸ್ಮೃತಿ ೬. ೭೯.

ಪಾಪಗಳಿಂದ ನಿಗ್ರಹವಾಗಲಿ ಭಯವಾಗಲಿ ಉಂಟಾಗದ ಹಾಗೆ ಮಾಡುವೆನು ಎಂಬದಾಗಿ ಶ್ರುತಿಯು "ದ್ವಿಷನ್ತಃ ಪಾಪಕೃತ್ಯಾಂ ಸುಹೃದಃ ಸಾಧುಕೃತ್ಯಾಂ" ಎಂದು ಹೇಳಿರುವದರಿಂದ ಈತನ ಸುಕೃತವೆಲ್ಲಾ ಪ್ರಪನ್ನರಲ್ಲದ ಇಷ್ಟಜನದಲ್ಲೂ, ದುಷ್ಕೃತವೆಲ್ಲಾ ದ್ವೇಷಿಗಳಲ್ಲೂ ಹೋಗಿ ಸೇರುತ್ತವೆಂದು ಹೇಳಿದಭಿಪ್ರಾಯವೇ ಈ ಸ್ಮೃತಿಯಲ್ಲೂ ಹೇಳಲ್ಪಟ್ಟಿತು. ಹೀಗೆ ದೇಹಾವಸಾನಕಾಲದಲ್ಲಿ ಸುಕೃತ ದುಷ್ಕೃತಗಳಾದ ಇವುಗಳು ಮಿತ್ರದ್ವೇಷಿಗಳಲ್ಲಿ ಹೋಗಿ ಸೇರಿದರೆ, ಪ್ರಪತ್ತಿ ಅನು ಷ್ಠಿಸಿದ ಒಡನೆಯೇ ಉತ್ತರ ಪೂರ್ವಾಘಗಳಿಗೆ (ಅಘಶಬ್ದದಿಂದ ಪುಣ್ಯಪಾಪಗಳೆ ರಡೂ ಹೇಳಲ್ಪಟ್ಟವು) ಅಶ್ಲೇಷವಿನಾಶಗಳು ಹೇಳಲ್ಪಟ್ಟವಲ್ಲಾ, ಈ ವಾಕ್ಯಗಳಿಗೆ ಪರಸ್ಪರ ವಿರೋಧವೇ ಎಂದರೆ ವಿರೋಧವೇನೂ ಇಲ್ಲವು ಸರ್ವೇಶ್ವರನು ಭರ ನ್ಯಾಸ ಕಾಲದಲ್ಲೇ ಈ ಆಶ್ಲೇಷವಿನಾಶಗಳನ್ನು ಸಂಕಲ್ಪಿಸಿಬಿಡುವನು. ಆ ಸಂಕ ಲ್ಪಾನುಸಾರವಾಗಿ, ಪುಣ್ಯಗಳು ಇಷ್ಟರಲ್ಲೂ, ಪಾಪಗಳು ದ್ವೇಷಿಗಳಲ್ಲೂ ಹೋಗಿ ಸೇರುತ್ತವೆ ಎಂಬ ಭಾವವು. ಶ್ರೀ ದೇಶಿಕರವರೇ ಬರೆದಿರುವ **ಪರಮಪದ ಸೋಪಾನ** ವೆಂಬ ಗ್ರಂಥದ ಆರನೆಯ ಉತ್ಕ್ರಮಣಪರ್ವದಲ್ಲಿ **"ವೈಗುನ್ದಮ್ ಕೊಡುರ್ಕ್ಕುಮ್ ಪಿರ್ರಾ ಇವನುಕ್ಕು ಅಡಿಯಿಲೆ** (ಭರನ್ಯಾಸ ಕಾಲದಲ್ಲಿ) **ಅಶ್ಲೇಷ ವಿನಾಶ ವ್ಯಪದೇಶ ವಿಷಯಙ್ಗಳಾಯ್‌ಕ್ಕೊಂಡು ಮೂರ ನಿನ್ರೈ ಪಿಟ್ಟುಕ್ಕಿಡನ್ದ ಉತ್ತರಪೂರ್ವ ಪುಣ್ಯಪಾಪಙ್ಗಳೈ ಮಾತ್ತಿ, "ಪ್ರಿಯೇಷು ಸ್ವೇಷು ಸುಕೃತಂ ಅಪ್ರಿಯೇಷು ಚ ದುಷ್ಕೃತಂ" ಇತ್ಯಾದಿಗಳಿನ್ಪಡಿಯೇ ನಾಟ್ಟಿಲುಳ್ಳ ಪಾವಮೆಲ್ಲಾಮ್ ಶುಮ್ಮನಾದೆ ಕೈವಿಟ್ಟೋಡಿ ದೂರ್‌ಗಳ್ ಪಾಯ್‌ನ್ದನವೇ ಎನ್ರುಮ್‌ಪಡಿ, ಅನುಕೂಲ ಪ್ರತಿಕೂಲರುಡೈಯ ಆನುಕೂಲ್ಯ ಪ್ರಾತಿಕೂಲ್ಯಙ್ಗಳುಕ್ಕುಮ್ ಫಲಂ ಕೊಡುತ್ತು"** ಎಂದು ಉಪದೇಶಿಸಿರುತ್ತಾರೆ. ಆದುದರಿಂದ ಅಶ್ಲೇಷ ವಿನಾಶಗಳುಂಟಾಗಲೆಂದು ಸರ್ವೇ ಶ್ವರನು ಸಂಕಲ್ಪಿಸಿದುದು, ದೇಹಾವಸಾನ ಕಾಲದಲ್ಲಿ ಅವುಗಳು ಹೀಗೆ ಪರಿಣಾಮ ಹೊಂದಿ, ಇತರರಿಗೆ ಸುಖದುಃಖ ಹೇತುಗಳಾಗಿ ಪರಿಣಮಿಸುತ್ತವೆಂಬುವದೀಗ ತಾತ್ಪರ್ಯವು." **ಎನ್ರುಮ್** - ಎಂದೂ, **"ನಮ್ಮ ಪೋಲ್** - ಯಮನ ಹಾಗೆ, **ವೀಟ್ಟುಮುಕ್ಕುಮ್** - ಸಂಸಾರಸಮುದ್ರದಲ್ಲಿ ಬೀಳಿಸಿ ಆಕ್ರಮಿಸುವ, **ನಾಟ್ಟಿಲುಳ್ಳ ಪಾವಮೆಲ್ಲಾ** - ಶಾಸ್ತ್ರದಲ್ಲಿ ಪ್ರಸಿದ್ಧವಾದ ಎಲ್ಲಾ ಪಾಪವನ್ನೂ ಅಥವಾ ಲೋಕದ ಎಲ್ಲಾ ಪಾಪವನ್ನೂ, **"ನನಿಂದಿತಂ ಕರ್ಮತದಸ್ತಿ ಲೋಕೇ ಸ್ರಹಸ್ರಶೋ"** ಎಂದು ಆಳವಂದಾರ್ರವರು ಹೇಳಿರುವ ಹಾಗೆ ಆದರೂ ಆಗ ಬಹುದು ; **ಶುಮ್ ಎನಾದೆ** - ಶುಮ್ ಎಂದು ಉಸಿರುಬಿಡದೆ, **ಕೈವಿಟ್ಟೋಡಿ** - ಕೈತಪ್ಪಿಸಿಕೊಂಡು ಓಡಿಹೋಗಿ, **ತೂರುಗಳ್** - ಗಿಡಗಳನ್ನು, ಅಥವಾ ಸಂಸಾರಿ

ತನಂ ॥" ಎನ್ರುವ್, (೧) ನಮ್ಮರ್ ಪೋಲ್ ವೀಳ್ ತಮುಕ್ಕು ನಾಟ್ಟೆ ಉಳ್ಳ ಪಾವಮೆಲ್ಲಾಮ್ ಶುಮ್ಮನಾತೇ ಕೈವಿಟ್ಟೋಡಿ ತ್ತೂರುಗಳ್‌ಪಾಯ್ ನ್ದನವೇ" ಎನ್ರು ಸ್ಮರ್ತ್ತಾಕ್ಕಳ್ ಶೊನ್ನ ಉಪನಿಷದರ್ಥತ್ತಿನ್ಪಡಿಯೇ ಇವ ನುಕ್ಕು ಅನುಕೂಲ ಪ್ರತಿಕೂಲರಾಯಿರುನ್ದುಳ್ಳ ವಿರಣ್ಡು ಶಿರುಗಿಲುಮ್ ಇರ್ವರ್ ಪಕ್ಕಲ್ ಆನುಕೂಲ್ಯ ಪ್ರಾತಿಕೂಲ್ಯಙ್ಗಳುಕ್ಕು ಫಲಮಾಕ ವಶಲ್ ಪಿಳನ್ದೇರಿಡುಗಿರದೆನ್ನುಮ್‌ಪಡಿ ಪಣ್ಣಿ,

---

ಗಳನ್ನು, **ಪಾಯ್‌ನ್ದನವೇ** - ಆಶ್ರಯಿಸುತ್ತವೆ; ಇದು ಪಾಶುರದ ಉತ್ತರಾ ರ್ಧವು, ಪೂರ್ವಾರ್ಧವು :—

ಎಮ್ಮಾ ನಾ ವರ್ ಕುಲದೈವ ಮೇ ಯೆನ್ನುಡೈ ನಾಯಕನೇ ।
ನಿನ್ನುಳೆನಾಯ್ ಪ್ಪೆಱ್ಱ ನನ್ಮೈಯಿವ್ವುಲಗಿನಿಲಾರ್ ಪೆರುವಾರ್॥

ಎಂದರೆ ತಾಯಿಯು ಸ್ತನ್ಯದ ಹಾಗೆ ಜ್ಞಾನಮೂಲಕ ಸತ್ತೆಯನ್ನಿತ್ತವನೇ, ರಾಜನ ಹಾಗೆ ನನ್ನ ಸ್ವಾತಂತ್ರ್ಯವನ್ನು ಹೋಗಲಾಡಿಸಿದವನೇ, ನನ್ನ ಕುಲಕ್ಕೆ ಪರದೇವತೆಯೇ ಎಂದರೆ ನಮಗಳಿಗೆಲ್ಲಾ ಸಾಧನರೂಪನೇ, ನನಗೆ ನಿಯಾಮಕನೇ, ಪ್ರಾಪ್ಯದಲ್ಲಿ ಕೈಙ್ಕರ್ಯಕೊಟ್ಟು ನಿಯಮಿಸುವನೇ, **"ಗರ್ಭಭೂತಾಸ್ತಪೋಧನಾಃ"** ಎಂದು ಹೇಳಿರುವಹಾಗೆ। ನಿನ್ನಭಿಮಾನದಲ್ಲಿ ಸೇರಿದವನಾಗಿ ಹೊಂದಿದ ಮಹತ್ತ್ವವು ಇದು. ಈ ಸಂಸಾರ ದೆಶೆಯಲ್ಲಿ ಯಾರಿಗೆ ಈ ಸುಕೃತವು ಲಭಿಸುತ್ತದೆ? ಇದು ಅಲಭ್ಯವಾದುದು ನನಗೀಗ ಲಭ್ಯವಾಯಿತು ಅಲ್ಲವೇ? ಇಂತಹ ಉಪಕಾರ ಪಡೆ ದವರುಂಟೋ? ಎಂಬುದು ಇದರ ತಾತ್ಪರ್ಯವು." **ಎನ್ರುವತ್** - ಎಂದು, **ಸ್ಮರ್ತ್ತಾಕ್ಕಳ್** - ಶ್ರುತ್ಯರ್ಥವನ್ನು ಉಪಬ್ರಹ್ಮಣ ಮಾಡಿರುವ ಸ್ಮೃತಿಕರ್ತರುಗಳು, ದ್ರಾವಿಡ ಪ್ರಬಂಧಕರ್ತೃಗಳೂ ಶ್ರುತ್ಯರ್ಥವನ್ನುಪಬ್ರಹ್ಮಣ ಮಾಡಿರುವದರಿಂದ "ಸ್ಮರ್ತ್ತಾಕ್ಕಳ್" ಎಂದು ಇಲ್ಲಿ ಪ್ರಯೋಗವು **ಶೊನ್ನ ಉಪನಿಷದರ್ಥತ್ತಿನ್ ಪಡಿಯೇ** - ಹೇಳಿದ ಉಪನಿಷತ್ತಿನ ಅರ್ಥದಹಾಗೆ, ಯಾವ ಉಪನಿಷತ್ತೆಂದರೆ:- **ಸುಹೃದಸ್ಸಾಧುಕೃತ್ಯಾಂ ದ್ವಿಷನ್ತಃ ಪಾಪಕೃತ್ಯಾಂ"** ಎಂಬ ಶಾಟ್ಯಾಯನ ವಾಕ್ಯದ ಅರ್ಥವೆಂದು ಭಾವವು, **ಇವನುಕ್ಕು** - ಈ ದೇಹಾವಸಾನ ಸನ್ನಿಹಿತವಾ ಗಿರುವ ಪ್ರಪನ್ನನಿಗೆ, **ಅನುಕೂಲ ಪ್ರತಿಕೂಲರಾಯಿರುನ್ದುಳ್ಳ** - ಪ್ರಪನ್ನರಲ್ಲ ದಿರುವ ಇಷ್ಟರೂ ಮತ್ತು ದ್ವೇಷಿಗಳಾಗಿರುವ, **ಇರಣ್ಡು ಶಿರಕಿಲುಮ್** - ಎರಡು ಪಕ್ಷದಲ್ಲೂ, **ಇರ್ವರ್ ಪಕ್ಕಲ್** - ಈ ಪ್ರಪನ್ನಾಧಿಕಾರಿಯ ವಿಷಯದಲ್ಲಿ, **ಆನು**

---

(೧) ಪೆರಿ. ತಿರು. ೫. ೪. ೩.

ಕೂಲ್ಯ ಪ್ರಾತಿಕೂಲ್ಯಙ್ಗಳುಕ್ಕು - ಅವರು ಮಾಡಿದ ಅನುಕೂಲ ಪ್ರತಿಕೂಲ ಪ್ರವೃತ್ತಿಗಳಿಗೆ, **ಫಲಮಾಗ** - ಪ್ರತಿಫಲವಾಗಿ, **ಅಶಲ್ ಪಿಳನ್ದೇರಿಡುಗಿರ, ಪಿಳನ್ದು** - ಇರುವ ಸ್ಥಳದಿಂದ ವಿಶ್ಲೇಷವನ್ನು ಹೊಂದಿ, ಎಂದರೆ ಈ ಪ್ರಪನ್ನನನ್ನು ಬಿಟ್ಟು, **ಅಶಲ್** - ಇತರರಲ್ಲಿ ಎಂದರೆ ಇಷ್ಟರು ಶತ್ರುಗಳಲ್ಲಿ, **ಏರಿಡುಗಿರದು** - ಆರೋಪಿಸುತ್ತದೆ, **ಎನ್ನುಮ್ ಪಡಿ ಪಣ್ಣಿ** - ಎಂದು ಹೇಳುವ ಹಾಗೆ ಮಾಡಿ; ಇದು ಐದನೆಯ ಉಪಕಾರವು. ಈತನು ಹಿಂದೆ ಪ್ರಪದನ ಮಾಡಿದ ಕಾಲದಲ್ಲೇ ಸರ್ವೇಶ್ವರನು ತನ್ನ ಪ್ರಿಯಭಕ್ತನಿಗೆ ಹಿತವನ್ನು ಮಾಡಬೇಕೆಂದುದ್ದೇಶಿಸಿ ಉತ್ತರಪೂರ್ವಾಘಗಳ ಅಶ್ಲೇಷ ವಿನಾಶವನ್ನು ಸಙ್ಕಲ್ಪಿಸಿಬಿಡುವನು. ಹೀಗೆ ಅಶ್ಲೇಷ ವಿನಾಶವನ್ನು ಹೊಂದುವ ಪುಣ್ಯಪಾಪಗಳಿಗೆ ಬೇರೇ ವಿಧವಾಗಿ ವಿನಿಯೋಗವನ್ನು ಸರ್ವೇಶ್ವರನು ಉದ್ದೇಶಿಸಿರುವದರಿಂದ, ಹಾಗೆ ಅವುಗಳನ್ನು ಈ ಪ್ರಪನ್ನನ ದೇಹಾವಸಾನ ಕಾಲದಲ್ಲಿ, ವಿನಿಯೋಗಿಸುವನು. ಹೇಗೆಂದರೆ:—ಪುಣ್ಯಕರ್ಮಗಳೆಲ್ಲಾ ಈತನಿಗೆ ಹಿತೈಷಿಗಳಾದ ಅಪ್ರಪನ್ನರೆಲ್ಲೂ, ಹಾಗೆಯೇ ಈತನಿಗೆ ದ್ವೇಷಿಗಳಾದ ಅಪ್ರಪನ್ನರಲ್ಲೂ ಹೋಗಿ ಸೇರುವ ಹಾಗೆ ಮಾಡುವನು. ವಿಭೀಷಣನಿಗೆ ರಾಜ್ಯಾಭಿಷೇಕವು ಸಮುದ್ರತರಣಕ್ಕೆ ಮುಂಚೆಯೇ ಉದ್ದೇಶಿಸಲ್ಪಟ್ಟು ರಾವಣ ವಧಾನಂತರ ಪ್ರಾಪ್ತವಾದ ಹಾಗೆ, ಪಾಪಗಳ ಅಶ್ಲೇಷ ವಿನಾಶಗಳ ಉದ್ದೇಶ್ಯವು ಭರಸಮರ್ಪಣ ಕಾಲದಲ್ಲೂ, ಆ ಸಂಕಲ್ಪವು ನೆರವೇರುವದು ರಾವಣ ರೂಪಸ್ಥೂಲ ದಶೇಂದ್ರಿಯಾದಿಗಳು ತೊಲಗಿದ ನಂತರ ಎಂದರೆ ದೇಹಾವಸಾನದಲ್ಲೂ ಆಗಲು ಕಾರಣವೇನೆಂದು ಕೇಳಬಹುದು. ಕೆಲವರು ಪ್ರಪದನ ಕಾಲದಲ್ಲಿ ಇಷ್ಟರಾದವರು ಅನಂತರ ದ್ವೇಷಿಗಳಾಗಿಯೂ, ದ್ವೇಷಿಗಳಾದವರು ಇಷ್ಟರಾಗಿಯೂ ಆಗಬಹುದು ; ಮತ್ತು ಕೆಲವರು ಆ ಕಾಲದಲ್ಲಿ ಅಪ್ರಪನ್ನರಾಗಿರುವವರು ಅನಂತರ ಪ್ರಪನ್ನರಾಗಬಹುದು ; ಆಗ ಪುನಃ ಬದಲಾಯಿಸಬೇಕಾದೀತು ; ಆದುದರಿಂದ ಈ ಪುಣ್ಯಪಾಪಗಳ ವಿನಿಯೋಗವು ದೇಹಾವಸಾನದಲ್ಲೇ ಶ್ರಿಯಃಪತಿಯು ನಡಿಸುವನೆಂಬ ಭಾವವು. ಆದುದರಿಂದಲೇ **"ಶರೀರಪಾತತ್ತುಕ್ಕು ನಿಸೈಪ್ಪಿಟ್ಟ ಸಮಯಮ್ ವನ್ದಾರೇ"** ಎಂಬ ಪ್ರಯೋಗವು. ಈ ತಮ್ಮ ಉಪದೇಶವನ್ನು ಸಪ್ರಮಾಣವಾಗಿ ದಯಪಾಲಿಸಿರುತ್ತಾರೆ. ಆದಕ್ಕಾಗಿ ಉಪನಿಷದ್ವಾಕ್ಯವನ್ನೂ, ಅವುಗಳ ಉಪಬ್ರಹ್ಮಗಳಾದ ಮನುಸ್ಮೃತಿ ವಾಕ್ಯವನ್ನೂ, ಪೆರಿಯಾಳ್ವಾರ್ ತಿರುಮೊಳಿ ವಾಕ್ಯವನ್ನೂ ಉದಾಹರಿಸಿರುತ್ತಾರೆ. ಪಾಪವು ಹೇಗೆ ಬಂಧಕವೋ ಪುಣ್ಯವೂ ಹಾಗೆಯೇ ಬಂಧಕವು ಎಂದು ಹೇಳುವದಕ್ಕಾಗಿ **ಪೊನ್ನುಮಿರುಮ್ಬುಮಾನ ವಿಲಙ್ಗುಗಳ್ ಪೋಲೆ** ಎಂಬ ಪ್ರಯೋಗವು; ಪುಣ್ಯವು ಸ್ವಲ್ಪ ದುಃಖಮಿಶ್ರವಾದ ಸುಖದಾಯಕವಾದುದರಿಂದ ಚಿನ್ನದ ಬೇಡಿಯ, ಪಾಪವು ಪೂರಾ ದುಃಖಫಲವನ್ನು ಕೊಡುವದ

ನಿರ್ಯಾಣಸ್ಯ ದೇಶ ಕಾಲ ನಿಯಮೋ ನಾಸ್ತಿ

(೬) “ದಿವಾಚ ಶುಕ್ಲಪಕ್ಷಶ್ಚ ಉತ್ತರಾಯಣ ಮೇವ ಚ । ಮುಮೂರ್ಷತಾಂ ಪ್ರಶಸ್ತಾನಿ” ಎನ್ರು ಸ್ಮೃತಿಯಿಲುಮ್, ಜ್ಯೋತಿಶ್ಶಾಸ್ತ್ರತ್ತಿಲ್ ನಿರ್ಯಾಣ ಪ್ರಕರಣತ್ತಿಲುಮ್, ಫಲಾಂತರ ಪ್ರಸಕ್ತರ್ಗೈಯುಮ್ ಮೋಕ್ಷೋಪಾಯ ಪೂರ್ತಿಯಿಲ್ಲಾದಾರ್ಗೈಯುಮ್, ಪತ್ತ ಚ್ಚೊಲ್ಲುಮ್ ಕಾಲ ನಿಯಮ ಮನ್ರಿಕ್ಕೆ (೧) “ನಿಶಿನೇತಿ ಚೇನ್ನ ಸಂಬಂಧಸ್ಯ ಯಾವ

ರಿಂದ ಕಬ್ಬಿಣದ ಬೇಡಿಯು, ಉಪವಾಯು ಇವುಗಳಿಗೆ ಕೊಡಲ್ಪಟ್ಟವು.

ಪ್ರಪನ್ನನ ನಿರ್ಯಾಣಕ್ಕೆ ದೇಶಕಾಲಾದಿ ನಿಯಮಗಳಿಲ್ಲವು.

(೬) ಹೀಗೆ “ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ” ಎಂದು ಲೀಲಾಸಾರಥಿಯಾಗಿ ದಯಪಾಲಿಸಿದ ಅಮೋಘ ವಾಕ್ಯನ್ನು ನಡಿಸಿಕೊಟ್ಟ ಆಮೇಲೆ ಮಾಡುವ ಉಪಕಾರವನ್ನು ತಿಳಿಸುತ್ತಾರೆ:—ದಿವಾಚ-ಹಗಲೂ, ಶುಕ್ಲಪಕ್ಷವೂ, ಉತ್ತರಾಯಣವೂ ಕೂಡ, ಮುಮೂರ್ಷತಾಂ-ಕೃತಕೃತ್ಯನಾಗಿ, ಸಾಯಲಪೇಕ್ಷೆಯುಳ್ಳವನಿಗೆ, ಪ್ರಶಸ್ತಾನಿ-ಶ್ರೇಷ್ಠವಾದವು; ಮುಂದಕ್ಕೆ “ವಿಪರೀತಂತು ಗರ್ಹಿತಂ” ಎಂಬುವದು ನಾಲ್ಕನೇ ಪಾದವು; ಹಾಗಲ್ಲದೆ ರಾತ್ರಿಯೂ, ಕೃಷ್ಣಪಕ್ಷವೂ, ದಕ್ಷಿಣಾಯನದಲ್ಲೂ ಮರಣವು ನಿಂದಿತವಾದುದು ಎಂಬ ಭಾವವು. ಮನುಷ್ಯರಿಗೆ ಹಗಲೂ, ಪಿತೃಗಳಿಗೆ ಶುಕ್ಲಪಕ್ಷವೂ, ದೇವತೆಗಳಿಗೆ ಉತ್ತರಾಯಣವೂ ಹಗಲಾದುದರಿಂದ ಪ್ರಶಸ್ತವು; ಮನುಷ್ಯರ ರಾತ್ರಿಕಾಲವೂ, ಪಿತೃಗಳ ರಾತ್ರಿಯಾದ ಕೃಷ್ಣಪಕ್ಷವೂ, ದೇವತೆಗಳ ರಾತ್ರಿಯಾದ ದಕ್ಷಿಣಾಯನವೂ ಪ್ರಶಸ್ತವಲ್ಲವೆಂಬ ಭಾವವು, ಎನ್ರುಮ್ - ಎಂಬದಾಗಿ, ಸ್ಮೃತಿಯಿಲುಮ್ - ಶ್ರುತ್ಯುಪಬೃಹ್ಮಣವಾದುದರಿಂದ ಸ್ಮೃತಿ ಎಂದು ಹೇಳಿಸಿಕೊಳ್ಳುವ ಭಾರತದಲ್ಲೂ, ಜ್ಯೋತಿಶ್ಶಾಸ್ತ್ರದ ನಿರ್ಯಾಣ ಪ್ರಕರಣದಲ್ಲೂ, ಫಲಾಂತರ ಪ್ರಸಕ್ತರ್ಗೈಯುಮ್ - ಮೋಕ್ಷವಲ್ಲದ ಇತರ ಪ್ರಯೋಜನಾಪೇಕ್ಷೆಯುಳ್ಳವರನ್ನೂ, ಮೋಕ್ಷೋಪಾಯವಾದ ಭಕ್ತಿಪ್ರಪತ್ತಿಗಳ, ಪೂರ್ತಿ ಇಲ್ಲಾದಾರ್ಗೈಯುಮ್ - ಅನುಷ್ಠಾನ ಪೂರ್ತಿಯಾಗದೇ ಇರುವವರನ್ನೂ, ಪತ್ತ - ಕುರಿತು, ಶೊಲ್ಲುಮ್ ಕಾಲನಿಯಮಮುಮ್-ಹೇಳುವ ಕಾಲನಿಯಮವಾಗಿರುತ್ತದೆ, ಅನ್ರಿಕ್ಕೇ-ಹಾಗಲ್ಲದೆ, “ನಿಶಿನೇತಿಚೇನ್ನ ಸಂಬಂಧಸ್ಯ ಯಾವದ್ದೇಹ ಭಾವಿತ್ವಾದ್ದರ್ಶಯತಿಚ” ಎಂಬ ಬ್ರಹ್ಮಸೂತ್ರದಲ್ಲೂ,

---

(೬) ಭಾರ. ಆನು. ೨೨೨. ೩೧. (೧) ಶಾ. ರೂ. ೪. ೨. ೧೮.

ದ್ದೇಹ ಭಾವಿತ್ವಾತ್" ಎನ್ರುಮ್, (೨) "ಅತಶ್ಚಾಯನೇಪಿ ದಕ್ಷಿಣೇ" ಎನ್ರುಮ್, ಶೊಲ್ಲುಗಿರಪಡಿಯೇ ಮನುಷ್ಯ ಪಿತೃದೇವತೆಗಳುಡೈಯ ಪಗಲ್‌ಗಳಿಲೇಯಾದಲ್, ರಾತ್ರಿಗಳಿಲೇಯಾದಲ್, ತಾಂ ಸಙ್ಕಲ್ಪಿತ್ತ

"ಅತಶ್ಚಾಯನೇಪಿ ದಕ್ಷಿಣೇ" ಎಂದೂ, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, ಮನುಷ್ಯ ಪಿತೃದೇವತೆಗಳ, **ಪಗಲ್‌ಗಳಿಲೆಯಾದಲ್** - ಹಗಲುಗಳಲ್ಲೇಯಾಗಲಿ, ಎಂದರೆ ಹಗಲು, ಶುಕ್ಲಪಕ್ಷ, ಉತ್ತರಾಯಣಗಳಲ್ಲೇಯಾಗಲಿ, ಅಥವಾ **ರಾತ್ರಿಗಳಿಲೇಯಾದಲ್** - ರಾತ್ರಿಗಳಾದ ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನಗಳಲ್ಲೇಯಾಗಲಿ, ಮುಂದೆ ನಿರ್ಯಾಣ ಉಂಟಾಗುತ್ತದೆಂದು ಹೇಳಿ, ಆ ನಿರ್ಯಾಣ ಕ್ರಮವನ್ನು ವಿವರಿಸುತ್ತಾರೆ. ಈ ವಾಕ್ಯಖಂಡಾಭಿಪ್ರಾಯವೇನೆಂದರೆ, "**ದಿವಾಚ ಶುಕ್ಲಪಕ್ಷಶ್ಚ**" ಎಂಬ ಭಾರತ ವಚನವು ಸಾಯುವದಕ್ಕೆ ಪ್ರಶಸ್ತವಾದ, ಅಪ್ರಶಸ್ತವಾದ ಕಾಲಗಳನ್ನು ಹೇಳುತ್ತದೆ. ಈ ವಚನವೇನು ಪ್ರಪನ್ನನನ್ನು ಕುರಿತು ಹೇಳಿದುದೇ, ಅಲ್ಲವೇ ಇತರರನ್ನುದ್ದೇಶಿಸಿ ಹೇಳಿದುದೇ ಎಂಬ ಪ್ರಶಂಸೆಯಲ್ಲಿ, ಇದು ಪ್ರಪನ್ನನನ್ನು ಕುರಿತು ಹೇಳಿದುದಲ್ಲವೆಂದೂ ಇತರರನ್ನು ಕುರಿತು ಹೇಳಿದುದೇ ಎಂದು ಶ್ರೀ ಭಾಷ್ಯದಲ್ಲಿ ಸಿದ್ಧಾಂತಿಸಲ್ಪಟ್ಟಿರುತ್ತದೆ. ಆದುದರಿಂದ ಹೀಗೆ ಕಾಲನಿಯಮವನ್ನು ಭಾರತದಲ್ಲೂ ಜ್ಯೋತಿಶ್ಶಾಸ್ತ್ರದಲ್ಲೂ ಹೇಳಿರುವದು "**ಫಲಾಂತರ ಪ್ರಸಕ್ತರೈಯುಮ್, ಮೋಕ್ಷೋಪಾಯ ಪೂರ್ತಿಯಿಲ್ಲಾದಾರೈಯುಮ್**" ಕುರಿತು ಹೇಳಲ್ಪಟ್ಟಿತೆಂದುಪದೇಶಿಸಿರುತ್ತಾರೆ. ಏತಕ್ಕೆ ಇವು ಪ್ರಶಸ್ತವೂ ನಿಂದಿತಗಳೂ, ಎಂದರೆ ಮೋಕ್ಷಪ್ರಾಪ್ತಿಗೆ ಸುತರಾಂ ಅಲ್ಲವು, ಏಕೆಂದರೆ ಇವರುಗಳಿಗೆ ಉಪಾಯಪೂರ್ತಿಯಿಲ್ಲದುದರಿಂದ ಮೋಕ್ಷಪ್ರಾಪ್ತಿಗೆ ಇನ್ನೂ ಅನುಕೂಲವೇ ಇಲ್ಲವು, ಇತರ ಉತ್ಕೃಷ್ಟ ಫಲಪ್ರಾಪ್ತಿಗೆ ಹೇತುವಾಗಿ ಪ್ರಶಸ್ತವೂ, ನಿಕೃಷ್ಟ ಫಲಪ್ರಾಪ್ತಿಗಳಿಗೆ ಹೇತುವಾಗಿ ಗರ್ಹಿತವೂ ಎಂಬ ಭಾವವು. ಹಾಗಾದರೆ ಮೋಕ್ಷಾರ್ಥಿಗಳಾದ ಭಕ್ತ ಪ್ರಪನ್ನರುಗಳಿಗೆ ಹೇಗೆ ಎಂದರೆ ಮಹರ್ಷಿಯು, "ನಿಶಿನೇತಿ ಚೇನ್ನ...." ಎಂಬ ಸೂತ್ರದಲ್ಲೂ, "ಅತಶ್ಚಾಯನೇಪಿ ದಕ್ಷಿಣೇ" ಎಂಬ ಸೂತ್ರದಲ್ಲೂ, ಅಂತಹ ಕಾಲನಿಯಮಗಳೇನೂ ಪ್ರಪನ್ನರಿಗಿಲ್ಲವೆಂದು ಸ್ಥಾಪಿಸಿರುತ್ತಾರೆ. ಇವುಗಳ ಅರ್ಥವೇನೆಂದರೆ:—ನಿಶಿನೇತಿ ಚೇನ್ನ - ರಾತ್ರಿಯಲ್ಲಿ ಮೃತನಾದ ಪ್ರಪನ್ನನಿಗೆ ಬ್ರಹ್ಮಪ್ರಾಪ್ತಿಯಿಲ್ಲವೆಂದು ಹೇಳುವದು ಸರಿಯಲ್ಲವು; ಏಕೆಂದರೆ, **ಸಂಬಂಧಸ್ಯ ಯಾವದ್ದೇಹ ಭಾವಿತ್ವಾತ್** - ಆರಂಭಿಸದೇ

---

(೨) ಬ್ರ. ಸೂ. ೪. ೨. ೧೯.

ಇರುವ ಕರ್ಮ ಸಂಬಂಧವೆಲ್ಲಾ ಈ ವಿದ್ಯಾ ಮಾಹಾತ್ಮ್ಯೆಯಿಂದಲೇ ನಷ್ಟವಾಗು ವದರಿಂದಲೂ, ಮತ್ತು ಆರಬ್ಧವಾದ ಕರ್ಮ ಸಂಬಂಧವೆಲ್ಲಾ ದೇಹಾವಸಾನದಲ್ಲಿ ನಷ್ಟವಾಗುವದರಿಂದಲೂ, ಹೀಗೆ ಪುಣ್ಯಪಾಪ ಸಂಬಂಧವೆಲ್ಲಾ ದೇಹಪಾತದಲ್ಲಿ ನಷ್ಟವಾಗುವದರಿಂದ, ರಾತ್ರಿಯಲ್ಲಿ ಪ್ರಪನ್ನನಿಗೆ ಮರಣ ಕೂಡದೆಂಬ ನಿಯಮವು ಸರಿಯಲ್ಲವು. **ತದ್ದರ್ಶಯತಿಚ** - ಶ್ರುತಿಯೂ ಕೂಡ ಈ ಅಭಿಪ್ರಾಯವನ್ನೇ ತೋರಿಸುತ್ತದೆ. "**ತಸ್ಯತಾವದೇವಚಿರಂ ಯಾವನ್ನವಿಮೋಕ್ಷ್ಯೇಽಥಸಂಪತ್ಸ್ಯೇ**" ಯಾವ ಪ್ರಪನ್ನನಿಗೆ ಎಲ್ಲಿಯವರೆಗೆ ದೇಹಸಂಬಂಧವು ಬಿಡಲಿಲ್ಲವೋ ಅಲ್ಲಿಯವರೆಗೇನೆ ವಿಳಂಬವು, ಅನಂತರ ಆತನಿಗೆ ಮೋಕ್ಷಪ್ರಾಪ್ತಿಯೆಂದು ಶ್ರುತಿಯು ಹೇಳುತ್ತದೆ. ಮುಂದಿನ ಸೂತ್ರವಾದ "**ಅತಶ್ಚಾಯನೇಪಿ ದಕ್ಷಿಣೇ**" ಎಂಬ ಸೂತ್ರದಲ್ಲಿ, ದಕ್ಷಿಣಾಯನದಲ್ಲಿ ಮೃತನಾದ ಪ್ರಪನ್ನನಿಗೆ ಮೋಕ್ಷ ಉಂಟೇ ಇಲ್ಲವೇ ಎಂಬ ವಿಷಯವು ಚರ್ಚಿಸಲ್ಪಟ್ಟು, ದಕ್ಷಿಣಾಯನದಲ್ಲಿ ಮೃತನಾದರೂ ಮೋಕ್ಷ ಉಂಟೆಂದು ಸ್ಥಾಪಿಸಲ್ಪಟ್ಟಿರುತ್ತದೆ. ಆದರೆ "**ಅಥಯೋ ದಕ್ಷಿಣೇ ಪ್ರಮೀಯತೇ ಪಿತೃಣಾಮೇವ ಮಹಿಮಾನಂಗತ್ವಾ ಚನ್ದ್ರಮಸಸ್ಸಾಯುಜ್ಯಂ**" (ತೈ. ನಾ. ೫೨. ೩) "ಯಾರು ದಕ್ಷಿಣಾಯನದಲ್ಲಿ ಮೃತಿ ಹೊಂದುವರೋ ಅವರು ಚಂದ್ರಸಾಯುಜ್ಯವನ್ನು ಹೊಂದಿ ಪಿತೃಲೋಕವನ್ನು ಹೊಂದುವರು" ಎಂದೂ, ಹಾಗೆ ಚಂದ್ರಸಾಯುಜ್ಯವನ್ನು ಹೊಂದಿದವರಿಗೆ ಪುನರಾವೃತ್ತಿಯುಂಟೆಂದು ಹೇಳಿದೆಯಲ್ಲಾ ಎಂದರೆ ಪ್ರಪನ್ನನಾದ ಬ್ರಹ್ಮವಿತ್ತು ಚಂದ್ರಸಾಯುಜ್ಯವನ್ನು ಹೊಂದಿ, ವಿಶ್ರಾಂತನಾಗಿ ಮುಂದೆ ಪ್ರಯಾಣ ಮಾಡಿ ಪರಬ್ರಹ್ಮಪ್ರಾಪ್ತಿಯನ್ನು ಹೊಂದುವನೆಂಬ ಭಾವವು. ಆದರೆ ಛಾಂದೋಗ್ಯದಲ್ಲಿ ದಕ್ಷಿಣಾಯನ ಮರಣವು ನಿಷೇಧಿಸಲ್ಪಟ್ಟಿದೆಯಲ್ಲಾ ಎಂದರೆ ಅದೂ ಕೂಡ ಅಪ್ರಪನ್ನನನ್ನು ಕುರಿತು ಹೇಳಿದುದೆಂದು ಭಾವಿಸತಕ್ಕದ್ದು. **ಅತಶ್ಚ** - ಆ ಕಾರಣದಿಂದ, ಯಾವ ಕಾರಣದಿಂದೆಂದರೆ ಹಿಂದಿನ ಸೂತ್ರದಲ್ಲಿ ನಿಶಿಯಲ್ಲಿ ಮೃತನಾದ ಪ್ರಪನ್ನನಿಗೂ ಕೂಡ ಬ್ರಹ್ಮಪ್ರಾಪ್ತಿಯುಂಟೆಂದು ಶ್ರುತಿಯಲ್ಲಿ ಹೇಳಿರುವ ಕಾರಣದಿಂದಲೇ, **ಅಯನೇಪಿ ದಕ್ಷಿಣೇ** - ದಕ್ಷಿಣಾಯನದಲ್ಲಿ ಪ್ರಪನ್ನನು ಮೃತನಾದರೂ ಕೂಡ ಪರಬ್ರಹ್ಮಪ್ರಾಪ್ತಿಯುಂಟು.

ಇದರ ಮೇಲೆ ಇನ್ನೊಂದು ಪೂರ್ವಪಕ್ಷವನ್ನೂ ತರಬಹುದು. ಗೀತೆಯಲ್ಲಿ ೮ನೆಯ ಅಧ್ಯಾಯದಲ್ಲಿ "**ಯತ್ರ ಕಾಲೇ ತ್ವನಾವೃತ್ತಿಂ ಆವೃತ್ತಿಂಚೈವ ಯೋಗಿನಃ। ಪ್ರಯಾತಾ ಯಾನ್ತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ**" ಎಂದು ಶ್ರೀಕೃಷ್ಣನು ಹೇಳಿ, ಮುಂದಕ್ಕೆ "**ಅಗ್ನಿರ್ಜ್ಯೋತಿರಹಶ್ಶುಕ್ಲಃ ಷಣ್ಮಾಸಾಉತ್ತರಾಯಣಂ। ತತ್ರ ಪ್ರಯಾತಾ ಗಚ್ಛನ್ತಿ ಬ್ರಹ್ಮ ಬ್ರಹ್ಮ**

ವಿದೋ ಜನಾಃ ॥" ಎಂದು ಹೇಳಿ, ಅನಂತರ "ಧೂಮೋ ರಾತ್ರಿ ಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ । ತತ್ರ ಚಾನ್ದ್ರಮಸಂ ಜ್ಯೋತಿಃ ಯೋಗೀಪ್ರಾಪ್ಯ ನಿವರ್ತತೇ ॥ ಶುಕ್ಲ ಕೃಷ್ಣೇ ಗತೀಹ್ಯೇತೇ" ಎಂದು ಉತ್ತರವನ್ನು ದಯಪಾಲಿಸಿರುತ್ತಾನೆ. ಈ ಶ್ಲೋಕಗಳಿಗೆ ಅರ್ಥವನ್ನು ಕೆಲವರು, "ಯಾವ ಕಾಲಗಳಲ್ಲಿ ಯೋಗಿಗಳು ದೇಹತ್ಯಾಗ ಮಾಡಿದರೆ ಅನಾವೃತ್ತಿಯಾಗಲಿ ಆವೃತ್ತಿಯಾಗಲಿ ಉಂಟಾಗುತ್ತದೋ ಅಂತಹ ಕಾಲಗಳು ಯಾವುವೆಂದು ನಿನಗೆ ತಿಳಿಸುವೆನೆಂದು ಅರ್ಜುನನಿಗೆ ಹೇಳಿ ಅನಾವೃತ್ತಿಗೆ ದೇಹತ್ಯಾಗವು ಹಗಲು, ಶುಕ್ಲ ಪಕ್ಷ, ಉತ್ತರಾಯಣಗಳಲ್ಲಿ ಆಗಬೇಕೆಂದೂ, ಆವೃತ್ತಿಗೆ ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನಗಳಲ್ಲೂ ಆಗಬೇಕೆಂದು ಹೇಳುವರು. ಈ ಅಭಿಪ್ರಾಯವು ಮೇಲೆ ವಿವರಿಸಲ್ಪಟ್ಟ ಶಾರೀರಕ ಸೂತ್ರಾಭಿಪ್ರಾಯಕ್ಕೆ ವಿರೋಧವಾದುದಾಗುತ್ತದೆ. ಎರಡನ್ನು ಬರೆದವರೂ ಶ್ರೀ ವ್ಯಾಸಮಹರ್ಷಿಯೇಯಾದುದರಿಂದ, ಹೀಗೆ ವಿರುದ್ಧಾರ್ಥಗಳನ್ನು ಜ್ಞಾನದೀಪ್ತಿಯಿಂದ ವಿರಾಜಿಸುವರಾಗಿ "ವ್ಯಾಸಾಯ ವಿಷ್ಣುರೂಪಾಯ" ಎಂದು ಹೇಳಿಸಿಕೊಳ್ಳುವ ಬ್ರಹ್ಮವಿದಗ್ರೇಸರರು ಎಂದಿಗೂ ಹೇಳಲಾರರು. ಆದುದರಿಂದ ಈ ಶ್ಲೋಕಗಳಿಗೆ ಶಾರೀರಕ ಸೂತ್ರಾಭಿಪ್ರಾಯಾನುಸಾರವಾಗಿ ಅರ್ಥ ಹೇಳತಕ್ಕದ್ದು. ಅಂತಹ ಸಮಂಜಸಾರ್ಥವನ್ನು ಶ್ರೀ ಭಾಷ್ಯಕಾರರು ದಯಪಾಲಿಸಿರುತ್ತಾರೆ. ಅವರಭಿಪ್ರಾಯವೇನೆಂದರೆ :—ಕಾಲಶಬ್ದವು ಕಾಲಾಭಿಮಾನ ದೇವತೆಗಳನ್ನು ಹೇಳುವದರಿಂದಲೂ, ಆ ದೇವತೆಗಳ ಮೂಲಕವಾಗಿ ದೇಹಾವಸಾನವನ್ನು ಹೊಂದಿದ ಆತ್ಮನು ಹೋಗುವದರಿಂದಲೂ, ಇಲ್ಲಿ ಕಾಲಶಬ್ದವು ಆತ್ಮನು ಹೋಗುವ ಗತಿಯನ್ನು ಬೋಧಿಸುತ್ತದೆ. **ಯೋಗಿನಃ** ಎಂದರೆ ಇಲ್ಲಿ ಮೋಕ್ಷಕ್ಕಾಗಿ ಯೋಗದಲ್ಲಿರುವನನ್ನು ಮಾತ್ರವೇ ಬೋಧಿಸಲಿಲ್ಲವು, ನಾನಾವಿಧ ಉಪಾಸಕರು ಬೋಧಿಸಲ್ಪಟ್ಟರು. ಯಾವ ಮಾರ್ಗದಿಂದ ಹೋಗಿ ಅನಾವೃತ್ತಿಯನ್ನೂ, ಯಾವ ಮಾರ್ಗದಿಂದ ಆವೃತ್ತಿಯನ್ನೂ ಸಹ ಹೊಂದುವರೋ ಅಂತಹ ಮಾರ್ಗಗಳು ಯಾವುದೆಂಬುದನ್ನು ಹೇಳುವನು, ಓ ಭರತಕುಲಶ್ರೇಷ್ಠನಾದ ಅರ್ಜುನನೇ ಕೇಳು ಎಂಬುದು "ಯತ್ರಕಾಲೇ" ಎಂಬ ಶ್ಲೋಕಾಭಿಪ್ರಾಯವು. ಮೊದಲು **ಅರ್ಚಿರಾದಿ ಗತಿಯನ್ನು** "**ಅಗ್ನಿರ್ಜ್ಯೋತಿಃ**" ಎಂಬ ಶ್ಲೋಕದಿಂದ ವಿವರಿಸಿ, ಇದಕ್ಕೆ ಅನಾವೃತ್ತಿಯನ್ನು ಹೇಳುತ್ತಾರೆ. ಮೋಕ್ಷಾರ್ಥಿಯಾದ ಉಪಾಸಕನಿಗೆ, **ಅರ್ಚಿರ್ಜ್ಯೋತಿಃ** - ಅಗ್ನಿರೂಪವಾದ ಜ್ಯೋತಿಸ್ಸು, ಇದರಿಂದ ಅರ್ಚಿಯು ಹೇಳಲ್ಪಟ್ಟಿತು, ಅಹಸ್ಸೂ, ಶುಕ್ಲಪಕ್ಷ, ಉತ್ತರಾಯಣ, ಈ ಕಾಲಾಭಿಮಾನ ದೇವತೆಗಳ ಮೂಲಕ ಗತಿಯುಳ್ಳ, **ಬ್ರಹ್ಮವಿದೋ ಜನಾಃ** - ಬ್ರಹ್ಮವಿತ್ತುಗಳು, **ಬ್ರಹ್ಮ ಗಚ್ಛನ್ತಿ** - ಪರಬ್ರಹ್ಮವನ್ನು ಹೊಂದುವರು. ಇದಕ್ಕೆ ದೇವಯಾನವೆಂದು

ಸಮಯತ್ತಿಲೇ, (೩) "ಅಪ್ರಚ್ಯುತ ಪೂರ್ವ ಸಂಸ್ಕಾರ ಮನೋರಥ" ನಾಪ್ಪಡಿಪಣ್ಣಿ, ತತ್ಕಾಲೇ.

ಹೆಸರು. ಮುಂದಿನ ಶ್ಲೋಕದಿಂದ ಧೂಮಾದಿ ಗತಿಯು ಹೇಳಲ್ಪಡುತ್ತದೆ. **ಧೂಮಃ** - ಹೊಗೆಯೂ, ರಾತ್ರಿಯೂ, ಕೃಷ್ಣಪಕ್ಷವೂ, ಉತ್ತರಾಯಣವೂ, ಈ ದೇವತೆಗಳ ಮೂಲಕ ಹೋಗುವ, **ಯೋಗೀ** - ಉಪಾಸಕನು, **ಚಾಂದ್ರಮಸಂ ಜ್ಯೋತಿಃ** - ಚಂದ್ರಲೋಕವನ್ನು, **ಪ್ರಾಪ್ಯ** - ಹೊಂದಿ, **ನಿವರ್ತತೇ** - ಹಿಂತಿರುಗಿ ಬರುವನು. ಹೀಗೆ **ಶುಕ್ಲ ಕೃಷ್ಣ ಗತೀಹ್ಯೇತೇ** - ದೇವಯಾನವಾದ ಅರ್ಚಿರಾದಿ ಗತಿಯೊಂದು, ಪಿತೃಯಾಣವಾದ ಧೂಮಾದಿ ಗತಿಯೊಂದು, ಹೀಗೆ ಎರಡು ಮಾರ್ಗಗಳು ದೇಹಾವಸಾನ ಉಂಟಾದವನಿಗೆ ಎಂದು ಹೇಳಲ್ಪಟ್ಟಿರುತ್ತದೆ. ಇದರಿಂದ ಕಾಲವೆಂದರೆ ಕಾಲಾಭಿಮಾನ ದೇವತೆಯ ಮಾರ್ಗವೆಂದೇ ಅರ್ಥ ಹೇಳತಕ್ಕದ್ದು. ಕಾಲಶಬ್ದವು ಕಾಲವನ್ನೇ ಬೋಧಿಸಿದುದಾದರೆ ಗತಿಯೊಂದಿಗೆ ಸಾಮಾನಾಧಿಕರಣ್ಯವೂ, ಯದಾ ತದಾ ಎಂದು ಹೇಳದೆ ಯತ್ರ ತತ್ರ ಎಂದು ಪ್ರದೇಶ ಬೋಧಕತ್ವವೂ ಕೂಡುವದಿಲ್ಲವು. ಆದರೆ ಭೀಷ್ಮಾದಿಗಳು ದೇಹತ್ಯಾಗಕ್ಕೆ ಉತ್ತರಾಯಣ ಕಾಲ ನಿರೀಕ್ಷಣೆ ಮಾಡಿದರೆಂದು ಇದೆಯಲ್ಲಾ ಎಂದರೆ ಅವರು ಯೋಗಪ್ರಭಾವಮೂಲಕ ತಮ್ಮಿಷ್ಟಾನುಸಾರ ಮರಣಹೊಂದುವರಾದ ಪ್ರಯುಕ್ತ ಧರ್ಮಪ್ರವರ್ತನೆಗಾಗಿ ಉತ್ತರಾಯಣಪ್ರಾಶಸ್ತ್ಯವನ್ನು ಪ್ರಕಟಿಸುವದಕ್ಕಾಗಿ ಹಾಗೆ ನಿರೀಕ್ಷಿಸಿದರು. ಅದು ಅವರಿಗೆ ಆವಶ್ಯಕವಲ್ಲವು.

ಆದುದರಿಂದ ಪ್ರಪನ್ನನ ನಿರ್ಯಾಣಕ್ಕೆ ಕಾಲನಿಯಮಗಳು ಯಾವುವೂ ಇಲ್ಲವು. ಹಾಗೆಯೇ ದೇಶ, ರೀತಿ ಇವುಗಳ ನಿಯಮವೂ ಇಲ್ಲವೆಂದು ಮುಂದೆ ಉಪದೇಶಿಸಲ್ಪಡುತ್ತದೆ. ಆ ಕಾರಣದಿಂದ, **ಪಗಲ್‌ಗಳಿಲೇಯಾದಲ್, ರಾತ್ರಿಗಳಿಲೇಯಾದಲ್** ಎಂದು ಯಾವುದಾದರೂ ಆಗಬಹುದೆಂದು ಹೇಳಿರುತ್ತಾರೆ. **ತಾನ್ ಸಙ್ಕಲ್ಪಿತ್ತ ಸಮಯತ್ತಿಲೇ** - ಈಶ್ವರನಾದ ತಾನು ಸಂಕಲ್ಪಿಸಿದ ಸಮಯದಲ್ಲಿ **ಅಪ್ರಚ್ಯುತ** - ಜಾರಿಹೋಗದ ಎಂದರೆ ತಪ್ಪಿಹೋಗದ, **ಪೂರ್ವ ಸಂಸ್ಕಾರ** - ಹಿಂದೆ ಇದ್ದ, ಸರ್ವೇಶ್ವರನಿಗೆ ಕೈಂಕರ್ಯ ಮಾಡಬೇಕೆಂಬ ಸಂಸ್ಕಾರವೇನು, **ಮನೋರಥನಾಪ್ಪಡಿ** - ಮೋಕ್ಷ ಬೇಕೆಂಬಾಶೆಯೇನು, ಇವುಗಳನ್ನು ಳ್ಳವನಾಗಿ **ಪಣ್ಣಿ** - ಮಾಡಿ, ಎಂದರೆ ಅವುಗಳು ಮರೆತುಹೋಗದ ಹಾಗೆ ಮಾಡಿ ; ಹೀಗೆ ಈ ಆರು ವಿಧ ಉಪಕಾರಗಳನ್ನು ನಿರ್ಯಾಣಕ್ಕೆ ಪೂರ್ವಭಾವಿಯಾಗಿ ಈ ಪ್ರಪನ್ನನಿಗೆ ಉಂಟುಮಾಡುವನೆಂದು ಹೇಳಿ ಮುಂದೆ ನಿರ್ಯಾಣಕ್ರಮವನ್ನೂ ಆ ಕಾಲದಲ್ಲಿ

---

(೩) ಶ್ರೀ ಭಾಷ್ಯಕಾರರ ಶರಣಾಗತಿ ಗದ್ಯ.

ನಿರ್ಯಾಣಕ್ರಮಃ ; ಸರ್ವೇಶ್ವರಸ್ಯ ಮಹೋಪಕಾರಾಶ್ಚ.

(೭) **ಶಿರೈಕಿಡನ್ದ ರಾಜಕುಮಾರ್ರ ತಿರತ್ತಿಲ್ ಪ್ರಸನ್ನನಾನ ರಾಜಾ, ವಿಲಙ್ಗು ವೆಟ್ಟಿಚ್ಚಿರೈಕ್ಕೂಡತ್ತಿಲ್ ನಿನ್ರುಮ್ ಕೊಣ್ಡು ಪುರಪ್ಪಡಮಾಪ್ಪೋಲೆ ಪ್ರಶಸ್ತಾಪ್ರಶಸ್ತ ನಿಯಮಮರ ತತ್ಕಾಲೋಪಸ್ಥಿತಮಾಯಿರುಪ್ಪ ದೇದೇನು ಮೊರು ಶರೀರವಿಶ್ಲೇಷ ನಿಮಿತ್ತತ್ತೈಯುಂಡಾಕ್ಕಿ,**

ಮಾಡುವ ಸರ್ವೇಶ್ವರನ ಮಹೋಪಕಾರಗಳನ್ನೂ ತಿಳಿಸುತ್ತಾರೆ.

ನಿರ್ಯಾಣಕ್ರಮವೂ, ಆ ಕಾಲದಲ್ಲಿ ಸರ್ವೇಶ್ವರನ ಮಹೋಪಕಾರವೂ.

(೭) ಈ ಏಳನೆಯ ಉಪಕಾರ ನಿರೂಪಣವನ್ನು ಒಂದು ದೃಷ್ಟಾಂತ ಮೂಲಕ ತಿಳಿಸುತ್ತಾರೆ:—ಒಂದು ವೇಳೆ ದುರ್ಮರಣಾದಿಗಳು ಪ್ರಾಪ್ತವಾದರೆ, ಅದು ದುಷ್ಟಫಲಸೂಚಕವಲ್ಲವೇ? ಇತರಾಧಿಕಾರಿಗಳಿಗೆ ಹಾಗೆ, ಪ್ರಪನ್ನನಿಗೆ ಹಾಗಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಆದರೆ ಪ್ರಪನ್ನನಿಗೆ ಯೋಗ್ಯವಾದ ಶರೀರವಿಶ್ಲೇಷಕ್ರಮದಿಂದ ನಿರ್ಯಾಣವನ್ನುಂಟುಮಾಡುವದು ಕೃಪಾಸಾಗರನ ಕರ್ತವ್ಯವಲ್ಲವೇ ಎಂದರೆ ಇಂತಹ ನಿರ್ಯಾಣಕ್ರಮವೂ ಪ್ರಾರಬ್ಧಾನುಗುಣವಾಗಿ ಈಶ್ವರಸಙ್ಕಲ್ಪದಿಂದ ನಡೆಯುವದರಿಂದ, ದೇಹಾವಸಾನವು ಪ್ರಶಸ್ತವಾದುದೇಯಾಗಲಿ ಅಪ್ರಶಸ್ತವಾದುದೇಯಾಗಲಿ ಆಗಬಹುದೆಂದು ಮುಂದಿನ ವಾಕ್ಯದಿಂದ ತಿಳಿಸಿ, ಫಲದಲ್ಲೇನೂ ವ್ಯತ್ಯಾಸವಿಲ್ಲವೆಂದುಪದೇಶಿಸುತ್ತಾರೆ:—

ಶಿರೈ ಕಿಡನ್ದ - ಕಾರಾಗೃಹದಲ್ಲಿರುವ, **ರಾಜಕುಮಾರ್ರ ತಿರತ್ತಿಲ್** - ರಾಜಪುತ್ರನ ವಿಷಯದಲ್ಲಿ, **ವಿಲಙ್ಗು ವೆಟ್ಟಿ** - ಬೇಡಿಯನ್ನು ಛೇದಿಸಿ, **ಶಿರೈಕೂಡತ್ತಿಲ್ ನಿನ್ರುಮ್** - ಕಾರಾಗೃಹದ ದೆಶೆಯಿಂದ, **ಪುರಪ್ಪಡುಮಾಪ್ಪೋಲೆ** - ಹೊರಗೆ ಹೊರಟುಬರುವ ಹಾಗೆ, **ಪ್ರಶಸ್ತಾಪ್ರಶಸ್ತ ನಿಯಮಮರ** - ಈ ದೇಶ ಕಾಲಗಳು ಪ್ರಶಸ್ತವಾದವು, ಇವು ಪ್ರಶಸ್ತವಲ್ಲವೆಂಬ ನಿಯಮಗಳೇನೂ ಇಲ್ಲದೆ, **ತತ್ಕಾಲೋಪಸ್ಥಿತಮಾಯಿರುಪ್ಪದು** - ಆ ನಿರ್ಯಾಣಕಾಲಕ್ಕೆ ಒದಗಿರುವದು, **ಏದೇನು ಮೊರು** - ಯಾವುದಾದರೂ ಒಂದು, **ಶರೀರ ವಿಶ್ಲೇಷ ನಿಮಿತ್ತತ್ತೈಯುಂಡಾಕ್ಕಿ** - ಈ ಸ್ಥೂಲದೇಹವನ್ನು ಬಿಟ್ಟುಹೋಗಲು ಒಂದು ಕಾರಣ (ವ್ಯಾಜ) ವನ್ನುಂಟುಮಾಡಿ, ಈ ಮೇಲಿನ ವಾಕ್ಯಖಂಡದಿಂದ ಪ್ರಪನ್ನನ ದೇಹತ್ಯಾಗಕ್ಕೆ ದೇಶ, ಕಾಲ, ರೀತಿಗಳು ಪ್ರಶಸ್ತವಾದವುಗಳಾಗಿಯೇ ಇರಬೇಕೆಂಬ ನಿಯಮವಿಲ್ಲವೆಂದುಪದೇಶಿಸಿರುತ್ತಾರೆ. ಪ್ರಪನ್ನನಾದ ಪ್ರಯುಕ್ತ "**ಅಹಂ**

ವಿದ್ವದವಿದ್ವತ್ಸಾಧಾರಣೋತ್ಕ್ರಾಂತಿ ಕ್ರಮಃ.

(೮) ವಾಗಾದಿಗಳಾನ ಬಾಹ್ಯೇಂದ್ರಿಯಙ್ಗಳ್ ಪತ್ತೈಯುಮ್

ಸ್ಮರಾಮಿ ಮದ್ಭಕ್ತಂ" ಎಂದು ವಾರಾಹ ಚರಮಶ್ಲೋಕದಲ್ಲಿ ಹೇಳಿರುವ ಹಾಗೆ ಸರ್ವೇಶ್ವರನು ಸ್ಮರಿಸುವದರಿಂದ ಈತನನ್ನು ಅಪ್ರಚ್ಯುತ ಪೂರ್ವಸಂಸ್ಕಾರ ಮನೋರಥನನ್ನಾಗಿ ಮಾಡುವನು. ಹಿಂದೆ ಉಂಟಾಗಿದ್ದ ಭಗವತ್ಕೈಂಕರ್ಯದಲ್ಲೂ ಮೋಕ್ಷ ಪ್ರಾಪ್ತಿಯಲ್ಲೂ ಅಭಿರುಚಿಯು ತಪ್ಪದ ಹಾಗೆ ಮಾಡುವನು. ಈತನಿಗೆ ಸ್ಥೂಲ ದೇಹ ಬಂಧವನ್ನು ತಪ್ಪಿಸಿ ಪುನಃ ಬಂಧವುಂಟಾಗದ ಹಾಗೆ ಮಾಡತಕ್ಕದ್ದು ಈ ಮಹೋಪಕಾರಕನ ಕರ್ತವ್ಯವು. ಆದುದರಿಂದ ಸ್ಥೂಲದೇಹ ವಿಯೋಗಕ್ಕೆ ಪ್ರಪನ್ನನಿಗೆ ಯಾವುದೊಂದು ದೇಶಕಾಲ ರೀತಿಗಳ ನಿಯಮವೂ ಇಲ್ಲವು ಅಂತೂ ದೇಹವು ತೊಲಗಿ ಹೋಗುವದಕ್ಕೆ ಒಂದು ಕಾರಣ ಬೇಕು, ಅದು ಪ್ರಶಸ್ತವಾದ ದೇಶಕಾಲ ರೀತಿಗಳೇ ಆಗಲಿ, ಪ್ರಶಸ್ತವಲ್ಲದವುಗಳೇಯಾಗಲಿ ಚಿಂತೆಯಿಲ್ಲವು ಇದಕ್ಕೆ ಒಂದು ನಿದರ್ಶನವನ್ನು ಸೂಚಿಸಿರುತ್ತಾರೆ. ರಾಜಕುಮಾರನಾದರೂ ಏನೋ ತಪ್ಪು ಮಾಡಿದುದರಿಂದ ಕಾರಾಗೃಹದಲ್ಲಿಟ್ಟು ರಾಜನು ಬೇಡಿ ಹಾಕಿಸಿರುತ್ತಾನೆ. ಈಗ ರಾಜನನುಗ್ರಹ ಪ್ರಾಪ್ತವಾದುದರಿಂದ, ಆ ಬೇಡಿಯನ್ನು ಕತ್ತರಿಸಿ ಕಾರಾಗೃಹದಿಂದ ಹೊರಗೆ ಬಿಡುವ ಕಾಲವು ಒದಗಿರುವಾಗ, ಆ ಬೇಡಿಯನ್ನು ಕಡಿದುಹಾಕಲು, ಇದು ಪ್ರಶಸ್ತ ಕಾಲ ದೇಶ ರೀತಿ ಎಂದೂ, ಇದಲ್ಲವೆಂದೂ, ಯೋಚಿಸುವ ಆವಶ್ಯಕತೆ ಹೇಗೆ ಯಿಲ್ಲವೋ, ಹಾಗೆಯೇ ರಾಜರಾಜನಾದ ಸರ್ವೇಶ್ವರನ ನಿಗ್ರಹಕ್ಕೆ ಪಾತ್ರನಾಗಿ ಸಂಸಾರ ಬಂಧಕ್ಕೆ ಸಿಲುಕಿದ ಜೀವಾತ್ಮನಿಗೆ ಆ ರಾಜಾಧಿರಾಜನ ಕೃಪೆಯು ಒದಗಿ ಸಂಸಾರಬಂಧವೆಂಬ ಬೇಡಿಯ ವಿಚ್ಛೇದನವು ಯಾವ ದೇಶದಲ್ಲಿ ಯಾವ ಕಾಲದಲ್ಲಿ ಯಾವ ರೀತಿಯಲ್ಲಿ ಪ್ರಾಪ್ತವಾದರೂ ಏನೂ ವ್ಯತ್ಯಾಸವಿಲ್ಲವೆಂಬ ಭಾವವು.

ಹೀಗೆ ಉಪೋದ್ಘಾತ ರೂಪದಲ್ಲಿ ಈ ಅಧಿಕಾರಕ್ಕೆ ಸಂಬಂಧಪಟ್ಟವುಗಳನ್ನೆಲ್ಲಾ ಸೂಚಿಸಿ, ಪ್ರಕೃತ ಅಧಿಕಾರಾರ್ಥವಾದ ನಿರ್ಯಾಣಕ್ರಮವನ್ನು ವಿಶದವಾಗಿ ತಿಳಿಸುತ್ತಾರೆ :—

ಪ್ರಪನ್ನಾಪ್ರಪನ್ನರುಗಳಿಗೆ ಸಾಧಾರಣವಾದ ಉತ್ಕ್ರಾಂತಿ ಕ್ರಮವು.

(೮) ವಾಗಾದಿಗಳಾನ-ವಾಕ್ಕೇ ಮೊದಲಾದ, ಬಾಹ್ಯೇಂದ್ರಿಯಙ್ಗಳ್-ಕರ್ಮೇಂದ್ರಿಯಗಳೆಂದೂ ಬಾಹ್ಯೇಂದ್ರಿಯಗಳೆಂದೂ ಹೀಗೆ ಹತ್ತನ್ನೂ ಮನಸ್ಸಿನಲ್ಲಿ

ಮನಸ್ಸಿಲೇ ಶೇರ್ತ್ತು, ಇಪ್ಪಡಿ ಕರ್ಮಜ್ಞಾನೇಂದ್ರಿಯಙ್ಗಳೆಲ್ಲಾ ತ್ತೋಡು ವ್ ಕೂಡಿನ ಮನಸ್ಸೈ ಪ್ರಾಣವಾಯುವ್ವೋಡೆ ಶೇರ್ತ್ತು, ಇಪ್ಪಡಿ ಪದಿನೊರು ಇಂದ್ರಿಯಙ್ಗಳೋಡುಮ್ ಕೂಡಿನ ಪ್ರಾಣವಾಯುವೈ ಜೀವನೋಡುಶೇರ್ತ್ತು, ಪ್ರಾಣೇಂದ್ರಿಯಸಂಯುಕ್ತನಾನ ಜೀವನೈ ತ್ರಿಸ್ಥೂಣ ಕ್ಷೋಭದಶೈಯಿಲೇ ಸ್ಥೂಲದೇಹತ್ತಿಲ್ ನಿನ್ರುಮ್ ಕಡೈನ್ದೆಡುತ್ತ ಪಂಚಭೂತಸೂಕ್ಷ್ಮಙ್ಗಳೋಡೆ ಶೇರ್ತ್ತು, ಇಪ್ಪಡಿ ಇಂದ್ರಿಯಪ್ರಾಣಭೂತಸೂಕ್ಷ್ಮಸಂಯುಕ್ತನಾನ ಜೀವನೈ ನಿಸರ್ಗ ಸೌಹಾರ್ದಮುಡೈಯ ಹಾರ್ದ

ಸೂಕ್ಷ್ಮದೆಶೆಯಲ್ಲಿ ಸೇರಿಸಿ, **ಇಪ್ಪಡಿ** - ಈ ರೀತಿಯಲ್ಲಿ, **ಕರ್ಮಜ್ಞಾನೇಂದ್ರಿಯಙ್ಗಳೆಲ್ಲಾ ತ್ತೋಡುಮ್** - ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಇವುಗಳೊಂದಿಗೆ ಸೇರಿದ ಮನಸ್ಸನ್ನು, **ಪ್ರಾಣವಾಯುವ್ವೋಡೆ ಶೇರ್ತ್ತು**- ಪ್ರಾಣವಾಯುವಿನೊಂದಿಗೆ ಸೇರಿಸಿ, **ಇಪ್ಪಡಿ ಪದಿನೊರು ಇಂದ್ರಿಯಙ್ಗಳೋಡುಮ್ ಕೂಡಿನ ಪ್ರಾಣವಾಯುವೈ** - ಹೀಗೆ ಈ ಹನ್ನೊಂದು ಇಂದ್ರಿಯಗಳಿಂದಲೂ ಕೂಡಿದ ಪ್ರಾಣವಾಯುವನ್ನು, **ಜೀವನೋಡು ಶೇರ್ತು** - ಜೀವಾತ್ಮನೊಂದಿಗೆ ಸೇರಿಸಿ, **ಪ್ರಾಣೇನ್ದ್ರಿಯ ಸಂಯುಕ್ತನಾನ ಜೀವನೈ** - ಹೀಗೆ ಪ್ರಾಣ, ಹನ್ನೊಂದು ಇಂದ್ರಿಯಗಳೂ ಇವುಗಳಿಂದ ಸೇರಿದ ಜೀವಾತ್ಮನನ್ನೂ, **ತ್ರಿಸ್ಥೂಣ ಕ್ಷೋಭ ದಶೈಯಿಲೇ** - ತ್ರಿಸ್ಥೂಣವೆಂದರೆ ಬೆನ್ನಿನಲ್ಲಿರುವ ವಂಶವೆಂದು ಹೆಸರುಳ್ಳ ಮುಖ್ಯವಾದ ಮೂರಾದ ಎಲುಬು, ಅದಕ್ಕುಂಟಾಗುವ ಕ್ಲೇಶದ ದೆಶೆಯಲ್ಲಿ, **ಸ್ಥೂಲ ದೇಹತ್ತಿಲ್ ನಿನ್ರುಮ್** - ಈಗ ನಾವು ಹೊಂದಿರುವ ಸ್ಥೂಲದೇಹದಿಂದ (ಕಣ್ಣಿಗೆ ಕಾಣುವ ದೇಹವು ಸ್ಥೂಲದೇಹವೆಂದೂ ಕಣ್ಣಿಗೆ ಕಾಣದಿರುವ ದೇಹವು ಸೂಕ್ಷ್ಮದೇಹವೆಂದೂ ಎನಿಸುತ್ತವೆ ;) **ಕಡೈನ್ದೆಡುತ್ತ** - ಮಥನ ಮಾಡಿ ತೆಗೆದ, **ಪಂಚಭೂತಸೂಕ್ಷ್ಮಙ್ಗಳೋಡು ಶೇರ್ತ್ತು** - ಸೂಕ್ಷ್ಮದೆಶೆಯಲ್ಲಿರುವ ಪಂಚಭೂತಗಳೊಂದಿಗೆ ಸೇರಿಸಿ, **ಇಪ್ಪಡಿ** - ಈ ಮೇಲೆ ಹೇಳಿದ ಪ್ರಕಾರವಾಗಿ, **ಇಂದ್ರಿಯ** - ಏಕಾದಶೇಂದ್ರಿಯಗಳೇನು, **ಪ್ರಾಣ** - ಪಂಚಪ್ರಾಣವೇನು, **ಭೂತಸೂಕ್ಷ್ಮ** - ಪಂಚಭೂತಗಳು ಅತಿ ಸೂಕ್ಷ್ಮದೆಶೆಯಲ್ಲಿರುವವುಗಳೇನು, ಇವುಗಳಿಂದೆಲ್ಲಾ, **ಸಂಯುಕ್ತನಾನ ಜೀವನೈ**-ಸೇರಿದ ಜೀವಾತ್ಮನನ್ನು, **ನಿಸರ್ಗ ಸೌಹಾರ್ದಮುಡೈಯ** - ಏನೊಂದೂ ವ್ಯಾಜದಿಂದಲ್ಲದೆ ಸ್ವಾಭಾವಿಕವಾಗಿಯೇ ಸರ್ವಸ್ಯಶರಣಂ ಸುಹೃತ್ ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಪರಮ ಮೈತ್ರೀಭಾವವನ್ನು ಹೊಂದಿ ಹಿತವನ್ನು ಮಾಡುತ್ತಿರುವ, ಆ ಕಾರಣದಿಂದಲೇ, **ಹಾರ್ದನಾನ ತ್ತ ಪಕ್ಕಲಿಲೇ** - ಹೃದಯಾಯತನದಲ್ಲೇ ಹಾರ್ದಾವ

ನಾನ ರ್ತ ಪಕ್ಕಲಿಲೇ ಇಳೈಪ್ಪಾತ್ತಿ, ಇಪ್ಪಡಿ ಸ್ಥೂಲಶರೀರತ್ತಿಲ್ ನಿನ್ರು ವ್ ವಿದ್ವದವಿದ್ವತ್ಸಾಧಾರಣಮಾನ ಉತ್ಕ್ರಾಂತಿ ಕ್ರಮತ್ತೈ ನಡತ್ತಿ,

---

ತಾರಿಯಾಗಿ ಬಿಜ ಮಾಡಿಸಿರುವ ತನ್ನಲ್ಲೇ, **ಇಳೈಪ್ಪಾತ್ತಿ** - ಉತ್ಕ್ರಮಣ ಕಾಲದ ಆಯಾಸ ಪರಿಹಾರ ಮಾಡಿ, **ಇಪ್ಪಡಿ** - ಈಗ ಮೇಲೆ ವಿವರಿಸಿದ ರೀತಿಯಲ್ಲಿ, **ಸ್ಥೂಲಶರೀರತ್ತಿಲ್ ನಿನ್ರುವ್** - ಈಗ ಕಣ್ಣಿಗೆ ಕಾಣುವ ಸ್ಥೂಲವಾದ ಶರೀರದ ದೆಸೆಯಿಂದ, **ವಿದ್ವದವಿದ್ವತ್ಸಾಧಾರಣಮಾನ** - ಭಕ್ತಿಪ್ರಪತ್ತ್ಯುಪಾಯಾನುಷ್ಠಾನ ಮಾಡಿದ ಬ್ರಹ್ಮವಿತ್ತಾದ ಪ್ರಪನ್ನನಿಗೂ ಅಪ್ರಪನ್ನನಿಗೂ ಸಾಧಾರಣವಾದ, **ಉತ್ಕ್ರಾಂತಿ ಕ್ರಮತ್ತೈ ನಡತ್ತಿ** - ಮೇಲೆ ವಿವರಿಸಿದ ಹಾಗೆ ದೇಹವನ್ನು ಬಿಟ್ಟುಹೋಗುವ ಕ್ರಮವನ್ನು ನಡೆಸಿಕೊಟ್ಟು; ಈ ಭೂತಕೃದ್ವಾಚಿಗಳಿಗೆಲ್ಲಾ "**ಸರ್ವೇಶ್ವರ್ರ**" ಎಂಬುವದೇ ಕರ್ತೃಪದವು. ಈ ಮೇಲಿನ ಲನೆಯ ವಾಕ್ಯಖಂಡದಿಂದ ಪ್ರಪನ್ನನಿಗೂ ಅಪ್ರಪನ್ನನಿಗೂ ಸಮವಾದ ಉತ್ಕ್ರಾಂತಿ ಕ್ರಮವನ್ನುಪದೇಶಿಸುತ್ತಾರೆ:— ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಹೀಗೆ ದಶೇಂದ್ರಿಯಗಳೂ ಮನಸ್ಸಿನಲ್ಲಿ ಸೂಕ್ಷ್ಮದೆಶೆಯಲ್ಲಿ ಸರ್ವೇಶ್ವರ ಸಂಕಲ್ಪದಿಂದ ಹೋಗಿ ಸೇರುತ್ತವೆ. **ವಾಗಾದಿಗಳಾನ ಬಾಹ್ಯೇಂದ್ರಿಯಙ್ಗಳ್ ಪತ್ತೈಯುಮ್ ಮನಸ್ಸಿಲೆ ಶೇರ್ತು** ಎಂಬುದು **ಮನಸಿಕರಣಗ್ರಾಮಂ** ಎಂದು ಸಂಗ್ರಹಶ್ಲೋಕದಲ್ಲಿರುವದರ ವ್ಯಾಖ್ಯಾನವು; ಇದು "**ವಾಙ್ಮನಸಿ ದರ್ಶನಾಚ್ಛಬ್ದಾಚ್ಚ**" (ಶಾ. ಸೂ. ೪. ೨. ೧) ಮತ್ತು "**ಅತ ಏವ ಸರ್ವಾಣ್ಯನು**" (ಶಾ. ಸೂ. ೪. ೨. ೨) ಎಂಬೆರಡು ಸೂತ್ರಗಳಭಿಪ್ರಾಯವಾಗಿರುತ್ತದೆ. ಅಲ್ಲಿಂದ ಈ ಹತ್ತು ಇಂದ್ರಿಯಗಳಿಂದ ಸೇರಿದ ಮನಸ್ಸು, ಈ ಹನ್ನೊಂದೂ ಪಂಚಪ್ರಾಣದೊಂದಿಗೆ ಸೂಕ್ಷ್ಮದೆಶೆಯಲ್ಲಿ ಸೇರುತ್ತದೆಂದು "**ಇಪ್ಪಡಿ ಪದನೊರು ಇಂದ್ರಿಯಙ್ಗಳೋಡುಮ್ ಕೂಡಿನಮನಸ್ಸೈ ಪ್ರಾಣವಾಯುವೋಡೆ ಶೇರ್ತ್ತು**" ಎಂಬುವದರಿಂದ ತಿಳಿಸುತ್ತಾರೆ. ಇದು **ಪ್ರಾಣೇ ಮನಃ** ಎಂಬ, ಮತ್ತು "**ತನ್ಮನಃ ಪ್ರಾಣ ಉತ್ತರಾತ್**" (ಶಾ. ಸೂ. ೪ ೨. ೩) ಎಂಬ ಸೂತ್ರಗಳ ವ್ಯಾಖ್ಯಾನವು ಅಲ್ಲಿಂದ ಹೀಗೆ ಇಂದ್ರಿಯ ಮನಸ್ಸಿನಿಂದ ಶೇರಿದ ಪ್ರಾಣವು ಸೂಕ್ಷ್ಮದೆಶೆಯಲ್ಲಿ ಜೀವನನ್ನು ಸೇರುತ್ತದೆಂದು ಹೇಳುತ್ತಾರೆ. ಇದು **ಪುರುಷೇ ಚ ತಂ** ಎಂಬ ಸಂಗ್ರಹಶ್ಲೋಕದ, ಮತ್ತು "**ಸೋಧ್ಯಕ್ಷೇ ತದುಪಗಮಾದಿಭ್ಯಃ**" (ಶಾ. ಸೂ. ೪. ೨. ೪) ಎಂಬುದರ ವ್ಯಾಖ್ಯಾನವು. ಅಲ್ಲಿಂದ ಮುಂದೆ, ಈ ಇಂದ್ರಿಯಗಳು, ಮನಸ್ಸು, ಪ್ರಾಣಗಳಿಂದ ಸೇರಿದ ಜೀವಾತ್ಮನು **ಪಂಚಭೂತ**

ವಿದ್ವದ ವಿದ್ವನ್ನಾಡೀಪ್ರವೇಶಕ್ರಮೇ ವ್ಯತ್ಯಾಸಃ

(೯) "ಅನನ್ತಾ ರಶ್ಮಯ ಸ್ತಸ್ಯ ದೀಪವದ್ಯ ಸ್ಸ್ಥಿತೋಹೃದಿ । ಸಿತಾ

ಸೂಕ್ಷ್ಮಗಳೊಂದಿಗೆ ಸೇರುತ್ತದೆಂದು "ಭೂತೇಷ್ವೇನಂ" ಎಂಬುದನ್ನೂ "ಭೂತೇಷು ತಚ್ಛ್ರುತೇಃ" (ಶಾ. ಸೂ. ೪. ೨. ೫) ಎಂಬ ಸೂತ್ರವನ್ನೂ ವ್ಯಾಖ್ಯಾನ ಮಾಡಿ, **ಜೀವನ್ನೈ ಪಂಚಭೂತ ಸೂಕ್ಷ್ಮಙ್ಗಳೋಡೆ ಶೇರ್‌ತ್ತು** - ಎಂಬುದರ ಮೂಲಕ ತಿಳಿಸಿರುತ್ತಾರೆ. ಅಲ್ಲಿಂದ ಇಂದ್ರಿಯ, ಮನಸ್ಸು, ಪ್ರಾಣ, ಭೂತ ಸೂಕ್ಷ್ಮಗಳಿಂದ ಸೇರಿದ ಜೀವಾತ್ಮನು ಪರಮಾತ್ಮನಲ್ಲಿ ಸೇರುವನೆಂದು, **ಜೀವನ್ನೈ ತ್ತ ಪಕ್ಕಲಿಲ್ಲೈ ಇಳೈಪ್ಪಾತ್ತಿ** - ಎಂಬುದರ ಮೂಲಕ ಸೂಚಿಸುತ್ತಾರೆ. ಇದು **"ಪರೇಚ ತಮಾತ್ಮನಿ"** ಎಂಬುದರ ಮತ್ತು **"ತೇಜಃಪರಸ್ಯಾಂ ದೇವತಾಯಾಂ"** ಎಂಬ ಛಾಂದೋಗ್ಯ ಶ್ರುತಿ ಮತ್ತು **"ತಾನಿಪರೇ ತಥಾಹ್ಯಾಹ"** (ಶಾ. ಸೂ. ೪. ೨. ೧೪) ಎಂಬ ಸೂತ್ರಗಳಿಂದಲೂ ವ್ಯಕ್ತಪಡುತ್ತದೆ. ಈ ಪರಮಾತ್ಮನಲ್ಲಿ ಸೇರುವದೇನು ಜೀವನಿಗೆ ಜೀವನ್ಮುಕ್ತಿಯೋ ಅಥವಾ ಸ್ವರೂಪೈಕ್ಯವೇ ಇತ್ಯಾದಿ ಪೂರ್ವಪಕ್ಷಗಳು ಬಂದೀತಾಗಿ **"ಅವಿಭಾಗೋ ವಚನಾತ್"** ಎಂಬ (ಶಾ. ಸೂ. ೪. ೨. ೧೫) ಸೂತ್ರದಲ್ಲಿ ಬೇರೆಯಾಗದ ಹಾಗೆ ಅಪೃಥಕ್ಸಿದ್ಧವಿಶೇಷಣ ರೂಪದಲ್ಲಿ ಸೇರಿರುತ್ತದೆ ಎಂದು ಹೇಳಿರುತ್ತದೆ. ಹಾಗೆ ಸೇರಿರಲು ಕಾರಣವೇನೆಂದರೆ **"ಇಳೈಪ್ಪಾತ್ತು"** ವದಕ್ಕಾಗಿ ಎಂದು ಹೇಳಿರುತ್ತಾರೆ, ಎಂದರೆ ಆಗಿನ ದೇಹಾಯಾಸವು ಶಾಂತವಾಗುವುದಕ್ಕಾಗಿ. ಹೀಗೆ ಇವೆಲ್ಲವೂ ಒಟ್ಟಿಗೆ ಸೂಕ್ಷ್ಮದೆಸೆಯಲ್ಲಿ ಪರಮಾತ್ಮನೊಂದಿಗೆ ಸೇರುವ ತನಕ ನಡೆಯುವ ಕ್ರಮವು **ಪ್ರಪನ್ನಾ**ಪ್ರಪನ್ನ ಸಾಮಾನ್ಯ ವಿಷಯವೆಂದು ಹೇಳಿರುತ್ತಾರೆ. ನಾಡಿಯ ಮೂಲಕ ಸೂಕ್ಷ್ಮಶರೀರಯುಕ್ತನಾದ ಜೀವನು ಹಾರ್ದನಾದ ಪರಮಾತ್ಮನನ್ನು ಬಿಟ್ಟು, ನಾಡಿಯ ಮೂಲಕ ಹೊರಗೆ ಹೊರಡುವ ತನಕ ಪ್ರಾಪ್ತವಾಗುವ ಉತ್ಕ್ರಾಂತಿ ಕ್ರಮವು ಇಬ್ಬರಿಗೂ ಸಮಾನವೆಂದು ತಿಳಿಸಿರುತ್ತಾರೆ. ಇದು **"ಸಮಾನಾಚಾ ಸೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ"** (ಶಾ. ಸೂ. ೪. ೨. ೭) ಎಂಬ **ಸೂತ್ರ**ದಭಿಪ್ರಾಯವು. **ಆಸೃತ್ಯುಪಕ್ರಮಾತ್** - **ಪ್ರಪನ್ನ**ನಿಗೆ ಅರ್ಚಿರಾದಿ ಗತಿಯು ಪ್ರಾರಂಭವಾಗುವ ತನಕ, **ಸಮಾನಾಚ** - ವಿದ್ವದವಿದ್ವತ್ಸಾಧಾರಣವಾದುದೆಂಬಭಿಪ್ರಾಯವು.

---

(೯) ಯಾಜ್ಞ. ಸ್ಮೃ. ೪. ೧೧೬-೯.

ಸಿತಾಃ ಕದ್ರು ನೀಲಾಃ ಕಪಿಲಾಃ ಪೀತಲೋಹಿತಾಃ । ಊರ್ಧ್ವಮೇಕಸ್ಸ್ಥಿತ ಸ್ತೇಷಾಂ ಯೋಭಿತ್ವಾ ಸೂರ್ಯಮಂಡಲಮ್ । ಬ್ರಹ್ಮಲೋಕಮತಿಕ್ರಮ್ಯ

ಪ್ರಪನ್ನನಿಗೂ ಅಪ್ರಪನ್ನನಿಗೂ ನಾಡೀಪ್ರವೇಶದಲ್ಲಿರುವ ವ್ಯತ್ಯಾಸವು.

(೯) ಹಿಂದೆ ಪ್ರಪನ್ನನಿಗೂ ಅಪ್ರಪನ್ನನಿಗೂ ಸಮಾನವಾದ ಉತ್ಕ್ರಾಂತಿ ಕ್ರಮವು ಹೇಳಲ್ಪಟ್ಟಿತು. ಪರಮಾತ್ಮನೊಂದಿಗೆ ಸೇರಿಯಿದ್ದ, ಈ ಇಂದ್ರಿಯ, ಮನಸ್ಸು, ಪ್ರಾಣ, ಭೂತಸೂಕ್ಷ್ಮಗಳೊಂದಿಗೆ ಸೇರಿದ ಜೀವಾತ್ಮನು, ದೇಹವನ್ನು ಬಿಟ್ಟು ಹೊರಡುವಾಗ ನಾಡೀ ಮೂಲಕ ಹೊರಗೆ ಬರುವನು. ನಾಡಿಗಳು ೧೦೧ ಎಂದೂ, ಅವುಗಳಲ್ಲಿ ಒಂದು ಸುಷುಮ್ನಾ ಎಂದೂ ಅದರ ಮೂಲಕವಾಗಿ ಪ್ರಪನ್ನನಾದ ಚೇತನನು ಅರ್ಚಿರಾದಿ ಮಾರ್ಗದ ಮೂಲಕ ಪರಮಪದಕ್ಕೆ ಹೋಗುವನೆಂದೂ, ಇನ್ನು ನೂರು ನಾಡಿಗಳ ಮೂಲಕ ಹೊರಗೆ ಬಂದ ಅಪ್ರಪನ್ನಚೇತನರು ಧೂಮಾದಿ ಮಾರ್ಗವನ್ನು ಹೊಂದಿ ಪುನಃ ಬಂಧವನ್ನೇ ಹೊಂದುವರೆಂದೂ ಸಂಗ್ರಹಶ್ಲೋಕದಲ್ಲಿ "**ನಯತಿ ಪರಕೋ ನಾಡೀಭೇದೈ ರ್ಯಥೋಚಿತ ಮೀಶ್ವರಃ**" ಎಂಬ ಭಾಗವನ್ನು ಮುಂದಿನ ವಾಕ್ಯಖಂಡದಿಂದ ವ್ಯಾಖ್ಯಾನಮಾಡುವವರಾಗಿ, ಅದಕ್ಕೆ ಸ್ಮೃತಿಪ್ರಮಾಣವನ್ನು ಉದಾಹರಿಸಿ, ಸರ್ವೇಶ್ವರನ ಈ ಒಂಬತ್ತು ವಿಧ ಉಪಕಾರ ಪರಂಪರೆಗಳನ್ನು ಬೋಧಿಸುವ ಮಹಾವಾಕ್ಯವನ್ನು ನಿಗಮನ ಮಾಡಿ ಹೇಳುತ್ತಾರೆ. ಶ್ರೀ ಯಾಜ್ಞವಲ್ಕ್ಯರು ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲದ ಹಾಗೆ ಶ್ರುತ್ಯುಪಬ್ರಹ್ಮಣ ಮಾಡಿರುವದರಿಂದ ಅವರಭಿಪ್ರಾಯವನ್ನು ಉದಾಹರಿಸುತ್ತಾರೆ:—**ಯಃ** - ಯಾವ ಜೀವಾತ್ಮನು, **ದೀಪವತ್** - ದೀಪದ ಹಾಗೆ, **ಹೃದಿ** – ಹೃದಯಕಮಲದಲ್ಲಿ, ಸ್ಥಿತಃ - ಇರುತ್ತಾನೋ, **ತಸ್ಯ** - ಹಾಗೆ ಧರ್ಮಭೂತಜ್ಞಾನದಿಂದ ಪ್ರಕಾಶಿಸುವ ಜ್ಞಾನಸ್ವರೂಪನಾದ ಆತ್ಮನಿಗೆ, **ಅನಂತಾ ರಶ್ಮಯಃ** - ಅನೇಕ ಹೃದಯಕ್ಕೆ ಸಂಬಂಧಪಟ್ಟ ನಾಡಿಗಳುಂಟು; **ಅವುಗಳಲ್ಲಿ** ಕೆಲವು, ಸಿತಾಃ - ಬೆಳ್ಳಗಿರುವವು, ಇನ್ನು ಕೆಲವು, ಅಸಿತಾಃ-ಕಪ್ಪಾದವು, **ಕದ್ರು ನೀಲಾಃ** - ಕೆಲವು ಊದಾ ಬಣ್ಣವಾದವು, ಕೆಲವು ನೀಲೀ ಬಣ್ಣವಾದವು, **ಕಪಿಲಾಃ** - ಕೆಲವು ಬೂದು ಬಣ್ಣವಾದವು, ಪೀತಾಃ - ಕೆಲವು ಹಳದಿ ಬಣ್ಣವಾದವು, **ಲೋಹಿತಾಃ** - ಕೆಲವು ಕೆಂಪು ಬಣ್ಣದವು, **ತೇಷಾಂ**-ಅವುಗಳಲ್ಲಿ, **ಯಃ** - ಯಾವ ಪ್ರಸಿದ್ಧವಾದ, **ಏಕಃ** - ಒಂದಾದ, **ಊರ್ಧ್ವಂ** - ಮೇಲಕ್ಕೆ ಹರಡಿದುದಾಗಿ, ಸ್ಥಿತಃ - ಇರುತ್ತದೋ, **ತೇನ** - ಆ ನಾಡಿಯಿಂದ, ಇದಕ್ಕೆ **ಸುಷುಮ್ನಾ**

ತೇನ ಯಾಂತಿ ಪರಾಂಗತಿಮ್ । ಯದಸ್ಯಾನ್ಯದ್ರಶ್ಮಿಶತ ಮೂರ್ಧ್ವಮೇವ ವ್ಯವಸ್ಥಿತಮ್ । ತೇನ ದೇವ ಶರೀರಾಣಿ ಸಧಾಮಾನಿ ಪ್ರಪದ್ಯತೇ । ಯೇ ನೈಕ ರೂಪಾಶ್ಚಾಧಸ್ತಾ ದ್ರಶ್ಮಯೋऽಸ್ಯಮೃದುಪ್ರಭಾಃ । ಇಹ ಕರ್ಮೋಪ ಭೋಗಾಯ ತೈಸ್ಸಂಸರತಿ ಸೋऽವಶಃ” ಎಙ್ಗರ ಪಡಿಯೇ ಕಳ್ಳರ್ ಕೊಣ್ಡು ಪೋಮ್ ವಳಿಗಳ್ಪೋಲೆ, ಆತ್ಮಾಪಹಾರಿಗಳ್ ಸ್ವರ್ಗ ನರಕಙ್ಗಳುಕ್ಕು ಪ್ಪೋಮ್ ಮಾರ್ಗಾಂತರಙ್ಗಳುಕ್ಕು ಮುಖಙ್ಗಳಾನ ನಾಡೀವಿಶೇಷಙ್ಗಳಿಲ್ ಪೋಗಾದ ಪಡಿ ವಳಿ ವಿಲಕ್ಕಿ ಅರ್ಚಿರಾದಿ ಮಾರ್ಗತ್ತುಕ್ಕು ಮುಖಮಾನ

ಎಂದು ಹೆಸರು, **ತೇನ** - ಆದರಿಂದ, ಸೂರ್ಯಮಂಡಲವನ್ನು, **ಭಿತ್ವಾ**-ಭೇದಿಸಿ, ಎಂದರೆ ಪ್ರವೇಶಿಸಿ, ತನ್ಮೂಲಕವಾಗಿ, ಬ್ರಹ್ಮಲೋಕವನ್ನು, **ಅತಿಕ್ರಮ್ಯ** - ದಾಟಿ, **ಪರಾಂಗತಿಂ** - ಶ್ರೇಷ್ಠವಾದ ಗತಿಯನ್ನು ಎಂದರೆ ವೈಕುಂಠ ಲೋಕವನ್ನು, **ಯಾತಿ** - ಹೊಂದುವನು ; **ಅಸ್ಯ** - ಈ ಜೀವಾತ್ಮನಿಗೆ, **ಯತ್** - ಯಾವ, **ಅನ್ಯತ್** - ಇತರವಾದ, **ರಶ್ಮಿ ಶತಂ** - ನಾನಾ ಬಣ್ಣದ ನಾಡಿಗಳ ನೂರು, **ಊರ್ಧ್ವಮೇವ** - ಅವುಗಳೂ ಮೇಲಕ್ಕೆ ಹರಡುವವುಗಳಾಗಿ, **ವ್ಯವಸ್ಥಿತಂ** - ಇರುತ್ತದೋ, **ತೇನ** - ಆದರಿಂದ, **ಸಧಾಮಾನಿ** - ಆಯಾಯ ಲೋಕಗಳಿಂದ ಸೇರಿದ, **ದೇವಶರೀರಾಣಿ** - ಆಯಾಯ ದೇವತೆಗಳಿಗೆ ಯೋಗ್ಯವಾದ ಶರೀರ ಗಳನ್ನು, **ಪ್ರಪದ್ಯತೇ** - ಹೊಂದುವನು ; **ಯೇ** - ಯಾವ, **ನೈಕರೂಪಾಃ** - ಅನೇಕ ಬಣ್ಣಗಳುಳ್ಳ, **ಮೃದುಪ್ರಭಾಃ** - ಅಲ್ಪವಾದ ಪ್ರಕಾಶವುಳ್ಳ, **ರಶ್ಮಯಃ**- ನಾಡಿಗಳು, **ಅಸ್ಯ** - ಈ ಜೀವಾತ್ಮನಿಗೆ, **ಅಧಸ್ತಾತ್** - ಕೆಳಗೆ ಪ್ರಸರಿಸುವದಾಗಿ ವೆಯೋ, **ತೈಃ** - ಅವುಗಳ ಮೂಲಕವಾಗಿ, **ಸಃ** - ಆ ಜೀವಾತ್ಮನು. **ಅವಶಃ** - **ಕರ್ಮ**ವಶ್ಯನಾದವನಾಗಿ, **ಇಹ** - ಈ ಲೋಕದಲ್ಲೇ, **ಕರ್ಮೋಪಭೋಗಾಯ** - ಆ ಕರ್ಮಫಲಗಳನ್ನನುಭವಿಸುವದಕ್ಕಾಗಿ, **ಸಂಸರತಿ** - ಬದ್ಧಜೀವನಾಗಿ ಹುಟ್ಟುವನು.” **ಎಙ್ಗರಪಡಿಯೇ** - ಎಂದು ಸ್ಮೃತಿಯಲಿ ಹೇಳಿರುವ ಹಾಗೆ, **ಕಳ್ಳರ್ ಕೊಂಡು ಪೋಮ್** ವಳಿಗಳ್ **ಪೋಲೆ** - ಕಳ್ಳರು ಹೋಗುವ ಮಾರ್ಗಗಳ ಹಾಗೆ, **ಆತ್ಮಾಪಹಾರಿಗಳ್** - ಸರ್ವೇಶ್ವರನ ಸ್ವತ್ತಾದ ಜೀವಾತ್ಮರುಗಳನ್ನು ತಮ್ಮದೆಂದು ಭಾವಿಸುವ ಆತ್ಮಚೋರರು, ಸ್ವರ್ಗನರಕಗಳಿಗೆ **ಪೋಮ್ ಮಾರ್ಗಾಂತರಂಗಳುಕ್ಕು** - ಹೋಗುವ ಬೇರೆ ಮಾರ್ಗಗಳಿಗೆ, **ಮುಖಙ್ಗಳಾನ** - ದ್ವಾರಗಳಾದ **ನಾಡೀ ವಿಶೇಷಙ್ಗಳಿಲ್** - ಈ ನೂರು ವಿಷ್ವಙ್ನಾಡಿಗಳಲ್ಲಿ, **ಪೋಗಾದ ಪಡಿ** - ಹೋಗದಹಾಗೆ, **ವಳಿವಿಲಕ್ಕಿ** - ಆ ಮಾರ್ಗಗಳಿಂದ ತಪ್ಪಿಸಿ, **ಅರ್ಚಿರಾದಿ**

ಶತಾಧಿಕ್ಯೆ ಯಾನ ಬ್ರಹ್ಮನಾಡಿ (ಯಿಲ್) ಯಾಲೇ ಪ್ರವೇಶಿಪ್ಪಿತ್ತು ಸೂರ್ಯ ಕರಾ (ಕಿರಣಾ)ವಲಮ್ಬಿಯಾಯ್‌ಕ್ಕೊಂಡು ಪುರಪ್ಪಡುವ್ಪಡಿ ಪಣ್ಣುವ್.

ಮಾರ್ಗತ್ತುಕ್ಕು - ಅರ್ಚಿರಾದಿ ಮಾರ್ಗಕ್ಕೆ, **ಮುಖಮಾನ** - ದ್ವಾರವಾದ, **ಶತಾಧಿಕ್ಯೆಯಾನ** - ನೂರೊಂದನೆಯದಾದ, **ಬ್ರಹ್ಮನಾಡಿಯಾಲೇ** - ಬ್ರಹ್ಮವಿತ್ತಾದವನು ಹೋಗುವ ನಾಡಿಯಾದ ಸುಷುಮ್ನಾ ನಾಡೀ ಮೂಲಕವಾಗಿ, **ಪ್ರವೇಶಿಪ್ಪಿತ್ತು** - ಪ್ರವೇಶಮಾಡುವಹಾಗೆ ಮಾಡಿ, **ಸೂರ್ಯಕರಾ (ಕಿರಣಾ) ವಲಂಬಿಯಾಯ್** - ಸೂರ್ಯಕಿರಣವನ್ನು ಅವಲಂಬಿಸಿದವನಾಗಿಕ್ಕೊಂಡು, **ಪುರಪ್ಪಡುವ್ಪಡಿ ಪ್ಪಣ್ಣುವ್** - ಹೊರಟುಹೋಗುವ ಹಾಗೆ ಈಶ್ವರಸಙ್ಕಲ್ಪವು ಮಾಡುವದು ಎಂಬ ಭಾವವು. **ಪಣ್ಣುವ್** ಎಂಬುವದಕ್ಕೆ ಕರ್ತೃಪದವು ೧೬೭೩ನೆಯ ಪುಟದಲ್ಲಿ, ವಾಕ್ಯಾದಿಯಲ್ಲಿರುವ ಸತ್ಯಸಙ್ಕಲ್ಪನುಮಾನ ಸರ್ವೇಶ್ವರನ್ ಎಂಬುವದು.

ಈ ವಾಕ್ಯಶೇಷದಿಂದ ದೇಹಾವಸಾನಕಾಲದಲ್ಲಿ ಈ ಜೀವನಿಗೆ ಪರಮಾತ್ಮಸಂಪತ್ತಿಯಾದ ನಂತರ ಉಂಟಾಗುವ ಕ್ರಮವನ್ನು ತಿಳಿಸುತ್ತಾರೆ. ಪರಮಾತ್ಮಸಂಪತ್ತಿಯಿಂದ ಮುಂದಕ್ಕೆ ಪ್ರಪನ್ನನಿಗೂ ಅಪ್ರಪನ್ನನಿಗೂ ಮಾರ್ಗಗಳು ಭಿನ್ನವಾದವು ಎಂದು ತಿಳಿಸುತ್ತಾರೆ. ಹೃದಯಕ್ಕೆ ಸೇರಿದ ನಾಡಿಗಳು ೧೦೧. ಅದರಲ್ಲಿ ಒಂದಕ್ಕೆ ಸುಷುಮ್ನಾನಾಡಿ (ಬ್ರಹ್ಮನಾಡಿ) ಎಂದು ಹೆಸರು. ಇದು ಊರ್ಧ್ವವಾಗಿ ಪ್ರಸರಿಸಿರುತ್ತದೆ. ಇದರ ಮೂಲಕವಾಗಿ ಇಂದ್ರಿಯ, ಮನಸ್ಸು, ಪ್ರಾಣ, ಭೂತಸೂಕ್ಷ್ಮ ಇವುಗಳಿಂದ ಸೇರಿರುವ ಜೀವಾತ್ಮನು, ಸೂರ್ಯರಶ್ಮಿಯನ್ನು ಹೊಂದಿ, ಸೂರ್ಯನ ಮೂಲಕ ಅರ್ಚಿರಾದಿ ಗತಿಯನ್ನು ಹೊಂದುವನು. ಇದು ಭಕ್ತ್ಯುಪಾಯನಿಷ್ಠನಿಗೂ ನ್ಯಾಸವಿದ್ಯಾನಿಷ್ಠನಿಗೂ ಸಹ ಸಮಾನವಾದ ಮಾರ್ಗವು. ಪ್ರಪನ್ನರಲ್ಲದ ಇತರರಾದ, ಇಂದ್ರಿಯ, ಮನಸ್ಸು, ಪ್ರಾಣ, ಭೂತಸೂಕ್ಷ್ಮಗಳಿಂದ ಸೇರಿದ ಚೇತನರು ಇತರ ನೂರು ನಾಡಿಗಳಲ್ಲಿ ಯಾವುದು ತಮ್ಮ ಮುಂದಿನ ಪ್ರಾರಬ್ಧಕರ್ಮಾನುಭವಕ್ಕೆ ಯೋಗ್ಯವೋ ಅದರ ಮೂಲಕ ಕೊಟ್ಟು ಧೂಮಾದಿ ಮಾರ್ಗವನ್ನು ಹೊಂದಿ ಪುನಃ ಬಂಧಗಳಿಗೆ ಸಿಕ್ಕುತ್ತಾರೆ. ಕೆಲವರಿಗೆ ದೇವಲೋಕಪ್ರಾಪ್ತಿಯೂ, ಕೆಲವರಿಗೆ ನರಕವೂ, ಕೆಲವರಿಗೆ ಪುನಃ ಈ ಮರ್ತ್ಯಲೋಕ ಪ್ರಾಪ್ತಿಯೂ ಉಂಟಾಗುತ್ತದೆಂದು ಹೇಳಲ್ಪಟ್ಟಿರುತ್ತದೆ. ಇವರಿಗೆ ಪ್ರಾಪ್ತವಾಗುವ ಮಾರ್ಗಗಳು ಕಳ್ಳರು ಹೋಗುವ ಮಾರ್ಗಗಳು. ಇವರು ಕಳ್ಳರು ಹೇಗೆ ಎಂದರೆ ಸ್ವಾಮಿ ಸ್ವತ್ತಾದ ಆತ್ಮಾವನ್ನು ಅವನ ಚರಣಾರವಿಂದದಲ್ಲಿ ಅರ್ಪಿಸಿ ಭರನ್ಯಾಸ ಮಾಡದೇ ಇದ್ದವರೆಂದು ತಿಳಿಸುತ್ತಾರೆ. ಆದುದರಿಂದಲೇ ಅಂತಹ ಮಾರ್ಗ

ಗಳನ್ನು ಕಳ್ಳರ್ ಕೊಣ್ಡುಪೋವನ್ ವಳಿಗಳ್ ಪೋಲೆ ಆತ್ಮಾಪಹಾರಿಗಳ್ ಪೋಮ್ ಮಾರ್ಗಾಂತರಙ್ಗಳ್ ಎಂದು ಹೇಳಲ್ಪಟ್ಟವು. ಆ ಕಳ್ಳರ ದಾರಿಗಳು ಯಾವುವೆಂದರೆ ಇನ್ನು ನೂರು ನಾನಾ ಬಣ್ಣದ ನಾಡಿಗಳು. ಈ ಅಪ್ರಪನ್ನರನ್ನು ಆತ್ಮಾಪಹಾರಿಗಳೆಂದು ಹೇಳಲು ಪ್ರಮಾಣವು:-"ಯೋನ್ಯಥಾಸಂತಮಾತ್ಮಾನ ಮನ್ಯಥಾ ಪ್ರತಿಪದ್ಯತೇ । ಕಿಂತೇನ ನ ಕೃತಂ ಪಾಪಂ ಚೋರೇಣಾತ್ಮಾಪ ಹಾರಿಣಾ" ಎಂಬ ಶ್ರೀ ವ್ಯಾಸೋಕ್ತಿಯು, ಸರ್ವೇಶ್ವರನಿಗೆ ಶೇಷಭೂತವಾದ ಆತ್ಮ ವನ್ನು ತನಗೆ ಸ್ವತಂತ್ರವೆಂದು ಭಾವಿಸುವನಾದುದರಿಂದ ಆತ್ಮಾಪಹಾರಿಯು. ಈ ಸಂದರ್ಭದಲ್ಲಿ ಸತ್ಯಸಙ್ಕಲ್ಪನ ಮಹೋಪಕಾರವೇನೆಂದರೆ, ಈ ಭರನ್ಯಾಸವನ್ನನು ಷ್ಠಿಸಿದವನನ್ನು ಇತರ ನೂರು ನಾಡಿಗಳ ಮೂಲಕ ಕಳ್ಳ ದಾರಿಗಳಲ್ಲಿ ಹೋಗದ ಹಾಗೆ ಮಾಡಿ, ರಾಜಮಾರ್ಗವಾದ ಸುಷುಮ್ನಾನಾಡಿಯ ಮೂಲಕ ಹೋಗುವ ಹಾಗೆ ಮಾಡಿ, ಅಲ್ಲಿಂದ ಮುಂದಕ್ಕೆ ಸೂರ್ಯಕಿರಣಗಳ ಮೂಲಕ ಸೂರ್ಯನನ್ನು ಹೊಂದಿ ಅಲ್ಲಿಂದ ಮುಂದಕ್ಕೆ ಅರ್ಚಿರಾದಿ ಗತಿಯನ್ನು ಹೊಂದುವ ಹಾಗೆ ಮಾಡುವನು. ಈ ಅರ್ಚಿರಾದಿ ಗತಿಯು ಮುಂದಿನ ಗತಿ ಚಿನ್ತನಾಧಿಕಾರದಲ್ಲಿ ಉಪಪಾದಿಸಲ್ಪಡುತ್ತದೆ. ಸೂರ್ಯರಶ್ಮಿಯ ಮೂಲಕ ಸೂರ್ಯನನ್ನು ಸೇರುವನೆಂದು "ಅಥತೈರೇವ ರಶ್ಮಿಭಿಃ ಊರ್ಧ್ವಮಾಕ್ರಮತೇ" ಶರೀರವನ್ನು ಬಿಟ್ಟು ಹೊರಟ ಚೇತನನು ಆ ಸೂರ್ಯ ಕಿರಣಗಳ ಮೂಲಕವೇ ಮೇಲಕ್ಕೆ ಹೋಗುವನು ಎಂದು ಛಾಂದೋಗ್ಯದಲ್ಲೂ (೮-೬-೫) ಮತ್ತು "ರಶ್ಮ್ಯನುಸಾರೀ" ಎಂಬ ಶಾರೀರಕಸೂತ್ರದಲ್ಲೂ (೪-೨-೧೭) ಹೇಳಲ್ಪಟ್ಟಿರುತ್ತದೆ. ರಾತ್ರಿ ಮೃತನಾದ ಪ್ರಪನ್ನನಿಗೆ ಹೇಗೆ ? ಆಗ ಸೂರ್ಯಕಿರಣ ಗಳಿರುವದಿಲ್ಲವಲ್ಲಾ ಎಂದರೆ ದುರ್ದಿನದಲ್ಲಿ ಸೂರ್ಯರಶ್ಮಿಯುಂಟೆಂದು ಹೇಗೆ ಭಾವಿಸ ಬಹುದೋ, ಹಾಗೆಯೇ ಆಗಲೂ ಕೂಡ ಸೂಕ್ಷ್ಮವಾಗಿ ಉಂಟೆಂದು ಭಾವಿಸ ಬಹುದು. ಈ ಸುಷುಮ್ನಾ ನಾಡಿಗೂ ಸೂರ್ಯರಶ್ಮಿಗೂ ಸಂಬಂಧವಿರುವದರಿಂದ ಆ ಬ್ರಹ್ಮನಾಡಿಯಿಂದ ಸೂರ್ಯಕಿರಣದವಲಂಬನವು ಉಂಟಾಗುತ್ತದೆಂದು ಹೇಳಿರು ತ್ತಾರೆ. ಹಾಗೆ ಸಂಬಂಧ ಉಂಟೆಂದು ಛಾಂದೋಗ್ಯದಲ್ಲೇ ಹೇಳಲ್ಪಟ್ಟಿರುತ್ತದೆ.

ಪ್ರಪನ್ನನಿಗೆ ಅನ್ತಿಮಸ್ಮೃತಿಯು ಆವಶ್ಯಕವೆಂಬ ನಿರ್ಬಂಧವಿಲ್ಲವು.

ಹೀಗೆ ನಿರ್ಯಾಣಕ್ರಮದಲ್ಲಿ ಪ್ರಪನ್ನನಿಗೂ ಅಪ್ರಪನ್ನನಿಗೂ ಸಾಧಾರಣವಾದ ಭಾಗವನ್ನು ತಿಳಿಸಿ, ಅನಂತರ ಅವರುಗಳಿಗೆ ನಾಡೀಮೂಲಕ ಉಂಟಾಗುವ ಭಿನ್ನಗತಿಗಳೂ ತಿಳಿಸಲ್ಪಟ್ಟವು. ಮುಂದೆ ಅನ್ತಿಮ ಸ್ಮೃತಿ ವಿಚಾರವು ಚರ್ಚಿಸ ಲ್ಪಡುತ್ತದೆ. ಭಗವದ್ಗೀತಾದಿಗಳಲ್ಲಿ ಬ್ರಹ್ಮವಿತ್ತಿಗೆ ಅನ್ತಿಮಸ್ಮೃತಿಯು ಇರಬೇ ಕೆಂದು ಹೇಳಿರುತ್ತದೆಯಲ್ಲಾ, ಹಾಗೆ ಅನ್ತಿಮಸ್ಮೃತಿ ಇಲ್ಲದ ಪ್ರಪನ್ನನಿಗೆ ಪುನರಾ

ಪ್ರಪನ್ನಸ್ಯ ಅನ್ತಿಮ ಸ್ಮೃತೇ ರನಪೇಕ್ಷಿತತ್ವಮ್.

ಆಳವಾ ನಂತಿಮದಶೈಯಿಲೆ ವಿಡಾಯಿನಾಲೆ ನಾಕ್ಕೊಟ್ಟೈ ಎಂಬೆರುಮಾನಾರ್ ತಿರುವಡಿಗಳ್ಳೈಪ್ಪಿಡಿಕ್ಕ, ಇವರಪ್ಪೋದು ಆಳ್ವಾರ್ ಶೆವಿಯಿಲೆ ದ್ವಯತ್ತೈ ಅರುಳಿಚ್ಚೆಯ್ಯ, ಇಪ್ಪೇರು ನಮುಕ್ಕು ವರುಗೈ ಯರಿದು ನಾಮೆನ್ನ ಶೆಯ್ಯಕ್ಕಡವೋಮೆನ್ರು ಅಪ್ಪೋದು ಸೇವಿತ್ತಿರುನ್ದ ಮುದಲಿಗಳ್

ವರ್ತಿಯೇ ಹೇಗೆ ಎಂಬ ಶಂಕಾ ಸಮಾಧಾನಾರ್ಥವಾಗಿ ಶ್ರೀ ಕೂರೇಶರ ಅಂತಿಮ ದಶೆಯಲ್ಲಿ ನಡೆದ ಒಂದು ವೃತ್ತಾಂತವನ್ನು ಉದಾಹರಿಸುತ್ತಾರೆ. ಅಂತಿಮ ಸ್ಮೃತಿ ಎಂದರೇನೆಂಬುದನ್ನು ಮುಂದೆ ತಿಳಿಸುತ್ತಾರೆ. ದೇಹಾವಸಾನಕಾಲದಲ್ಲಿ ಇಂದ್ರಿಯಗಳ ವ್ಯಾಪಾರ ನಿಂತುಹೋಗಿ, ಮನಸ್ಸಿನ ವ್ಯಾಪಾರ ನಿಲ್ಲುವದಕ್ಕೆ ಮುಂಚಿನ ದಶೆಯಲ್ಲಿ ಶ್ರಿಯಃಪತಿಯನ್ನು ಸ್ಮರಿಸೋಣವು. **ಆಳ್ವಾರ್** - ಎಂದರೆ ಶ್ರೀ ಭಾಷ್ಯಕಾರರ ಪ್ರಿಯಶಿಷ್ಯರಾದ ಕೂರೇಶರಿಗೆ ಹೆಸರು, ಇವರ ಪೂರ್ಣವಾದ ಹೆಸರು **ಕೂರತ್ತಾಳ್ವಾರ್.** ಕಾಂಚೀಪುರದ ಹತ್ತಿರವಿರುವ ಕೂರೆಂಬ ಗ್ರಾಮದಲ್ಲಿ ಅವತರಿಸಿದವರಾದುದರಿಂದ **ಕೂರತ್ತಾಳ್ವಾರ್** ಎಂಬದಾಗಿ ಹೆಸರು. ಇವರಿಗೆ ಶ್ರೀವತ್ಸಾಂಕಮಿಶ್ರರೆಂದೂ ಹೆಸರು ಉಂಟು; ಈ ಕೂರೇಶರ **ಅನ್ತಿಮ ದಶೈಯಿಲೆ** – ದೇಹಾವಸಾನ ಸಮಯದಲ್ಲಿ, **ವಿಡಾಯಿನಾಲೆ** – ಆಯಾಸದಿಂದ, **ನಾಕ್ಕೊಟ್ಟೈ** - ನಾಲಿಗೆಯು ಒಣಗಿಹೋಗಿರುವದರಿಂದ ಅಂಗಳಿಗೆ ಅಂಟಿಕೊಂಡು ಹೋಗಿರುವದರಿಂದ ಮಾತಾಡಲು ಶಕ್ತಿಯಿಲ್ಲದಿರುವಾಗ, **ಎಂಬೆರುಮಾನಾರ್ ತಿರುವಡಿಗಳ್ಳೈಪ್ಪಿಡಿಕ್ಕ** - ತಮ್ಮ ಗುರುವಾದ ಯತಿರಾಜರ ಚರಣಾರವಿಂದಗಳನ್ನು ಕೈಯಿಂದ ಹಿಡಿದುಕೊಳ್ಳಲು, **ಇವರಪ್ಪೋದು** - ಈ ಯತಿರಾಜರು ಆ ಸಮಯದಲ್ಲಿ, **ಆಳ್ವಾರ್ ಶೆವಿಯಿಲೆ** - ಶ್ರೀ ಕೂರೇಶರ ಕಿವಿಯಲ್ಲಿ, **ದ್ವಯತ್ತೈ ಅರುಳಿಚ್ಚೆಯ್ಯ** – ದ್ವಯಮಂತ್ರವನ್ನು ಕೃಪೆಯಾ ಉಚ್ಚರಿಸಲಾಗಿ, **ಅಪ್ಪೋದು** - ಆ ದ್ವಯಮಂತ್ರೋಚ್ಚಾರಣ ಸಮಯದಲ್ಲಿ, **ಸೇವಿತ್ತಿರುನ್ದ ಮುದಲಿಗಳ್** - ಶ್ರೀ ಭಾಷ್ಯಕಾರರನ್ನು ಸೇವಿಸುತ್ತಿದ್ದ ಜ್ಞಾನವೃದ್ಧರಾದ ಶಿಷ್ಯರುಗಳು, **ಇಪ್ಪೇರು** - ತಮ್ಮಂಥಾ ಗುರುಗಳು ಶಿಷ್ಯನಿಗೆ ಅಂತಿಮದಶೆಯಲ್ಲಿ ಕಿವಿಯಲ್ಲಿ ದ್ವಯಮಂತ್ರವನ್ನುಪದೇಶಿಸುವ ಪರಮ ಸುಕೃತವು, **ನಮುಕ್ಕು**- ನಮ್ಮಂತಹ ಭಾಗ್ಯಹೀನರಿಗೆ, **ವರುಗೈ** - ಪ್ರಾಪ್ತವಾಗುವದು, **ಅರಿದು** - ದುರ್ಲಭವು, ಆದುದರಿಂದ, **ನಾಮ್** - ನಾವುಗಳು, **ಎನ್ನ ಶೆಯ್ಯಕ್ಕಡವೋಮ್** -

ಕಲಙ್ಗ, ಇವರುಗಳಭಿಪ್ರಾಯತ್ತೈ ತಿರುವುಳ್ಳಮ್ ಪತ್ತಿ ಆಳ್ವಾರ್ ಪ್ರಕೃತಿಯರಿಯಿರಾರ್ಗಳೋ? ಇನ್ನವಸ್ಥೈಯಿಲಿ ವರುಕ್ಕಿದು ಕರ್ಪ್ಪೂರತ್ತೈಯುಮ್ ಖಂಡಶರ್ಕ್ಕರೈಯೈಯುಂ ಮಿಟ್ಟ ಮಾತ್ರಮನ್ರೋ? ನಾಮಿದು ಉಪಾಯತ್ತುಕ್ಕು (ಪರಿಕರಮಾಗ) ಉಪಕಾರಕಮಾಗ ಚ್ಚೆಯ್ದೋಮಲ್ಲೋಮೆನ್ರರುಳಿಚ್ಚೆಯ್ಯ, ಮುದಲಿಗಳ್ ತೆಳಿನ್ದು ನಿರ್ಭರರಾನಾರ್ಗಳ್.

ಏನನ್ನು ಮಾಡಲು ಸಾಧ್ಯವು. ಎಂದರೆ ಏನೂ ಇಲ್ಲವೆಂಬ ಭಾವವು, **ಎನ್ರು**-ಎಂಬುದಾಗಿ, **ಮುದಲಿಗಳ್ ಕಲಙ್ಗ**-ಈ ಪೂಜ್ಯರಾದ ಶಿಷ್ಯರುಗಳು ದೈನ್ಯದಿಂದಲೂ ವ್ಯಸನದಿಂದಲೂ ಖಿನ್ನರಾಗಿರಲಾಗಿ, **ಇವರುಗಳಭಿಪ್ರಾಯತ್ತೈ**-ಈ ಶಿಷ್ಯರಭಿಪ್ರಾಯವನ್ನು, **ತಿರುವುಳ್ಳಮ್ ಪ್ಪತ್ತಿ** - ಗ್ರಹಿಸಿದವರಾಗಿ, **ಆಳವಾರ್ ಪ್ರಕೃತಿ**-ಈ ಆಳ್ವಾರರವರ ಸ್ವಭಾವವನ್ನು, ಅದು ಯಾವುದೆಂದರೆ, ಈ ಆಳ್ವಾರರವರೇ ತಾವು ಬರೆದ ಸುಂದರ ಬಾಹುಸ್ತವದಲ್ಲಿ, **"ಶ್ರೀರಙ್ಗಧಾಮನಿ ಯಥಾ ಪುರಮೇಷ ಸೋಽಹಂ। ರಾಮಾನುಜಾರ್ಯ ವಶಗಃ ಪರಿವರ್ತಿಷೀಯ"**(ಸುಂದರಸ್ತವ ೧೩೯) ಎಂದರೆ ಶ್ರೀರಙ್ಗಕ್ಷೇತ್ರದಲ್ಲಿ ಶ್ರೀ ರಾಮಾನುಜಮುನಿಗಳಿಗೆ ಪ್ರಿಯಶಿಷ್ಯನಾಗಿದ್ದಂಥಾ ಆ ನಾನು ಮೊದಲಿನಂತೆಯೇ ಆ ಗುರುಗಳಿಗೇ ವಶನಾಗಿ ವರ್ತಿಸಬೇಕು ಎಂದು ಹೇಳಿಕೊಂಡಿರುವ ಹಾಗೆ, ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿ ಮೊದಲಾದುದೆಲ್ಲಾ ಆಚಾರ್ಯಾಧೀನವೆಂದು ನಂಬಿ ನಿರ್ಭರರಾಗಿರುವ ಸ್ವಭಾವವು, ಇದು ಸಾರಾಸ್ವಾದಿನಿಯವರ ಅಭಿಪ್ರಾಯವು, ಸಾರಪ್ರಕಾಶಿಕಾ ಸಾರವಿವರಣೆಯವರುಗಳು, ನನ್ನ (ಶ್ರೀ ಭಾಷ್ಯಕಾರರ) ಮೂಲಕವಾಗಿ ಸಮಸ್ತ ಅರ್ಥವನ್ನೂ ಶ್ರೀ ಕೂರೇಶರು ಗ್ರಹಿಸಿದವರಾದರೂ ಪುನಃಪುನಃ ಅದನ್ನೇ ಕೇಳಬೇಕೆಂಬಭಿಲಾಷೆಯುಳ್ಳೋಣವೇ ಶ್ರೀ ಕೂರೇಶರ ಸ್ವಭಾವವೆಂದು ವ್ಯಾಖ್ಯಾನ ಮಾಡಿರುತ್ತಾರೆ. ಮೊದಲನೆಯ ವ್ಯಾಖ್ಯಾನದಲ್ಲಿ ಗುರುವಿನಲ್ಲಿ ಸರ್ವ ಪಾರತಂತ್ರ್ಯವೂ, ಎರಡನೆಯದರಲ್ಲಿ ದ್ವಯಮಂತ್ರೋಪದೇಶವೂ ಭರನ್ಯಾಸಕಾಲದಲ್ಲಿ ಮಾಡಲ್ಪಟ್ಟಿದ್ದರೂ, ತದನುಸಂಧಾನರೂಪದಲ್ಲಿ ಈಗಲೂ ಗುರುಮುಖೇನ ಕೇಳಬೇಕೆಂಬ ಕುತೂಹಲವೂ ನಿದರ್ಶಿಸಲ್ಪಟ್ಟಿತು. ಈ ಎರಡನೆಯ ಅರ್ಥವು ಪ್ರಕರಣಕ್ಕೆ ತುಂಬಾ ಸಂಬಂಧಪಟ್ಟದುದಾಗಿದೆ; ಇಂತಹ ಆಳ್ವಾರರವರ ಅಭಿಪ್ರಾಯವನ್ನು, **ಅರಿಯಿರಾರ್ಗಳೋ** - ನಿಮಗೆ ತಿಳಿಯದೇ? ಎಂದು ಶ್ರೀ ಭಾಷ್ಯಕಾರರು ಹೇಳಿ, ಪುನಃ ಉಪದೇಶಿಸುತ್ತಾರೆ; **ಇನ್ನವಸ್ಥೈಯಿಲ್** - ಈ ಚರಮದೆಶೆಯಲ್ಲಿ, **ಅವರುಕ್ಕು** - ಕೂರತ್ತಾಳ್ವಾರರವರಿಗೆ, **ಇದು** - ಈಗ ನಾವು ಅವರ ಕಿವಿಯಲ್ಲಿ ದ್ವಯಮಂತ್ರವನ್ನುಚ್ಚರಿಸಿದುದು, **ಕರ್ಪ್ಪೂರತ್ತೈ**

ಯುಮ್ ಖಂಡ ಶರ್ಕ್ಕರೈಯೈಯುಮ್ - ಪಚ್ಚಕರ್ಪೂರವನ್ನೂ ಕಲ್ಲುಸಕ್ಕರೆ ಯನ್ನೂ, **ಇಟ್ಟವಾತ್ರಮನ್ರೋ** - ಬಾಯಲ್ಲಿ ಇಟ್ಟಹಾಗಲ್ಲವೇ? ಎಂದರೆ ಒಣಗಿಕೊಂಡು ಬಂದ ಬಾಯಲ್ಲಿ ಇವುಗಳನ್ನಿಟ್ಟರೆ ಶ್ರಮಪರಿಹಾರವಾಗಿ ಬಾಯಲ್ಲಿ ದ್ರವ ಹೇಗೆ ಉಂಟಾಗುತ್ತದೋ ಹಾಗೆ, ಈ ದ್ವಯೋಚ್ಚಾರಣೆಯನ್ನು ಅವರ ಕಿವಿ ಯಲ್ಲಿ ಗುರುವಾದ ನಾನು ಬಂದು ಉಚ್ಚರಿಸುವುದರಿಂದ, ಅವರಿಗೆ ದೇಹೋತ್ಕ್ರ ಮಣದ ಆಯಾಸವು ಪರಿಹಾರವಾಗಲಿ ಎಂಬಭಿಪ್ರಾಯದಿಂದ ಮಾಡಿದುದೆಂಬ ಭಾವವು; ಮುಂದೆ ನೀವು ಅಭಿಪ್ರಾಯಪಟ್ಟಹಾಗಲ್ಲವೆಂದುಪದೇಶಿಸುತ್ತಾರೆ:— **ನಾಮ್** - ನಾವು, **ಇದು** - ಹೀಗೆ ಕಿವಿಯಲ್ಲಿ ಮಾಡಿದ ದ್ವಯೋಚ್ಚಾರಣವು, **ಉಪಾಯತ್ತುಕ್ಕು** - ಹಿಂದೆ ಮಾಡಿದ ಭರನ್ಯಾಸಕ್ಕೆ, **ಪರಿಕರವಾಗ** - ಅಂಗ ವೆಂದು ಭಾವಿಸಿ, ಅಥವಾ, **ಉಪಕಾರಕವಾಗ** – ಸಹಾಯರೂಪವಾದುದೆಂದು ಭಾವಿಸಿ, **ಶೆಯ್‌ದೋಮಲ್ಲೋಮ್** - ಮಾಡಿದುದಲ್ಲವು, **ಎನ್ರು** - ಎಂಬದಾಗಿ, **ಅರುಳಿಚ್ಚೆಯ್ಯ** - ಕೃಪಯಾ ಶ್ರೀ ಯತಿರಾಜರುಪದೇಶಿಸಲಾಗಿ, **ಮುದಲಿಗಳ್**– **ಆ ಪೂಜ್ಯರಾದ** ಶಿಷ್ಯರು, **ತೆಳಿನ್ದು** - ತಮ್ಮ ಸಂದೇಹವನ್ನು ಹೋಗಲಾಡಿಸಿ ಕೊಂಡು, **ನಿರ್ಭರರಾನಾರ್‌ಗಳ್** - ತಾವು ಮಾಡಿದ ಭರನ್ಯಾಸದಲ್ಲಿ ದೃಢನಂಬಿಕೆ ಯುಳ್ಳವರಾದರು. ಶ್ರೀ ಆಳ್ವಾರ್ ಕಿವಿಯಲ್ಲಿ ಚರಮದೆಶೆಯಲ್ಲಿ ಶ್ರೀ ಭಾಷ್ಯ ಕಾರರು ದ್ವಯೋಚ್ಚಾರಣೆ ಮಾಡಿದುದು ತಾವು ಮಾಡಿರುವ ಭರನ್ಯಾಸಕ್ಕೆ ತುಂಬಾ ಉಪಕಾರವೆಂದು ಭಾವಿಸಿ, ತಮಗೂ ಶ್ರೀ ಯತಿವರ್ಯರು ಜೀವಂತರಾ ಗಿರುವಾಗಲೇ ದೇಹೋತ್ಕ್ರಮಣವು ಪ್ರಾಪ್ತವಾದರೆ ಇಂತಹ ಭಾಗ್ಯವು ಲಭಿಸು ವುದು, ಅಂತಹ ಭಾಗ್ಯವು ತಮಗಿಲ್ಲವೇ ಎಂದು ಖಿನ್ನರಾಗಿರಲು, ಅದನ್ನು ಕಂಡು ಶ್ರೀ ಭಾಷ್ಯಕಾರರು ತಮ್ಮ ಶಿಷ್ಯರುಗಳು ಈ ದ್ವಯೋಚ್ಚಾರಣೆಯ ಪ್ರಯೋಜನ ವನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದು ಭಾವಿಸಿ, ಓ ಶಿಷ್ಯರುಗಳೇ ಇದರಭಿ ಪ್ರಾಯವನ್ನು ತಿಳಿಸುವೆನು ಕೇಳಿ. ಶ್ರೀ ಕೂರೇಶರಿಗೆ ನಾನುಪದೇಶಿಸಿದ ಅರ್ಥ ವನ್ನು ಪದೇ ಪದೇ ಕೇಳಿದರೂ ತೃಪ್ತಿಯಿಲ್ಲದೆ ಪುನಃ ಪುನಃ ಕೇಳಲು ಕುತೂಹಲ ವುಳ್ಳವರು. ಈ ಅಭಿಪ್ರಾಯವನ್ನು ತಿಳಿದ ನಾನು, ಅವರಿಗೆ ಭರನ್ಯಾಸಕಾಲ ದಲ್ಲುಪದೇಶಿಸಿದ ಕರಣಮಂತ್ರವಾದ ಈ ದ್ವಯಮಂತ್ರವನ್ನು ಪುನಃ ಈ ಚರಮ ದೆಶೆಯಲ್ಲಿ ಅವರ ಕಿವಿಯಲ್ಲಿ ಹೇಳಿದರೆ, ಆ ಭರನ್ಯಾಸಕಾಲದ ಸ್ಮೃತಿಯು ಅವರಿ ಗುಂಟಾಗಿ, ಆದರಿಂದ ಸುಪ್ರೀತರಾಗುವದರಿಂದ ಅವರಿಗೆ ಈ ಚರಮದೆಶೆಯ ಆಯಾಸವು ಪರಿಹಾರವಾಗುತ್ತದೆಂದು ಭಾವಿಸಿ ನಡಿಸಿದೆನೇ ವಿನಾ, ಈ ದ್ವಯೋ ಚ್ಚಾರಣೆಯು ಆ ಭರನ್ಯಾಸೋಪಾಯಕ್ಕೆ ಅಙ್ಗವಾಗಿಯಾಗಲಿ ಅಥವಾ ಉಪಕಾರಕ ವಾಗಿಯಾಗಲಿ ಮಾಡಲಿಲ್ಲವೆಂದು ಹೇಳಿದರು ಈ ಉಪದೇಶವನ್ನು ಕೇಳಿದ

ಒಡನೆಯೇ ಆ ಶಿಷ್ಯರಿಗಿದ್ದ ಖೇದವು ತೊಲಗಿ ನಿರ್ಭರರಾದರೆಂದು ಇಲ್ಲಿ ಹೇಳಲ್ಪಟ್ಟಿರುತ್ತದೆ. ಈ ವೃತ್ತಾಂತದಿಂದ ನಾವು ಗ್ರಹಿಸತಕ್ಕದ್ದೇನೆಂದರೆ:—"ಪ್ರಪನ್ನನಿಗೆ ಚರಮದೆಶೆಯಲ್ಲಿ ಅಂತಿಮ ಸ್ಮೃತಿಯು ಆವಶ್ಯಕವೆಂಬ ವಾದವು ಕೂಡುವದಿಲ್ಲವು. ಕರುಣಾಸಾಗರನು ಪ್ರಪನ್ನನಲ್ಲಿರುವ ಪ್ರೀತ್ಯತಿಶಯದಿಂದ "ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂಗತಿಂ" ಎಂಬ ಶ್ರೀ ವರಾಹ ಪುರಾಣದಲ್ಲಿರುವ ಸರ್ವೇಶ್ವರ ವಾಕ್ಯಾನುಸಾರವಾಗಿ, ದೇಹೋತ್ಕ್ರಮಣ ಕಾಲದಲ್ಲಿ ತಾನೇ ಅಂತಿಮ ಸ್ಮೃತಿಯನ್ನುಂಟುಮಾಡಬಹುದು" ಎಂಬುದು

ಈ ವೃತ್ತಾಂತವು ಶ್ರೀಮತ್ತೃತೀಯ ಬ್ರಹ್ಮತಂತ್ರಸ್ವತಂತ್ರ ಸ್ವಾಮಿಯವರನುಗ್ರಹಿಸಿದ ಮೂವ್ವಾಯಿರಪ್ಪಡಿ ಗುರುಪರಂಪರಾಸಾರದಲ್ಲಿಲ್ಲವು. ಬಹುಶಃ ಬಿಟ್ಟುಹೋಗಿರಬಹುದು. ಪ್ರಪನ್ನಾಮೃತದಲ್ಲಿ ಈ ವೃತ್ತಾಂತವು ಸ್ವಲ್ಪ ವ್ಯತ್ಯಾಸವಾಗಿ ಹೇಳಲ್ಪಟ್ಟಿರುತ್ತದೆ. ವ್ಯತ್ಯಾಸವೇನೆಂದು ತಿಳಿಯಬೇಕೆಂಬ ಕುತೂಹಲವಿರುವವರು ಕೂರೇಶ ಪರಮಪದಪ್ರಾಪ್ತಿಯನ್ನು ಬೋಧಿಸುವ ೫೬ನೆಯ ಅಧ್ಯಾಯವನ್ನು ಅವಲೋಕಿಸಬಹುದು. ಪ್ರಕೃತ ಪ್ರಕರಣಕ್ಕೆ ಬೇಕಾದ ಅಂಶವು ಇಲ್ಲಿ ಸೂಚಿಸಲ್ಪಡುತ್ತದೆ :—

ತಚ್ಛ್ರುತ್ವಾ ಲಕ್ಷ್ಮಣಾಚಾರ್ಯಃ ಕೂರೇಶ ಮಿದ ಮಬ್ರವೀತ್ ।
ವೈಕುಂಠೇ ತತ್ರ ಕೂರೇಶ ನಾಶಾಸ್ತ್ರಂ ನ ವ್ಯತಿಕ್ರಮಃ ॥
ಇಹಲೀಲಾ ವಿಭೂತ್ಯಾಂತು ಶಾಸ್ತ್ರಮಾರ್ಗ ಪ್ರವರ್ತನಂ ।
ತತೋ ವಿಷಣ್ಣಃ ಕೂರೇಶಃ ಶೇಷತ್ವಂ ವೀಕ್ಷ್ಯ ವಿಸ್ಮಿತಃ ॥
ದ್ವಯೋಪದೇಶಮಕರೋ ತ್ತಸ್ಯ ಕರ್ಣೇ ಯತೀಶ್ವರಃ ।
ಅಥ ತತ್ರ ಸ್ಥಿತಾ ಸ್ಸರ್ವೇ ವೈಷ್ಣವಾಸ್ತೇನ ಶಜ್ಕಿತಾಃ ॥
ಯತೀಂದ್ರಂ ತಂ ಮಹಾತ್ಮಾನಂ ವಚನಂ ಚೇದಮಬ್ರುವ೯ ।
ವೈಷ್ಣವಾನಾಂ ಪ್ರಪನ್ನಾನಾಂ ನಕರ್ತವ್ಯಾಂತಿಮಸ್ಮೃತಿಃ ॥
ಬಹುದ್ಭಿಃ ಬಹುಳಂ ಚೋಕ್ತಂ ಶಾಸ್ತ್ರೈರೇವಂ ಯತೀಶ್ವರ ।
ದ್ವಯೋಪದೇಶಂ ಯೋಗೀಂದ್ರ ತೇನೈವ ಭವತಾಧುನಾ ॥
ಅನ್ತಕಾಲೇ ಕೃತಂ ತಸ್ಮೈ ಕೂರೇಶಾಯ ಮಹಾತ್ಮನೇ ।
ತೇಷಾಂ ತದ್ವಚನಂ ಶ್ರುತ್ವಾ ಯತೀಂದ್ರಃ ಪ್ರಾಹತಾ೯ ಪ್ರತಿ ॥
ಕರ್ಪೂರ ಘುಟಿಕಾ ಭಾವಾತ್ ರಾಜಪುತ್ರಸ್ಯ ವೈಷ್ಣವಾಃ ।
ಸಂಶೋಷ್ಯತೇ ಯಥಾ ಜಿಹ್ವಾ ದ್ವಯಾಭಾವಾ ತ್ತಥಾಸ್ಯಹಿ ॥

ಎಂಬುದಾಗಿ ಇಲ್ಲಿ ಇರುತ್ತದೆ. ಇದರರ್ಥವೇನೆಂದರೆ:—ಶ್ರೀ ಯತಿವರ್ಯರು ತಮ್ಮ ಪ್ರಿಯಶಿಷ್ಯರಾದ ಕೂರೇಶರ ಮಾತನ್ನು ಕೇಳಿ, "ನೀನು ವೈಕುಂಠದಲ್ಲಿರುವ ನಿತ್ಯ

ಸೂರಿಗಳು ಶಾಸ್ತ್ರಾತಿಕ್ರಮವನ್ನು ಮಾಡುವರೆಂದು ಹೇಳಿದಹಾಗಲ್ಲವು ವೈಕುಂಠ ದಲ್ಲಿರುವ ನಿತ್ಯಸೂರಿಗಳು ಮೊದಲಾದವರಿಗೆ ಶಾಸ್ತ್ರವು ಬೇಕಿಲ್ಲವು. ಏಕೆಂದರೆ ಅವರಿಗೆ ಶಾಸ್ತ್ರವ್ಯತಿಕ್ರಮವಾಗಿ ನಡಿಯೋಣವೇ ಇಲ್ಲವು. ಈ ಲೀಲಾವಿಭೂತಿ ಯಲ್ಲಿಯಾದರೋ ಹಾಗಲ್ಲವು. ಶಾಸ್ತ್ರವ್ಯತಿಕ್ರಮವಿರುವದರಿಂದ ಶಾಸ್ತ್ರ ಬೇಕು, ಅದಕ್ಕನುಗುಣವಾಗಿ ನಡೆಯಬೇಕಾದುದು ಆವಶ್ಯಕವು" ಎಂದು ಉಪದೇಶಿಸಿದರು. ಇದರಿಂದ ಕೂರೇಶರಿಗೆ ಶೇಷತ್ವವು ಮನಸ್ಸಿಗೆ ಚನ್ನಾಗಿ ಹಿಡಿದು ಆಶ್ಚರ್ಯಭರಿತ ರಾಗಿರುವಾಗ ಶ್ರೀ ಯತಿವರ್ಯರು ಆ ಕೂರೇಶರ ಕಿವಿಯಲ್ಲಿ ದ್ವಯಮಂತ್ರವನ್ನುಪ ದೇಶಿಸಿದರು. ಅಲ್ಲಿ ಹತ್ತಿರ ನೆರೆದಿದ್ದ ನಿಜ ಶಿಷ್ಯಮಂಡಲಿಗೆ ಸೇರಿದ ಶ್ರೀ ವೈಷ್ಣ ವೋತ್ತಮರು ಅದನ್ನು ಕಂಡು ಸಂದೇಹವುಳ್ಳವರಾಗಿ, ತಮ್ಮ ಗುರುಗಳಾದ ಯತೀಂದ್ರರನ್ನು ಕುರಿತು ಪ್ರಶ್ನಿಸಿದರೇನೆಂದರೆ, "ತಾವು ಅನೇಕಾವರ್ತಿ ಶಾಸ್ತ್ರ ದಲ್ಲಿ ಅಂತಿಮಸ್ಮೃತಿ ಬೇಕಿಲ್ಲವೆಂದು ಹೇಳಿದೆ ಎಂದುಪದೇಶಿಸಿದುದನ್ನು ಕೇಳಿದೆವು. ಹೀಗಿರಲು ತಾವು ಈಗ ಈ ಮಹಾತ್ಮರಾದ ಕೂರೇಶರಿಗೆ ಅಂತಿಮಸ್ಮೃತಿಯುಂಟಾ ಗುವ ಹಾಗೆ ದ್ವಯೋಪದೇಶವನ್ನು ಮಾಡಿದಿರಲ್ಲಾ ಅದು ಹೇಗೆ" ಎನ್ನಲು, ಅದಕ್ಕಾ ಯತಿವರ್ಯರು, ಓ ವೈಷ್ಣವಾಗ್ರೇಸರರೇ, ರಾಜಪುತ್ರನಿಗೆ ಗಂಟಲು ಒಣ ಗಿದ ಕಾಲದಲ್ಲಿ ಪಚ್ಚಕರ್ಪೂರ ಗುಳಿಗೆ ಹೇಗೋ, ಹಾಗೆಯೇ ಪ್ರಪನ್ನರಾದ ಈ ಕೂರೇಶರಿಗೆ ದ್ವಯೋಚ್ಚಾರಣೆಯು" ಎಂದು ಸಮಾಧಾನ ಹೇಳಿದರು. ಅನು ಕೂಲವಾದಾಗಲೆಲ್ಲಾ ಪ್ರಪನ್ನನು ದ್ವಯೋಚ್ಚಾರಣೆ ಮಾಡತಕ್ಕದ್ದೆಂದು ಹಿಂದೆ ಯೇ ತಿಳಿಸಲ್ಪಟ್ಟಿರುತ್ತದೆಯಷ್ಟೆ. ಹಾಗೆ ತನಗೆ ಮಾಡಲು ಸಾಧ್ಯವಿಲ್ಲದ ಪ್ರಪನ್ನ ನಿಗೆ ಅಂತಿಮಕಾಲ ದ್ವಯೋಚ್ಚಾರಣವು ಆಪ್ಯಾಯನವು ಎಂಬ ಭಾವವು. ಉಪಾಯವೆಂದಿಗೂ ಅಲ್ಲವೆಂಬುದು ಮುಖ್ಯ ತಾತ್ಪರ್ಯವು. ಆದುದರಿಂದಲೇ ಅದರ ಅವಶ್ಯಕತೆ ಇಲ್ಲವು.

ಕೆಲವರು ಆಳ್ವಾರ್ ಅಂತಿಮ ದೆಶೆಯಲ್ಲಿ ನಡಿಸಿದ ದ್ವಯೋಚ್ಚಾರಣೆಯ ವೃತ್ತಾಂತವನ್ನು ಮನಸ್ಸಿನಲ್ಲಿಟ್ಟು, ಅಂತಿಮ ಸ್ಮೃತಿಯು ಆವಶ್ಯಕವೆಂಬ ಪೂರ್ವ ಪಕ್ಷವನ್ನು ತರುವರು. ಅದನ್ನು ಖಂಡಿಸುವದಕ್ಕಾಗಿಯೂ ತಮ್ಮಭಿಪ್ರಾಯದ ಸಮ ರ್ಥನೆಗಾಗಿಯೂ ಶ್ರೀ ಭಾಷ್ಯಕಾರರೇ ತಮ್ಮ ಶಿಷ್ಯರಿಗೆ ಉಪದೇಶಿಸಿದುದನ್ನು ನಮ್ಮ ಅವಗಾಹನೆಗೆ ತಂದಿರುತ್ತಾರೆ ಇದರಿಂದ ಅಂತಿಮ ಸ್ಮೃತಿಯು ನಿರಪೇಕ್ಷ ವಾದುದೆಂಬುದು ಸುವ್ಯಕ್ತವು.

ಮುಂದಿನ ವಾಕ್ಯದಿಂದ ಈ ಮೇಲೆ ಹೇಳಿದುದನ್ನೇ ಕೆಲವು ಪ್ರಮಾಣಗಳೊಂ ದಿಗೆ ನಿಗಮನ ಮಾಡಿ ಹೇಳುತ್ತಾರೆ:—ಆಗೈಯಾಲ್ - ಹೀಗೆ ಶ್ರೀ ಭಾಷ್ಯ ಕಾರರ ಉಪದೇಶ ಮೂಲಕ, ಅನ್ತಿಮಸ್ಮೃತಿಯು ಉಪಾಯವಾಗುವದಿಲ್ಲವಾ

ಆಗೈಯಾಲೇ "ನಷ್ಟಸ್ಮೃತಿರಪಿ ಪರಿತ್ಯಜನ್ ದೇಹಂ" ಎನ್ರುಮ್ (೧) "ಸ್ಥಿತೇ ಮನಸಿ ಸುಸ್ವಸ್ಥೇ" ಎಙ್ಗಿರ ಶ್ಲೋಕದ್ವಯತ್ತಿಲುಮ್, (೨) "ತುಪ್ಪುಡೈಯಾರ್ಕೈ ಯಡೈವದೆಲ್ಲಾಮ್" ಎಙ್ಗಿರಪಾಟ್ಟಿಲುಮ್ ಶೊಲ್ಲುಗಿರಪಡಿಯೇ, ಪ್ರಪನ್ನನುಕ್ಕನ್ತಿಮಸ್ಮೃತ್ಯಾದಿಗಳಿಲ್ ನಿರ್ಬನ್ಧಮಿಲ್ಲೈ.

ದುದರಿಂದ, "ನಷ್ಟಸ್ಮೃತಿಃ" ಎಂಬ ಶ್ಲೋಕದಲ್ಲೂ, "ಸ್ಥಿತೇ ಮನಸಿ ಸುಸ್ವಸ್ಥೇ" ಎಂದಾರಂಭಿಸಿ ಹೇಳಿರುವ, **ಶ್ಲೋಕದ್ವಯತ್ತಿಲುಮ್** - ಎರಡು ಶ್ಲೋಕದಲ್ಲೂ, **"ತುಪ್ಪುಡೈಯಾರ್"** ಎಂಬ ಪಾಶುರದಲ್ಲೂ ಸಹ, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, ಪ್ರಪನ್ನನಿಗೆ, ಅಂತಿಮ ಸ್ಮೃತ್ಯಾದಿಗಳ, **ನಿರ್ಬನ್ಧಮಿಲ್ಲೈ** - ನಿರ್ಬಂಧವೇನೂ ಇರುವದಿಲ್ಲವು ಎಂದರೆ ಅಂತಿಮಸ್ಮೃತ್ಯಾದಿಗಳು ಆವಶ್ಯಕವಿಲ್ಲವೆಂಬ ಭಾವವು ಇಲ್ಲಿ ಆದಿ ಶಬ್ದದಿಂದ ನಾಮಸಂಕೀರ್ತನಾದಿಗಳು ಸೂಚಿಸಲ್ಪಟ್ಟವು ಈ ಶ್ಲೋಕಗಳೂ ಪಾಶುರವೂ ಯಾವುವೆಂದರೆ:—

"ನಷ್ಟಸ್ಮೃತಿಃ" ಶ್ಲೋಕವು:—"**ತೀರ್ಥೇ ಶ್ವಪಚಗೃಹೇ ವಾ ನಷ್ಟಸ್ಮೃತಿರಪಿ ಪರಿತ್ಯಜನ್ ದೇಹಂ । ಜ್ಞಾನ ಸಮಕಾಲ ಮುಕ್ತ್ವಾ ಕೈವಲ್ಯಂ ಯಾತಿ ಗತಶೋಕಃ**" ಎಂದರೆ, **ತೀರ್ಥೇ** - ಪುಣ್ಯತೀರ್ಥಗಳಲ್ಲಾಗಲಿ, **ಶ್ವಪಚಗೃಹೇವಾ** - ನಾಯಿಯನ್ನು ಬೇಯಿಸಿ ತಿನ್ನುವ ಚಂಡಾಲನ ಮನೆಯಲ್ಲಿಯೇ ಆಗಲಿ, ಇದರಿಂದ ಪ್ರದೇಶ ನಿರ್ಬಂಧವು ಇಲ್ಲವೆಂದು ತೋರುತ್ತದೆ. ಹಿಂದೆಯೇ ಕಾಲನಿಯಮವಿಲ್ಲವೆಂದು ಹೇಳಿರುತ್ತಾರೆ. ಈಗ ಅಂತಿಮ ಸ್ಮೃತಿಯೂ ಬೇಕಿಲ್ಲವೆಂದು ಹೇಳಲ್ಪಡುತ್ತದೆ. **ನಷ್ಟಸ್ಮೃತಿರಪಿ**-ಪ್ರಜ್ಞೆಯು ಇಲ್ಲದಿದ್ದರೂ ಎಂದರೆ ಆ ಕಾರಣದಿಂದ ಭಗವಂತನನ್ನು ಸ್ಮರಿಸದಿದ್ದರೂ, **ದೇಹಂ ಪರಿತ್ಯಜನ್**-ದೇಹವನ್ನು ಪರಿತ್ಯಾಗ ಮಾಡುವವನಾಗಿ, **ಜ್ಞಾನಸಮಕಾಲಮುಕ್ತ್ವಾ**-ಜ್ಞಾನವು ಸರಿಯಾಗಿರುವ ಕಾಲದಲ್ಲಿ, **ಉಕ್ತ್ವಾ**-ದ್ವಯೋಚ್ಚಾರಣೆಯನ್ನು ಮಾಡಿ, **ಕೈವಲ್ಯಂ**-ಮೋಕ್ಷವನ್ನು, **ಗತಶೋಕಃ**-ಏನೊಂದೂ ಶೋಕವಿಲ್ಲದವನಾಗಿ, **ಯಾತಿ**-ಹೊಂದುವನು.

ಇಲ್ಲಿ **ನಷ್ಟಸ್ಮೃತಿರಪಿ** ಎಂದು ಹೇಳಿರುವದರಿಂದ ಅಂತಿಮ ಸ್ಮೃತಿಯು ಆವಶ್ಯಕವಿಲ್ಲವು ವರಾಹಪುರಾಣದ ಎರಡು ಶ್ಲೋಕಗಳು ಯಾವುವೆಂದರೆ:—

ಸ್ಥಿತೇ ಮನಸಿ ಸುಸ್ವಸ್ಥೇ ಶರೀರೇ ಸತಿ ಯೋ ನರಃ ।
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ ।
ತತಸ್ತಮ್ಮ್ರಿಯಮಾಣಂತು ಕಾಷ್ಠಪಾಷಾಣಸನ್ನಿಭಂ ।
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂಗತಿಂ ॥

---

(೧) ವರಾಹಪುರಾಣ. (೨) ಪೆರಿ. ತಿರು. ೪. ೧೦. ೧.

"ಮನಸ್ಸು ಶಾಂತತೆಯನ್ನೂ, ಶರೀರವು ಧಾತುಸಾಮ್ಯವನ್ನೂ ಹೊಂದಿರುವಾಗಲೇ ಯಾವ ಮನುಷ್ಯನಾಗಲಿ ಜನ್ಮಾದಿಗಳಿಲ್ಲದೆ ನಿತ್ಯನಾದ ವಿಶ್ವರೂಪನಾದ ನನ್ನನ್ನು ಸ್ಮರಿಸುವನೋ, ಅಂತಹ ನನ್ನ ಭಕ್ತನನ್ನು, ಆತನ ದೇಹವಿಯೋಗಕಾಲದಲ್ಲಿ ಮರದ ತುಂಡಿಗೂ ಕಲ್ಲಿಗೂ ಸಮಾನನಾಗಿ ಜ್ಞಾನವಿಲ್ಲದೆ ಬಿದ್ದಿರುವವನನ್ನು ನಾನು ಸ್ಮರಿಸುವನಾಗಿ, ಎಂದರೆ ಅವನು ನನ್ನನ್ನು ಸ್ಮರಿಸುವ ಹಾಗೆ ಮಾಡುವದೇ ಮೊದಲಾದ ಕೃಪೆಯನ್ನು ಮಾಡುವ ಸಮಯವೆಂದು ತಿಳಿದವನಾಗಿ, ಆತನಿಗೆ ಉತ್ತಮ ಗತಿಯನ್ನು ಹೊಂದಿಸುವುದಕ್ಕಾಗಿ ಕರೆದುಕೊಂಡುಹೋಗುವೆನು." ಇದಕ್ಕೆ ವರಾಹ ಚರಮಶ್ಲೋಕವೆಂಬ ಪ್ರಸಿದ್ಧಿಯುಂಟು. ಈ ಶ್ಲೋಕಾಭಿಪ್ರಾಯವನ್ನೇ ಶ್ರೀ ದೇಶಿಕರವರೇ ಅವರು ಬರೆದಿರುವ ಅಭೀತಿಸ್ತವದ ೬ನೆಯ ಶ್ಲೋಕವಾದ "ಸ್ಥಿತೇ ಮನಸಿ ವಿಗ್ರಹೇ" ಎಂಬ ಶ್ಲೋಕದಲ್ಲೂ ಉಪಪಾದಿಸಿರುತ್ತಾರೆ ದಾಸನು ಬರೆದಿರುವ ಅಭೀತಿಸ್ತವ ವ್ಯಾಖ್ಯಾನವನ್ನು ಪರಾಂಬರಿಸಬಹುದು. ಇಲ್ಲಿ **ಕಾಷ್ಠಪಾಷಾಣ ಸನ್ನಿಭಂ** ಎಂದು ಹೇಳಿರುವದರಿಂದ ಜ್ಞಾನವಿಲ್ಲದೆ ಇಂದ್ರಿಯವ್ಯಾಪಾರಗಳೆಲ್ಲಾ ನಿಂತುಹೋಗಿ ಸರ್ವೇಶ್ವರನನ್ನು ಸ್ಮರಿಸದೇ ಇದ್ದರೂ ದಿವ್ಯವೈಕುಂಠವನ್ನು ಹೊಂದಿಸುವನೆಂದು ಸರ್ವೇಶ್ವರನೇ ಹೇಳಿರುವದರಿಂದ ಅಂತಿಮ ಸ್ಮೃತಿಯ ಆವಶ್ಯಕವಿಲ್ಲವು.

ಪೆರಿಯಾಳ್ವಾರ್‌ರವರ ಪಾಶುರವು:—

ತುಪ್ಪುಡೈಯಾರೈ ಯಡೈವದೆಲ್ಲಾಮ್ ಶೋರ್ವಿಡತ್ತು ತ್ತುಣೈಯಾವರೆನ್ರೇ । ಒಪ್ಪಿಲೇ ನಾಗಿಲುಮ್ ನಿನ್ನಡೈನ್ದೇನ್ ನಾನೈಕ್ಕು ನೀಯರುಳ್ ಶೆಯ್‌ದ ವೈಯಾಲ್ ॥ ಎಪ್ಪೋದುಮ್ ವನ್ದು ನಲಿಯುಮ್ಪೋದಜ್ಗದು ನಾನುನ್ನೈ ನಿನೈಕ್ಕಮಾಟ್ಟೇನ್ । ಅಪ್ಪೋದೈಕ್ಕಿಪ್ಪೋದೇ ಶೊಲ್ಲಿವೈತ್ತೇನ್ ನರಜ್ಗತ್ತರವಣೈಪ್ಪಳ್ಳಿಯಾನೇ ॥ (೪. ೧೦. ೧.)

ಇದರರ್ಥವೇನೆಂದರೆ:— **ತುಪ್ಪುಡೈಯಾರೈ**- ಶಕ್ತಿಯುಳ್ಳವರನ್ನು. **ಅಡೈವದು** - ಆಶ್ರಯಿಸುವದು; ಈ ಸಂದರ್ಭದಲ್ಲಿ ರಕ್ಷಣ ಸಾಮರ್ಥ್ಯವನ್ನು ಹೊಂದಿರುವ ಸರ್ವೇಶ್ವರನನ್ನು ಆಶ್ರಯಿಸುವದು, ಇಲ್ಲಿ ಬಹುವಚನವು ಪೂಜ್ಯತೆಯನ್ನು ಸೂಚಿಸುತ್ತದೆ. ಈ ರಕ್ಷಣ ಸಾಮರ್ಥ್ಯವು **"ನ ಸಂಪದಾಂ ಸಮಾಹಾರೇ ವಿಪದಾಂ ವಿನಿವರ್ತನೇ । ಸಮರ್ಥೋ ದೃಶ್ಯತೇ ಕಶ್ಚಿತ್ ತಂ ವಿನಾ ಪುರುಷೋತ್ತಮಂ"** ಎಂದರೆ "ಸರ್ವ ಶ್ರೇಯಸ್ಸನ್ನುಂಟುಮಾಡುವದರಲ್ಲೂ ಸಮಸ್ತ ವಿಪತ್ತುಗಳನ್ನು ಹೋಗಲಾಡಿಸುವದರಲ್ಲೂ ಆ ಶ್ರಿಯಃಪತಿಯಾದ ಪುರುಷೋತ್ತಮನನ್ನು ಬಿಟ್ಟರೆ ಬೇರೆ ಯಾರೊಬ್ಬ ಸಮರ್ಥರೂ ಇಲ್ಲವು" ಎಂದೂ ಮತ್ತು **"ನಹಿ ಪಾಲನ ಸಾಮರ್ಥ್ಯ ಮೃತೇ ಸರ್ವೇಶ್ವರಂ ಹರಿಂ"** "ಸರ್ವೇಶ್ವರನಾದ

ಶ್ರೀಹರಿಯನ್ನು ಬಿಟ್ಟರೆ ಬೇರೆ ಯಾರಿಗೂ ರಕ್ಷಿಸುವ ಸಾಮರ್ಥ್ಯವಿಲ್ಲವು" ಎಂದೂ ಹೇಳಿರುವ ಹಾಗೆ ಶ್ರಿಯಃಪತಿಗೆ ಮಾತ್ರವೇ ಆ ಸಾಮರ್ಥ್ಯವು ಎಂಬ ಭಾವವು; **ಎಲ್ಲಾ ಶೋರ್‍ವಿಡತ್ತು** - ದಶೇಂದ್ರಿಯಂಗಳಿಂದ ಕೂಡಿದ ಮನಸ್ಸು ಎಲ್ಲವೂ ತಮ್ಮ ವ್ಯಾಪಾರವನ್ನು ತೊರೆದ ಸಮಯದಲ್ಲಿ ಎಂದರೆ ಅಂತಿಮ ಸಮಯದಲ್ಲಿ ದೇಹವು ಕಾಷ್ಠಪಾಷಾಣಸದೃಶವಾಗಿ ಬಿದ್ದಿರುವಾಗ, **ತುಣೈಯಾವರೆನ್ರೇ** - "ಅಹಂ ಸ್ಮರಾಮಿ ಮದ್ಭಕ್ತಂ" ಎಂದು ಹೇಳಿರುವ ಸ್ವೋಕ್ತಿಗೂ, "**ಮಾ ಶುಚಃ**" ಎಂಬ ಸ್ವೋಕ್ತಿಗೂ ಅನುಸಾರವಾಗಿ ನೀವು ಅಂತಹ ಕಷ್ಟದೆಶೆಯಲ್ಲಿ ರಕ್ಷಕರಾಗುವಿರೀ ಎಂದೇ, **ಒಪ್ಪಿಲೇನಾಗಿಲುಮ್ - "ಜ್ಞಾಜ್ಞೌ ಅಜಾವೀಶ ನೀಶೌ"** ಎಂಬ ಶ್ರುತಿಯಲ್ಲಿ ತೋರುವ ಹಾಗೂ, "**ಅಹಮಸ್ಮ್ಯಪರಾಧ ಚಕ್ರ ವರ್ತೀ**" ಎಂಬಲ್ಲಿ ಹೇಳಿರುವ ಹಾಗೂ, ನಾನು ಅಪರಾಧ ಚಕ್ರವರ್ತಿಯಾಗಿಯೂ ನೀನು ಕಲ್ಯಾಣಗುಣಗಳಲ್ಲಿ ಸಾರ್ವಭೌಮನಾಗಿಯೂ ಹೀಗೆ ನಿನ್ನ ಕೃಪೆಗೆ ಯೋಗ್ಯತೆಯಿಲ್ಲದಿದ್ದರೂ ಕೂಡ, **ನಿನ್ನಡೈನ್ದೇನ್** - ನಿನ್ನ ಪಾದಾರವಿಂದವನ್ನಾ ಶ್ರಯಿಸಿದೆನು. ಹೀಗೆ **ಪೂರ್ಣ** ನಂಬಿಕೆಯಿಂದ ರಕ್ಷಿಸುವನೆಂದು ಆಶ್ರಯಿಸಿದೆ ಯಲ್ಲಾ, ನಾವು ಹಾಗೆ ರಕ್ಷಿಸಿದುದನ್ನು ಎಲ್ಲಿ ಕಂಡಿರುವಿರಿ ಎಂದರೆ ಅದಕ್ಕೆ ಹೇಳು ತ್ತಾರೆ:—**ಆನೈಕ್ಕು ನೀಯರುಳ್ ಶೆಯ್ದು ಮೈಯಾಲ್** - ನೀವು ಆನೆಗೆ ಕೃಪೆ ಮಾಡಿರುವದರಿಂದ, ತಿರ್ಯಕ್ಕಾದ ಗಜೇಂದ್ರನಿಗೆ ಉಂಟಾದ ಆರ್ತಿಯನ್ನೂ ಅನನ್ಯಗತಿತ್ವವನ್ನೂ ಕಂಡು ಹೋಗಲಾಡಿಸಿದುದರಿಂದ ಎಂಬ ಭಾವವು. ಆದರೆ ಹಾಗೆ ಆನೆಗೆ ಆರ್ತಿ ಬಂದಾಗ ಪ್ರಾರ್ಥಿಸಿದ ಹಾಗೆ ನಿನಗೂ ಆರ್ತಿ ಒದಗಿ ಪ್ರಾರ್ಥಿ ಸಿದರೆ ರಕ್ಷಿಸುವೆನು ಎಂದೇನಾದರೂ ಹೇಳುವಿರಾದರೆ, ಹಾಗೆ ಆಗುವದಿಲ್ಲವು, ನನಗೆ ಆರ್ತಿ ಬಂದಾಗ, **ಏಯ್‌ಪ್ಪೆನ್ನೈ ವನ್ದು ನಲಿಯುಮ್ಪೋದು ಅಙ್ಗು ದುಮ್ ನಾನುನ್ನೈ ನಿನೈಕ್ಕಮಾಟ್ಟೇನ್** - ವಾತ ಪಿತ್ತ ಶ್ಲೇಷ್ಮಾಧಿಕ್ಯದಿಂದ ಕ್ಲೇಶಪಡುತ್ತಿರುವ ಕಾಲದಲ್ಲಿ ನಿಮ್ಮನ್ನು ಸ್ಮರಿಸುವದು ಅಸಾಧ್ಯವು, ಹಾಗಾದರೆ ಏನು ಮಾಡುತ್ತೀ ಎಂದು ಕೇಳುತ್ತೀರೋ ಹೇಳುವೆನು ಲಾಲಿಸಿ ; **ಅಪ್ಪೋದಿಕ್ಕಿ ಪ್ಪೋದೆ ಶೊಲ್ಲಿವೈತ್ತೇನ್** - ಹಾಗೆ ಕರಣಕಳೇಬರಗಳ ವ್ಯಾಪಾರವೆಲ್ಲಾ ಕುಂದಿ ಹೋಗಿರುವ ಆ ಕಾಲಕ್ಕೆ ಬದಲಾಗಿ ಈಗ ದೇಹೇಂದ್ರಿಯ ದಾರ್ಢ್ಯವಿರುವಾಗಲೇ ನಿಮ್ಮನ್ನು ಆಶ್ರಯಿಸಿ ಸ್ತೋತ್ರಮಾಡಿ ದ್ವಯೋಚ್ಚಾರಣಾದಿಗಳನ್ನು ಮಾಡಿರು ವೆನು. ಆಗಲಿ ನೀವೀಗ ಮಾಡಿದ್ದಕ್ಕಾಗಿ ಆಗ ರಕ್ಷಿಸಬೇಕೆಂಬ ನಿರ್ಬಂಧವೇ ನೆಂದು ಕೇಳುವಿರೋ ? **ಅರಙ್ಗತ್ತರವಣೈಪ್ಪಳ್ಳಿಯಾನೇ** - ಹೀಗೆ ನಮ್ಮಂಥಾ ವರನ್ನು ರಕ್ಷಿಸಬೇಕೆಂಬ ವ್ರತವನ್ನಾಚರಿಸಿ, ಬಹು ದೂರದಲ್ಲಿರುವ ಕ್ಷೀರಸಮುದ್ರ ವನ್ನು ಬಿಟ್ಟು ಬಂದು, ಅಲ್ಲಿ ತಾವಿರುವ ಅನ್ಯಾದೃಶವಾದ ವೈಭವವನ್ನು ನಮಗೆ

ತಿಳಿಯಪಡಿಸುವುದಕ್ಕಾಗಿ ಈ ಕಾವೇರೀ ಮಧ್ಯದೇಶವಾದ ಶ್ರೀರಂಗದಲ್ಲಿ ಶೇಷ ಪರ್ಯಂಕದಲ್ಲಿ ಶಯನಿಸಿದ್ದೀರಲ್ಲವೇ ಎಂಬಭಿಪ್ರಾಯದಿಂದ ಸಂಬೋಧನೆ ಮಾಡಿರುತ್ತಾರೆ.

ಹಾಗೆಯೇ ಕುಲಶೇಖರಾಳ್ವಾರ್ರವರೂ **"ಕೃಷ್ಣ ತ್ವದೀಯ ಪದ ಪಙ್ಕಜ ಪಂಜರಾನ್ತಮದ್ಯೈವ ಮೇ ವಿಶತು ಮಾನಸ ರಾಜಹಂಸಃ । ಪ್ರಾಣ ಪ್ರಯಾಣ ಸಮಯೇ ಕಫ ವಾತಪಿತ್ತೈಃ ಕಣ್ಠಾವರೋಧನ ವಿಧೌ ಸ್ಮರಣಂ ಕುತಸ್ತೇ"** ಎಂಬಲ್ಲಿ ಈ ಅಭಿಪ್ರಾಯವನ್ನೇ ತಿಳಿಸಿರುತ್ತಾರೆ. ಓ ಕೃಷ್ಣನೇ, ನನ್ನ ಮನಸ್ಸೆಂಬ ರಾಜಹಂಸ ಪಕ್ಷಿಯು ನಿನ್ನ ಪಾದಕಮಲ ಪಂಜರದೊಳಗೆ ಈಗಲೇ ಎಂದರೆ ದೇಹೇಂದ್ರಿಯಗಳೆಲ್ಲಾ ದೃಢವಾಗಿರುವಾಗಲೇ ಪ್ರವೇಶಿಸಲಿ. ಇಲ್ಲಿ ಪಕ್ಷಿಯು ಪಂಜರಪ್ರವೇಶ ಸಾಮ್ಯವನ್ನು ಏಕೆ ಹೇಳಿದರೆಂದರೆ ಪಂಜರಸ್ಥ ಪಕ್ಷಿಯು ಹೇಗೆ ಅತ್ತಿತ್ತ ಓಡಾಡದೆ ಪಂಜರದಲ್ಲೇ ಇರುತ್ತದೆಯೋ, ಹಾಗೆಯೇ ತಮ್ಮ ಮನಸ್ಸು ಚಂಚಲವಾಗಿ ಐಹಿಕ ಭ್ರಮಣೆಯಿಲ್ಲದೆ ಸದಾ ಕೃಷ್ಣ ಪದಪಂಕಜದಲ್ಲೇ ಸಕ್ತವಾಗಿರಲೆಂಬ ಭಾವವು. ಮನಸ್ಸನ್ನು ಶುಕಾದಿ ಇತರ ಪಕ್ಷಿಗಳಿಗೆ ಹೋಲಿಸದೆ ರಾಜಹಂಸಪಕ್ಷಿಗೆ ಏಕೆ ಹೋಲಿಸಿದರೆಂದರೆ ಮನಸ್ಸು ಇಂದ್ರಿಯಗಳಿಗೆಲ್ಲಾ ಅಧಿಪತಿಯಾಗಿ ರಾಜನಹಾಗೆ ತನ್ನ ವಶ ಮಾಡಿಕೊಂಡು, **"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ"** ಎಂದು ಹೇಳಿರುವ ಹಾಗೆ, ಮೋಕ್ಷಕ್ಕೂ ಕೂಡ ಅದೇ ಕಾರಣಭೂತವಾದುದರಿಂದ ಮಾನಸ ರಾಜಹಂಸಃ ಎಂಬ ಪ್ರಯೋಗವು. ಯಾವಾಗ ಅದು ಮೋಕ್ಷಮಾರ್ಗಕ್ಕೆ ಸಹಕಾರಿಯಾಯಿತೋ ಆಗ ರಾಜಹಂಸವೆಂದು ಹೇಳಿಸಿಕೊಳ್ಳಲು ಏನೊಂದೂ ಅಭ್ಯಂತರವಿಲ್ಲವು. ಏಕೆ ಈಗಲೇ ಪ್ರವೇಶ ಮಾಡಬೇಕೆಂದರೆ :—ಕಫ, ವಾತ, ಪಿತ್ತಗಳ ಆಧಿಕ್ಯದಿಂದ ಗಂಟಲಲ್ಲಿ ಮಾತು ಕೂಡ ಹೊರಡದಿರುವ, ದೇಹಾವಸಾನದ ದುಸ್ಥಿತಿಯಲ್ಲಿ, ಕರುಣಾನಿಧಿಯಾದ ನಿನ್ನ ಅಂತಿಮ ಸ್ಮರಣೆಗೆ ಅವಕಾಶವೆಲ್ಲಿರುತ್ತದೆ ಎಂದು ಹೇಳಿರುತ್ತಾರೆ.

ಆಗಲಿ, ಹೀಗೆ ಅಂತಿಮಸ್ಮೃತಿಯ ನಿರ್ಬಂಧವಿಲ್ಲದಿದ್ದರೆ, ಶ್ರೀ ಯತಿವರ್ಯರೇ ಶರಣಾಗತಿ ಗದ್ಯದಲ್ಲಿ ಅನ್ತಿಮಸ್ಮೃತಿಯು ಇರಬೇಕೆಂದು ಹೇಳಿದ ಹಾಗೆ ತೋರುತ್ತದಲ್ಲಾ, ಅದಕ್ಕೆ ನಿರ್ವಾಹ ಹೇಗೆ? ಎಂದರೆ ಆ ಪ್ರಕರಣವನ್ನು ಉದಾಹರಿಸಿ ಅದಕ್ಕೆ ಬೇರೇ ವಿಧವಾಗಿ ನಿರ್ವಾಹ ಮಾಡಿ ಬೋಧಿಸುತ್ತಾರೆ. ಶ್ರೀ ಭಾಷ್ಯಕಾರರಿಗೆ ಶ್ರೀ ಕಾಂಚೀಪೂರ್ಣರ ಮತ್ತು ಶ್ರೀ ವರದರಾಜರ ಕೃಪಾಗಳ ಮೂಲಕ ಪ್ರಾಪ್ತವಾದ ಷಡರ್ಥದಲ್ಲಿ ಅಂತಿಮ ಸ್ಮೃತಿಯು ಅನಾವಶ್ಯಕವೆಂಬುವದೂ ಒಂದಾಗಿರುವಾಗ, ಈ ಸಂದರ್ಭದಲ್ಲಿ ಶ್ರೀ ಯತಿವರ್ಯರು ಅದಕ್ಕೆ ವಿರೋಧವಾಗಿ

ಅಸ್ಮಿನ್ನರ್ಥೇ ಗದ್ಯವಾಕ್ಯಸ್ಯಾ ವಿರೋಧಿತ್ವಮ್.

(೧) "ಶರೀರಪಾತ ಸಮಯೇತು ಕೇವಲಂ ಮದೀಯಯೈವ ದಯಯಾತಿ ಪ್ರಬುದ್ಧೋ ಮಾಮೇವಾವಲೋಕಯನ್ನಪ್ರಚ್ಯುತ ಪೂರ್ವ

ಅನುಗ್ರಹಿಸುವರೇ ? ಎಂದಿಗೂ ಇಲ್ಲವು. ಆದುದರಿಂದ ಅದಕ್ಕೆ ನಿರ್ವಾಹ ಹೇಗೆಂಬುವದನ್ನು ಪ್ರದರ್ಶಿಸುತ್ತಾರೆ.

ಈ ವಾಕ್ಯವು ಶ್ರೀ ಭಾಷ್ಯಕಾರರ ಶರಣಾಗತಿ ಪ್ರಾರ್ಥನೆಗಳಾದ ನಂತರ ಶ್ರೀ ರಂಗನಾಥನು ತನ್ನ ಭಕ್ತಾಗ್ರೇಸರರನ್ನು ಕುರಿತು ಹೇಳುವದಾಗಿರುತ್ತದೆ:— **ಶರೀರಪಾತಸಮಯೇತು** – ಶರೀರಾವಸಾನ ಕಾಲದಲ್ಲಾದರೋ, ಇಲ್ಲಿ 'ತು' ಶಬ್ದದಿಂದ ಕೃಪಾಲವಾಲನ ತತ್ಕಾಲದ ವಿಶೇಷ ಕೃಪೆಯು ದ್ಯೋತಿತವು, ಅಥವಾ ಇಂದ್ರಿಯ ಮನಸ್ಸು ಮೊದಲಾದವುಗಳು ವಿಶ್ರಾಂತಿಯನ್ನು ಹೊಂದುವದರಿಂದ ಕಾಷ್ಟಪಾಷಾಣಗಳಿಗೆ ಸಮಾನವಾಗಿ ದೇಹವು ಬಿದ್ದಿರುವಾಗ ಜ್ಞಾನವುಳ್ಳವನಾಗಿರುವದು ಅಶಕ್ಯವೆಂಬ ಭಾವವನ್ನಾದರೂ ಸೂಚಿಸುತ್ತದೆ, **ಕೇವಲಂ**-ಪೂರ್ವಾಭ್ಯಾಸವೇನೂ ಬೇಕಾಗದಿರುವ ಬರೀ, **ಮದೀಯಯೈವ ದಯಯಾ** - ನನ್ನ ಸಂಬಂಧವನ್ನಾದ ದಯೆಯಿಂದಲೇ, ಇನ್ಯಾರ ದಯೆಯೂ ಬೇಕಿಲ್ಲವೆಂಬ ಭಾವವು, ಆ ಕಾರಣದಿಂದಲೇ ಏವ ಎಂಬವಧಾರಣವು, ಅಥವಾ ದಯೆ ಎಂಬುದು ನನಗೆ ನಿರುಪಾಧಿಕವಾದುದೆಂಬ ಭಾವವೂ ತೋರಿಬರುತ್ತದೆ, ತನ್ನ ದಯೆ ಮಾತ್ರವೇ ಸಾಕು ಎಂದು ಹೇಳಿರುವದರಿಂದ ಪುಣ್ಯಕ್ಷೇತ್ರವಾಸ, ಪುಣ್ಯತೀರ್ಥಸ್ನಾನ, ದ್ವಯಾರ್ಥಾನುಸಂಧಾನ ಮುಂತಾದುವೂ ಬೇಕಿಲ್ಲವೆಂಬುದೂ ತೋರಿಬರುತ್ತದೆ ; ಮತ್ತು ಆ ಕಾಲದಲ್ಲಿ ಈತನ ಪ್ರಾರ್ಥನೆಯೂ ಕೂಡ ಬೇಕಿಲ್ಲವೆಂಬುದೂ ಸೂಚಿತವಾಯಿತು, **ಅತಿ ಪ್ರಬುದ್ಧಃ** – ಶರೀರ ತ್ಯಾಗ ಮಾಡುವದಕ್ಕಿಂತ ಮುಂಚೆ ಹೇಗೆ ಜ್ಞಾನವಿತ್ತೋ ಹಾಗೆಯೇ ತುಂಬಾ ಜ್ಞಾನವುಳ್ಳವನಾಗಿ, ಅಥವಾ ಆವಾಗಿದ್ದುದಕ್ಕಿಂತಲೂ ಹೆಚ್ಚು ಜ್ಞಾನವುಳ್ಳವನಾಗಿ, ಅಥವಾ ಮುಂದೆ ಉಂಟಾಗುವ ದಿವ್ಯ ಜ್ಞಾನ ಸೂಚಕವಾಗಿ ಅತಿ ಪ್ರಬುದ್ಧನಾಗಿ, **ಮಾಮೇವಾವಲೋಕಯನ್** - ನನ್ನನ್ನೇ ನೋಡುವವನಾಗಿ ಎಂದರೆ ನನ್ನ ದಿವ್ಯಮಂಗಳ ವಿಗ್ರಹವನ್ನೇ ಸಾಕ್ಷಾತ್ಕರಿಸಿದವನಾಗಿ, ಅಥವಾ ಅನುಸಂಧಾನ ಮಾಡುವವನಾಗಿ, ಇಲ್ಲಿ ಏವ ಎಂಬ ಅವಧಾರಣದಿಂದ, ಇಲ್ಲಿ ಕಾಣುವ ಸಮಸ್ತ ವಸ್ತುಗಳೂ ಸರ್ವೇಶ್ವರನಿಗೆ ಅಪೃಥಕ್ಸಿದ್ಧವಿಶೇ

---

(೧) ಶರಣಾಗತಿ ಗದ್ಯ.

ಸಂಸ್ಕಾರ ಮನೋರಥಃ" ಎನ್ರುಳಿಚ್ಚೆಯ್‌ದದು ಇವ್ವಚನಙ್ಗಳುಕ್ಕು ಅವಿರುದ್ಧಮಾಗ ವೊರು ಪ್ರಕಾರತ್ತಾಲೇ ನಿರ್ವಾಹ್ಯಮ್ :—ಎಙ್ಗನೇ ಯೆನ್ನಿಲ್ :—

ಷಣವೆಂಬ ಜ್ಞಾನದಿಂದ ಎಲ್ಲಾದರಲ್ಲೂ ಸರ್ವೇಶ್ವರನೇ "ವೃಕ್ಷೇ ವೃಕ್ಷೇಽತ ಪಶ್ಯಾಮಿ ಚೀರಕೃಷ್ಣಾಜಿನಾಂಬರಂ" ಎಂದರೆ "ಪ್ರತಿಯೊಂದು ವೃಕ್ಷದಲ್ಲೂ ನಾರುಮಡಿ ಧರಿಸಿದ ಶ್ರೀರಾಮನೇ ಕಣ್ಣಿಗೆ ಕಾಣುತ್ತಿದ್ದಾನೆ" ಎಂಬ ಮಾರೀ ಚೋಕ್ತಿಯ ಹಾಗೆ ತೋರುವವನಾಗಿ ಎಂಬರ್ಥವು, **ಅಪ್ರಚ್ಯುತ ಪೂರ್ವ ಸಂಸ್ಕಾರ ಮನೋರಥಃ** - ಜಾರಿ ಬೀಳದ ಅಥವಾ ನಾಶಹೊಂದದ ಪೂರ್ವ ಸಂಸ್ಕಾರ ಮೂಲವಾದ ಪ್ರಾಪ್ತಿಮನೋರಥವುಳ್ಳವನಾಗಿ, ಎಂದರೆ ಸರ್ವೇಶ್ವರನೇ ಪರಮಪ್ರಾಪ್ಯವೆಂಬ ಶಾಸ್ತ್ರಜನ್ಯವಾದ ಅನುಭವ ಸಂಸ್ಕಾರಕ್ಕೆ ಈ ಅಂತಿಮ ದಶೆಯಲ್ಲುಂಟಾಗುವ ದೇಹತ್ಯಾಗ ಕ್ಲೇಶಗಳಿಂದೇನೂ ಚ್ಯುತಿಯಿಲ್ಲವೆಂದೂ, ಆಗ ಈ ದೇಹತ್ಯಾಗ ಮಾಡುವ ಪ್ರಪನ್ನನಿಗೆ ಅನುಬಂಧಿಗಳಲ್ಲಿರುವ ಪ್ರೀತಿಯೂ ಕೂಡ ಏನೂ ಮಾಡಲಾರದೆಂದೂ ಹೇಳಲ್ಪಟ್ಟಿತು. **ಎನ್ರುಳಿಚ್ಚೆಯ್‌ದದು** - ಎಂದು ಕೃಪೆಯೂ ಹೇಳಿರುವದು, **ಇವ್ವಚನಙ್ಗಳುಕ್ಕು** - ಹಿಂದಿನ ಭಾಷ್ಯಕಾರಸೂಕ್ತಿ, ವರಾಹಪುರಾಣೋಕ್ತಿ, ಪೆರಿಯಾಳ್ವಾರ್ರವರ ಪಾಶುರಗಳಿಗೂ, **ಅವಿರುದ್ಧಮಾಗ** - ವಿರೋಧವುಂಟಾಗದ ಹಾಗೆ, **ಒರು ಪ್ರಕಾರತ್ತಾಲೇ ನಿರ್ವಾಹ್ಯಮ್** - ಒಂದು ವಿಧವಾಗಿ ನಿರ್ವಹಿಸತಕ್ಕದ್ದಾಗಿರುತ್ತದೆ. ಪ್ರಪನ್ನನಿಗೆ ಅಂತಿಮ ಸ್ಮೃತಿಯ ಆವಶ್ಯಕತೆಯಿಲ್ಲವೆಂಬಭಿಪ್ರಾಯಕ್ಕೆ ವಿರೋಧವಿಲ್ಲದ ಹಾಗೆ ಈ ಗದ್ಯವಾಕ್ಯಕ್ಕೆ ಅರ್ಥವನ್ನು ಹೇಳತಕ್ಕದ್ದು. ಶ್ರೀ ಭಾಷ್ಯಕಾರರ ಷಡರ್ಥಪ್ರಾಪ್ತಿ ಆಳ್ವಾರ್ ಅಂತಿಮ ಕಾಲಾಭಿಪ್ರಾಯಗಳಿಂದ ಅವರಭಿಪ್ರಾಯವು ಅಂತಿಮ ಸ್ಮರಣವು ಅನಪೇಕ್ಷಿತವೆಂದೇ ಆಗಿರುವಾಗ ಇಲ್ಲಿ ಅದಕ್ಕೆ ವಿರುದ್ಧವಾಗಿ ಅಭಿಪ್ರಾಯಪಡುವರೇ ? ಎಂದಿಗೂ ಇಲ್ಲವು. ಆದುದರಿಂದ ಬೇರೇ ವಿಧವಾಗಿ ಪೂರ್ವಾಭಿಪ್ರಾಯಕ್ಕೆ ವಿರೋಧವಿಲ್ಲದ ಹಾಗೆ ಅನ್ವಯಿಸತಕ್ಕದ್ದೆಂಬ ಭಾವವು. **ಎಙ್ಗನೇ ಯೆನ್ನಿಲ್**- ಅದು ಹೇಗೆ ಎಂದರೆ :—

ಆದುದರಿಂದ ಈ ಗದ್ಯವಚನಕ್ಕೆ ಬೇರೇ ವಿಧವಾಗಿ ನಿರ್ವಾಹ ಮಾಡಬೇಕೆಂದೆಣಿಸಿ ಕೆಲವರು ಒಂದು ವಿಧವಾಗಿಯೂ ಇನ್ನು ಕೆಲವರು ಇನ್ನೊಂದು ವಿಧವಾಗಿಯೂ ನಿರ್ವಾಹ ಮಾಡುತ್ತಾರೆ. ಮೊದಲು ಕೆಲವಾಚಾರ್ಯರಭಿಪ್ರಾಯವನ್ನು ತಿಳಿಸಿ, ಅದರಿಂದುಂಟಾಗುವ ಅನುಪಪತ್ತಿಯನ್ನು ಪ್ರದರ್ಶಿಸಿ, ಅದಕ್ಕೆ

ಗದ್ಯವಾಕ್ಯಸ್ಯ ಪರೋಕ್ತಾರ್ಥೇ ಅನುಪಪತ್ತಿ ಪ್ರದರ್ಶನಮ್

ಗದ್ಯತ್ತಿಲರುಳಿಚ್ಚೆಯ್‌ಗಿರ ಅಂತಿಮಸ್ಮೃತಿ (ಇನ್ನಂತಿಮಸ್ಮೃತಿಯೈಯುಮ್) ಉಪಾಯಫಲಮಾಗಕ್ಕೊಳ್ಳಿ ಪ್ರಪನ್ನರಾನವರ್‌ಗಳುಕ್ಕು ವರಕ್ಕಡವದೆನ್ರು ಶಿಲ ಆಚಾರ್ಯರ್‌ಗಳ್ ನಿರ್ವಹಿಪ್ಪಾರ್‌ಗಳ್ ; ಇಪ್ಪಡಿಯಾಗಿ

ಅನಂತರ ಸರಿಯಾದಭಿಪ್ರಾಯವು ಯಾವುದೆಂದು ತಿಳಿಸುತ್ತಾರೆ. ೧. **"ನಷ್ಟಸ್ಮೃತಿಃ"** ಮೊದಲಾದ ಪ್ರಮಾಣಗಳಿಂದ ಅಂತಿಮಸ್ಮೃತಿ ಅನಾವಶ್ಯಕವೆಂಬುವದು, ಅನ್ತಿಮ ಸ್ಮೃತಿಯನ್ನು ಭರನ್ಯಾಸಫಲವಾಗಿ ಅಪೇಕ್ಷಿಸದೇ ಇರುವ ಪ್ರಪನ್ನನ ವಿಷಯವಾದವುಗಳು ; ಈ ಗದ್ಯವಾಕ್ಯವಾದರೋ ಅಂತಿಮ ಸ್ಮೃತಿಯನ್ನು ಭರನ್ಯಾಸಫಲವಾಗಿ ಅಪೇಕ್ಷಿಸಿದ ಪ್ರಪನ್ನ ವಿಷಯವು ; ಎಂಬದಾಗಿ ಕೆಲವಾಚಾರ್ಯರುಗಳು ಅಭಿಪ್ರಾಯಪಡುವರೆಂದು ಹೇಳಿ ಅದು ಸರಿಯಾದಭಿಪ್ರಾಯವಾಗಲಾರದೆಂಬುದಕ್ಕೆ ಅನುಪಪತ್ತಿಯನ್ನು ಅದರ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ :—

ಈ ಗದ್ಯವಾಕ್ಯಕ್ಕೆ ಕೆಲವಾಚಾರ್ಯರಭಿಪ್ರಾಯದಲ್ಲಿ ತೋರುವ ಅನುಪಪತ್ತಿಯು.

ಗದ್ಯತ್ತಿಲ್ ಅರುಳಿಚ್ಚೆಯ್‌ಗಿರ-ಈ ಮೇಲೆ ಉದಾಹರಿಸಿದ ಗದ್ಯವಾಕ್ಯದಲ್ಲಿ ಹೇಳಿರುವ **ಅನ್ತಿಮಸ್ಮೃತಿಯು, ಫಲಮಾಗಕ್ಕೊಳ್ಳಿ**-ತಾನನುಷ್ಠಿಸಿದ ಭರನ್ಯಾಸಕ್ಕೆ ಇದೂ ಕೂಡ ಫಲವಾಗಬೇಕೆಂದು ಪ್ರಾರ್ಥಿಸಿ, **ಪ್ರಪನ್ನರಾನವರ್‌ಗಳುಕ್ಕು**-ಭರನ್ಯಾಸಾನುಷ್ಠಾನ ಮಾಡಿದವರಿಗೆ, **ವರಕ್ಕಡವದೆನ್ರು** - ಬರತಕ್ಕದ್ದಾಗಿರುತ್ತದೆಂದು, **ಶಿಲ ಆಚಾರ್ಯರ್‌ಗಳ್ ನಿರ್ವಹಿಪ್ಪಾರ್‌ಗಳ್** - ಕೆಲವು ಆಚಾರ್ಯರುಗಳು ಅಭಿಪ್ರಾಯಪಡುವರು ; ಎಂದರೆ ಶ್ರೀ ಯತಿವರ್ಯರ ಈ ಗದ್ಯವಾಕ್ಯದಲ್ಲಿ **ಅತಿಪ್ರಬುದ್ಧೋ ಮಾಮೇವಾವಲೋಕಯೇ** ಎಂಬಲ್ಲಿ ತೋರುವ ಅನ್ತಿಮಸ್ಮೃತಿ ಪ್ರಾಪ್ತಿಯು, ಪ್ರಪನ್ನನಾದವನು ತಾನು ಮಾಡಿದ ಪ್ರಪತ್ತಿಯ ಕಾಲದಲ್ಲೇ ಅಂತಿಮ ಸ್ಮೃತಿಯು ತನಗೆ ಪ್ರಪತ್ತಿಯ ಫಲವಾಗಿ ಉಂಟಾಗಬೇಕೆಂದು ಪ್ರಾರ್ಥಿಸಿದ ಅಧಿಕಾರಿಗೆ ಮಾತ್ರ ಉಂಟಾಗುತ್ತದೆಂದು ಕೆಲವಾಚಾರ್ಯರು ಅಭಿಪ್ರಾಯಪಡುತ್ತಾರೆ. ಇದರಿಂದ **"ನಷ್ಟಸ್ಮೃತಿರಪಿ"** ಇತ್ಯಾದಿ ಪ್ರಮಾಣಗಳಲ್ಲಿ ತೋರುವ ಅಂತಿಮ ಸ್ಮೃತಿಯ ಅನಾವಶ್ಯಕತೆಯು, ಅಂತಿಮ

ಲೊರು ಶರೀರತ್ತಿಲುವ್ ಅನ್ತಿಮ ಪೂನ ಪ್ರತ್ಯಯವ್ ನಿರ್ವಿಷಯಮಾಯಿರಾಮೈಯಾಲ್ ಇದು ಭಗವದ್ವ್ಯತಿರಿಕ್ತ ವಿಷಯತ್ತಿಲೇ ಪೋವಾಗಿಲ್, (೧) "ಯಂ ಯಂ ವಾಪಿ ಸ್ಮರ್ನ್ ಭಾವಂ" ಎನ್ಗಿರ ಕಣಕ್ಕಿಲೇ ವಿಪರೀತ ಫಲಮಾಮ್.

ಸ್ಮೃತಿಯು ಪ್ರಪತ್ತಿಫಲವಾಗಿ ಉಂಟಾಗಬೇಕೆಂದು ಪ್ರಾರ್ಥಿಸದೇ ಇರುವ ಪ್ರಪನ್ನನ ವಿಷಯವಾದುದು ಎಂಬಭಿಪ್ರಾಯವಾಗುತ್ತದೆ, ಹೀಗೆ ಹೇಳುವದರಿಂದ ಎರಡಕ್ಕೂ ವಿರೋಧವಿಲ್ಲದ ಹಾಗೆ ಅನ್ವಯಿಸಿದುದೇನೋ ಆಯಿತು. ಆದರೆ ಹೀಗೆ ಅಭಿಪ್ರಾಯಪಟ್ಟರೆ ಒಂದು ಪ್ರತ್ಯವಾಯ ಉಂಟಾಗುತ್ತದೆಂದು ಹೇಳುತ್ತಾರೆ:— ಇಪ್ಪಡಿಯಾಗಿಲ್ - ಪ್ರಪತ್ತಿಫಲವಾಗಿ ಅಪೇಕ್ಷಿಸಿದರೆ ಅಂತಿಮ ಸ್ಮೃತಿಯುಂಟಾಗುತ್ತದೆ, ಹಾಗಪೇಕ್ಷಿಸದೇ ಇದ್ದರೆ ಉಂಟಾಗುವದಿಲ್ಲವೆಂದು ಹೇಳಿದರೆ, ಒರು ಶರೀರತ್ತಿಲುಮ್ - ಹಾಗಪೇಕ್ಷಿಸದೇ ಇರುವ ಯಾವನೊಬ್ಬ ಪ್ರಪನ್ನನ ಶರೀರದಲ್ಲೂ, ಅಂತಿಮ ಪ್ರತ್ಯಯವು, ನಿರ್ವಿಷಯಮಾಯಿರಾಮೈಯಾಲ್ - ಯಾವದೊಂದು ವಸ್ತುವನ್ನಾಗಲಿ ಉದ್ದೇಶಿಸದೆ, ಎಂದರೆ ಯಾವುದಾದರೂ ಒಂದು ವಸ್ತುವನ್ನುದ್ದೇಶಿಸಿಯೇ ಉಂಟಾಗುವದರಿಂದ, ಇದು- ಈ ಅಂತಿಮ ಪ್ರತ್ಯಯವು, ಭಗವದ್ವ್ಯತಿರಿಕ್ತ ವಿಷಯತ್ತಿಲೇ ಪೋವಾಗಿಲ್ - ಸರ್ವೇಶ್ವರನನ್ನು ಕುರಿತಲ್ಲದೆ ಬೇರೆ ವಿಷಯವನ್ನು ಕುರಿತದ್ದಾಗಿಹೋದರೆ, "ಯಂ ಯಂ ವಾಪಿ ಸ್ಮರ್ನ್ ಭಾವಂ" ಎನ್ಗಿರ ಕಣಕ್ಕಿಲೇ - ಎಂದು ಗೀತಾಶ್ಲೋಕದಲ್ಲಿ ಹೇಳಿರುವ ಹಾಗೆ, ವಿಪರೀತ ಫಲಮಾಮ್ - ವ್ಯತ್ಯಸ್ತ ಫಲವಾಗುತ್ತದೆ, ಎಂದರೆ ಪ್ರಪನ್ನನಿಗೆ ದೇಹಾವಸಾನಾನಂತರ ಮೋಕ್ಷಪ್ರಾಪ್ತಿಗೆ ಬದಲಾಗಿ ಬೇರೆ ಜನ್ಮವೂ ಪ್ರಾಪ್ತವಾಗಬಹುದು. ಆದಿ ಭರತರಿಗೆ ದೇಹಾವಸಾನ ಕಾಲದಲ್ಲಿ ಮೃಗಶಾಬವನ್ನು (ಜಿಂಕೆ ಮರಿ) ಸ್ಮರಿಸುತ್ತಿದ್ದುದರಿಂದ ಮೃಗಜನ್ಮವೇ ಹೇಗೆ ಪ್ರಾಪ್ತವಾಯಿತೋ ಹಾಗೆ ಎಂಬ ಭಾವವು. ಗೀತಾ ಪೂರಾ ಶ್ಲೋಕವು:—

"ಯಂ ಯಂ ವಾಪಿ ಸ್ಮರ್ನ್ ಭಾವಂ ತ್ಯಜತ್ಯಂತೇ ಕಳೇಬರಂ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ ॥"

ಹೇ ಕೌಂತೇಯ - ಓ ಅರ್ಜುನನೇ, ಅಂತೇ - ದೇಹಾವಸಾನ ಕಾಲದಲ್ಲಿ, ಯಂ ಯಂ ವಾಪಿ - ಯಾವಯಾವುದನ್ನು, ಸ್ಮರ್ನ್ - ಸ್ಮರಿಸುತ್ತಾ, ಕಳೇಬರಂ

(೧) ಗೀತೆ. ೮. ೬.

ತ್ಯಜತಿ - ದೇಹವನ್ನು ಬಿಡುವನೋ, ಸದಾ ತದ್ಭಾವ ಭಾವಿತಃ - ಸದಾ ಆ ಆ ಆಕಾರವುಳ್ಳ ವಸ್ತುವನ್ನೇ ಧ್ಯಾನಿಸುತ್ತಿರುವದರಿಂದ, ತಂ ತಮೇವ - ಆ ಆ ಆಕಾರವುಳ್ಳ ವಸ್ತುವಿನ ಜನ್ಮವನ್ನೇ, ಏತಿ - ಹೊಂದುವನು. ಇಲ್ಲಿ ತದ್ಭಾವ ಎಂದು ಇರುವದರಿಂದ ಆದಿ ಭರತರು ಮೃಗರೂಪವನ್ನು ಹೊಂದಿದರು ಎಂದು ಹೇಳಿದರೆ ಮೃಗದೊಂದಿಗೆ ಸ್ವರೂಪೈಕ್ಯವನ್ನು ಹೊಂದಿದರೆಂದು ಹೇಗೆ ಹೇಳಲಾಗುವದಿಲ್ಲವೋ ಹಾಗೆಯೇ, ಮಾಮೇವ ಸ್ಮರ್ನ್ ಮದ್ಭಾವಂ ಯಾತಿ ಎಂದು ಸರ್ವೇಶ್ವರನು ಹೇಳಿದರೆ, ನನ್ನೊಂದಿಗೆ ಸ್ವರೂಪೈಕ್ಯ ಹೊಂದುವನೆಂಬ ಶಾಂಕರಾಭಿಪ್ರಾಯವು ಸಮಂಜಸವಲ್ಲವೆಂಬುದನ್ನೂ ಸಹ ಈ ಶ್ಲೋಕದಿಂದ ಗ್ರಹಿಸಬಹುದು. ಆದರೆ ಇದು ಈ ಪ್ರಕರಣಕ್ಕೆ ಬೇಕಾದುದಲ್ಲದಿದ್ದರೂ ಶ್ಲೋಕಾಭಿಪ್ರಾಯವನ್ನು ತಿಳಿಸುವಾಗ ಸಮಂಜಸಾರ್ಥವನ್ನು ತಿಳಿಸುವದು ಆವಶ್ಯಕವು. ಇಲ್ಲಿ "ಯಂ ಯಂ" ಎಂದು ಹೇಳಿರುವದೇನು ಸಾರ್ವತ್ರಿಕವಾಗಿ ಎಲ್ಲರನ್ನೂ ಕುರಿತು ಹೇಳಿದುದೇ ಅಥವಾ ಏನಾದರೂ ಅಧಿಕಾರಿ ವಿಶೇಷವನ್ನು ಕುರಿತು ಹೇಳಿದುದೇ ಎಂಬ ಚರ್ಚೆಯಲ್ಲಿ ಶ್ರೀ ಭಾಷ್ಯಕಾರರು ಮೂರು ವಿಧ ಅಧಿಕಾರಗಳನ್ನು ಕುರಿತು ಹೇಳಿದುದೆಂದು ಕಂಠೋಕ್ತವಾಗಿ ಹೇಳಿರುತ್ತಾರೆ. ಇವರುಗಳು ಯಾರೆಂದರೆ:—(೧) ಐಶ್ವರ್ಯ, (೨) ಕೈವಲ್ಯ, (೩) ಭಗವತ್ಪ್ರಾಪ್ತಿಯನ್ನು ಆಪೇಕ್ಷಿಸುವವರು, ಇದಕ್ಕಾಗಿ ಇವರುಗಳು ಭಕ್ತಿಯೋಗನಿಷ್ಠರಾಗಿರುವವರು. ಆದುದರಿಂದ ಇದು ಭಕ್ತ್ಯುಪಾಯ ನಿಷ್ಠರನ್ನು ಕುರಿತು ಹೇಳಿದುದೆಂದು ತಿಳಿಯತಕ್ಕದ್ದು. ಸ್ವತಂತ್ರ ಪ್ರಪತ್ತಿ ನಿಷ್ಠನನ್ನು ಕುರಿತು ಹೇಳಿದುದಲ್ಲವು.

ಈ ಮೇಲಿನ ವಾಕ್ಯಾಭಿಪ್ರಾಯವು ಏನೆಂದರೆ:—ಅಂತಿಮ ಸ್ಮೃತಿಯನ್ನಪೇಕ್ಷಿಸಿ ಪ್ರಪದನ ಮಾಡಿದವರಿಗೆ ಅದರ ಫಲವಾಗಿ ಅಂತಿಮಸ್ಮೃತಿಯು ಪ್ರಾಪ್ತವಾಗುತ್ತದೆಂದು ಹೇಳಿದರೆ, ಹಾಗೆ ಅಂತಿಮ ಸ್ಮೃತಿಯು ಪ್ರಪತ್ತಿಯ ಫಲವಾಗಿ ಆಪೇಕ್ಷಿಸದೇ ಭರನ್ಯಾಸ ಮಾಡದವನಿಗೆ ಭಗವದ್ವಿಷಯವಾದ ಅಂತಿಮಸ್ಮೃತಿಯು ಉಂಟಾಗದೇ ಹೋಗಬಹುದೆಂದು ಏರ್ಪಟ್ಟಿತು. ಆ ಸಂದರ್ಭದಲ್ಲಿ ಅಂತಿಮ ಸ್ಮೃತಿಯು ನಿರ್ವಿಷಯವಾಗಿ ಬೇರೇ ಇರುವದಿಲ್ಲವು. ಮನೆಯಲ್ಲಿರುವ ಒಂದು ಗೋವನ್ನು ಕುರಿತು ಅನ್ತಿಮ ಸ್ಮೃತಿಯುಂಟಾಗಿ ಒಬ್ಬ ಪ್ರಪನ್ನನಿಗೆ ದೇಹ ವಿಯೋಗ ಉಂಟಾದರೆ, ಈ ಗೀತಾ ಶ್ಲೋಕದ ಪ್ರಕಾರ ಈ ಪ್ರಪನ್ನನಿಗೆ ಮೋಕ್ಷವಿಲ್ಲದೆ ಹೋಗಿ, ಗೋಜನ್ಮ ಪ್ರಾಪ್ತವಾಗಬೇಕಾಗುತ್ತದೆ. ಇದರಿಂದ ಪ್ರಪದನ ಶಾಸ್ತ್ರಕ್ಕೆ ಅನುಪಪತ್ತಿ ಕಲ್ಪಿಸಿದ ಹಾಗೆ ಆಗುತ್ತದೆಂಬ ಭಾವವು. ಹೀಗೆ ಪ್ರಪದನ ಶಾಸ್ತ್ರಕ್ಕೆ ವಿರುದ್ಧವಾದಭಿಪ್ರಾಯವುಂಟಾಗುವದರಿಂದ ಈ ಗದ್ಯವಾಕ್ಯಕ್ಕೆ ಸರಿಯಾದಭಿಪ್ರಾಯವನ್ನು ಮುಂದೆ ತಿಳಿಸುತ್ತಾರೆ.

ಗದ್ಯವಾಕ್ಯಸ್ಯ ಸ್ವಾಭಿಮತಾಭಿಪ್ರಾಯ ಕಥನಮ್.

ಆನ ಪಿನ್ಪು, ಗದ್ಯತ್ತಿಲೇ ಅರುಳಿಚ್ಚೆಯ್ದ ಪಡಿಯೇ ಸ್ವತಂತ್ರಪ್ರಪತ್ತಿ ನಿಷ್ಠನುಕ್ಕು ಭಗವದ್ವಿಷಯತ್ತಿಲ್ ಅನ್ತಿಮ ಪ್ರತ್ಯಯಮ್ ಅವಶ್ಯಮ್ ವರುಮ್.

ಗದ್ಯವಾಕ್ಯಕ್ಕೆ ಸಮಂಜಸವಾದ ಅಭಿಪ್ರಾಯವು.

ಆನ ಪಿನ್ಪು - ಈ ಕೆಲವಾಚಾರ್ಯರುಗಳ ಅಭಿಪ್ರಾಯದಿಂದ ವಿರೋಧ ಉಂಟಾಗುವದರಿಂದ, **ಗದ್ಯತ್ತಿಲೇ ಅರುಳಿಚ್ಚೆಯ್ದ ಪಡಿಯೇ** - ಗದ್ಯದಲ್ಲಿ ಶ್ರೀ ಯತಿವರ್ಯರು ಕೃಪಯಾ ಅನುಗ್ರಹಿಸಿರುವ ಹಾಗೆ, **ಸ್ವತಂತ್ರ ಪ್ರಪತ್ತಿ ನಿಷ್ಠನುಕ್ಕು** - ಭಕ್ತಿ ಮಾರ್ಗದಲ್ಲಿನ ಹಾಗೆ ಅಂಗವಾಗಿ ಪ್ರಪತ್ತಿ ಮಾಡದೆ, ಅಂಗಿಯಾಗಿ ಭರನ್ಯಾಸ ಮಾಡಿದ ಪ್ರಪನ್ನನಿಗೆ, ಭಗವದ್ವಿಷಯದಲ್ಲಿ, **ಅನ್ತಿಮ ಪ್ರತ್ಯಯಮ್** - ಅನ್ತಿಮ ಸ್ಮೃತಿಯು, **ಅವಶ್ಯಮ್ ವರುಮ್** - ಸರ್ವೇಶ್ವರ ಕೃಪೆಯಿಂದ ಅಗತ್ಯವಾಗಿ ಉಂಟಾಗಬಹುದು. **ಅಹಂ ಸ್ಮರಾಮಿ ಮದ್ಭಕ್ತಮ್** ಎಂದು ವರಾಹ ಚರಮಶ್ಲೋಕೋಕ್ತಿಯ ಪ್ರಕಾರ, ಈ ಪ್ರಪನ್ನನಲ್ಲಿರುವ ಪ್ರೀತ್ಯತಿಶಯದಿಂದ ಅನ್ತಿಮ ಸ್ಮೃತಿಯನ್ನು ಸರ್ವೇಶ್ವರನೇ ಉಂಟುಮಾಡುತ್ತೇನೆಂದು ಹೇಳಿಕೊಂಡಿರುತ್ತಾನೆಂಬುದು ಆ ವಾಕ್ಯಾಭಿಪ್ರಾಯವು. ಇದನ್ನೇ ಶ್ರೀ ದೇಶಿಕರವರು ಅಭೀತಿಸ್ತವದ ೬ನೇ ಶ್ಲೋಕದಲ್ಲಿ "**ಸ್ವಯಂ ವಿಹಿತಸಂಸ್ಮೃತಿಃ**" ಎಂದರೆ "ತನ್ನ ಸ್ಮರಣೆಯನ್ನು ಅನ್ತಿಮ ದೆಶೆಯಲ್ಲಿ ಮಾಡುವ ಹಾಗೆ ತಾನೇ **ಮಾಡಿ**" ಎಂಬುದರಿಂದ ಉಪಪಾದಿಸಿರುತ್ತಾರೆ. ಶರಣಾಗತನ ವಿಷಯದಲ್ಲಿ ಸರ್ವೇಶ್ವರನಿಗೆ ಪರಮ ಕೃಪೆಯಾದುದರಿಂದ ಆತನಿಗೆ ಉಪಕಾರ ಮಾಡುವ ಕಾಲ ಒದಗಿತೆಂದು ತಿಳಿದು ತಾನೇ ಅನ್ತಿಮ ಸ್ಮೃತಿಯುಂಟಾಗುವ ಹಾಗೆ ಮಾಡುವನೆಂಬ ಭಾವವು.

ಹೀಗೆ ಪ್ರಪನ್ನ ಪರಿತ್ರಾಣದಲ್ಲಿ ಬದ್ಧಕಂಕಣನಾದ ಕರುಣಾಸಾಗರನು ಆತನಿಗೆ ದೇಹವಿಯೋಗ ಕಾಲದಲ್ಲಿ ತನ್ನ ವಿಷಯವಾದ ಅನ್ತಿಮ ಸ್ಮೃತಿಯು ಅವಶ್ಯವಾಗಿ ಬರುವ ಹಾಗೆ ತಾನೇ ಮಾಡಿದುದಾದರೆ, "**ನಷ್ಟಸ್ಮೃತಿರಪಿ**" ಇತ್ಯಾದಿ ವಚನಗಳು ಅನ್ತಿಮ ಸ್ಮೃತಿಯೇ ಬೇಕಾಗಿಲ್ಲವೆಂದು ಹೇಳುವವೆಯಲ್ಲಾ, ಅವುಗಳಿಗೆ ನಿರ್ವಾಹ ಹೇಗೆ? ಈ ನಷ್ಟಸ್ಮೃತ್ಯಾದಿ ವಚನಗಳೂ ಮತ್ತು ಗದ್ಯವಾಕ್ಯವೂ ಸಹ ಸಾರ್ವತ್ರಿಕವಾಗಿ ತೋರುತ್ತದೆಯಲ್ಲವೇ ಎಂದರೆ, ಆ ವಚನ

"ನಷ್ಟಸ್ಮೃತಿರಪೀ"ತ್ಯಾದಿಗಳ್, ಶ್ರೀ ಗೀತ್ತೈಯಿಲ್ ಅಷ್ಟಮಾಧ್ಯಾಯತ್ತಿಲುಮ್, (೧) "ಯಂ ಯೋಗಿನಃ ಪ್ರಾಣವಿಯೋಗಕಾಲೇ ಯತ್ನೇನ ಚಿತ್ತೇ ವಿನಿವೇಶಯಂತಿ" ಇತ್ಯಾದಿಗಳಿಲುಮ್ ಸ್ವಯತ್ನ ಸಾಧ್ಯಮಾಗ ವಿಧಿತ್ತ ಕಟ್ಟಳೆಯಿಲ್ಲೈ ಉಪಾಯಮಾಕ ಅನ್ತಿಮ ಸ್ಮೃತಿ ವೇಣ್ಡಾ ವೆಙ್ಗರನ ವೆನ್ರು ಶಿಲ ಆಚಾರ್ಯರ್‌ಗಳ್ ಅನುಸಂಧಿಪ್ಪರ್‌ಗಳ್.

ಗಳಿಗೆ ಸರಿಯಾದ ಉಪಪತ್ತಿಯನ್ನು ಹೇಳಿ, ಅದು ಸಂತ್ಸಂಪ್ರದಾಯದಿಂದುಂಟಾದುದೆಂದೂ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

"ನಷ್ಟಸ್ಮೃತಿರಪಿ," ಇತ್ಯಾದಿಗಳ್ - ಎಂಬಿವೇ ಮೊದಲಾದುವುಗಳು, ಮೊದಲಾದವು ಎಂಬುವುದರಿಂದ ಮೇಲೆ ಉದಾಹರಿಸಿರುವ ವರಾಹ ಪುರಾಣ ಚರಮಶ್ಲೋಕವಾದ "ಅಹಂ ಸ್ಮರಾಮಿ ಮದ್ಭಕ್ತಂ" ಎಂಬ ವಚನವೂ ಹೇಳಲ್ಪಟ್ಟವು, ಇವುಗಳು ಏನನ್ನು ತಿಳಿಸುತ್ತವೆ ಎಂದರೆ ಉಪದೇಶಿಸುತ್ತಾರೆ, **ಶ್ರೀ ಗೀತ್ತೈಯಿಲ್ ಅಷ್ಟಮಾಧ್ಯಾಯತ್ತಿಲುಮ್** - ಶ್ರೀ ಭಗದ್ಗೀತೆಯ ಎಂಟನೆಯ ಅಧ್ಯಾಯದಲ್ಲೂ, ಮತ್ತು **"ಯಂ ಯೋಗಿನಃ"** ಎಂಬ ಶಾಂತಿಪರ್ವದ ಶ್ರೀ ಭೀಷ್ಮನಿರ್ಯಾಣ ಪ್ರಕರಣದಲ್ಲಿ ಹೇಳಲ್ಪಟ್ಟ ಶ್ಲೋಕದಲ್ಲೂ, **ಇತ್ಯಾದಿಗಳಿಲುಮ್**- ಇವೇ ಮೊದಲಾದ ವಾಕ್ಯಗಳಲ್ಲಿ, **ಸ್ವಯತ್ನ ಸಾಧ್ಯಮಾಗ** - ತನ್ನ ಪ್ರಯತ್ನದಿಂದ ಸಾಧಿಸಲು ಯೋಗ್ಯವೆಂದು, **ವಿಧಿತ್ತ** - ವಿಧಿಸಿದ, **ಕಟ್ಟಳೆಯಿಲೆ** - ಕ್ರಮ ಪ್ರಕಾರ, **ಉಪಾಯಮಾಗ** - ಸಾಧ್ಯೋಪಾಯಕ್ಕೆ ಸೇರಿದುದಾಗಿ, ಎಂದರೆ ಆ ಶ್ಲೋಕಗಳಲ್ಲಿ ಅನ್ತಿಮ ಸ್ಮೃತಿಯು ಉಪಾಯರೂಪದಲ್ಲಿ ಆವಶ್ಯಕವೆಂದು ಹೇಳಿರುವ ಹಾಗೆ, **ಅನ್ತಿಮಸ್ಮೃತಿ ವೇಣ್ಡಾ ವೆಙ್ಗರನ** - ಸ್ವತಂತ್ರಪ್ರಪತ್ತಿಯನ್ನನುಷ್ಠಿಸಿದ ಪ್ರಪನ್ನನಿಗೆ ಅನ್ತಿಮ ಸ್ಮೃತಿಯು ಆವಶ್ಯಕವಿಲ್ಲವೆಂದು, **ಎನ್ರು** - ಎಂಬದಾಗಿ, **ಶಿಲ ಆಚಾರ್ಯರ್‌ಗಳ್** - ವಿಷಯಗಳನ್ನು ಚೆನ್ನಾಗಿ ವಿಮರ್ಶಿಸಿ ತಿಳಿಯುವ ಕೆಲವು ಆಚಾರ್ಯರುಗಳು, **ಅನುಸಂಧಿಪ್ಪಾರ್‌ಗಳ್** - ಅಭಿಪ್ರಾಯಪಡುವರು, ಇದೇ ಸರಿಯಾದಭಿಪ್ರಾಯವೆಂಬ ಅನುಸಂಧಾನವುಳ್ಳವರೆಂಬ ಭಾವವು. ಈ ವಾಕ್ಯದಿಂದ ಪರಸ್ಪರ ವಿರೋಧಾಭಿಪ್ರಾಯಗಳುಳ್ಳ ಈ ವಾಕ್ಯಗಳಿಗೆ ವಿರೋಧವಿಲ್ಲದ ಹಾಗೆ ಸಮಂಜಸಾಭಿಪ್ರಾಯಗಳನ್ನು ತಮ್ಮ ಆಚಾರ್ಯಕೋಟಿಗೆ ಸೇರಿದ ಕೆಲವು ಮಹನೀಯರುಗಳಭಿಪ್ರಾಯದಿಂದ ತಿಳಿಸಿ, ಭಕ್ತಿಮಾರ್ಗಕ್ಕೂ ಸ್ವತಂತ್ರ ಪ್ರಪತ್ತಿಗೂ ಇರುವ ವೈಲಕ್ಷಣ್ಯವನ್ನು ತೋರಿಸಿ, ಭಕ್ತಿಮಾರ್ಗದಲ್ಲಿ ಅಧಿಕಾರಿಗೆ

---

(೧) ಭಾರತ ಶಾಂತಿ. ೪೬ ೧೪೩.

ಅನ್ತಿಮ ಸ್ಮೃತಿಯು ಅವಶ್ಯಕವೆಂದು ಗೀತೆಯ ಎಂಟನೆಯ ಅಧ್ಯಾಯದಲ್ಲೂ, ಭೀಷ್ಮ ನಿರ್ಯಾಣ ಪ್ರಕರಣ ಶ್ಲೋಕದಲ್ಲೂ ಹೇಳಲ್ಪಟ್ಟಿದೆ ಎಂದೂ, ಭರನ್ಯಾಸದಲ್ಲಿ ಅಧಿಕಾರಿಗೆ ಅನ್ತಿಮ ಸ್ಮೃತಿ ಬೇಕಿಲ್ಲವೆಂದೂ "ನಷ್ಟಸ್ಮೃತಿರಪಿ" ಎಂಬ ಶ್ಲೋಕದಲ್ಲೂ "ಅಹಂ ಸ್ಮರಾಮಿ ಮದ್ಭಕ್ತಂ" ಎಂಬ ವರಾಹ ಚರಮ ಶ್ಲೋಕದಲ್ಲೂ ಹೇಳಲ್ಪಟ್ಟಿವೆ ಎಂಬುವದು ಮುಖ್ಯ ಸಾರಾಂಶವು. ಶ್ರೀ ಗೀತೆಯ ಎಂಟನೆಯ ಅಧ್ಯಾಯದ ಶ್ಲೋಕವು ಯಾವುದೆಂದರೆ:—ಸಾರಪ್ರಕಾಶಿಕಾ ಸಾರಾಸಾರ ವಿವರಣೆ ವ್ಯಾಖ್ಯಾತೃಗಳು "ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ । ಯಃ ಪ್ರಯಾತಿ ತ್ಯಜನ್ ದೇಹಂ ಸಯಾತಿ ಪರಮಾಂಗತಿಂ" (ಗೀ. ೮. ೧೩) ಎಂಬುವ ಶ್ಲೋಕವನ್ನುದಾಹರಿಸಿರುತ್ತಾರೆ. ಇದರರ್ಥವೇನೆಂದರೆ:—ಓಂ ಎಂಬದಾಗಿ ಪರಬ್ರಹ್ಮವಾದ ನನ್ನನ್ನು ಬೋಧಿಸುವ ಒಂದಕ್ಷರದ ಮಂತ್ರವನ್ನು ಉಚ್ಚರಿಸುತ್ತಾ, ನನ್ನನ್ನೇ ಸ್ಮರಿಸುತ್ತಾ, ಯಾವನು ದೇಹವನ್ನು ತ್ಯಜಿಸಿ ಹೋಗುವನೋ, ಆತನು ಸರ್ವಶ್ರೇಷ್ಠವಾದ ಗತಿಯನ್ನು ಎಂದರೆ ಈ ಪ್ರಕೃತಿಯಿಂದ ಬಿಡಲ್ಪಟ್ಟ ಅಪ್ರಾಕೃತವಾದ, ನನಗೆ ಸಮಾನವಾದ ಆಕಾರವುಳ್ಳ ಪುನರಾವೃತ್ತಿಯಿಲ್ಲದ ಸ್ಥಿತಿಯನ್ನು ಹೊಂದುವನೆಂಬ ಭಾವವು. "ಯಂ ಯೋಗಿನಃ" ಎಂಬ ಶಾಂತಿಪರ್ವ ಶ್ಲೋಕಾರ್ಥವು ಉಪಾಸನೆಯನ್ನು ಮಾಡುವವರು, ಪ್ರಾಣವಿಯೋಗ ಕಾಲೇ - ಪಂಚವೃತ್ತಿ ಪ್ರಾಣವು ಸ್ಥೂಲ ಶರೀರವನ್ನು ತ್ಯಜಿಸುವ ಕಾಲದಲ್ಲಿ, ಯತ್ನೇನ - ತನ್ನ ಪ್ರಯತ್ನಮೂಲಕವಾಗಿ, ಚಿತ್ತೇ - ಮನಸ್ಸಿನಲ್ಲಿ, ಯಂ - ಯಾವ ಪರಮಾತ್ಮನನ್ನು, ವಿನಿವೇಶಯನ್ತಿ - ಇಟ್ಟುಕೊಳ್ಳುತ್ತಾರೋ," ಇದು ಪೂರ್ವಾರ್ಧವು. ಉತ್ತರಾರ್ಧವು "ಸ ತಂ ಪುರಸ್ತಾದ್ಧರಿಮೀಕ್ಷಮಾಣಃ ಪ್ರಾಣಾಂ ಜಹೌ ಪ್ರಾಪ್ತ ಫಲೋ ಹಿ ಭೀಷ್ಮಃ ॥ ತಂ - ಅಂತಹ ಪರಮಾತ್ಮನಾದ, ಹರಿಂ - ಶ್ರೀ ಹರಿಯನ್ನು, ಎದುರಿಗೆ ನೋಡುವವನಾಗಿ, ಆ ಭೀಷ್ಮಾಚಾರ್ಯರು ಹೊಂದಿದ ಮೋಕ್ಷಫಲವುಳ್ಳವರಾಗಿ ಪ್ರಾಣವನ್ನು ಬಿಟ್ಟರು. ಹಿ ಎಂಬುವದರಿಂದ ಇದು ನಿಸ್ಸಂಶಯವಾದ ವಿಷಯವೆಂಬ ಭಾವವು" ಎಂದಿರುತ್ತದೆ. ಇದು ಶ್ರೀ ಭೀಷ್ಮರು ಪ್ರಾಣತ್ಯಾಗ ಮಾಡುವ ಪ್ರಕಾರದ ವರ್ಣನಾ ಪ್ರಕರಣವು.

ಈ ಮೇಲೆ ಉದಾಹರಿಸಿದ ಪ್ರಮಾಣಗಳಲ್ಲಿ ಅನ್ತಿಮ ಸ್ಮೃತಿಯು ಸರ್ವ ಪ್ರಯತ್ನದಿಂದಲೂ ಉಂಟಾಗುವ ಹಾಗೆ ಉಪಾಸಕನು ಮಾಡತಕ್ಕದ್ದೆಂಬುದು ತೋರಿಬರುತ್ತದೆ. ಈ ಭರನ್ಯಾಸಾನುಷ್ಠಾನ ಮಾಡಿದ ಅಧಿಕಾರಿಯ ವಿಷಯದಲ್ಲಾದರೋ, ಇಂತಹ ಪ್ರಯತ್ನಪೂರ್ವಕವಾದ ಅನ್ತಿಮ ಸ್ಮೃತಿಯ ಅವಶ್ಯಕತೆಯಿರುವದಿಲ್ಲವೆಂದು ಕೆಲವಾಚಾರ್ಯರುಗಳು ಅಭಿಪ್ರಾಯಪಡುವರು ಎಂಬ ಭಾವವು.

ಗದ್ಯವಾಕ್ಯಾಭಿಪ್ರಾಯಃ, ಅನ್ತಿಮಸ್ಮೃತಿ ನಿರೂಪಣಮ್

(೧) "ಕೇವಲಂ ಮದೀಯ ಯೈವದಯಯಾ" ಎನ್ನಿರೇ ಇಜ್ಞ ರುಳಿಚ್ಚೆಯ್ಯುದು. ಅನ್ತಿಮಸ್ಮೃತಿ ಯಾವದು ? ರಾಗಾದಿಗಳುಪಶಾನ್ತ

ಸರ್ವೇಶ್ವರನು ತಾನೇ ಈ ಪ್ರಪನ್ನನಲ್ಲಿರುವ ವಿಶೇಷಾನುರಾಗದಿಂದ ಅನ್ತಿಮ ಸ್ಮೃತಿಯನ್ನುಂಟುಮಾಡುತ್ತಾನೆ. ಆತನ ಕೃಪಾಪ್ರಭಾವದ ಮಾಹಾತ್ಮ್ಯ ಯಿಂದುಂಟಾಗಬಹುದೆಂದೀಗ ಶ್ರೀ ಯತಿವರ್ಯರು ಹಿಂದೆ ಉದಾಹರಿಸಿದ ಗದ್ಯ ವಾಕ್ಯದಲ್ಲಿ ಹೇಳಿರುವದು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಅನ್ತಿಮ ಸ್ಮೃತಿಯು ಉಪಾಯರೂಪದಲ್ಲಿ ಆವಶ್ಯಕವೆಂದೇನೂ ಹೇಳಲಿಲ್ಲವು. ಕೇವಲ ಆತನ ದಯೆಯಿಂದ ಅದು ಲಭಿಸುತ್ತದೆಂದು ಹೇಳಿದರೆಂದುಪದೇಶಿಸುತ್ತಾರೆ.

ಗದ್ಯ ವಾಕ್ಯಾಭಿಪ್ರಾಯವು. ಅನ್ತಿಮ ಸ್ಮೃತಿ ಎಂಬುದರರ್ಥವು.

ಹೀಗೆ ಕೆಲವಾಚಾರ್ಯರು ಅನ್ತಿಮ ಪ್ರತ್ಯಯದಾವಶ್ಯಕತ್ವವು ಭರನ್ಯಾಸನಿಷ್ಠ ನಿಗೆ ಬೇಕಿಲ್ಲವೆಂಬಭಿಪ್ರಾಯವು ಸತ್ಸಂಪ್ರದಾಯದಿಂದ ಬಂದದ್ದೆಂದು ಹೇಳಲು ಏನಾದರೂ ಸಾಧಕವುಂಟೋ ಎಂದು ಕೇಳಿದರೆ, ಶ್ರೀ ಭಾಷ್ಯಕಾರರಭಿಪ್ರಾಯವೇ ಹಾಗೆ ಎಂದು ತೋರಿಸಿ ಈ ಅಭಿಪ್ರಾಯವೇ ಉಪಾದೇಯವೆಂದು ತೋರ್ಪಡಿ ಸುತ್ತಾರೆ :—

ಕೇವಲಂ ಮದೀಯಯೈವ ದಯಯಾ - ಬರೀ ನನ್ನ (ಸರ್ವೇಶ್ವರನ) ದಯೆಯ ಮಾತ್ರದಿಂದಲೇ, ದೇಹಾವಸಾನ ಕಾಲದಲ್ಲಿ, ತುಂಬಾ ಜ್ಞಾನವಿರುವ ನಾಗಿ ನನ್ನನ್ನೇ ದೃಷ್ಟಿಸಿ ನೋಡುತ್ತಾ ಎಂದು ಮುಂದೆ ಇರುತ್ತದೆ, **ಎನ್ನಿರೇ ಇಜ್ಞರುಳಿಚ್ಚೆಯ್ದದು** - ಎಂದಲ್ಲವೇ, ಎಂದರೆ ಈ ಸಂದರ್ಭದಲ್ಲಿ ಸ್ವತಂತ್ರ ಪ್ರಪನ್ನನ ವಿಷಯದಲ್ಲಿ ಹೇಳಿರುವದು." ಈ ವಾಕ್ಯಾಭಿಪ್ರಾಯವೇನೆಂದರೆ, ಜ್ಞಾನವಾಗಿದ್ದುಕೊಂಡು ಸರ್ವೇಶ್ವರನ ಅನ್ತಿಮ ಸ್ಮೃತಿಯುಂಟಾಗುವದು, ಸಂಪೂರ್ಣವಾಗಿ ಸರ್ವೇಶ್ವರನ ದಯೆಯೇ ವಿನಾ ಬೇರೆಯಲ್ಲವು ಇಲ್ಲಿ **ಕೇವಲಂ ದಯೆ** ಎಂದು ಹೇಳಿರುವದರಿಂದ, ಈತನ ಪ್ರಯತ್ನವು ಈಷದಪಿ ಬೇಕಿಲ್ಲವೆಂಬ ಭಾವವು. ಮದೀಯಯೈವ ದಯಯಾ ಎಂಬಲ್ಲಿ ಏವಕಾರವಿರುವದರಿಂದ ಇನ್ನು ಯಾರ ದಯೆಯೂ ಬೇಕಿಲ್ಲವು, ಅಂತಹ ಇತರರ ದಯೆಯಿಂದ ಅನ್ತಿಮ

---

(೧) ಶರಣಾಗತಿ ಗದ್ಯ.

ಮಾನಾಲ್ ಮನಸ್ಸು ಉಪಶಾನ್ತಮಾವದರ್ಕ್ಕು ಮುನ್ಬೇ ಪಿರಿಪ್ಪದೊರು ಸ್ಮೃತಿ. ಇದು ಅರುಗಿರುನ್ದಾರ್ಕ್ಕು ತ್ತೆರಿಯಾದು (೧) " ದೃಶ್ಯತೇಹಿ

ಸ್ಮೃತಿಯು ಉಂಟಾಗುವದೂ ಇಲ್ಲವೆಂಬ ಭಾವವು. ಹಾಗಾದರೆ ಅನ್ತಿಮಸ್ಮೃತಿಯಲ್ಲಿ ಈ ಪ್ರಪನ್ನನ ಪ್ರಯತ್ನವು ಸ್ವಲ್ಪವೂ ಬೇಕಿಲ್ಲವೋ ಎಂದರೆ, ಬೇಕಿಲ್ಲವೆಂದು ಹೇಳುವದಕ್ಕಾಗಿ ಅನ್ತಿಮಸ್ಮೃತಿ ಶಬ್ದಾರ್ಥವೇನೆಂಬುವದನ್ನು ಮುಂದೆ ಉಪದೇಶಿಸುತ್ತಾರೆ:—**ಅನ್ತಿಮ ಸ್ಮೃತಿಯಾವದು** - ಅನ್ತಿಮ ಸ್ಮೃತಿಯೆಂಬುದು ಹಾಗಾದರೆ ಯಾವುದು? **ವಾಗಾದಿಗಳುಪಶಾನ್ತಮಾನಾಲ್** - ವಾಕ್ಕು ಮೊದಲಾದ ದಶೇಂದ್ರಿಯಗಳು ಪ್ರವೃತ್ತಿ ಇಲ್ಲದವುಗಳಾಗಿ, **ಮನಸ್ಸು ಉಪಶಾನ್ತಮಾವದರ್ಕ್ಕು ಮುನ್ಬೇ** - ಮನಸ್ಸಿನ ವ್ಯಾಪಾರವು ನಿಂತುಹೋಗುವದಕ್ಕೆ ಮುಂಚೆಯೇ, **ಪಿರಪ್ಪದೊರು ಸ್ಮೃತಿ** - ಉಂಟಾಗುವ ಸ್ಮರಣೆಯು, ಎಂದರೆ ಪ್ರಪನ್ನನ ವಿಷಯದಲ್ಲಿ ಭಗವದನುಗ್ರಹದಿಂದುಂಟಾಗುವ, ಮನಸ್ಸಿನ ಸ್ಥೈರ್ಯದಿಂದುಂಟಾಗುವ ಸ್ಮರಣೆಯು. ಇದರಿಂದ ಅನ್ತಿಮ ಸ್ಮೃತಿಯು ಸರ್ವೇಶ್ವರನ ವಿಷಯವಾಗಿಯಾದರೂ ಅಥವಾ ಐಹಿಕ ವಿಷಯವಾಗಿಯಾದರೂ ಇರಬಹುದು. ಭರನ್ಯಾಸನಿಷ್ಠನಿಗೆ ಕೇವಲ ಸರ್ವೇಶ್ವರ ಕೃಪೆಯಿಂದ ಅನ್ತಿಮ ಸ್ಮೃತಿಯು ಸರ್ವೇಶ್ವರ ವಿಷಯವಾಗಬಹುದು. ಇತರ ಅಧಿಕಾರಿಗಳಿಗೆ ಐಹಿಕವಿಷಯವಾದುದಾಗಬಹುದು. ಆದರೆ ಭರನ್ಯಾಸನಿಷ್ಠನಿಗೆ ಭಗವದೈಕಾಂತ್ಯವು ಸದಾ ಇರುವದೂ ಅಲ್ಲದೆ, ದೇಹತ್ಯಾಗಾನಂತರವೂ ಇರುತ್ತದೆಯಾದುದರಿಂದ ಅನ್ತಿಮವಾದುದೆಂದು ಹೇಗೆ ಹೇಳಬಹುದೆಂದಾಕ್ಷೇಪಿಸಿದರೆ, ಸ್ಥೂಲ ಶರೀರಕನಾಗಿರುವ ದಶೆಯಲ್ಲಿ ವಾಗಾದಿ ಇಂದ್ರಿಯಗಳ ಉಪರತಿಯುಂಟಾಗಿ ಇನ್ನೂ ಮನಸ್ಸಿನ ಉಪರತಿಯುಂಟಾಗುವದಕ್ಕಿಂತ ಮುಂಚಿತವಾಗಿ ಉಂಟಾಗುವ ಸ್ಮೃತಿ ಎಂದು ಹೇಳಲ್ಪಟ್ಟಿತು. ಆದುದರಿಂದ ಅಂತಿಮವೆಂದರೆ ಬದ್ಧದೆಶೆಯಲ್ಲೇ ಇಂದ್ರಿಯಾಧೀನಜ್ಞಾನಗಳಲ್ಲೇ, ಅನ್ತಿಮವೆಂಬ ಭಾವವು. ಹೀಗೆ ಅನ್ತಿಮ ಸ್ಮೃತಿಯು ಸರ್ವೇಶ್ವರ ಕೃಪೆಯಿಂದ ನಿಯತವಾಗಿ ಉಂಟಾಗುತ್ತದೆಂಬಭಿಪ್ರಾಯವಾದರೆ, ಹತ್ತಿರಿದ್ದವರಿಗೇನಾದರೂ ಗೊತ್ತಾಗುತ್ತದೋ ಎಂದರೆ, ಏನೋ ಒಂದು ವಿಧವಾದ ಅನ್ತಿಮ ಸ್ಮೃತಿಯುಂಟಾಯಿತೆಂಬುದನ್ನು ಊಹಿಸಬಹುದೇ ವಿನಾ, ಇಂತಹ ಅನ್ತಿಮ ಸ್ಮೃತಿಯುಂಟಾಯಿತೆಂದು ಸಮೀಪಸ್ಥರೂ ಕೂಡ ತಿಳಿಯಲಾರರೆಂದುಪದೇಶಿಸುತ್ತಾರೆ. **ಇದು** - ಈ ಅನ್ತಿಮಸ್ಮೃತಿಯು, ಎಂದರೆ ಇದು ಇಂಥಾದ್ದೆಂಬುವದು,

---

(೧) ಶ್ರೀ ಭಾಷ್ಯಂ ೪. ೨. ೧.

ವಾಗಿಂದ್ರಿಯ ಉಪರತೇಽಪಿ ಮನಃ ಪ್ರವೃತ್ತಿಃ" ಎಙ್ಗಿರ ಭಾಷ್ಯಮುಮ್ ಏದೇನು ಮೊರು ಲಿಙ್ಗತ್ತಾಲೆ ಒರು ಮನಃ ಪ್ರವೃತ್ತಿ ಇವನುಕ್ಕುಣ್ಡೆನ್ರು

ಅರುಗಿರುನ್ದಾರ್ಕ್ಕು - ದೇಹಾವಸಾನ ಕಾಲದಲ್ಲಿ ಸಮೀಪವರ್ತಿಗಳಾದವರಿಗೂ, **ತೆರಿಯಾದು** - ಗೊತ್ತಾಗುವದಿಲ್ಲವು. ಇಂತಹ ಅನ್ತಿಮ ಸ್ಮೃತಿಯುಂಟಾಯಿತೆಂದು ಆ ಸಮಯದಲ್ಲಿ ಹತ್ತರವಿದ್ದ ಜನಗಳಿಗೂ ಕೂಡ ಗೊತ್ತಾಗುವದಿಲ್ಲವು. ಮಾತು ಮೊದಲಾದ ಇಂದ್ರಿಯಗಳೆಲ್ಲಾ ನಿಂತುಹೋಗಿರುವದರಿಂದ ಇಂತಹ ಅನ್ತಿಮ ಸ್ಮೃತಿಯೆಂದು ಆ ಪ್ರಪನ್ನನು ಹೇಳಲಾರನಾದುದರಿಂದ ಬಾಹ್ಯಚಿಹ್ನೆಗಳಿಂದ ತಿಳಿದುಕೊಳ್ಳುವದು ಸಾಧ್ಯವಲ್ಲವೆಂಬ ಭಾವವು.

ಆದರೆ, ವಾಗಾದಿ ಇಂದ್ರಿಯಗಳುಪಶಾನ್ತಿಯಾದ ನಂತರವೂ ಮನಸ್ಸಿನ ಪ್ರವೃತ್ತಿಯುಂಟೋ ಎಂದರೆ ಉಂಟು ಎಂದು ತಿಳಿಸುವದಕ್ಕಾಗಿ ಶ್ರೀ ಭಾಷ್ಯಕಾರರ ಸೂಕ್ತಿಯನ್ನುದಾಹರಿಸಿ, ಇಂತಹ ವಿಷಯವಾದ ಸ್ಮೃತಿ ಎಂದು ಗೊತ್ತಾಗದಿದ್ದರೂ ಯಾವದಾದರೂ ಒಂದು ಹೇತುವಿನಿಂದ ಸ್ಮೃತಿಯುಂಟೆಂಬುದನ್ನು ಮಾತ್ರ ಊಹಿಸಬಹುದೆಂದು ತಿಳಿಸುತ್ತಾರೆ:—**ವಾಗಿಂದ್ರಿಯ ಉಪರತೇಽಪಿ** - ವಾಗಿಂದ್ರಿಯದ ವ್ಯಾಪಾರವು ನಿಂತುಹೋದರೂ ಕೂಡ, **ಮನಃ ಪ್ರವೃತ್ತಿಃ** - ಮನಸ್ಸಿನ ವ್ಯಾಪಾರವು, **ದೃಶ್ಯತೇಹಿ** - ತೋರಿಬರುತ್ತದೆಯಷ್ಟೇ." ಎಙ್ಗಿರ **ಭಾಷ್ಯಮುಮ್** - ಎನ್ನುವ ಶ್ರೀ ಯತಿವರ್ಯರ ವ್ಯಾಖ್ಯಾನವೂ, **ಏದೇನು ಮೊರು ಲಿಙ್ಗತ್ತಾಲೇ** - ಯಾವುದಾದರೂ ಒಂದು ಬಾಹ್ಯ ಚಿಹ್ನೆಯಿಂದ, **ಒರು ಮನಃಪ್ರವೃತ್ತಿಯುಣ್ಡೆನ್ರು** - ಯಾವುದೋ ಒಂದು ವಿಧವಾದ ಮನಸ್ಸಿನ ಪ್ರವೃತ್ತಿಯುಂಟೆಂದು, **ಅರುಗಿರ ವಳವ್ವೈ** - ತಿಳಿಯಬಹುದೆಂಬುದಷ್ಟು ಮಾತ್ರವನ್ನು, **ಚೊಲ್ಲುಗಿರದಾಗವುಮಾಮ್**-ಹೇಳುವದರಲ್ಲಿ ಉದ್ದೇಶ್ಯವು. ಮನಃಪ್ರವೃತ್ತಿ ಇಂಥಾದ್ದೆಂದು ಸ್ಪಷ್ಟವಾಗಿ ತಿಳಿಯುವದು ಅಸಾಧ್ಯವಾದರೂ, ವಾಗಾದಿಗಳ ವ್ಯಾಪಾರ ನಿಂತುಹೋದ ನಂತರವೂ ಮನಸ್ಸಿನ ವ್ಯಾಪಾರ ಉಂಟೆಂಬುದನ್ನು ಮಾತ್ರ ನಾವು ಗ್ರಹಿಸಬಹುದೆಂದು ಶ್ರೀ ಯತಿವರ್ಯರಭಿಪ್ರಾಯವೇ ವಿನಾ, ಅನ್ತಿಮ ಸ್ಮೃತಿ ಇಂಥಾದ್ದೆಂದು ಹೇಳಬಹುದೆಂದು ತಿಳಿಸಲಿಲ್ಲವು. ಆದುದರಿಂದ ತಾವು ಸಮೀಪಸ್ಥರಿಗೂ ಕೂಡ ಈ ಅನ್ತಿಮ ಸ್ಮೃತಿ ಇಂಥಾದ್ದೆಂದು ಹೇಳಿಗುವದು ಶ್ರೀ ಭಾಷ್ಯಕಾರರ ಈ ಉಕ್ತಿಗೆ ವಿರೋಧವಾದುದೇನೂ ಇಲ್ಲವು. ಈ ವಾಕ್ಯವು "**ವಾಙ್ಮನಸಿ ದರ್ಶನಾಚ್ಛಬ್ದಾಚ್ಚ**" ಎಂಬ ಸೂತ್ರದಲ್ಲಿ (೪. ೨. ೧.) **ದರ್ಶನಾತ್** ಎಂಬುದರ ವ್ಯಾಖ್ಯಾನವಾಗಿರುತ್ತದೆ. ವಾಕ್ಕು ಮನಸ್ಸಿನಲ್ಲಿ ಸ್ವರೂಪೈಕ್ಯವನ್ನು ಹೊಂದುವದಿಲ್ಲವು,

ಗಿರ ವಳವೈ ಚೊಲ್ಲುಗಿರದಾಗವುಮಾಮ್, ತನಕ್ಕು ಶಿಲವ್ಯಾಧ್ಯಾದ್ಯವಸ್ಥೈಗಳಿಲ್ ಕಂಡ ಪಡಿಯೈ ಚ್ಚೊಲ್ಲುಗಿರದಾಗವುಮಾಮ್.

ಏಕೆಂದರೆ ಮನಸ್ಸು ವಾಗಾದಿಗಳಿಗೆ ಕಾರಣವಲ್ಲವು. **ವಾಙ್ಮನಸಿ ಸಂಪದ್ಯತೇ** ಎಂದು ಶ್ರುತಿಯಿರುವದರಿಂದ ವಾಗಾದಿ ಇಂದ್ರಿಯಗಳು ಸೂಕ್ಷ್ಮ ಪ್ರದೇಶದಲ್ಲಿ ಹೋಗಿ ಮನಸ್ಸಿನಲ್ಲಿ ಸೇರಿಕೊಳ್ಳುತ್ತವೆ ಎಂದುಪಪಾದಿಸುವ ಪ್ರಕರಣದಲ್ಲಿ, ಈ "ದೃಶ್ಯತೇಹಿ" ಎಂಬ ವಾಕ್ಯವನ್ನು ಪ್ರಯೋಗಿಸಿರುತ್ತಾರೆ. **ದೃಶ್ಯತೇಹಿ** ಎಂದು ಪ್ರಯೋಗಿಸಿರುವ ಸಂದರ್ಭದಲ್ಲಿ ಹಾಗೆ ತೋರಿಬರುವದೇನು ಇತರ ಚೇಷ್ಟೆಗಳ ಚಿಹ್ನೆಯಿಂದ ಊಹೆಯೇ, ಇಲ್ಲವೇ ಪ್ರತ್ಯಕ್ಷದಿಂದಲೇ? ಅಥವಾ **ದೃಶ್ಯತೇಹಿ** ಎಂಬುದು ಇತರರಿಗೆ ಗೋಚರವಾದ ಹಾಗೆಯೇ, ಇಲ್ಲವೇ ತನಗೆ ಗೋಚರವಾದ ಹಾಗೆಯೇ ಎಂಬ ವಿಕಲ್ಪಗಳಲ್ಲಿ ಎರಡು ವಿಧವಾಗಿಯೂ ಆಗಬಹುದೆಂದು ತಿಳಿಸುತ್ತಾರೆ. ಸಮೀಪಸ್ಥರು ಆತನಿಗೆ ವಾಗಿಂದ್ರಿಯವಿಲ್ಲದಿದ್ದರೂ ಆತನ ಕೈ ಆಡಿಸುವದೇ ಮೊದಲಾದ ಬಾಹ್ಯ ಚೇಷ್ಟೆಗಳ ಮೂಲಕವೂ ಗ್ರಹಿಸಬಹುದು. ಅಥವಾ ತಾನೇ ಪ್ರತ್ಯಕ್ಷವಾಗಿಯೂ ಗ್ರಹಿಸಬಹುದು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—**ತನಕ್ಕು** - ತನಗೆ, **ಶಿಲ ವ್ಯಾಧ್ಯಾದ್ಯವಸ್ಥೈಗಳಿಲೇ** - ಕೆಲವು ರೋಗ ಮೊದಲಾದವು ಪ್ರಾಪ್ತವಾದ ಅವಸ್ಥೆಗಳಲ್ಲಿ, **ಕಣ್ಡ ಪಡಿಯೇ**- ವಾಗಿಂದ್ರಿಯದ ವ್ಯಾಪಾರ ನಿಂತುಹೋಗಿದ್ದರೂ ಮನೋವ್ಯಾಪಾರವಿತ್ತೆಂಬಂಶವನ್ನು ಕಂಡಹಾಗೆ, **ಚೊಲ್ಲುಗಿರದಾಗವುಮಾಮ್** - ಹೇಳುತ್ತದೆಂದಾಗಲಿ ಆಗಬಹುದು. ಕೆಲವರಿಗೆ ತುಂಬಾ ಖಾಯಿಲೆಯಾಗಿ ಮಾತು ಕೂಡ ನಿಂತುಹೋಗಿ ಜ್ಞಾನ ಉಂಟಾಗಿ ಬದುಕಿಕೊಳ್ಳಬಹುದು. ಅಂತವರ ಮೂಲಕವಾಗಿಯಾಗಲಿ ವಾಗಿಂದ್ರಿಯ ವ್ಯಾಪಾರವಿಲ್ಲದ ಸ್ಥಿತಿಯಲ್ಲೂ ಮನಸ್ಸಿನ ಪ್ರವೃತ್ತಿ ಇತ್ತೆಂಬಂಶವನ್ನು ತಿಳಿಯಬಹುದು ಆದುದರಿಂದಲೇ ಶ್ರೀ ಭಾಷ್ಯಕಾರರು **ದೃಶ್ಯತೇಹಿ** ಎಂಬಲ್ಲಿ ಹಿ ಎಂಬ ಶಬ್ದದಿಂದ ಇದು ಸಿದ್ಧವಾದ ವಿಷಯವೆಂದು ತೋರ್ಪಡಿಸಿರುತ್ತಾರೆ.

ಆದುದರಿಂದ ಪ್ರಪನ್ನನಾಗಿ ಮುಕ್ತನಾಗುವವನಿಗೂ ಅನ್ತಿಮ ಸ್ಮೃತಿಯುಂಟೆಂದು ಒಪ್ಪತಕ್ಕದ್ದೆಂಬ ಭಾವವು. ಆ ಅನ್ತಿಮ ಸ್ಮೃತಿಯು ಕೇವಲ ಸರ್ವೇಶ್ವರ ಕೃಪೆಯಿಂದ ಆ ಶ್ರಿಯಃಪತಿಯನ್ನೇ ಸ್ಮರಿಸುವಂಥಾದ್ದೆಂಬುದು ಪ್ರಮಾಣಗಳಿಂದ ತೋರಿಬರುತ್ತದೆ ಹಾಗೆಯೇ ಉಂಟಾಗುತ್ತದೆಂದು ಸಮರ್ಥಿಸಿ ಹೇಳಲು ಪ್ರಾಕೃತ ಗುಣಗಳುಳ್ಳ ಯಾರಿಗೂ ಪ್ರತ್ಯಕ್ಷ ಗೋಚರವಾಗದೆ ಸಾಧ್ಯವಿಲ್ಲ

ಆನ ಪಿನ್ಬು ಭಗವದ್ವಿಷಯತ್ತಿಲ್ ಅನ್ತಿಮ ಸ್ಮೃತಿ ಮುಕ್ತರಾಗಿರ ವರ್ಗ್ಕುಮ್ ಮೋಕ್ಷಮ್ ಕೊಡುಕ್ಕಿರವರ್ಕ್ಕುಮ್ ತೆರಿಯುಮಿತ್ತನೈ.

ದುದರಿಂದಲೇ "ಇದು ಅರುಗಿರುನ್ದಾರ್ಕ್ಕು ತ್ತೆರಿಯಾದು" ಎಂದು ಹೇಳಿದರು. ಹಾಗಾದರೆ ಯಾರಿಗೆ ತಿಳಿಯುತ್ತದೆ, ಯಾರಿಗೆ ಪ್ರತ್ಯಕ್ಷವೆಂದರೆ ಮೋಕ್ಷ ಕೊಡುವ ಶ್ರಿಯಃಪತಿಗೂ, ಮೋಕ್ಷ ಹೊಂದುವವರಿಗೂ ಪ್ರತ್ಯಕ್ಷವೆಂದು ಮುಂದಿನ ವಾಕ್ಯ ದಿಂದ ತಿಳಿಸುತ್ತಾರೆ:—**ಆನ ಪಿನ್ಬು** - ಹೀಗಾದ ನಂತರ, ಎಂದರೆ ಸಮೀಪಸ್ಥ ರಾದ ಪ್ರಾಕೃತ ಗುಣವುಳ್ಳವರಿಗೆ ಪ್ರತ್ಯಕ್ಷವಾಗಿ ಗ್ರಹಿಸಲು ಸಾಧ್ಯವಲ್ಲದುದರಿಂದ, **ಭಗವದ್ವಿಷಯತ್ತಿಲ್ ಅನ್ತಿಮಸ್ಮೃತಿ** - ಸರ್ವೇಶ್ವರನನ್ನು ಕುರಿತ ಅನ್ತಿಮ ಸ್ಮೃತಿಯು ಪ್ರಪನ್ನನಿಗೆ ದೇಹಾವಸಾನದಲ್ಲಿ ಉಂಟಾಗುತ್ತದೆಂಬುದು, **ಮುಕ್ತ ರಾಗಿರ ವರ್ಕ್ಕುಮ್** - ದೇಹಾವಸಾನಹೊಂದಿ ಮುಕ್ತಿಯನ್ನು ಹೊಂದುವವರಿಗೂ, **ಮೋಕ್ಷಮ್ ಕೊಡುಕ್ಕಿರವರ್ಕ್ಕುಮ್**- ಮೋಕ್ಷವನ್ನು ಕೊಡುವ ಶ್ರಿಯಃಪತಿಗೂ ಸಹ, **ತೆರಿಯುಮ್** - ಪ್ರತ್ಯಕ್ಷವಾಗಿ ಗೊತ್ತಾಗುವದು, **ಇತ್ತನೈ** - ಇಷ್ಟು ಮಾತ್ರವೇ ಸರಿ, ಎಂದರೆ ಈ ಬದ್ಧಚೇತನರಿಗ್ಯಾರಿಗೂ ತಿಳಿಯುವದಿಲ್ಲವೆಂದೂ, ಮುಕ್ತರಾಗಿ ಸ್ವಸ್ವರೂಪಾವಿರ್ಭಾವ ಉಂಟಾದವರಿಗೆ ಮಾತ್ರ ತಿಳಿಯುವದೆಂಬ ಭಾವವು. ಇಲ್ಲಿ **ಸರ್ವೇಶ್ವರನುಕ್ಕುಮ್ ತೆರಿಯುಮ್** ಎಂದು ಹೇಳದೆ **ಮೋಕ್ಷಮ್ ಕೊಡುಕ್ಕಿರವರ್ಕ್ಕು** ಎಂದು ಏಕೆ ಹೇಳಲ್ಪಟ್ಟಿತೆಂದರೆ ಮೋಕ್ಷ ಕೊಡಲು ಸಾಮರ್ಥ್ಯವಿಲ್ಲದ ಬ್ರಹ್ಮರುದ್ರೇಂದ್ರಯಮಾದಿಗಳಿಗೂ ಮೋಕ್ಷಸೂಚಕ ವಾದ ಅನ್ತಿಮ ಸ್ಮೃತಿಯ ವಿಷಯವು ತಿಳಿಯಲಾರದೆಂಬ ಭಾವವು. "**ದೃಶ್ಯ ತೇಹಿ**" ಎಂಬ ಶ್ರೀ ಭಾಷ್ಯಕಾರ ಸೂಕ್ತಿಗೆ ಎರಡು ವಿಧವಾಗಿ ಉಪಪತ್ತಿಯನ್ನು ತೋರಿಸಿರುತ್ತಾರೆ. ವಾಗಾದಿ ಇಂದ್ರಿಯಗಳು ಮನಸ್ಸಿನಲ್ಲಿ ಹೋಗಿ ಸೇರುವದ ರಿಂದ ವಾಕ್ಕಿನ ಪ್ರವೃತ್ತಿ ನಿಂತುಹೋದರೂ ಅನ್ತಿಮ ಸ್ಮೃತಿಗೆ ಬೇಕಾದ ಮನಃಪ್ರವೃತ್ತಿಯು ಉಂಟೆಂದೂ ಹೇಳಬಹುದು; ಅಥವಾ ಕೆಲವು ವ್ಯಾಧಿ ಗಳು ಪ್ರಬಲವಾಗಿರುವ ಅವಸ್ಥೆಗಳಲ್ಲಿ ವಾಕ್ಕಿನ ವ್ಯಾಪಾರ ನಿಂತುಹೋಗಿ ಮನೋ ವ್ಯಾಪಾರವಿನ್ನೂ ಇರಬಹುದೆಂದಾದರೂ ಹೇಳಬಹುದು, ಎಂಬ ಭಾವವು. ಆದು ದರಿಂದ **ದೃಶ್ಯತೇಹಿ** ಎಂಬ ವಾಕ್ಯವು ಅನ್ತಿಮ ಸ್ಮೃತಿಯ ವಿಷಯವಲ್ಲವು. ದೇಹಾವಸಾನ ಉಂಟಾಗುವ ಸಂಭವವಿದ್ದರೆ ಅನ್ತಿಮ ಸ್ಮೃತಿಗೆ ಪೂರ್ವಭಾವಿ ಯಾದವಸ್ಥೆಯು ಇಲ್ಲಿ ಹೇಳಲ್ಪಟ್ಟಿತೆಂದು ಭಾವಿಸಬಹುದು ; ಅಥವಾ ದೇಹಾವ ಸಾನವಿಲ್ಲದೆ ಬದುಕಿಕೊಳ್ಳಬಹುದಾದ ಅವಸ್ಥೆಯನ್ನೂ ಸೂಚಿಸಬಹುದು ; ಆಗ

ಅನ್ತಿಮ ಸ್ಮೃತ್ಯನಂತರಾವಸ್ಥಾಃ.

ಇದುಕ್ಕನನ್ತರಮ್ ಯೋಗಿಗಳೋಡುಮ್ (ಯೋಗಿಗಳಲ್ಲಾದಾರೋಡುಮ್) ಅಯೋಗಿಗಳೋಡುಮ್ ವಾಶಿಯುರ, ಹಾರ್ದನಾನ ಪರಮಾತ್ಮಾವಿನ್ ಪಕ್ಕಲಿಲೇ ವಿಶ್ರಮಿಕ್ಕ ಮುಳವುಮ್ ಸುಷುಪ್ತಿ ತುಲ್ಯಮಾಯಿರುಕ್ಕುಮ್. ಇವ್ವವಸ್ಥೈಯೈಪ್ಪತ್ತ "ಕಾಷ್ಠಪಾಷಾಣ ಸನ್ನಿ

ಆತನು ನನಗೆ ಮಾತು ನಿಂತುಹೋಗಿದ್ದರೆ ಮನಸ್ಸಿನಲ್ಲಿ ಈ ವಿಧವಾಗಿ ಯೋಚಿಸುತ್ತಿದ್ದೆನು ಎಂದು ಹೇಳಬಹುದು. ಆದುದರಿಂದ ದೃಶ್ಯತೇಹಿ ಎಂದು ಇಷ್ಟು ಮಾತ್ರವೇ ಹೇಳಿದರು. ಪೂರ್ವಯೋಜನೆ ಪ್ರಕಾರ ಹತ್ತಿರವಿರುವವರಿಂದ ತಿಳಿಯಲ್ಪಡಬಹುದು ಎಂದರ್ಥ ಮಾಡಬಹುದೆಂದು ಆರಿಗಿರವಳವೈ ಚೊಲ್ಲುಗಿರದು ಎಂದು ವ್ಯಾಖ್ಯಾನ ಮಾಡಿದರು. ತನಗೇನೆ ತಿಳಿಯಬಹುದೆಂದು "ತನಕ್ಕು" ಎಂದು ಪ್ರಾರಂಭಿಸಿ ಎರಡನೆಯ ಯೋಜನೆಯ ಪ್ರಕಾರ ವ್ಯಾಖ್ಯಾನ ಮಾಡಿದರು, ಎಂದು ತಿಳಿಯತಕ್ಕದ್ದು.

ಅನ್ತಿಮಸ್ಮೃತ್ಯನಂತರ ಉಂಟಾಗುವ ಅವಸ್ಥೆಗಳು.

ಮುಂದೆ ಈ ಅನ್ತಿಮ ಸ್ಮೃತ್ಯನಂತರ ಪ್ರಾಪ್ತವಾಗುವ ಅವಸ್ಥೆಗಳನ್ನು ಎರಡಾಗಿ ಭಾವಿಸಬಹುದು. ಒಂದು ಸುಷುಪ್ತ್ಯವಸ್ಥೆಯು, ಅನಂತರ ಇನ್ನು ಮುಂದೆ ಯಾವಾಗಲೂ ಎಂದರೆ ಕಾಲತತ್ವವಿರುವವರೆಗೂ ಎಚ್ಚರವಾಗಿರುವ ಜಾಗ್ರದವಸ್ಥೆಯು, ಎಂದು ಮುಂದಿನ ಮೂರು ವಾಕ್ಯದಿಂದ ತಿಳಿಸಿ ಆ ಅವಸ್ಥೆಗಳು ಎಂಥವು ಎಂದು ವ್ಯವಸ್ಥೆ ಮಾಡುತ್ತಾರೆ. ಹಿಂದೆ, ಇಂದ್ರಿಯಗಳು, ಮನಸ್ಸು, ಪ್ರಾಣ ಭೂತಸೂಕ್ಷ್ಮಗಳಿಂದ ಯುಕ್ತನಾದ ಜೀವಾತ್ಮನಿಗೆ ಪರಮಾತ್ಮನೊಂದಿಗೆ ಸಂಪತ್ತಿಯು ಪ್ರಪನ್ನ ಅಪ್ರಪನ್ನ ಸಾಧಾರಣವೆಂದು ಹೇಳಿ ಅದು ಸುಷುಪ್ತಿರೂಪವಾದುದೆಂದು ಹೇಳಲ್ಪಟ್ಟಿತು. ಈ ಅವಸ್ಥೆಯಲ್ಲಿ ಪ್ರಪನ್ನನ ವಿಷಯದಲ್ಲಿ ಏನಾದರೂ ವೈಲಕ್ಷಣ್ಯವುಂಟೋ ಎಂಬುದು ಚರ್ಚಿಸಲ್ಪಡುತ್ತದೆ. ಇದಕ್ಕನನ್ತರಮ್ - ಈ ಅನ್ತಿಮ ಸ್ಮೃತಿ ಕೇವಲ ಸರ್ವೇಶ್ವರನ ಕರುಣೆಯಿಂದಲೇ ಈ ಪ್ರಪನ್ನನಿಗೆ ಪ್ರಾಪ್ತವಾದ ನಂತರ, ಯೋಗಿಗಳೋಡುಮ್ - ಭಕ್ತಿ ನಿಷ್ಠರಾದ ಉಪಾಸಕರಿಗೂ, ಯೋಗಿಗಳಲ್ಲಾದಾರೋಡುಮ್ - ಉಪಾಸಕರಲ್ಲದೆ ಸ್ವತಂತ್ರ ಪ್ರಪತ್ತಿನಿಷ್ಠರಿಗೂ ಮತ್ತು ಬುಬುಕ್ಷುಗಳಾದ ಇತರರಿಗೂ, ಅಯೋಗಿಗಳೋ

ಭವ್." "ನಷ್ಟಸ್ಮೃತಿರಪಿ" ಎನ್ರುವ್ (೧) "ನಿನೈಕ್ಕಮಾಟ್ಟೇನ್" ಎನ್ರುವ್ ಶೊಲ್ಲುಗಿರದೆನ್ರಾಲ್ ಪ್ರಪನ್ನಾಧಿಕಾರಿಕ್ಕು ವಿಶೇಷಿತ್ತು ಓರತಿಶಯುವ್ ಶೊಲ್ಲುತ್ತಾಗಾದು. ಇದುಕ್ಕು ಮೇಲ್ (೨) "ಮತ್ತಸ್ಸ್ಮೃತಿ

ಡುಮ್ ಎಂಬ ಪಾಠದಲ್ಲೂ ಅದೇ ಅರ್ಥವೇ, **ವಾಶಿಯುರ** - ಏನೊಂದೂ ವ್ಯತ್ಯಾಸವಿಲ್ಲದ ಹಾಗೆ, **ಹಾರ್ದನಾನ** - ಹೃದಯದಲ್ಲಿ ಹಾರ್ದರೂಪಿಯಾದ, **ಪರಮಾತ್ಮಾವಿನ ಪಕ್ಕಲಿಲೇ** - ಪರಮಾತ್ಮನೊಂದಿಗೆ ಸೇರಿ, **ವಿಶ್ರಮಿಕ್ಕು ಮಳವುಮ್** - ವಿಶ್ರಮಿಸಿರುವವರೆಗೂ, **ಸುಷುಪ್ತಿ** - ಮಲಗಿರುವವಸ್ಥೆಗೆ, **ಶುಲ್ಯಮಾ ಯಿರುಕ್ಕುಮ್** - ಸಮಾನವಾಗಿರುತ್ತದೆ ಎಂದರೆ ಬುಬುಕ್ಷು ಮುಮುಕ್ಷುಗಳೆಲ್ಲರಿಗೂ ಸ್ಥಿತಿಯು ಸುಷುಪ್ತ್ಯವಸ್ಥೆಗೆ ಸಮಾನವಾದುದೆಂಬ ಭಾವವು. ಆದರೆ ಇವರುಗಳ ಧರ್ಮಭೂತಜ್ಞಾನ ವಿಕಾಸದಲ್ಲೇನಾದರೂ ವ್ಯತ್ಯಾಸವುಂಟೋ ಎಂದರೆ ಉಂಟೆಂದು ಮುಂದೆ ಹೇಳುತ್ತಾರೆ. ಕೆಲವರು ಧರ್ಮಭೂತಜ್ಞಾನ ವಿಕಾಸಕ್ಕೆ ಆಗ ಸಂಕೋಚ ಉಂಟೆಂದು ಹೇಳುವದು ಸರಿಯಲ್ಲವೆಂದೂ ಹಾಗೆ ಹೇಳಿದರೆ ಪ್ರಪನ್ನನಿಗೆ ಆಗ ಅತಿಶಯವೇನೂ ಹೇಳಿದಹಾಗಾಗುವದಿಲ್ಲವೆಂದೂ. ತಿಳಿಸುತ್ತಾರೆ :— **ಇವ್ವವಸ್ಥೈಪ್ಪತ್ತ**-ಈ ಪರಮಾತ್ಮ ಸಂಪತ್ತಿಯಿಂದುಂಟಾಗುವ ಸುಷುಪ್ತಿ ತುಲ್ಯಾವಸ್ಥೆಯನ್ನು ಕುರಿತು, **ಕಾಷ್ಠಪಾಷಾಣ ಸನ್ನಿಭಮ್** - ಮರದ ತುಂಡು ಕಲ್ಲಿಗೂ ಸಮಾನನಾಗಿ ನಿಶ್ಚೇಷ್ಟಿತನಾಗಿರುವನೆಂದು ವರಾಹ ಪುರಾಣದಲ್ಲಿನ, **ನಷ್ಟಸ್ಮೃತಿರಪಿ** - ಈ ಪ್ರಮಾಣದಲ್ಲಿ ಸ್ಮೃತಿಯು ನಷ್ಟವಾಗುತ್ತದೆ, **ಎನ್ರುಮ್** - ಎಂಬುವ, **ನಿನೈಕ್ಕಮಾಟ್ಟೇನ್** - ಈ ಅವಸ್ಥೆಯಲ್ಲಿ ಸರ್ವೇಶ್ವರನಾದ ನಿನ್ನನ್ನು ನಾನು ಸ್ವಲ್ಪವೂ ಸ್ಮರಿಸಲಾರೆನೆಂದೂ, **ಎನ್ರುಮ್** - ಎಂದು ಶ್ರೀ ಪೆರಿಯಾಳ್ವಾರ್ರವರೂ, **ಶೊಲ್ಲುಗಿರದು** - ಹೇಳುವದು, **ಎನ್ರಾಲ್** - ಎಂದರೆ, ಆಗ ಪ್ರಪನ್ನಾಧಿಕಾರಿಗೆ, **ವಿಶೇಷಿತ್ತು** - ವೈಲಕ್ಷಣ್ಯವನ್ನುಂಟುಮಾಡಿ, **ಓರತಿಶಯುಮ್** - ಏನೊಂದು ಮಾಹಾತ್ಮ್ಯೆಯನ್ನೂ, **ಶೊಲ್ಲಿತ್ತಾಗಾದು** - ಹೇಳಿದಂತಾಗುವದಿಲ್ಲವು; ಎಂದರೆ ಸರ್ವೇಶ್ವರನು ಕೇವಲ ತನ್ನ ಪರಿಪೂರ್ಣಾನುಗ್ರಹದಿಂದ ಈ ಪ್ರಪನ್ನನಿಗೆ ತನ್ನನ್ನು ಕುರಿತ ಅನ್ತಿಮ ಸ್ಮೃತಿಯನ್ನುಂಟುಮಾಡುತ್ತಾನೆಂದು ಹೇಳಿ, ಅನಂತರ ತನ್ನೊಂದಿಗೆ ಬಂದು ಸೇರಿ ಸುಷುಪ್ತ್ಯವಸ್ಥೆಯನ್ನು ಹೊಂದುವನೆಂದು ಹೇಳಿದಾಗ, ಪ್ರಾಪ್ತವಾದ ಜ್ಞಾನವಿಕಾಸವು ನಷ್ಟವಾಗಿಹೋಗುತ್ತದೆಂದು ಈ ಪ್ರಮಾಣಗಳಲ್ಲಿ ತೋರುವ ಹಾಗ ಭಾವಿಸಿದರೆ ಆಗ ಈ ಪ್ರಪನ್ನನ

---

(೧) ಪೆರಿ. ತಿರು. ೪. ೧೦. ೧. (೨) ಗೀ. ೧೫. ೧೫.

ಜ್ಞಾನ ಮಪೋಹನಂಚ" ಎಜ್ಞಾರ ಪ್ರಾಜ್ಞನುಣರ್ತ್ತ ತತ್ಪ್ರಕಾಶಿತ

ವಿಷಯದಲ್ಲಿ ಏನೊಂದು ಅತಿಶಯವನ್ನೂ ಹೇಳಿದ ಹಾಗೆ ಆಗುವದಿಲ್ಲವೆಂದಾಗುತ್ತದೆ. ಆದುದರಿಂದ ಆಗ ಜ್ಞಾನವಿಕಾಸವಿಲ್ಲವೆಂದು ಏತಕ್ಕೆ ಹೇಳಬೇಕು ಎಂಬಭಿಪ್ರಾಯವು. ಹಾಗೆ ಜ್ಞಾನವಿಕಾಸವು ನಷ್ಟವಾಯಿತೆಂದರೆ, ಅಲ್ಲಿಂದ ಇತರ ನೂರು ನಾಡಿಗಳನ್ನೂ ತ್ಯಜಿಸಿ, ಬ್ರಹ್ಮನಾಡಿಯಲ್ಲೇ ಈ ಪ್ರಸನ್ನನು ಪ್ರವೇಶಿಸುವಾಗ, ಜ್ಞಾನವಿಕಾಸವಿಲ್ಲದೇ ಪ್ರವೇಶಿಸುವನೇ? ಆಗ ಸರ್ವೇಶ್ವರನ ಕೃಪೆಯಿಂದ ಜ್ಞಾನೋತ್ಪತ್ತಿಯಾಗುತ್ತದೆ ಎಂದು ಹೇಳುತ್ತೇವೆ ಎಂದರೆ ಯಾವುದಕ್ಕೆ ಉತ್ಪತ್ತಿಯುಂಟೋ ಅದಕ್ಕೆ ನಾಶವುಂಟು. ಹಾಗಾದರೆ ಈ ಜ್ಞಾನಕ್ಕೆ ನಾಶವೇ? ಮುಕ್ತನ ಜ್ಞಾನಕ್ಕೆ ಸರ್ವಜ್ಞತೆಯನ್ನೂ, ಕಾಲವಿರುವ ಪರ್ಯಂತ ನಿತ್ಯತ್ವವನ್ನೂ, ಹೇಳುವ ಪ್ರಮಾಣಗಳಿಗೆ ವಿರೋಧವಾಗುತ್ತದೆಂದು ಮುಂದಿನ ವಾಕ್ಯದಿಂದ ತಿಳಿಸಿ, ಆ ಕಾರಣದಿಂದ ಈ ಸುಷುಪ್ತ್ಯವಸ್ಥೆಯಲ್ಲಿ ಚೇಷ್ಟಾರಹಿತನಾಗಿದ್ದರೂ ಜ್ಞಾನ ಸಂಕೋಚ ಅಥವಾ ನಾಶವನ್ನು ಹೇಳಬೇಕಾದ ಆವಶ್ಯಕತೆ ಏನೂ ಇಲ್ಲವೆಂಬ ಭಾವವು. "ನಿನ್ನೈಕ್ಕಮಾಟ್ಟೇ" ಎಂಬುದು ಐಯ್‌ಪ್ಪು ಎನ್ನೈ ವನ್ದು ನಲಿಯುಮ್ಪೋದು ಅಙ್ಗೇದುಮ್ ನಾನುನ್ನೈ ನಿನ್ನೈಕ್ಕಮಾಟ್ಟೇ - ವಾತ ಪಿತ್ತ ಶ್ಲೇಷ್ಮಾಧಿಕ್ಯದಿಂದ ರೋಗವು ಬಂದು ನನ್ನನ್ನು ಬಾಧಿಸುವಾಗ ಆ ಸಮಯದಲ್ಲಿ ನಿನ್ನನ್ನು ಸ್ಮರಿಸಲಾರೆನು ಎಂದು "ತುಪ್ಪುಡೈಯಾರೈ" ಎಂಬ ಪೆರಿಯಾಳ್ವಾರ್ ತಿರುಮೊಳಿ ಪಾಶುರದಲ್ಲಿ ಬರುತ್ತದೆ. ಇದೇ ಅಧಿಕಾರದಲ್ಲಿ ೧೭೩೩ನೆಯ ಪುಟ ನೋಡಿ.

ಇದುಕ್ಕು ಮೇಲ್ - ಪರಮಾತ್ಮನಲ್ಲಿ ವಿಶ್ರಮಿಸಿಕೊಂಡ ನಂತರ, ಈ ಸುಷುಪ್ತ್ಯವಸ್ಥೆಯಾದ ನಂತರ, "ಮತ್ತಃ - ಎಲ್ಲಾದಕ್ಕೂ ಆತ್ಮಾವಾಗಿ ಇರುವ ನನ್ನಿಂದ, ಸ್ಮೃತಿಃ - ಪೂರ್ವದಲ್ಲಿ ಅನುಭವಿಸಲ್ಪಟ್ಟಿದ್ದರ ವಿಷಯವಾಗಿ ಆ ಅನುಭವದಿಂದುಂಟಾದ ಸಂಸ್ಕಾರದಿಂದಲೇ ಉಂಟಾಗುವ ಜ್ಞಾನವೂ, ಜ್ಞಾನಂ - ಇಂದ್ರಿಯಗಳಿಂದಲೂ, ಲಿಂಗಗಳಿಂದಲೂ, ಆಗಮದಿಂದಲೂ, ಯೋಗದಿಂದಲೂ ಉಂಟಾಗುವ ವಸ್ತುನಿಶ್ಚಾಯಕ ಜ್ಞಾನವೂ, ಅಪೋಹನಂ ಚ - ಜ್ಞಾನಶೂನ್ಯತೆ ಅಥವಾ ಊಹಿಸೋಣವು, ಈ ಎರಡನೆಯ ಅರ್ಥವು ಉತ್ತಮವು, ಊಹನವೆಂದರೆ ಈ ಪ್ರಮಾಣವು ಹೀಗೆ ಉಪಯೋಗಿಸಲು ಯೋಗ್ಯವು ಎಂದು ಪ್ರಮಾಣ ಪ್ರವೃತ್ತಿಯ ಅರ್ಹತಾ ವಿಷಯವಾದ, ಸಾಮಗ್ರ್ಯಾದಿಗಳ ನಿರೂಪಣದಿಂದ ಹುಟ್ಟಿದ ಮತ್ತು ಪ್ರಮಾಣಕ್ಕೆ ಅನುಗ್ರಾಹಕವಾದ ಜ್ಞಾನವೂ ಸಹ, ಇವೆಲ್ಲಾ

ದ್ವಾರನಾಯ್‌ಕ್ಕೊಣ್ಡು ಬ್ರಹ್ಮನಾಡಿಯಿಲೇ ಪ್ರವೇಶಿತ್ತಾಲ್ ಪಿನ್ಬು ಕಾಲತ್ತೆವನುಳ್ಳದನ್ನೈಯುಂ ಒರುಪಗಲಾಯುಣರ್ತ್ತಿಯೇ ಯಾವ್.

ನನ್ನಿಂದಲೇ ಉಂಟಾಗುತ್ತವೆಂದು ಇಟ್ಟುಕೊಳ್ಳಬೇಕು. “ಸರ್ವಸ್ಯಚಾಹಂ ಹೃದಿ ಸನ್ನಿವಿಷ್ಟೋ” ಎಂಬುದು ಮೊದಲನೆಯ ಪಾದವು ಎಣ್ಣರ - ಎಂದು ಗೀತೆಯಲ್ಲಿ ಹೇಳಲ್ಪಟ್ಟಿರುವ, ಪಾಜ್ಞರ್ - ಸಮಸ್ತವನ್ನೂ ಚೆನ್ನಾಗಿ ತಿಳಿದ ಸರ್ವಜ್ಞನಾದ ಸರ್ವೇಶ್ವರನು, ಉಣರ್‌ತ್ತ - ಜ್ಞಾನವಿಕಾಸದೊಂದಿಗೆ ಎಬ್ಬಿಸಲಾಗಿ, ಆ ಕಾರಣದಿಂದಲೇ, ತತ್ಪ್ರಕಾಶಿತ ದ್ವಾರನಾಯ್‌ಕ್ಕೊಂಡು - ಆತನ ಕೃಪಾ ಪ್ರಭಾವದಿಂದ ಪ್ರಕಾಶಪಡಿಸಲ್ಪಟ್ಟ ಮಾರ್ಗವುಳ್ಳವನಾಗಿ, ಆತನಿಂದ ತೋರಿಸಲ್ಪಟ್ಟ ಮಾರ್ಗವುಳ್ಳವನಾಗಿ ಎಂಬರ್ಥವು, ಆ ಮಾರ್ಗವು ಯಾವುದೆಂದರೆ ಹೇಳುತ್ತಾರೆ:—ಬ್ರಹ್ಮನಾಡಿಯಿಲೇ ಪ್ರವೇಶಿತ್ತಾಲ್ - ೧೦೧ನೆಯದಾದ ಬ್ರಹ್ಮನಾಡಿಯಲ್ಲಿ ಪ್ರವೇಶಿಸಿದರೆ, ಪಿನ್ಬು-ಅನಂತರ, ಕಾಲತತ್ತ್ವಮುಳ್ಳದನ್ನೈಯುಮ್-ಕಾಲತತ್ತ್ವವು ಎಲ್ಲಿಯವರೆಗೆ ಇರುತ್ತದೆಯೋ ಅದುವರೆಗೂ, ಕಾಲತತ್ತ್ವವು ಸದಾ ಇರುವದರಿಂದ ನಿತ್ಯವಾಗಿ ಎಂಬ ಭಾವವು, ಒರುಪಗಲಾಯ್ - ಒಂದೇ ಹಗಲಾಗಿ, ರಾತ್ರಿಯೇ ಇಲ್ಲವೆನ್ನುವದರಿಂದ, ಆತನ ಜ್ಞಾನವಿಕಾಸಕ್ಕೆ ಆಮೇಲೆ ಎಂದಿಗೂ ಚ್ಯುತಿಯಿಲ್ಲವೆಂದು ಹೇಳಲ್ಪಟ್ಟಿತು; ಉಣರ್ತ್ತಿಯೇಯಾಮ್ - ಆಮೇಲೆ ಸುಷುಪ್ತಿ ಏನಾದರೂ ಉಂಟೋ ಎಂದರೆ ಹಾಗೇನೂ ಇಲ್ಲವೆಂದು, ಉಣರ್ತ್ತಿಯೇಯಾಮ್ - ಸರ್ವಪ್ರಕಾಶಕ ಸರ್ವಜ್ಞತೆಯೇ ಉಂಟಾಗುತ್ತದೆ. ಕರ್ಮಮೂಲಕವಾಗಿ ಈತನಿಗೆ ಪ್ರಕೃತಿ ಸಂಬಂಧವೂ ಅದರಿಂದ ಈತನ ಸರ್ವಜ್ಞತೆಗೆ ಕುಂದಕವೂ ಉಂಟಾಗಿತ್ತು. ಯಾವಾಗ ಸರ್ವೇಶ್ವರನ ಕೃಪೆಯು ಒದಗಿ ಅನ್ತಿಮ ಸ್ಮೃತಿ ಮೊದಲಾದವು ಉಂಟಾದವೋ, ಆಗ ಜ್ಞಾನಪ್ರಕಾಶ ಪ್ರತಿಬಂಧಕವು ತೊಲಗಿ ಸ್ವಸ್ವರೂಪಾವಿರ್ಭಾವದಿಂದ ಸರ್ವಜ್ಞತೆಯುಂಟಾಗುತ್ತದೆ. ಈ ಅಭಿಪ್ರಾಯವನ್ನೇ “ಏವ ಮೇವೈಷ ಸಮ್ಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಮ್ಪದ್ಯ ಸ್ವೇನರೂಪೇಣಾಭಿ ನಿಷ್ಪದ್ಯತೇ” (ಛಾಂ. ೮. ೧೨. ೨) ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಇದರರ್ಥವು:— ಹಾಗೆಯೇ ಈ ಜೀವಾತ್ಮನು ಈ ಶರೀರದಿಂದ ಬಿಟ್ಟು ಹೊರಟವನಾಗಿ ಪರಂಜ್ಯೋತಿಸ್ಸಾದ ಪರಮಪುರುಷನನ್ನು ಸೇರಿ ತನ್ನ ಸ್ವಕೀಯವಾದ ಸ್ವರೂಪಾವಿರ್ಭಾವವನ್ನು ಹೊಂದುತ್ತಾನೆ. ಇಲ್ಲಿ ಸ್ವೇನ ಎಂದಿರುವದರಿಂದ, ಉತ್ಪತ್ತಿಯಾದುದಲ್ಲವು, ಆ ಸ್ವರೂಪವು ಸಹಜವಾದುದು ಎಂಬರ್ಥವು ಈ ಅಭಿಪ್ರಾಯವೇ

"ಸಂಪದ್ಯಾವಿರ್ಭಾವ ಸ್ವೇನ ಶಬ್ದಾತ್" (೪. ೪. ೧.) ಎಂಬ ಸೂತ್ರದಲ್ಲೂ **ಉಪಪಾದಿತವಾಗಿದೆ.** ಶೌನಕಮಹರ್ಷಿಗಳೂ ವಿಷ್ಣುಧರ್ಮದಲ್ಲೂ (೧೦೪-೫೫. ೭) ಹಾಗೆಯೇ ಉಪದೇಶಿಸಿರುತ್ತಾರೆ. **"ಯಥಾ ನ ಕ್ರಿಯತೇ ಜ್ಯೋತ್ಸ್ನಾ ಮಲ ಪ್ರಕ್ಷಾಳ ನಾನ್ಮಣೇಃ । ದೋಷಪ್ರಹಾಣಾನ್ನ ಜ್ಞಾನ ಮಾತ್ಮನಃ ಕ್ರಿಯತೇ ತಥಾ ॥" ಮಣೇಃ** - ರತ್ನದ, **ಮಲ ಪ್ರಕ್ಷಾಳನಾತ್** - ಕೊಳೆಯನ್ನು ತೊಳೆಯುವದರಿಂದ, **ಜ್ಯೋತ್ಸ್ನಾ** - ಪ್ರಕಾಶವು, **ಯಥಾ ನ ಕ್ರಿಯತೇ** - ಹೇಗೆ ಹೊಸದಾಗಿ ಉಂಟುಮಾಡಲ್ಪಡುವದಿಲ್ಲವೋ, ಹಾಗೆ, **ಆತ್ಮನಃ ಜ್ಞಾನಂ** - ಜೀವಾತ್ಮನ ಜ್ಞಾನವು, **ದೋಷಪ್ರಹಾಣಾತ್** - ಕರ್ಮಕೃತ ದೋಷವು ಹೋಗುವದರಿಂದ, **ನ ಕ್ರಿಯತೇ** - ಹೊಸದಾಗಿ ಮಾಡಲ್ಪಡುವದಿಲ್ಲವು ; **"ಯಥೋದಪಾನ ಕರಣಾತ್ಕ್ರಿಯತೇ ನ ಜಲಾಂಬರಂ । ಸದೇವ ನೀಯತೇ ವ್ಯಕ್ತಿಮಸತಸ್ಸಂಭವಃ ಕುತಃ ॥" ಉದಪಾನ ಕರಣಾತ್** - ಸ್ನಾನೋದಕಕ್ಕಾಗಿ ಕೊಳ, ಸರಸ್ಸುಗಳನ್ನು ಕಲ್ಪಿಸುವದರಿಂದ, **ಜಲಾಂಬರಂ** - ಹೊಸದಾಗಿ ನೀರೂ ಆಕಾಶವೂ, **ಯಥಾ ನ ಕ್ರಿಯತೇ** - ಹೇಗೆ ಹೊಸದಾಗಿ ಕಲ್ಪಿಸಲ್ಪಡುವದಿಲ್ಲವೋ, ಹಾಗೆಯೇ, **ಸದೇವ** - ಆತ್ಮನಲ್ಲಿ ಇರುವಂಥಾದ್ದೇ, ಎಂದರೆ ಮೊದಲಿನ ಜ್ಞಾನಸ್ವರೂಪವೇ, **ವ್ಯಕ್ತಿಂ ನೀಯತೇ** - ಪ್ರಕಾಶತೆಯನ್ನು ಹೊಂದುತ್ತದೆ, ಏಕೆಂದರೆ, **ಅಸತಸ್ಸಂಭವಃ ಕುತಃ** - ಇಲ್ಲದೇ ಇರುವದಕ್ಕೆ ಉತ್ಪತ್ತಿ ಎಲ್ಲಿಯದು ? **"ತಥಾ ಹೇಯ ಗುಣಧ್ವಂಸಾದವಬೋಧಾದಯೋ ಗುಣಾಃ । ಪ್ರಕಾಶ್ಯಂತೇ ನ ಜನ್ಯಂತೇ ನಿತ್ಯಾ ಏವಾತ್ಮನೋ ಹಿ ತೇ ॥" ತಥಾ** - ಹಾಗೆಯೇ, **ಹೇಯಗುಣ ಧ್ವಂಸಾತ್** - ಹೇಯಗುಣಗಳ ನಾಶದಿಂದ, **ಅವಬೋಧಾದಯೋ ಗುಣಾಃ** - ಜ್ಞಾನವೇ ಮೊದಲಾದ ಗುಣಗಳು, ಆದಿ ಶಬ್ದದಿಂದ ಆನಂದತ್ವ, ಸತ್ಯಕಾಮ, ಸತ್ಯಸಂಕಲ್ಪಾದಿಗಳು ಹೇಳಲ್ಪಟ್ಟವು, **ಪ್ರಕಾಶ್ಯಂತೇ** - ಪ್ರಕಾಶವನ್ನು ಹೊಂದುತ್ತವೆ, **ನ ಜನ್ಯಂತೇ** - ಹೊಸದಾಗಿ ಏನೂ ಹುಟ್ಟುವದಿಲ್ಲವು, **ನಿತ್ಯಾ ಏವಹಿ** - ನಿತ್ಯವಾದವುಗಳೇಯಷ್ಟೇ. ಕರ್ಮ ಸಂಕುಚಿತವಾಗಿದ್ದುದು ಪರಮಾತ್ಮ ಸಂಪತ್ತಿಯಿಂದ ವಿಕಾಸವನ್ನು **ಹೊಂದಿದ** ವೆಂದು ಹೇಳತಕ್ಕದ್ದು. ಇಲ್ಲಿ ತತ್ಪ್ರಕಾಶಿತ ದ್ವಾರನಾಯ್ ಕೊಂಡು ಎಂಬಭಿಪ್ರಾಯವು **"ತಸ್ಯ ಹೈತಸ್ಯ ಹೃದಯಸ್ಯಾಗ್ರಂ ಪ್ರದ್ಯೋತತೇ," "ತೇನ ಪ್ರದ್ಯೋತೇನೈಷ** ಆತ್ಮಾ ನಿಷ್ಕ್ರಾಮತಿ" ಎಂಬ ಶ್ರುತಿವಾಕ್ಯಗಳಿಂದ ವ್ಯಕ್ತ **ಪಡುತ್ತದೆ.** ಹೀಗೆ ಜ್ಞಾನವಿಕಾಸವು ಯಾವಾಗ ಸ್ವಸ್ವರೂಪಾವಿರ್ಭಾವದಿಂದುಂಟಾಯಿತೋ, ಅನಂತರ ಆತನಿಗೆ ಕರ್ಮಬಂಧವಿಲ್ಲವಾದುದರಿಂದ ಜ್ಞಾನಸಂಕೋಚ ರೂಪ **ರಾತ್ರಿ** ಎಂದಿಗೂ **ಇಲ್ಲವು,** ಜ್ಞಾನವಿಕಾಸವಾಗಿಯೇ ಇರುವದರಿಂದ ಯಾವಾಗಲೂ

ನನ್ನಿಲವಾ (ವದು) ಮದು ನರ್ಪಕೆಲಾ (ವದು) ಮದು ನನ್ನಿಮಿತ್ತಮ್,
ಎನ್ನಲುವಾ (ವದು) ಮದು ಯಾದಾ (ನು ಮಾನುಜ್ಜಡಿಯುವರ್ಕ್ಕು)
ಮರಜ್ಗರಡಿಯುವರ್ಕ್ಕು,

ಹಗಲೇ ಇರುತ್ತದೆಂದು "ಒರುಪಗಲಾಯ್ ಉಣರ್ನ್ದಿಯೇಯಾಮ್" ಎಂದು ಹೇಳಿರುತ್ತಾರೆ. ಈ ಅಭಿಪ್ರಾಯವನ್ನೇ ಹಿಂದೆ ಪುರುಷಾರ್ಥಕಾಷ್ಠಾಧಿಕಾರದ ಕೊನೆಯ ಶ್ಲೋಕದಲ್ಲಿ ಮುಕ್ತೈಶ್ವರ್ಯದಿನ ಎಂಬ ಪ್ರಯೋಗದಿಂದ ಮುಕ್ತದಶೆ ಯೆಲ್ಲಾ ಒಂದು ಹಗಲಾಗಿ ಹೇಳಿರುತ್ತಾರೆ. ಹೀಗೆಯೇ **"ತಸ್ಮಾದ್ವಾ ಏತಂ ಸೇತುಂ ತೀರ್ತ್ವಾ ಅಪಿನಕ್ತಂ ಅಹರೇವಾಭಿನಿಷ್ಪದ್ಯತೇ"** ಎಂಬ, **"ಸಕೃದ್ವಿಭಾತೋಹ್ಯೇವೈಷ ಬ್ರಹ್ಮಲೋಕಃ" "ಜಾಗೃವಾಗ್ಂಸ್ಸ ಸ್ಸಮಿಂಧತೇ"** ಎಂಬ ಶ್ರುತಿಗಳಲ್ಲೂ ಉಪಪಾದಿತವಾಗಿದೆ

ಪ್ರಪನ್ನನು ದೇಹತ್ಯಾಗ ಮಾಡುವದಕ್ಕೆ ದೇಶಕಾಲಾವಸ್ಥಾದಿ ಯಾವ ನಿಯಮವೂ ಇಲ್ಲವು. ಎಂದು ಅಧಿಕಾರೋಪಪಾದನದಲ್ಲಿ ಹೇಳಲ್ಪಟ್ಟಿತು. ಈ ಅಭಿಪ್ರಾಯವನ್ನೇ ಗರ್ಭೀಕರಿಸಿ, ಪರಮಾತ್ಮನು ಪರಮಕೃಪಯಾ ಸಂಕಲ್ಪಿಸಿದ ದೇಶಕಾಲಾದಿಗಳೇ, ಮೂರ್ಧನ್ಯನಾಡಿಯನ್ನು ಪ್ರವೇಶಿಸಿ ದೇಹವನ್ನು ಬಿಟ್ಟು ಅರ್ಚಿರಾದಿ ಗತಿಯಿಂದ ಪರಮಾತ್ಮನನ್ನು ಹೊಂದಲು ಪ್ರಶಸ್ತವಾದವೆಂದು ಮುಂದಿನ ಅಧಿಕಾರ ಸಂಗ್ರಹ ಶ್ಲೋಕದ ಮೂಲಕ ಉಪದೇಶಿಸುತ್ತಾರೆ:—

ಈ ಪಾಶುರದಲ್ಲಿ ಎರಡು ವಿಧ ಪಾಠವುಂಟು. ಸಾರದೀಪಿಕಾ ವ್ಯಾಖ್ಯಾತೃವು ಬ್ರಾಕೆಟ್ಟು ( ) ಗಳಲ್ಲಿರುವ ಪಾಠವನ್ನು ಅವಲಂಬಿಸುತ್ತಾರೆ. ಸಾರಪ್ರಕಾಶಿಕಾ, ಸಾರವಿವರಣೆ, ಸಾರಸಂಗ್ರಹ ವ್ಯಾಖ್ಯಾತೃಗಳು ಬ್ರಾಕೆಟ್ಟಿಗೆ ಹೊರಗಿನ ಪಾಠವನ್ನು ಸ್ವೀಕರಿಸಿರುತ್ತಾರೆ. ಸಾರಾಸ್ವಾದಿನಿಯುವರು ಎರಡು ಪಾಠವನ್ನೂ ಅನುಮೋದಿಸಿ ಅರ್ಥವನ್ನು ದಯಪಾಲಿಸಿರುತ್ತಾರೆ. ಎರಡು ಪಾಠಕ್ಕೂ ತುಂಬಾ ಅರ್ಥಭೇದವಿಲ್ಲವು. ಸಾರದೀಪಿಕಾಯುವರು **ಯಾದಾನುಮಾಮ್, ಅಜ್ಜು, ಅಡಿಯಾವರ್ಕ್ಕು** ಎಂದು ಪದಚ್ಛೇದ ಮಾಡಿದರು; ಇತರರು **ಯಾದಾಮ್, ಅರಜ್ಗರಡಿಯುವರ್ಕ್ಕು** ಎಂದು ಪದಚ್ಛೇದ ಮಾಡಿದರು; ಇಷ್ಟುಮಾತ್ರವೇ ವ್ಯತ್ಯಾಸವು. ಮೊದಲು ಸಾರದೀಪಿಕಾ ಪಾಠಪ್ರಕಾರ ಅರ್ಥವು ಹೇಳಲ್ಪಡುತ್ತದೆ:—**ಅಡಿಯುವರ್ಕ್ಕು** - ಪ್ರಪನ್ನರಾದ ಸರ್ವೇಶ್ವರನ ಪಾದಸೇವಕರಿಗೆ, **ಮಿನ್ನಿಲೈಮೇನಿ** - ಮಿಂಚಿನ ಹಾಗೆ ಅಸ್ಥಿರವಾದ ಸ್ಥಿತಿಯುಳ್ಳ ನಮ್ಮ ಶರೀರವನ್ನು, **ವಿಡುಮ್ಪಯಣತ್ತು** - ಬಿಡುವ ಪ್ರಯಾಣಕ್ಕೆ ಎಂದರೆ ನಿರ್ಯಾಣಕ್ಕೆ, ಇದರಿಂದ ಮುಂದಿನ ಅಧಿಕಾರವು ಸೂಚಿಸಲ್ಪಟ್ಟಿತು, **ವಿಲಕ್ಕಿಲದೋರ್** - ಪ್ರತಿಬಂಧಕ

ಮಿನ್ನಿಲೇಮೇನಿ ವಿಡುಮ್ಬಯಣತ್ತು ವಿಲಕ್ಕಿಲದೋರ್,
ನನ್ನಿಲೈಯಾ ನಡು ನಾಡಿ ವಳಿಕ್ಕು ನಡೈ ಪೆರವೇ ॥೨೭॥

ಗಳೊಂದೂ ಇಲ್ಲದ ಅದ್ವಿತೀಯವಾದ, ನನ್ನಿಲೈಯಾನ - ಸಮೀಚೀನವಾದ ಸ್ಥಿತಿಯುಳ್ಳ ಎಂದರೆ ಭಗವತ್ಪ್ರಾಪ್ತಿಯನ್ನುಂಟುಮಾಡುವ ಸ್ಥಿತಿಯುಳ್ಳ, **ನಡು ನಾಡಿ ವಳಿಕ್ಕು** - ಮಧ್ಯದಲ್ಲಿರುವ ೧೦೧ನೆಯದಾದ ಸುಷುಮ್ನ ನಾಡಿ ರೂಪವಾದ ಮಾರ್ಗಕ್ಕೆ, ಇದಕ್ಕೆ ಬ್ರಹ್ಮನಾಡಿ, ಮೂರ್ಧನ್ಯ ನಾಡಿ ಮೊದಲಾದ ಹೆಸರುಗಳುಂಟು; **ನಡೈ ಪೆರವೇ** – ಸಂಚಾರವನ್ನು ಹೊಂದುವದಕ್ಕೆ, **ಅಜ್ಗು**-ಪ್ರದೇಶ ಕಾಲ ನಿಮಿತ್ತಗಳಲ್ಲಿ, **ಯಾದಾನುಮಾಮ್** - ಯಾವುದೇ ಆಗಲಿ, ಅದೇ, **ನನ್ನಿಲಮಾವದು** - ಒಳ್ಳೇ ಪ್ರದೇಶವಾಗುತ್ತದೆ; **ನಲ್ಪಗಲಾವದು** - ಒಳ್ಳೇ ದಿನವಾಗುತ್ತದೆ, **ನನ್ನಿಮಿತ್ತಮೆನ್ನಲುಮಾವದು** - ನಿರ್ಯಾಣಕ್ಕೆ ಒಳ್ಳೇ ನಿಮಿತ್ತವೆಂದು ಹೇಳಲಾಗುತ್ತದೆ; ನಿಮಿತ್ತವೆಂದರೆ ಕಾರಣವಾಗಬಹುದು ಅಥವಾ ಲಗ್ನವಾಗಬಹುದು.

ಇನ್ನು ಮಿಕ್ಕ ವ್ಯಾಖ್ಯಾತೃಗಳ ಪ್ರಕಾರ, **ಅರಜ್ಗರಡಿಯವರ್ಕ್ಕು** - ಶ್ರೀ ರಂಗನಾಥನ ಪಾದಕಮಲವನ್ನಾಶ್ರಯಿಸಿದ ದಾಸರಾದವರಿಗೆ, **ಮಿನ್ನಿಲೈ ಮೇನಿ ವಿಡಮ್ಬಯಣತ್ತು** – ಮಿಂಚಿನ ಸ್ಥಿತಿಯನ್ನು ಹೊಂದಿರುವ ಶರೀರವನ್ನು ಬಿಡುವ ಪ್ರಯಾಣಕ್ಕೆ, **ಯಾದಾನುಮ್** - ಯಾವ ದೇಶ ಕಾಲ ನಿಮಿತ್ತಗಳು, **ಆಮ್**- ಆಗುವವೋ, ಅದು, **ವಿಲಕ್ಕಿಲದೋರ್ ನನ್ನಿಲೈಯಾ ನಡುನಾಡಿವಳಿಕ್ಕು**- ಪ್ರತಿಬಂಧಕಗಳಿಲ್ಲದೆ ಅದ್ವಿತೀಯವಾದ ಒಳ್ಳೇ ಸ್ಥಿತಿಯುಳ್ಳ ಮಧ್ಯದಲ್ಲಿರುವ ಮೂರ್ಧನ್ಯನಾಡಿರೂಪವಾದ ಮಾರ್ಗದಲ್ಲಿ, **ನಡೈ ಪೆರವೇ** – ಸಂಚಾರವನ್ನು ಹೊಂದುವದಕ್ಕಾಗಿ, **ನನ್ನಿಲಮಾವದು** - ಶ್ರೇಷ್ಠವಾದ ಪ್ರದೇಶವಾಗುವದು, ಅಥವಾ, **ನನ್ನಿಲಮಾಮ್ ಅಜು** - ಅದೇ ಸರ್ವೋತ್ಕೃಷ್ಟ ಪ್ರದೇಶವಾಗುತ್ತದೆ. ಹೀಗೆಯೇ ಮಿಕ್ಕ ಭಾಗಗಳಿಗೂ ಅನ್ವಯಿಸತಕ್ಕದ್ದು.

ತಾತ್ಪರ್ಯ:—ಮನುಷ್ಯರು ಸಾಧಾರಣವಾಗಿ ಪ್ರಯಾಣ ಬೆಳೆಸುವ ಸಂದರ್ಭದಲ್ಲಿ ಒಳ್ಳೇ ಲಗ್ನ ಮುಹೂರ್ತಾದಿಗಳನ್ನು ನೋಡಿ ಹೊರಡುವದಿರುವಾಗ ಇಂತಹ ಉತ್ಕೃಷ್ಟ ಪ್ರಯಾಣಕ್ಕೆ ಪ್ರಶಸ್ತದೇಶ ಕಾಲ ನಿಮಿತ್ತಗಳ ಆವಶ್ಯಕತೆ ಬೇಡವೋ ಎಂದರೆ ಪ್ರಪನ್ನನ ವಿಷಯದಲ್ಲಿ ಸರ್ವೇಶ್ವರನೇ ಸರ್ವವಿಧ ಭರವನ್ನೂ ವಹಿಸಿರುವದರಿಂದ ಈ ಚೇತನನ ಪ್ರಯತ್ನವೇನೂ ಬೇಕಾಗಿರುವದಿಲ್ಲವು. ಸರ್ವೇಶ್ವರನು ಯಾವುದೋ ಒಂದು ಪ್ರದೇಶ, ಕಾಲ ನಿಮಿತ್ತಗಳನ್ನುದ್ದೇಶಿಸಿ ನಿರ್ಯಾಣವನ್ನು

ಏರ್ಪಡಿಸಿರುವಾಗ ಅವುಗಳೇ ಪ್ರಶಸ್ತವಾದವುಗಳೆಂದು ಭಾವಿಸತಕ್ಕದ್ದು. ಪ್ರಶಸ್ತ ದೇಶ ಕಾಲಾದಿಗಳಪೇಕ್ಷೆಯು ಫಲಸಿದ್ಧಿಯಲ್ಲಿ ಸಂದೇಹವಿರುವಾಗ ಫಲಸಿದ್ಧಿಗಾಗಿ ಬೇಕಾದವು. ಸರ್ವೇಶ್ವರನೇ ಸಕಲ ಭರವನ್ನೂ ವಹಿಸಿ ಅನ್ತಿಮ ಸ್ಮೃತಿ ತನ್ನೊಂದಿಗೆ ಸಂಪತ್ತಿ, ಬ್ರಹ್ಮನಾಡೀ ಪ್ರವೇಶ, ಅರ್ಚಿರಾದಿಗತಿ, ಮೋಕ್ಷಪ್ರಾಪ್ತಿ ಎಲ್ಲವನ್ನೂ ತಾನೇ ಮಾಡಿಸಲು ಕಂಕಣಬದ್ಧನಾಗಿರುವದರಿಂದ ಫಲವು ನಿಸ್ಸಂದೇಹವಾಗಿರುರುವಾಗ ಇನ್ನು ಪ್ರಶಸ್ತ ದೇಶ ಕಾಲಾದಿಗಳ ಆವಶ್ಯಕತೆ ಏನು? ಆದುದರಿಂದ ಯಾವುದೂ ಬೇಕಿಲ್ಲವೆಂದು ತಿಳಿಸುತ್ತಾರೆ.

ಆದರೆ ಶಾನ್ತಿಪರ್ವದಲ್ಲಿ ಶ್ರೀ ಭೀಷ್ಮರು ಪ್ರಾಣತ್ಯಾಗ ಮಾಡಿದ ಪ್ರಕರಣದಲ್ಲಿ ಉತ್ತರಾಯಣ ಶುಕ್ಲಪಕ್ಷ ನಿರೀಕ್ಷಣೆ ಮಾಡಿ ದೇಹತ್ಯಾಗ ಮಾಡಿದುದಾಗಿ ತೋರಿಬರುತ್ತದೆ:—

"ಭೀಷ್ಮಸ್ಯ ಕುರುಶಾರ್ದೂಲ ದೇಹೋತ್ಸರ್ಗಂ ಮಹಾತ್ಮನಃ ।
ಪ್ರವೃತ್ತಮಾತ್ರೇ ತ್ವಯನ ಮುತ್ತರೇಣ ದಿವಾಕರೇ ॥
ಶುಕ್ಲಪಕ್ಷಸ್ಯ ಚಾಷ್ಟಮ್ಯಾಂ ಮಾಘಮಾಸಸ್ಯ ಪಾರ್ಥಿವ ।
ಪ್ರಾಜಾಪತ್ಯೇಚ ನಕ್ಷತ್ರೇ ಮಧ್ಯಂ ಪ್ರಾಪ್ತೇ ದಿವಾಕರೇ"

(೪೬. ೨. ೩.)

ಶೃಣುಷ್ವ - ಕೇಳು ಎಂಬ ಕ್ರಿಯಾಪದವು ಹಿಂದೆ ಇರುತ್ತದೆ. ಉತ್ತರಾಯಣ ಮಾಘಮಾಸ ಶುಕ್ಲಾಷ್ಟಮಿ ದಿವಸವನ್ನು ನಿರೀಕ್ಷಣೆ ಮಾಡಿ ದೇಹತ್ಯಾಗವನ್ನು ಮಾಡಿರುವದಾಗಿ ಹೇಳಿರುತ್ತಾರೆ. ಇದು ಹೇಗೆ ಎಂದರೆ, ಭೀಷ್ಮರು ಮಹಾಭಾಗವತಾಗ್ರೇಸರರಾಗಿ ಯೋಗಮಾಹಾತ್ಮ್ಯೆಯಿಂದ ಶರೀರ ವಿಶ್ಲೇಷ ಕಾಲವನ್ನು ಸ್ವೇಚ್ಛಾನುಸಾರವಾಗಿ ನಿಯಮಿಸಿಕೊಳ್ಳುವ ಶಕ್ತಿಯನ್ನು ಶ್ರೀಕೃಷ್ಣ ಕೃಪಾದಿಂದ ಹೊಂದಿದ್ದರಾದ ಪ್ರಯುಕ್ತ, ಅಂತಹ ಒಳ್ಳೇ ಕಾಲವನ್ನೇ ಯದ್ಯಪಿ ನಿರೀಕ್ಷಣೆಯನ್ನೇ ಮಾಡಿದರು. ಆದರೆ ದೇಶ ನಿಮಿತ್ತಗಳ ವಿಷಯದಲ್ಲಿ ಸ್ವಚ್ಛಂದತೆಯು ತೋರಲಿಲ್ಲವು. ಯುದ್ಧರಂಗದಲ್ಲಿ ಶರಶತೈಶ್ಚಿತಃ - ಶರತಲ್ಪ ಮೂಲಕ, ಮರಣವಾಗಿರುತ್ತದೆ. ಶ್ರೀ ಭಾಷ್ಯಕಾರರು ಶ್ರೀ ಭೀಷ್ಮರ ಉತ್ತರಾಯಣ ನಿರೀಕ್ಷಣೆಯ ವಿಷಯದಲ್ಲಿ ಅಪ್ಪಣೆ ಕೊಡಿಸಿರುವದೇನೆಂದರೆ:—"ಭೀಷ್ಮಾದೀನಾಂ ಯೋಗಪ್ರಭಾವಾತ್ ಸ್ವಚ್ಛಂದ ಮರಣಾನಾಂ ಧರ್ಮಪ್ರವರ್ತನಾಯೋತ್ತರಾಯಣ ಪ್ರಾಶಸ್ತ್ಯ ಪ್ರದರ್ಶನಾರ್ಥಸ್ತಥಾವಿಧಾಚಾರಃ" ಈ ಅಭಿಪ್ರಾಯವೇ ಮೇಲೆ ಹೇಳಲ್ಪಟ್ಟಿತು. ಆದರೆ "ದಿವಾಚ ಶುಕ್ಲಪಕ್ಷಶ್ಚ ಉತ್ತರಾಯಣ ಮೇವಚ । ಮುಮೂರ್ಷತಾಂ ಪ್ರಶಸ್ತಾನಿ ವಿಪರೀತಂತು ಗರ್ಹಿತಮ್ ॥" ಎಂದು ಇವುಗಳಲ್ಲಿ ಪ್ರಶಸ್ತಾನಿ ಎಂದು ಹೇಳಲ್ಪಟ್ಟಿದೆಯಲ್ಲಾ ಎಂದರೆ ಈ

ವಾಕ್ಯವು ಪ್ರಪನ್ನನಲ್ಲದವನನ್ನು ಕುರಿತದ್ದೆಂದು ತಿಳಿಯತಕ್ಕದ್ದು. ಆಗಲಿ, ಗೀತೆಯ ೮ನೆಯ ಅಧ್ಯಾಯದಲ್ಲಿ :—

"ಅಗ್ನಿರ್ಜ್ಯೋತಿರಹಶ್ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರಪ್ರಯಾತಾ ಗಚ್ಛನ್ತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥೨೪॥
ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ ।
ತತ್ರ ಚಾನ್ದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥೨೫॥
ಶುಕ್ಲಕೃಷ್ಣೇ ಗತೀಹ್ಯೇತೇ ಜಗತಶ್ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿ ಮನ್ಯಯಾಽವರ್ತತೇ ಪುನಃ" ॥೨೬॥

ಹಗಲಿನಲ್ಲೂ ಉತ್ತರಾಯಣದಲ್ಲೂ ಶುಕ್ಲಪಕ್ಷದಲ್ಲೂ ಹೋದ ಬ್ರಹ್ಮವಿತ್ತಿಗೆ ಪರಬ್ರಹ್ಮಪ್ರಾಪ್ತಿರೂಪವಾದ ಅಪುನರಾವೃತ್ತಿಯನ್ನೂ ರಾತ್ರಿಯಲ್ಲೂ, ದಕ್ಷಿಣಾಯನದಲ್ಲೂ ಕೃಷ್ಣಪಕ್ಷದಲ್ಲೂ ಹೋದ ಯೋಗಿಗೆ ಪುನಸ್ಸಂಸಾರ ರೂಪವಾದ ಆವೃತ್ತಿಯನ್ನೂ ಹೇಳಿದೆಯಲ್ಲಾ ಎಂದರೆ ಈ ಶ್ಲೋಕಗಳಭಿಪ್ರಾಯವು ಹಾಗಲ್ಲವೆಂದು ತಿಳಿಯತಕ್ಕದ್ದು. ಶುಕ್ಲ ಕೃಷ್ಣ ಗತೀಹ್ಯೇತೇ ಎಂಬುವದರಿಂದ ಅವು ಗತಿ ಎಂದರೆ ಮಾರ್ಗಗಳನ್ನು ಬೋಧಿಸುತ್ತವೆಯೇ ವಿನಾ, ಕಾಲವನ್ನು ಬೋಧಿಸುವದಿಲ್ಲವೆಂಬುವದು, ಗ್ರಂಥದಿಂದಲೇ ತೋರಿಬರುತ್ತದೆ. ಮತ್ತು ಅಹಃ, ಶುಕ್ಲಃ, ಉತ್ತರಾಯಣ ಶಬ್ದಗಳು, ಅಗ್ನಿ, ಜ್ಯೋತಿಸ್ಸು ಇವುಗಳೊಂದಿಗೆ ಹೇಳಲ್ಪಟ್ಟಿರುವದರಿಂದ ಅಗ್ನಿಯು ಕಾಲವಲ್ಲದುದರಿಂದ ಇವುಗಳು ಕಾಲವನ್ನು ಬೋಧಿಸಲಾರದೆಂದು ಭಾವಿಸತಕ್ಕದ್ದು. ಆದುದರಿಂದ ಇವುಗಳ ಅಭಿಮಾನ ದೇವತೆಗಳು ತೋರಿಸುವ ಮಾರ್ಗವೆಂದು ತಿಳಿಯತಕ್ಕದ್ದು. ಇದೂ ಅಲ್ಲದೆ ತತ್ರ ಪ್ರಯಾತಾ ಗಚ್ಛಂತಿ ಎಂಬಲ್ಲಿ ತದಾ ಎಂದು ಹೇಳದೆ ತತ್ರ ಎಂದಿರುವದರಿಂದ, ಕಾಲವಲ್ಲದೆ ಮಾರ್ಗಪ್ರದೇಶವೇ ಹೇಳಲ್ಪಟ್ಟತೆಂದು ಭಾವಿಸತಕ್ಕದ್ದು. ಆದರೆ ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂಚೈವ ಯೋಗಿನಃ । ಪ್ರಯಾತಾಯಾಂತಿತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥ ಎಂದು ಕಾಲವನ್ನೇ ನಿರ್ದೇಶಿಸಿ ೨೩ನೆಯ ಶ್ಲೋಕದಲ್ಲಿ ಹೇಳಿ, ಅನಂತರ ಅಹಶ್ಶುಕ್ಲ ಎಂದು ಹೇಳಿರುವದರಿಂದ ಕಾಲವನ್ನಲ್ಲವೇ ಇಲ್ಲಿ ಬೋಧಿಸಿರುವದು ಎಂದಾಕ್ಷೇಪ ತಂದರೆ, ಅರ್ಜುನನು ಈ ಅಧ್ಯಾಯದ ಒಂದು ಎರಡನೆಯ ಶ್ಲೋಕಗಳಲ್ಲಿ ಕೇಳಿರುವ ಏಳು ಪ್ರಶ್ನೆಗಳಲ್ಲೂ ಮರಣಕ್ಕೆ ಯಾವ ಕಾಲವು ಪ್ರಶಸ್ತವೆಂದು ಕೇಳಲಿಲ್ಲವು. ಮರಣಕಾಲದಲ್ಲಿ ಈ ಮೂರು ವಿಧ ಯೋಗಿಗಳಿಂದಲೂ ಹೇಗೆ ತಿಳಿಯಲ್ಪಡುವಿ ? ಎಂಬುವದು ಮಾತ್ರ ಪ್ರಶ್ನೆಯು. ಈ ಪ್ರಶ್ನೆಯಲ್ಲಿ ಮರಣಕಾಲದ ಅನ್ತಿಮಸ್ಮೃತಿಯೂ ಅದರ ಮೇಲೆ ಉಂಟಾಗುವ ಎರಡು ವಿಧ ಗತಿಗಳೂ ಅಂತರ್ಗತವಾದುದರಿಂದ, ಮೊದಲು ಅನ್ತಿಮ ಸ್ಮೃತಿ ವಿಷಯವನ್ನು

ತಿಳಿಸಿ, ಅನಂತರ ಈ ಎರಡು ವಿಧ ಗತಿಗಳನ್ನೂ ಶ್ರೀ ಗೀತಾಚಾರ್ಯರು ಉಪದೇಶಿಸುತ್ತಾರೆ. ಆದುದರಿಂದ ಈ ಶ್ಲೋಕದಲ್ಲಿ ಕಾಲಶಬ್ದದಿಂದ, ಅಹಸ್ಸು ಮೊದಲು ಸಂವತ್ಸರ ಪರ್ಯಂತವಿರುವ ಕಾಲಾಭಿಮಾನ ದೇವತೆಗಳು ತುಂಬಾ ಇರುವದರಿಂದ, ಕಾಲಾಭಿಮಾನ ದೇವತೆಗಳುಳ್ಳ ಮಾರ್ಗಕ್ಕೆ ಉಪಲಕ್ಷಣವಾಗಿ ಹೇಳಲ್ಪಟ್ಟಿತೆಂದು ತಿಳಿಯತಕ್ಕದ್ದು. ಆಗಲಿ, ಹಾಗೆ ಕಾಲವ್ಯತ್ಯಾಸಗಳನ್ನು ಈ ಶ್ಲೋಕಗಳು ಹೇಳದೇ ಇದ್ದ ಪಕ್ಷದಲ್ಲಿ ಕೆಲವು ಯೋಗಿಗಳಿಗೆ ಅಪುನರಾವರ್ತಿಯಿಲ್ಲದ ಮೋಕ್ಷವೂ, ಇನ್ನು ಕೆಲವರಿಗೆ ಆವರ್ತಿಯಿಂದ ಸಂಸಾರವು ಪ್ರಾಪ್ತವಾಗುತ್ತದೆಂದೂ, ವ್ಯತ್ಯಾಸ ಹೇಗೆ ಎಂದರೆ, ಶುಕ್ಲವೆಂದು ಹೇಳಲ್ಪಟ್ಟ ಅರ್ಚಿರಾದಿ ಗತಿಯು ಮೂಲಕ ಬ್ರಹ್ಮವಿತ್ತಾದ ಯೋಗಿಗೆ ಪ್ರಯಾಣವೆಂದೂ, ಇತರ ಪುರುಷಾರ್ಥಗಳನ್ನಪೇಕ್ಷಿಸುವ ಯೋಗಿಗಳಿಗೆ ಕೃಷ್ಣವೆಂದು ಹೇಳಲ್ಪಟ್ಟ ಧೂಮಾದಿಗತಿಯೆಂದೂ ತಿಳಿಯತಕ್ಕದ್ದು. ಇದಕ್ಕಾಗಿಯೇ ೨೪ನೆಯ ಶ್ಲೋಕದಲ್ಲಿ **ಬ್ರಹ್ಮವಿದಃ** ಎಂಬ ಪ್ರಯೋಗವೂ, ೨೫ನೆಯ ಶ್ಲೋಕದಲ್ಲಿ **ಯೋಗಿನಃ** ಎಂಬ ಪ್ರಯೋಗವೂ ಇರುತ್ತವೆ. ಈ ಅಭಿಪ್ರಾಯಗಳನ್ನೆಲ್ಲಾ ವಿಶದವಾಗಿ ಶ್ರೀ ಭಾಷ್ಯದಲ್ಲೂ, ತಾತ್ಪರ್ಯಚಂದ್ರಿಕೆಯಲ್ಲೂ ತಿಳಿಯಬಹುದು. ಆದುದರಿಂದ ಶ್ರೀ ದೇಶಿಕರು ಈ ವಿಶಿಷ್ಟವಿಷಯವನ್ನೂ ಪರಿಶೀಲಿಸಿ ನಮಗೆ ಉಪದೇಶಿಸುವ ಮಹಾ ಸುಜ್ಞಾನ ನಿಧಿಯಾಗಿರುವದರಿಂದ, **ಅದೇ ನನ್ನಿಲಂ, ಅದೇ ನರ್ಪ್ಪಗಲ್, ಅದೇ ನನ್ನಿಮಿತ್ತಂ** ಎಂದು ನಮಗೆ ಪರಮ ಕೃಪಯಾ ಬೋಧಿಸಿರುತ್ತಾರೆ. ಯಾವ ಪ್ರದೇಶದಲ್ಲಿ, ಯಾವ ಕಾಲದಲ್ಲಿ, ಯಾವ ನಿಮಿತ್ತಗಳಿಂದ ದೇಹತ್ಯಾಗ ಉಂಟಾಯಿತೋ ಅದೇ ಪ್ರಶಸ್ತವಾದ ಪ್ರದೇಶವು ಅದೇ ಪ್ರಶಸ್ತವಾದ ಲಗ್ನವು, ಅದೇ ಪ್ರಾಣತ್ಯಾಗಕ್ಕೆ ಪ್ರಶಸ್ತ ಕಾರಣವೆಂಬ ಭಾವವು, ಏಕೆಂದರೆ ಅವುಗಳಿಂದಲೇ ಸರ್ವೇಶ್ವರನ ಮೂಲಕ ಅಪೇಕ್ಷಿತವಾದ ಮೋಕ್ಷಪ್ರಾಪ್ತಿಯುಂಟಾಗುವದರಿಂದ ಎಂಬ ತಾತ್ಪರ್ಯವು. ಹೀಗೆ ಸರ್ವೇಶ್ವರನ ಸಂಕಲ್ಪವಿರುವುದರಿಂದ ಯಾವುದೊಂದು ಪ್ರತಿಬಂಧಕಗಳೂ ಆ ನಡುನಾಡಿ **ವಳಿಕ್ಕು** ಎಂದರೆ ಬ್ರಹ್ಮನಾಡೀಪ್ರವೇಶರೂಪಮಾರ್ಗಕ್ಕೆ ಇಲ್ಲವೆಂದು ಹೇಳಿರುತ್ತಾರೆ. ಇತರ ನೂರು ನಾಡಿಗಳ ಮೂಲಕ ಪ್ರವೇಶವಾದರೆ ಪ್ರತಿಬಂಧಕವುಂಟೆಂಬುವದು ಇದರಿಂದ ವ್ಯಕ್ತವು. ಹೀಗೆ ಪ್ರತಿಬಂಧಕಗಳಿಲ್ಲದೆ ಮೋಕ್ಷಪ್ರಾಪ್ತಿಯು ಆ ಮಾರ್ಗ ಮೂಲಕ ಉಂಟಾಗುವದರಿಂದ ಅದು, **ನನ್ನಿಲೈಯಾನ ನಡುನಾಡಿವಳಿ**-ಸಮಿಾಚೀನವಾದ, ಮೂರ್ಧನ್ಯನಾಡಿಯ ಮಾರ್ಗವೆಂದು ಹೇಳಲ್ಪಟ್ಟಿತು. ಆಯುಸ್ಸು ನಿಯತವಾಗಿ ಅದು ಮುಗಿಯಿತೆಂದರೆ, **ಮಿನ್ನಿಲೈಯ** - ಹಾಗೆ "ಝಟಿತಿ" ಒಂದು ಕ್ಷಣದಲ್ಲಿ ಎಲ್ಲವೂ ನಡೆದುಹೋಗುವದರಿಂದ, **ಮಿನ್ನಿಲೈಮೇನಿ ವಿಡುಮಾ** ಎಂದು ಪ್ರಯೋಗಿಸಲ್ಪಟ್ಟಿತು. ಇದರಿಂದ ಪ್ರದೇಶ ಕಾಲಾದಿ ಗ್ರಹಣಗಳಿಗೆ ಸಾಧ್ಯವೇ ಇಲ್ಲವೆಂಬ

ಭಾವವು ತೋರಿಬರುತ್ತದೆ. ಅಥವಾ ಮಿನ್ನಿಲೈ ಎಂದು ಬೇರೆ ಪದವಾಗಿ ಭಾವಿಸಿ, ವಿಲಕ್ಕಿಲದೋರ್, ಸನ್ನಿಲೈಯೂನ, ಇವೆಲ್ಲಾ ಹೇಗೆ **ನಡುನಾಡಿ ವಳಿಕ್ಕು** ಎಂಬುವದಕ್ಕೆ ವಿಶೇಷಣವೋ ಹಾಗೆಯೇ **ಮಿನ್ನಿಲೈ** ಎಂಬುದನ್ನೂ ವಿಶೇಷಣವಾಗಿ ಇಟ್ಟುಕೊಂಡರೆ ಆ ಮೂರ್ಧನ್ಯನಾಡಿಯು ಪರಮಾತ್ಮನ ಪ್ರಭಾವದಿಂದ ಮಿಂಚಿನಹಾಗೆ ಪ್ರಕಾಶಿಸುವದರಿಂದ ಮುಮುಕ್ಷುವಿನ ಹೃದಯಸ್ಥೆಯಲ್ಲಿರುವ ಜೀವನ ನಡುನಾಡೀ ಪ್ರವೇಶಕ್ಕೆ ಅನುಕೂಲಿಸುತ್ತದೆಂಬರ್ಥವು ತೋರಿಬರುತ್ತದೆ. ಈ ಅಭಿಪ್ರಾಯವು **"ತದೋಕೋಗ್ರಜ್ವಲನಂ ತತ್ಪ್ರಕಾಶಿತ ದ್ವಾರೋ ವಿದ್ಯಾಸಾಮರ್ಥ್ಯಾತ್ತಚ್ಛೇಷಗತ್ಯನುಸ್ಮೃತಿಯೋಗಾಚ್ಚ ಹಾರ್ದಾನುಗೃಹೀತಶ್ಶತಾಧಿಕಯಾ"** ಎಂಬ (೪. ೨. ೧೬) ಬ್ರಹ್ಮಸೂತ್ರದಿಂದ ತೋರಿಬರುತ್ತದೆ. ಇದರರ್ಥವೇನೆಂದರೆ, ಬ್ರಹ್ಮವಿದ್ಯೆಯ ಸಾಮರ್ಥ್ಯದಿಂದ, ಆ ಬ್ರಹ್ಮವಿದ್ಯೆಗೆ ಅಂಗವಾಗಿ ಪ್ರತಿದಿನದಲ್ಲೂ ಅನುಷ್ಠಿಸುವ ಅರ್ಚಿರಾಗಿ ಗತಿಚಿಂತನದಿಂದಲೂ ಸುಪ್ರೀತನಾದ ಹೃದಯಾಂತರ್ವರ್ತಿಯಾದ ಪರಮಪುರುಷನಿಂದನುಗ್ರಹಿಸಲ್ಪಟ್ಟವನಾಗಿ, ತನಗೆ ಸ್ಥಾನವಾದ ಹೃದಯವು ಮೇಲುಭಾಗದಲ್ಲಿ ಪ್ರಕಾಶಿಸುತ್ತದೆ; ಹೀಗೆ ಪ್ರಕಾಶಿಸಲ್ಪಟ್ಟ ದ್ವಾರವುಳ್ಳವನಾಗಿ ೧೦೧ನೆಯದಾದ ಸುಷುಮ್ನಾನಾಡಿಯ ಮೂಲಕ ಅರ್ಚಿರಾದಿ ಗತಿಯನ್ನು ಹೊಂದುತ್ತಾನೆ. ಹೀಗೆ ಚೇತನನಿಗೆ ಪ್ರಕಾಶಿಸುವದರಿಂದ, **ಮಿನ್ನಿಲೈ** - ಮಿಂಚಿನ ಪ್ರಕಾಶದ ಹಾಗೆ ಪ್ರಕಾಶವುಳ್ಳ, **ನಡುನಾಡಿ ವಳಿ** ಎಂದು ಹೇಳಲ್ಪಟ್ಟಿರುತ್ತದೆಂದೂ ಭಾವಿಸಬಹುದು. ಹೀಗೆ ಸ್ವಾಮಿಯ ಅನುಗ್ರಹವು ಯಾವ ಪ್ರದೇಶ ಕಾಲ ನಿಮಿತ್ತಗಳಲ್ಲುಂಟಾಯಿತೋ ಅದೇ ಪ್ರಶಸ್ತ ದೇಶ ಕಾಲ ನಿಮಿತ್ತಗಳೆಂದು ಹೇಳಲ್ಪಟ್ಟಿತು.

ಅವತಾರಿಕೆ. ಹಿಂದೆ ಸರ್ವೇಶ್ವರನೇ ಪರಮ ಕೃಪೆಯಾ ಹಾರ್ದರೂಪಿಯಾಗಿ ಹೃದಯದಲ್ಲಿದ್ದುಕೊಂಡು ಅನ್ತಿಮ ಸ್ಮೃತಿ, ತನ್ನೊಂದಿಗೆ ಸಂಪತ್ತಿ, ಬ್ರಹ್ಮನಾಡೀ ಪ್ರವೇಶ, ಅರ್ಚಿರಾದಿ ಗತಿಗಳನ್ನುಂಟುಮಾಡಿ ಮುಕ್ತಿಯನ್ನು ಈ ಪ್ರಪನ್ನನಿಗೆ ದಯಪಾಲಿಸುವನೆಂದು ಹೇಳಲ್ಪಟ್ಟಿತು. ಈತನ ಶರೀರವು ಅತಿ ಹೇಯವು, ಅದರಲ್ಲಿದ್ದುಕೊಂಡು ಇಷ್ಟೆಲ್ಲಾ ಮಾಡುತ್ತಾನೆಯೇ? ಶಾಸ್ತ್ರಗಳಲ್ಲಿ ಹಾರ್ದನಾಗಿದ್ದು ಚೇತನನನ್ನು ನಿಯಮಿಸುವನೆಂದು ಹೇಳಲ್ಪಟ್ಟದೆಯಲ್ಲಾ ಎಂದರೆ ಸೃಷ್ಟಿ ಮೊದಲು ಇದುವರೆಗೂ ಹಾರ್ದನಾಗಿದ್ದರೂ ಕೂಡ ಈ ವಿಧ ಕೃಪೆಮಾಡದೆ ಈಗ ಮಾತ್ರ ಕೃಪೆ ಮಾಡುವನೆಂಬುದನ್ನು ನಂಬಬಹುದೇ? ಅದೂ ಅಲ್ಲದೆ ಸರ್ವೇಶ್ವರನಿಗೆ ಲೀಲಾವಿಭೂತಿಯಲ್ಲಿ ಅತಿ ಪ್ರೇಮವು, ಹೀಗಿರುವಾಗ ಅದಕ್ಕೆ ನ್ಯೂನತೆಯುಂಟಾಗುವ ಹಾಗೆ, ಈತನಿಗೆ ಪರಮ ಭೋಗ್ಯವಾದ ಶರೀರವಿಶ್ಲೇಷಮೂಲಕ ಲೀಲಾವಿಭೂತಿಯ ಸಂಬಂಧವನ್ನು ತಪ್ಪಿಸಿಬಿಡುವನೇ? ಇತ್ಯಾದಿ

ದಹರ (ಜಠರ) ಕುಹರೇ ದೇವಸ್ತಿಷ್ಠನ್ನಿಷದ್ವರ ದೀರ್ಘಿಕಾ ।
ನಿಪತಿತ ನಿಜಾಪತ್ಯಾದಿತ್ಸಾವತೀರ್ಣ ಪಿತೃಕ್ರಮಾತ್ ॥

ಶಂಕಾಗಳಿಗೆ ಸಮಾಧಾನವನ್ನು ಹೇಳುವದಕ್ಕಾಗಿ ಮುಂದಿನ ಶ್ಲೋಕವನ್ನನುಗ್ರಹಿಸುತ್ತಾರೆ. ಸರ್ವೇಶ್ವರನು ನಮಗೆ ಪಿತೃಸ್ಥಾನದಲ್ಲಿರುವನು, ನಾವೆಲ್ಲಾ ಅವನ ಪುತ್ರರು. ಈ ಲೀಲಾವಿಭೂತಿಯೂ ಸ್ವೇಚ್ಛೆಯನವಾಗಿದ್ದರೂ ಇದು ಕರ್ಮಾನುಗುಣವಾಗಿ ಉಪಭೋಗವನ್ನು ಕೊಡುವದಾದುದರಿಂದ "ಮಹಾಬಾಲಮಶಾಶ್ವತಂ" ಎಂದು ಹೇಳಿಸಿಕೊಂಡಿರುತ್ತದೆ. ಇನ್ನೊಂದು ವಿಭೂತಿಯಾದ ನಿತ್ಯವಿಭೂತಿಯೂ ಹೀಗೆ ಸರ್ವವೂ ಆತನದೇ ಅಲ್ಲಿನ ಸುಖಕ್ಕೆ ಇದು ಕೆಸರು ಗುಂಡಿಯಲ್ಲಿ ಬಿದ್ದಹಾಗೆ. ಆದುದರಿಂದ ಆ ಮಹತ್ತಾದ ವಿಭೂತಿಯಲ್ಲಿರಲು ಈತನು ಯೋಗ್ಯತೆಯನ್ನು ಸಂಪಾದಿಸಿಕೊಂಡರೆ ಈ ಕೆಸರುಗುಂಡಿಯಿಂದ ತನ್ನ ಮಗುವನ್ನು ತಾನೇ ಎತ್ತಿ ಆ ಉತ್ತಮ ಪದವನ್ನು ಸೇರಿಸುವನೆಂಬುದರಲ್ಲಿ ಸಂದೇಹವೇನೂ ಇಲ್ಲವು, ಅಸಂಖ್ಯಾಕ ಜೀವರಾಶಿಯಲ್ಲಿ ಒಬ್ಬೊಬ್ಬರು ಮುಕ್ತಿಯನ್ನು ಹೊಂದುವದರಿಂದ ಲೀಲಾವಿಭೂತಿಗೇನೂ ಕುಂದಕವಿಲ್ಲವು. ಈ ಹೇಯಹೃದಯದಲ್ಲಿ ಹಾರ್ದನಾಗಿದ್ದುಕೊಂಡು ಇಷ್ಟೆಲ್ಲಾ ಮಾಡುವದರಿಂದ ಆತನಿಗೆ ಹೇಯಗುಣಸಂಬಂಧವು ಈಷದಪಿ ಇಲ್ಲವು ಎಂಬ ಭಾವವು.

ಅರ್ಥ :—**ದಹರ ಕುಹರೇ** - ಹೃದಯ ರಂಧ್ರದಲ್ಲಿ, **ದಹರಾಕಾಶ ಶಬ್ದ**ದಿಂದ ಹಾರ್ದಾವತಾರಿ ಪರಮಾತ್ಮನು ಬೋಧಿಸಲ್ಪಟ್ಟನು. ಆದುದರಿಂದ ಆವನಿರುವ ಸ್ಥಳವು ದಹರ ಕುಹರವು. ಸಾರಾಸ್ವಾದಿನಿಯವರು, **ಜಠರ ಕುಹರೇ** ಎಂಬ ಪಾಠವನ್ನು ಅಂಗೀಕರಿಸಿರುತ್ತಾರೆ. ಪರಮಾತ್ಮ ವಾಸಸ್ಥಾನವು ಜಠರವಲ್ಲವು, ದಹರವೇ. ಜಠರವು ದೇಹಕ್ಕೆ ಉಪಲಕ್ಷಣವು, ದೇಹದ ದಹರ ಭಾಗದಲ್ಲಿ ಹೃದಯದಲ್ಲಿರುವವನು ಎಂಬುದೇ ಆಗಲೂ ಅರ್ಥವು, **ತಿಷ್ಠನ್** - ಯಾವಾಗಲೂ ಇರುವವನಾಗಿ, **ದೇವಃ** - ಲೀಲಾರಸವನ್ನನುಭವಿಸುವವನಾದ, **ಪ್ರಭುಃ** - ಸ್ವಾಮಿಯಾದ ನಿಯಾಮಕನು, **ನಿಷದ್ವರ**....... ....**ಪಿತೃಕ್ರಮಾತ್**, ನಿಷದ್ವರ ಕೆಸರಿನಿಂದ ತುಂಬಿದ, "ನಿಷದ್ವರಸ್ತು ಜಂಬಾಲಃ" ಎಂದು ಅಮರವಿರುವದರಿಂದ ಇವೆರಡು ಶಬ್ದಗಳು ಕೆಸರಿನ ಹೆಸರುಗಳು. **ದೀರ್ಘಿಕಾ** - ಭಾವಿಯಲ್ಲಿ, **ನಿಪತಿತ** - ಬಿದ್ದ, **ನಿಜಾಪತ್ಯ** - ತನ್ನ ಮಗನ, **ಆದಿತ್ಸಾ** - ಎತ್ತಲೇಣದರಲ್ಲಪೇಕ್ಷೆಯಿಂದ, **ಅವತೀರ್ಣ** - ಅವತರಿಸಿದ ಎಂದರೆ ಭಾವಿಯಲ್ಲಿ ಇಳಿದ, **ಪಿತೃಕ್ರಮಾತ್** - ತಂದೆಯ ಕ್ರಮದಿಂದ ಎಂದರೆ ಲೋಕತಂದೆಯೋ

ಧಮನಿ ಮಿಹನಸ್ತಸ್ಮಿನ್ಕಾಲೇ ಸ ಏವ ಶತಾಧಿಕಾ
ಮಕೃತಕ ಪುರ ಪ್ರಸ್ಥಾನಾರ್ಥಂ ಪ್ರವೇಶಯತಿ ಪ್ರಭುಃ ॥೪೫॥

ಪಾದಿಯಲ್ಲಿ, **ಅಕೃತಕೆ ಪುರಪ್ರಸ್ಥಾನಾರ್ಥಂ** - ಸೃಷ್ಟಿಸ್ಥಿತಿಲಯಾದಿಗಳಿಗೆ ವಶವಾದ ಈ ಪ್ರಾಕೃತಲೋಕದ ಹಾಗಲ್ಲದೆ ಅಪ್ರಾಕೃತನಾದ ನಿರುಪಾಧಿಕವಾದ ದಿವ್ಯ ವೈಕುಂಠಲೋಕದ ಪ್ರಯಾಣಕ್ಕಾಗಿ, ಇದರಿಂದ ಮುಂದೆ ಹೇಳಲ್ಪಡುವ ಗತಿ ಚಿಂತನಾಧಿಕಾರಾರ್ಥವು ಸೂಚಿಸಲ್ಪಟ್ಟಿತು, **ತಸ್ಮಿನ್ ಕಾಲೇ** – ಆ ಶರೀರವಿಶ್ಲೇಷವಾದ ಕಾಲದಲ್ಲೇ, ಅಥವಾ ತಂದೆಯು ಹಾಗೆ ರಕ್ಷಿಸಬೇಕೆಂಬಪೇಕ್ಷೆಯುಂಟಾದ ಕಾಲದಲ್ಲೇ, **ಸ ಏವ** - ಲೀಲಾ ಪ್ರವೃತ್ತನಾದ ಆತನೇನೇ, **ನಃ** - ಪ್ರಸನ್ನರಾದ ನಮಗೆ, **ಇಹ**– ಈ ದೇಹದಲ್ಲೇ, **ಶತಾಧಿಕಾಂ ಧಮನಿಂ** - ನೂರಕ್ಕಿಂತ ಹೆಚ್ಚಾದ ಎಂದರೆ ನೂರೊಂದನೆಯದಾದ ಮೂರ್ಧನ್ಯ ನಾಡಿಯನ್ನು, **ಪ್ರವೇಶಯತಿ** - ಪ್ರವೇಶಿಸುವ ಹಾಗೆ ಮಾಡುತ್ತಾನೆ.

ತಾತ್ಪರ್ಯ :---ಸರ್ವೇಶ್ವರನು ಹಾರ್ದಾವತಾರಿಯಾಗಿ ನಮ್ಮ ಹೃದಯಾಕಾಶದಲ್ಲೇ ದಿವ್ಯಮಂಗಳಯುಕ್ತನಾಗಿರುತ್ತಾನೆಂದು ಹೇಳಲ್ಪಟ್ಟಿರುತ್ತದೆ. (೫೬೬ನೆಯ ಪುಟ ನೋಡಿ) "ಅಙ್ಗುಷ್ಠಮಾತ್ರಃ ಪುರುಷೋಽಙ್ಗುಷ್ಠಂಚ ಸಮಾಶ್ರಿತಃ । ಈಶಸ್ಸರ್ವಸ್ಯಜಗತಃ ಪ್ರಭುಃ ಪ್ರೀಣಾತಿವಿಶ್ವಭುಕ್" "ಅಂಗುಷ್ಠಪರಿಮಾಣದ ಹೃದಯವನ್ನು ಆಶ್ರಯಿಸಿರುತ್ತಾನೆ ಸರ್ವೇಶ್ವರನು; ಆದುದರಿಂದಲೇ ಅಂಗುಷ್ಠ ಪರಿಮಾಣರೂಪವನ್ನು ಧರಿಸಿರುತ್ತಾನೆ; ಆತನೇ ಸಮಸ್ತ ಜಗತ್ತಿಗೂ ನಿಯಾಮಕನು, ಸ್ವಾಮಿಯು, ಯಾವ ಕಾರಣದಿಂದ ವಿಶ್ವವನ್ನೆಲ್ಲಾ ತಾನೇ ಅನುಭವಿಸುತ್ತಾನೋ, ಆದುದರಿಂದ ತನಗೇನೇ ಪ್ರಾಣಾದ್ಯಾಹುತಿಯ ಭೋಕ್ತೃತ್ವವಿರುವದರಿಂದ, ಆತನೇ ತೃಪ್ತಿಯನ್ನು ಹೊಂದಲಿ'' (ತೈ. ೩೪) ಎಂಬ ಶ್ರುತಿಯು ಇದನ್ನುಪಪಾದಿಸುತ್ತದೆ ಹಾಗೆಯೇ ಕಠವಲ್ಲಿಯಲ್ಲೂ "ಅಙ್ಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ । ಈಶಾನೋ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ" ಎಂದೂ, "ಅಙ್ಗುಷ್ಠ ಮಾತ್ರಃ ಪುರುಷೋಽನ್ತರಾತ್ಮಾ ಸದಾಜನಾನಾಂ ಹೃದಯೇ ಸನ್ನಿವಿಷ್ಟಃ" ಎಂದೂ ಇರುತ್ತದೆ. ಛಾಂದೋಗ್ಯದಲ್ಲೂ "ಅಥ ಯದಿದಮಸ್ಮಿನ್ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನನ್ತರ ಆಕಾಶಃ" ಈ ಚೇತನನ ಈ ಬ್ರಹ್ಮಪುರವೆಂಬ ದೇಹದಲ್ಲಿ ದಹರ ಶಬ್ದವಾಚ್ಯವಾದ ಹೃದಯಕಮಲವಿದೆಯೆಂದೂ ಆ ದಹರ ಪುಂಡರೀಕವೆಂಬ ಮನೆಯಲ್ಲಿ ದಹರಾಕಾಶ ಶಬ್ದವಾಚ್ಯನಾದ ಪರಮಾತ್ಮನಿರುವ

ನೆಂದೂ ಹೇಳಲ್ಪಟ್ಟಿರುತ್ತದೆ. ಹೀಗೆ ಸದಾ ಚೇತನನಿಗೆ ನಿಯಾಮಕನಾಗಿ ಹೃದಯಕುಹರದಲ್ಲಿರುತ್ತಾನೆಂದು ತಿಳಿಸುವದಕ್ಕಾಗಿ **ದಹರ ಕುಹರೇ ತಿಷ್ಠ** ಎಂಬ ಪ್ರಯೋಗವು. ಹೀಗೆ ನಿಯಾಮಕನಾಗಿ ಏಕೆ ಸರ್ವೇಶ್ವರನು ಎಲ್ಲರ ಹೃದಯದಲ್ಲೂ ಇರುತ್ತಾನೆಂದರೆ, ಆತನು **ದೇವಃ** - ಕ್ರೀಡಾಸಕ್ತನು. ಹಾಗೆ ಇರುವದರಿಂದ ನಾಲ್ಕು ಜನ ಭಕ್ತರನ್ನೂ ಅವರವರ ಇಷ್ಟಾನುಸಾರವಾಗಿರುವ ಪ್ರವೃತ್ತಿಗಳನ್ನುಂಟುಮಾಡುವನು. ಭಕ್ತನು ಈ ನಾಲ್ಕು ಜನರಲ್ಲೂ ಪರಮ ಪ್ರಿಯನಾದುದರಿಂದ ಆತನಿಗೆ ಯುಕ್ತವಾದ ಪ್ರವರ್ತನೆಯನ್ನುಂಟುಮಾಡುವದಕ್ಕಾಗಿಯೂ ಹೃದಯದಲ್ಲಿರುತ್ತಾನೆ. ಪ್ರಪನ್ನನು "**ಜ್ಞಾನೀತ್ವಾತ್ಮೈವ ಮೇಮತಂ**" (ಗೀತಾ) ಎಂದೂ, "**ಪ್ರಿಯೋಹಿ ಜ್ಞಾನಿನೋತ್ಯರ್ಥಂ**" (ಗೀ. ೭. ೧೭) ಎಂದೂ ಹೇಳಿರುವ ಹಾಗೆ, ಆತನು ಇಂತಹ ಹೇಯ ಪ್ರಕೃತಿ ಸಂಬಂಧವನ್ನು ಹೊಂದಿರುವದನ್ನು ಎಂದಿಗೂ ಸಹಿಸನು. ಪ್ರಿಯಪುತ್ರನು ಕೆಸರು ತುಂಬಿದ ಭಾವಿಯಲ್ಲಿ ಬಿದ್ದರೆ ಲೋಕಪಿತಾ ಹೇಗೆ ಸುಮ್ಮನಿರಲಾರನೋ, ಹಾಗೆಯೇ ಈತನೂ ಕೂಡ ಎಂದು ಹೇಳಿರುತ್ತಾರೆ. ಈ ಲೋಕದಲ್ಲಿರುವದು ಭೋಗವಿಭೂತಿಯಾದ ದಿವ್ಯವೈಕುಂಠದಲ್ಲಿ ಪ್ರಾಪ್ತವಾಗುವ ಐಶ್ವರ್ಯಕ್ಕೆ ಕೆಸರುಗುಂಡಿಯಲ್ಲಿ ಬಿದ್ದ ಹಾಗೆಂದು ಹೇಳುತ್ತಾರೆ. ಪ್ರಿಯಪುತ್ರನು ಕೆಸರಿನ ಭಾವಿಯಲ್ಲಿ ಬಿದ್ದರೆ, ತನ್ನ ದೇಹವೂ ಕೆಸರಾದೀತೆಂಬ ಯೋಚನೆಯಿಲ್ಲದೆ ಹೇಗೆ ಒಡನೆ ಧುಮುಕಿ ಮಗುವನ್ನು ಮೇಲಕ್ಕೆ ಎತ್ತುವನೋ, ಹಾಗೆಯೇ ಸರ್ವೇಶ್ವರನೂ ಕೂಡ ಈ ಹೇಯಸಂಸಾರದಲ್ಲಿ ಬಿದ್ದಿರುವವರನ್ನು ಮೇಲಕ್ಕೆ ಎತ್ತುವದಕ್ಕೋಸ್ಕರವಾಗಿ ತನ್ನ ನಿರ್ಹೇತುಕ ಕೃಪೆಯಿಂದ ಅವರೊಂದಿಗೇನೇ ಅವರ ಹೇಯಶರೀರದಲ್ಲೇ ವಸಿಸುತ್ತಾನೆ. ಹಾಗೆಯೇ ಶ್ರುತಿಯು "**ಅನಶ್ನನ್ ಅನ್ಯೋ ಅಭಿಚಾಕಶೀತಿ**" ಎಂದು ಹೃದಯಕುಹರದಲ್ಲಿ ನಮ್ಮ ರಕ್ಷಣಾರ್ಥವಾಗಿ ವಸಿಸುತ್ತಾನೆಂದೂ, "**ನತತೋ ವಿಜುಗುಪ್ಸತೇ**" ಜುಗುಪ್ಸೆ ಇಲ್ಲದೆ ಅದೇ ಆ ಸರ್ವೇಶ್ವರನಿಗೆ ಆ ದಹರವೇ "**ಆಯತನಂ ಮಹತ್**" ಉತ್ಕೃಷ್ಟವಾದ ದೇವಾಲಯವೆಂದು ಹೇಳಿರುತ್ತದೆ. ಹೀಗೆ ಪರಮಾತ್ಮನು ಹೇಯಶರೀರದಲ್ಲಿದ್ದರೆ ಹೇಯಸಂಬಂಧ ಉಂಟಾಗುವದಿಲ್ಲವೇ ? ಕೆಸರಿರುವ ಭಾವಿಯಲ್ಲಿ ಪಿತಾ ದುಮುಕಿದರೆ ಕೆಸರು ಅಂಟುವದಿಲ್ಲವೋ ? ವಜ್ರವನ್ನು ಕೆಸರಿನಲ್ಲಿಟ್ಟರೆ, ಕೆಸರು ಅದಕ್ಕೆ ಅಂಟುವದಿಲ್ಲವೋ ? ಹಾಗೆಯೇ ಸರ್ವೇಶ್ವರನೂ ಅಲ್ಲವೋ ? ಎಂದರೆ ಪದ್ಮಪತ್ರವು ಜಲದಲ್ಲಿದ್ದರೂ ಹೇಗೆ ಅದಕ್ಕೆ ನೀರು ಅಂಟುವದಿಲ್ಲವೋ ಹಾಗೆಯೇ ಎಂದು ಭಾವಿಸತಕ್ಕದ್ದು. ಹೀಗೆ ದೋಷಯುಕ್ತಸ್ಥಾನದಲ್ಲಿ ಸರ್ವೇಶ್ವರನಿದ್ದರೂ ಅಲ್ಲಿನ ದೋಷಗಳಂಟುವದಿಲ್ಲವೆಂದು "**ನ ಸ್ಥಾನತೋಪಿ ಪರಸ್ಯ**" (೩. ೨. ೧೧) ಎಂಬ ಸೂತ್ರದಲ್ಲಿ ಉಪ

ಪಾದಿಸಲ್ಪಟ್ಟಿರುತ್ತದೆ. "ಅಪಹತ ಪಾಪ್ಮಾ" "ನಿರವದ್ಯಂ ನಿರಂಜನಂ" ಎಂಬ ಶ್ರುತಿಗಳೂ, "ಪರಃ ಪರಾಣಾಂ ಸಕಲಾ ನ ಯತ್ರ ಕ್ಲೇಶಾದಯ ಸ್ಸನ್ತಿ ಪರಾವರೇಶೇ" ಎಂಬ ವಿಷ್ಣುಪುರಾಣ ಶ್ಲೋಕವೂ ಸಹ, ಪರಬ್ರಹ್ಮನು ಅಂತರ್ಯಾಮಿಯಾಗಿ ಎಲ್ಲಾದರಲ್ಲೂ ಇದ್ದರೂ "ನ ದೋಷಗನ್ಧಸ್ಸಮ್ಭವತಿ"- ದೋಷಗಂಧವುಂಟಾಗುವದಿಲ್ಲವು; ಹಾಗಾದರೆ ಮತ್ತೇನುಂಟಾಗುತ್ತದೆ ಎಂದರೆ:- "ಸರ್ವ ನಿಯಮನ ರೂಪ ಲೀಲಾರಸ ಏವ" - ಸಮಸ್ತರನ್ನೂ ನಿಯಮಿಸುವ ಲೀಲಾರಸ ಮಾತ್ರವೇ ಆತನಿಗುಂಟಾಗುತ್ತದೆ.

ಸರ್ವೇಶ್ವರನು ಹೇಗೆ ಕೆಸರಿನ ಕೂಪ ಸಂಬಂಧವಿದ್ದರೂ ಕೆಸರು ಅಂಟದ ಹಾಗೆ ಇರುತ್ತಾನೋ, ಹಾಗೆಯೇ ಈ ಮನುಷ್ಯನೂ ಕೂಡ ಈ ಸಂಸಾರವೆಂಬುವ ಕೆಸರಿನ ಕೂಪದಲ್ಲಿ ಬಿದ್ದರೂ ಕೆಸರು ಅಂಟದ ಹಾಗೆ ಮಾಡಿಕೊಳ್ಳಬೇಕು. ಅಂಟುವದಕ್ಕಾಗಲಿ ಅಂಟದೇ ಇರುವದಕ್ಕಾಗಲಿ ಮನಸ್ಸೇ ಕಾರಣವು. ಆದರಿಂದಲೇ "ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ । ಬಂಧಾಯ ವಿಷಯಾಸಙ್ಗಿ ಮುಕ್ತ್ಯೈ ನಿರ್ವಿಷಯಂ ಮನಃ" ಮನಸ್ಸು ವಿಷಯಾಸಕ್ತವಾದರೆ ಕೆಸರಂಟುತ್ತದೆ, ಹಾಗೆ ವಿಷಯಾಸಕ್ತಿಯಿಲ್ಲದಿದ್ದರೆ ಕೆಸರು ಅಂಟುವದಿಲ್ಲ. ಹಾಗಿದ್ದುಕೊಂಡು ತನ್ನ ಚರಣಾರವಿಂದವನ್ನಾಶ್ರಯಿಸಿದವನನ್ನು ಹಿಡಿದು ಎತ್ತುವದಕ್ಕಾಗಿಯೂ ಪ್ರಪನ್ನನ ಹೃದಯದಲ್ಲಿದ್ದಾನೆಂದು ಭಾವಿಸತಕ್ಕದ್ದು ಎಂದು ಹೇಳಿರುತ್ತದೆ. ಹೀಗೆ "ಸಂಸಾರ ಕೂಪ ಪತಿತಂ ವಿಷಯೈರ್ಮುಷಿತೇಕ್ಷಣಮ್ । ಗ್ರಸ್ತಂ ಕಾಲಾಹಿನಾತ್ಮಾನಂ ಕೋಽನ್ಯಸ್ತ್ರಾತು ಮಧೀಶ್ವರಃ" (ಭಾಗ. ೧೧. ೯. ೪೦) ಚೇತನನು ಹೀಗೆ ಸಂಸಾರವೆಂಬ ಕೆಸರು ಭಾವಿಯಲ್ಲಿ ಬಿದ್ದಿದ್ದಾನೆ; ಇಂದ್ರಿಯೋಪಭೋಗಗಳಿಗೆ ಸಿಕ್ಕಿ ಕಣ್ಣು ಮುಚ್ಚಿಹೋಗಿ ಅಂಧನಾಗಿದ್ದಾನೆ; ಹೀಗಿರುವಾಗ ಕಾಲಸರ್ಪದಿಂದ ಕಚ್ಚಲ್ಪಟ್ಟಿರುತ್ತಾನೆ; ಇಂತಹ ದುಸ್ಥಿತಿಯಲ್ಲಿ ಈ ಹಾರ್ದಾವತಾರನಾದ ಸರ್ವೇಶ್ವರನು ರಕ್ಷಿಸದಿದ್ದರೆ ಇನ್ನು ಯಾರು ತಾನೇ ರಕ್ಷಕರಿದ್ದಾರೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಸಙ್ಕಲ್ಪಸೂರ್ಯೋದಯದಲ್ಲೂ, ದುರ್ಲಂಘೇ ದುಃಖಸಿಂಧೌ ದುರನುಭವ ಮಹಾವ್ಯಾಧಿ ಭೇದೋತ್ತರಂಗೇ । ಮಗ್ನಾನ್ ವೀಕ್ಷ್ಯ ಜೀವಾನ್ ಸಹಜ ಕರುಣಯಾ ಪ್ರೇರಿತಾ ಲೋಕಮಾತುಃ । ಕೋಽಪಿ ಸ್ತೈರ್ಯಗ್ಧೃತಂ ಪತಿತಮನುಪತನ್ನಾತ್ಮವಲ್ಲೋಕಮೇತಮ್ । ಎಂದು ಹೇಳಿರುತ್ತದೆ. ದಾಟಲಸಾಧ್ಯವಾದುದು ಒಂದು ದುಃಖಸಾಗರವು; ಅದರಲ್ಲಿ ಜೀವರುಗಳು ಅನುಭವಿಸುವ ವ್ಯಾಧಿ ಭೇದಗಳೇ ಅದರ ತರಂಗಗಳು, ಇಂತಹ ಸಮುದ್ರದಲ್ಲಿ ಮುಳುಗಿಹೋಗಿರುವ ಜೀವರಾಶಿಗಳನ್ನು ಕಂಡು ಲೋಕಮಾತೆಯಾದ ಲಕ್ಷ್ಮಿಯ ಕಾರುಣ್ಯದಿಂದ ಪ್ರೇರಿತ

ನಾಗಿ, ಒಂದು ಭಾವಿಯೊಳಗೆ ಬಿದ್ದ ಮುಗ್ಧನಾದ ಪುತ್ರನನ್ನು ಹಿಂಬಾಲಿಸಿ ಬೀಳುವ ತಾಯಿಯ ಹಾಗೆ, ಎಂದು ಹೇಳಿರುತ್ತದೆ ಈ ಪ್ರಕೃತ ವ್ಯಾಖ್ಯಾನ ಶ್ಲೋಕದಲ್ಲಿ **ಪಿತುಃ ಕ್ರುಷಾತ್** ಎಂಬುದರಿಂದ ಮಗನು ಬಿದ್ದುದನ್ನು ಕಂಡ ಪಿತಾವಿನ ಹಾಗೆ ಎಂದು ಹೇಳಲ್ಪಟ್ಟಿರುತ್ತದೆ.

ಆದರೆ ಹೀಗೆ ವಿಷಯೋಪಭೋಗಗಳಿಂದ ಕಣ್ಣು ಕಾಣದೆ ಬಿದ್ದವರು ಅಸಂಖ್ಯಾಕರಾದ ಚೇತನರು. ಆದರೆ ಕೆಲವು ಜನ್ಮಗಳಲ್ಲಿ ದೇವಮನುಷ್ಯಾದಿ ರೂಪದಲ್ಲಿ ಜ್ಞಾನವನ್ನೂ ದಯಪಾಲಿಸಿರುವದರಿಂದ ಅಂತವರಾಗಲಿ ತನ್ನನ್ನು ಕಣ್ಣು ಬಿಟ್ಟವಲೋಕಿಸಿ ಚರಣಾರವಿಂದವನ್ನು ಆಶ್ರಯಿಸಿದರೆ ರಕ್ಷಿಸಬೇಕೆಂದೇ ಕಾದು ಹೃದಯಗುಹೆಯಲ್ಲಿರುವನು. ಗೀತೆಯಲ್ಲಿ ಮೂರನೆಯ ಅಧ್ಯಾಯದಲ್ಲಿ **"ನಾನವಾಪ್ತ ಮವಾಪ್ತವ್ಯಂ ವರ್ತಯೇವ ಚ ಕರ್ಮಣಿ"** ತಾನು ಅವಾಪ್ತ ಸಮಸ್ತ ಕಾಮನಾಗಿ ತನಗೆ ಬೇಕಾದುದು ಯಾವುದೂ ಇಲ್ಲದಿದ್ದರೂ ತಾನು ಯಾವಾಗಲೂ **ಲೋಕರಕ್ಷಣಾರ್ಥರೂಪ** ಕರ್ಮದಲ್ಲೇ ಇರುತ್ತೇನೆಂದು ಹೇಳಿಕೊಂಡಿರುತ್ತಾನೆ. ಹಾಗೆ ಚೇತನ ರಕ್ಷಣಕ್ಕಾಗಿಯೇ ಹಾರ್ದಾವತಾರಿಯಾಗಿದ್ದಾನೆಂದು ಭಾವಿಸತಕ್ಕದ್ದು. ಆದರೆ ಅನೇಕರು ಅಂತಹ ಕೃಪಾಸಾಗರನ ಸುಸಂಕಲ್ಪವನ್ನು ಪಯೋಗಿಸಿಕೊಳ್ಳುವದಿಲ್ಲವು.

ಆದರೆ ಭರನ್ಯಾಸ ಮಾಡಿದವರು ಯಾವಾಗ ಪ್ರಾಪ್ತರಾದರೋ ಆಗ ತನ್ನ ಸುಸಂಕಲ್ಪಕ್ಕೆ ಅವಕಾಶ ದೊರೆಯಿತೆಂಬ ಸಂತೋಷದಿಂದ, **ಸ ಏವ - ತಾನೇ, ತಸ್ಮಿನ್ ಕಾಲೇ**-ಆ ಸುಸಮಯದಲ್ಲೇ ಜ್ಞಾನಾವಿರ್ಭಾವ ಮೂಲಕ **ಶತಾಧಿಕಾಂ ಧಮನಿಂ** - ನೂರೊಂದನೆಯ ನಾಡಿಯು ಪ್ರಕಾಶಿಸುವ ಹಾಗೆ ಮಾಡಿ ಅದನ್ನು **ಪ್ರವೇಶಯತಿ ಪ್ರಭುಃ**-ಈ ಪ್ರಸನ್ನನು ಪ್ರವೇಶಿಸುವ ಹಾಗೆ ಈ ಸರ್ವಶಕ್ತನು ಮಾಡುವನು ಎಂದು ಹೇಳುತ್ತಾರೆ. ಲೀಲೆಯಲ್ಲಿ ಈ ಸರ್ವೇಶ್ವರನು ಪ್ರವೃತ್ತನಾಗಿದ್ದರೂ, ಅಂತಹ ಲೀಲಾಸಕ್ತನೇ ಸ್ವಾಮಿಯಾಗಿ ರಕ್ಷಣದೀಕ್ಷೆಯನ್ನೂ ವಹಿಸಿರುವದರಿಂದ ರಕ್ಷಿಸುವದರಲ್ಲಿ ಸಂದೇಹವಿಲ್ಲವೆಂದು ತೋರಿಸುವದಕ್ಕಾಗಿ **"ಸ ಏವ"** ಎಂಬ ಪ್ರಯೋಗವು. ಈ ಲೀಲಾವಿಭೂತಿ ಮಾತ್ರವೇ ಸೃಷ್ಟಿಪ್ರಳಯಾದಿಗಳಿಗೆ ಗುರಿಯಾಗಿರುವದರಿಂದ ಈ ಚೇತನನು ಈ ಲೀಲಾವಿಭೂತಿಗೆ ಸೇರಿ ಈ **ಬ್ರಹ್ಮಪುರಿ** ಎಂಬ ದೇಹದಲ್ಲಿರುವದು ಕೃತಕಪುರವಾಸವು, ಈ ಹೇಯವಾದ ಪ್ರಕೃತಿ ಸಂಬಂಧವನ್ನು ತೊರೆದು ಹೇಯಸಂಬಂಧವಿಲ್ಲದೆ ಸೃಷ್ಟ್ಯಾದಿಗಳಿಗೆ ಸಿಕ್ಕದೇ ಇರುವ ನಿತ್ಯವಿಭೂತಿಯ ದಿವ್ಯವೈಕುಂಠಕ್ಕೆ ಹೋಗುವದು **ಅಕೃತಕ ಪುರ ಪ್ರಸ್ಥಾನವೆಂದು** ಹೇಳಲ್ಪಟ್ಟಿತು. ಹೀಗೆ ದಿವ್ಯ. ವೈಕುಂಠಕ್ಕೆ ತೆರಳುವನ್ನು ಎಂಬುದರಿಂದ ಮುಂದಿನ ಅಧಿಕಾರದಲ್ಲಿ ಅರ್ಚಿರಾದಿ ಗತಿಯು ಉಪಪಾದಿಸಲ್ಪಡು

ತ್ತದೆಂಬ ಭಾವವೂ ತೋರಿಬರುತ್ತದೆ. ದೇಹವನ್ನು ಬಿಟ್ಟು ಹೇಗೆ ಅರ್ಚಿರಾದಿ ಗತಿಯೆನ್ನವಲಂಬಿಸುವನು ಎಂಬುದು ಸೂತ್ರದಲ್ಲಿ ರಶ್ಮ್ಯನುಸಾರೀ ಎಂಬ ಬ್ರಹ್ಮ ಸೂತ್ರಪ್ರಕಾರ ಸೂರ್ಯರಶ್ಮಿಗಳನ್ನವಲಂಬಿಸಿ ಹೋಗುವನೆಂದು ಹೇಳಲ್ಪಟ್ಟಿರುತ್ತದೆ. ಆದರೆ ರಾತ್ರಿಯಲ್ಲಾಗಲಿ, ದುರ್ದಿನದಲ್ಲಾಗಲಿ ಈ ಪ್ರಪನ್ನನಿಗೆ ಮರಣವಾದರೂ ಮೋಕ್ಷಪ್ರಾಪ್ತಿಯಲ್ಲೇನೂ ಸಂದೇಹವಿಲ್ಲವೆಂದು ಹೇಳಿದೆಯಲ್ಲಾ, ಆಗ ಹೇಗೆ ಎಂದರೆ, ಆಗಲೂ ಸೂರ್ಯನ ರಶ್ಮಿಗಳು ಉಂಟೆಂಬುದು ರಾತ್ರಿಯಲ್ಲೂ ಶೆಖೆಯಾಗುವದರಿಂದ ತಿಳಿಯಬಹುದು ಆದರೆ ಆಗ ಕಾಂತಿ ಇಲ್ಲವು ದುರ್ದಿನದಲ್ಲೂ ಆಕಾಶವು ಮೇಘಾವೃತವಾಗಿರುವದರಿಂದ ಸೂರ್ಯರಶ್ಮಿಗೆ ತೇಜಸ್ಸಿಲ್ಲವು. ಆದರೆ ಆಗಲೂ ಸೂರ್ಯರಶ್ಮಿಗಳುಂಟೆಂದೇ ನಂಬತಕ್ಕದ್ದು ಹೇಗೋ ಹಾಗೆ ಎಂಬ ಭಾವವು.

ಮುಂದಿನ ಅಧಿಕಾರದಲ್ಲಿ ಅರ್ಚಿರಾದಿ ಗತಿಯು ಚರ್ಚಿಸಲ್ಪಡುತ್ತದೆ.

ಇಂತು

ಶ್ರೀಮದ್ರಹಸ್ಯತ್ರಯಸಾರದ

ಇಪ್ಪತ್ತನೆಯ ನಿರ್ಯಾಣಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವಶರ್ಮನ

ಆ ಚಾ ರ್ಯ ಹೃ ದ ಯಾ ನ್ವೇ ಷಿ ಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ.

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯಹೃದಯಾನ್ವೇಷಿಣೀ
ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ
ಶ್ರೀಮನ್ನಿಗಮಾಂತ ಮಹಾದೇಶಿಕರವರ

೧. ಅಭೀತಿಸ್ತವವೆಂಬ ಶ್ರೀರಂಗನಾಥಸ್ತೋತ್ರವು	೦	೧೨	೦
೨. ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀಸ್ತೋತ್ರವು	೦	೧೨	೦
೩. ಶ್ರೀಮದ್ರಹಸ್ಯತ್ರಯಸಾರವು:—			
(೧) ಗುರುಪರಂಪರಾಸಾರವು	೦	೧೨	೦
(೨) ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು	೦	೯	೦
(೩) ಪ್ರಧಾನ ಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು	೦	೧೨	೦
(೪) ತತ್ವತ್ರಯಾಧಿಕಾರವು	೦	೧೨	೦
(೫) ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು	೦	೧೦	೦
(೬) ಅಧಿಕಾರಿವಿಭಾಗಾಧಿಕಾರವು ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು	೦	೯	೦
(೭) ಪರಿಕರವಿಭಾಗಾಧಿಕಾರವು ಮತ್ತು ಸಾಙ್ಗಪ್ರಪದನಾಧಿಕಾರವು	೦	೧೧	೦
(೮) ಕೃತಕೃತ್ಯಾಧಿಕಾರವು, ಸ್ವನಿಷ್ಠಾಭಿಜ್ಞಾನಾಧಿಕಾರವು ಮತ್ತು ಉತ್ತರಕೃತ್ಯಾಧಿಕಾರವು	೦	೧೨	೦
(೯) ಪುರುಷಾರ್ಥಕಾಷ್ಠಾಧಿಕಾರವು, ಶಾಸ್ತ್ರೀಯನಿಯಮನಾಧಿಕಾರವು ಮತ್ತು ಅಪರಾಧಪರಿಹಾರಾಧಿಕಾರವು	೧	೦	೦
(೧೦) ಸ್ಥಾನವಿಶೇಷಾಧಿಕಾರವು, ನಿರ್ಯಾಣಾಧಿಕಾರವು	೦	೧೦	೦
(೧೧) ಗತಿಚಿಂತನಾಧಿಕಾರವು ಪರಿಪೂರ್ಣಬ್ರಹ್ಮಾನುಭವಾಧಿಕಾರವು	೦	೧೨	೦
(೧೨) ಸಿದ್ಧೋಪಾಯಶೋಧನಾಧಿಕಾರವು	ಅಚ್ಚಾಗುತ್ತಲಿದೆ.		
೪. ಶ್ರೀ ಯಾಮುನೇಯರವರ ಚತುಶ್ಲೋಕೀ	೦	೮	೦
೫. ಶ್ರೀ ವಿಷ್ಣುಸಹಸ್ರನಾಮಾವಳಿ (ಅರ್ಥ ಸಹಿತ)	೦	೧೨	೦

ಸಿ. ಯಂ. ವಿಜಯರಾಘವಾಚಾರ್,
ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್,
ಬಸವನಗುಡಿ, ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಗಿರಿಜಾ ವಿಲಾಸ ಪ್ರೆಸ್ಸಿನಲ್ಲಿ ಪ್ರೊಪ್ರೈಟರಾದ
ಹೆಚ್. ವೆಂಕಟರಮಣಯ್ಯನವರಿಂದ ಮುದ್ರಿಸಲ್ಪಟ್ಟಿತು.